
ಸೋಮವಾರ, ಏಪ್ರಿಲ್ 15, 2024 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani



ಭಕ್ತಿ
ಬಾಲಿವುಡ್ ನಟ ರಣವೀರ್ ಸಿಂಗ್ ಮತ್ತು ನಟಿ ಕೃತಿ ಸನೋನ್ ಅವರು ಭಾನುವಾರ ವಾರಾಣಸಿಯ ಕಾಶಿ ವಿಶ್ವನಾಥ ದೇಗುಲಕ್ಕೆ ಭೇಟಿ ನೀಡಿದರು.

ನಿಧನ ವಾರ್ತೆ

ಸುನಂದಾತಾಯಿ

ಹಿರೇಬಾಗೇವಾಡಿ: ವಿಧಾನ ಪರಿಷತ್ತಿನ ಮಾಜಿ ಸದಸ್ಯೆ, ಬೆಳಗಾವಿಯ ಸುನಂದಾತಾಯಿ ಲಿಂಗನಗೌಡ ಪಾಟೀಲ (72) ಅವರು ಭಾನುವಾರ ನಿಧನರಾದರು.


ಸುನಂದಾತಾಯಿ ಪಾಟೀಲ

ಅವರಿಗೆ ಪುತ್ರಿ, ಇಬ್ಬರು ಪುತ್ರರು ಇದ್ದಾರೆ. ಅವರು ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರೂ ಆಗಿದ್ದರು.

ಇರಾನ್: ಕೇರಳ ಮೂಲದವರು ಸುರಕ್ಷಿತ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಇಸ್ರೇಲ್ ಜತೆ ನಂಟಿರುವ ಸರಕು ಸಾಗಣೆಯ ಹಡಗನ್ನು ಇರಾನ್ ಸೇನೆಯು ಹಾರ್ಮುಜ್ ಜಲಸಂಧಿ ಬಳಿ ಶನಿವಾರ ವಶಪಡಿಸಿಕೊಂಡಿದೆ. ಇದರಲ್ಲಿ 17 ಮಂದಿ ಭಾರತೀಯರು ಕೂಡ ಇದ್ದಾರೆ.

ಪ್ರಸ್ತುತ ಹಡಗಿನಲ್ಲಿ ಒಬ್ಬ ಮಹಿಳೆ ಸೇರಿದಂತೆ ಕನಿಷ್ಠ ನಾಲ್ವರು ಕೇರಳ ಮೂಲದವರಿದ್ದಾರೆ.

'ಹಡಗಿನಲ್ಲಿರುವ ಧರ್ಣೇಶ್, ಭಾನುವಾರ ಮಧ್ಯಾಹ್ನ ನಮಗೆ ಕರೆ ಮಾಡಿ, ಸುರಕ್ಷಿತವಾಗಿರುವುದಾಗಿ ಹೇಳಿದ್ದಾರೆ' ಎಂದು ವಯನಾಡ್‌ನಲ್ಲಿರುವ ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಹಡಗಿನಲ್ಲಿರುವ ಕೇರಳ ಮೂಲದ ಇತರರೂ ಸುರಕ್ಷಿತರಾಗಿದ್ದಾರೆ ಎಂದು ಅವರ ಕುಟುಂಬದವರಿಗೆ ಹಡಗು ಸಂಸ್ಥೆಯಾದ ಎಂಎಸ್‌ಸಿ ಏರೀಸ್ ಮಾಹಿತಿ ನೀಡಿದೆ ಎಂದು ತಿಳಿದುಬಂದಿದೆ. ಕೋಯಿಕ್ಕೋಡ್‌ನ ಶ್ಯಾಮನಾಥ್, ಪಾಲಕ್ಕಾಡ್‌ನ ಸುಮೇಶ್ ಮತ್ತು ತ್ರಿಶ್ಯೂರ್‌ನ ಆ್ಯನ್ ತೆಸಾ ಜೋಸೆಫ್ ಹಡಗಿನಲ್ಲಿರುವ ಇತರ ಕೇರಳ ಮೂಲದವರು.

ಈ ಬೆಳವಣಿಗೆ ಬೆನ್ನಲ್ಲೇ, ಇರಾನ್‌ನ ವಶದಲ್ಲಿರುವ ಭಾರತೀಯರನ್ನು ಕೇಂದ್ರ ಸರ್ಕಾರವು ಸುರಕ್ಷಿತವಾಗಿ ದೇಶಕ್ಕೆ ಕರೆತರುತ್ತದೆ ಎಂಬ ಭರವಸೆ ಅವರ ಕುಟುಂಬದ ಸದಸ್ಯರಲ್ಲಿ ಮನೆ ಮಾಡಿದೆ.

ಶ್ಯಾಮನಾಥ್ ಅವರು ತಮ್ಮ ಕುಟುಂಬದ ಸದಸ್ಯರನ್ನು ಮುಂದಿನ ವಾರದೊಳಗೆ ಭೇಟಿ ಮಾಡುವ ಆಲೋಚನೆ ಹೊಂದಿದ್ದರು.

ಜೆಟಿಒ ಪರಿಷ್ಕೃತ ಪಟ್ಟಿಗೆ ಪಟ್ಟು

ಹೈಕೋರ್ಟ್ ಆದೇಶ ನೀಡಿದರೂ ಪಟ್ಟಿ ಪ್ರಕಟಿಸಲು ಕೆಪಿಎಸ್‌ಸಿ ಮೀನಮೇಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ ಅಡಿಯಲ್ಲಿರುವ ಸರ್ಕಾರಿ ಐಟಿಐ ಕಾಲೇಜುಗಳಲ್ಲಿ ಖಾಲಿ ಇರುವ 1,520 ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ) ಹುದ್ದೆಗೆ 2019ರಲ್ಲಿ ಪ್ರಕಟಿಸಿದ್ದ ಅಂತಿಮ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ನಿರ್ದೇಶನದಂತೆ ಪರಿಷ್ಕರಿಸಿದರೂ, ಪ್ರಕಟಿಸಲು ಕೆಪಿಎಸ್‌ಸಿ ವಿಳಂಬ ಮಾಡುತ್ತಿರುವುದು ಹುದ್ದೆ ಆಕಾಂಕ್ಷಿಗಳನ್ನು ಚಿಂತೆಗೀಡು ಮಾಡಿದೆ.

ಕೆಪಿಎಸ್‌ಸಿ ಪ್ರಕಟಿಸಿದ್ದ ಅಂತಿಮ ಆಯ್ಕೆ ಪಟ್ಟಿಯ ಪ್ರಕಾರ ಈಗಾಗಲೇ ನೇಮಕಾತಿ ಆದೇಶ ಪಡೆದು ಹುದ್ದೆಯಲ್ಲಿರುವ ಸುಮಾರು 150 ಮಂದಿ, ಇದೀಗ ಸಿದ್ಧಪಡಿಸಿರುವ ಪರಿಷ್ಕೃತ ಪಟ್ಟಿಯಿಂದ ಹೊರಗುಳಿಯಲಿದ್ದು, ಉದ್ಯೋಗ ಕಳೆದುಕೊಳ್ಳುವ ಆತಂಕವಿದೆ. ಕೆಲವರು ಆಯ್ಕೆಯಾಗಿರುವ ವೃತ್ತಿ (ಟ್ರೇಡ್) ಬದಲಾಗುವ ಸಾಧ್ಯತೆಯಿದೆ.

ಐಟಿಐಗಳಲ್ಲಿ 23 ವಿವಿಧ ವೃಂದಗಳಲ್ಲಿ ಖಾಲಿ ಇರುವ ಜೆಟಿಒಗಳ ನೇಮಕಾತಿಗೆ 2018 ಫೆ. 19ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಅರ್ಜಿ ಸಲ್ಲಿಸಿದ್ದ 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ 2018 ಡಿ. 27ರಿಂದ 2019 ಜ. 3ರವರೆಗೆ ಪರೀಕ್ಷೆ ನಡೆದಿತ್ತು. ದಾಖಲೆಗಳ ಪರಿಶೀಲನೆ ಬಳಿಕ ವಿವಿಧ ವೃತ್ತಿಗಳಲ್ಲಿ 1,367 ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ಕೆಲವು ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗೆ ಆಯ್ಕೆಯಾಗಿದ್ದರು. ಒಬ್ಬರಿಗೆ ಒಂದು ಹುದ್ದೆ ಎಂದು ಪರಿಗಣಿಸಿದಾಗ ಒಟ್ಟು 945 ಅಭ್ಯರ್ಥಿಗಳು ಆಯ್ಕೆಯಾಗಿದ್ದು, 399 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿತ್ತು. ಇನ್ನೂ 546 ಅಭ್ಯರ್ಥಿಗಳು ನೇಮಕಾತಿ ಆದೇಶಕ್ಕಾಗಿ ಕಾಯುತ್ತಿದ್ದಾರೆ.

ಮುಖ್ಯಾಂಶಗಳು

- ತಾತ್ಕಾಲಿಕ ಪಟ್ಟಿ ಪ್ರಕಟಿಸಲು ಹೈಕೋರ್ಟ್ ನಿರ್ದೇಶನ
- ಕೋರ್ಟ್ ಆದೇಶಕ್ಕೆ ಕಿಮ್ಮತ್ತು ನೀಡದ ಕೆಪಿಎಸ್‌ಸಿ
- ಪಟ್ಟಿ ಪರಿಷ್ಕರಣೆಯಿಂದ 150 ಮಂದಿ ಹುದ್ದೆ ಕಳೆದುಕೊಳ್ಳುವ ಭೀತಿ

ನೇಮಕಾತಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದಿದ್ದರೂ ಹುದ್ದೆಗೆ ಆಯ್ಕೆಯಾಗದ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು, ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಎಲ್ಲವೂ ಸರಿಯಾಗಿವೆ ಎಂದು ಪ್ರಮಾಣೀಕರಿಸಿದ್ದರೂ, ಸೇವಾನುಭವ ಪ್ರಮಾಣಪತ್ರದಲ್ಲಿ 'ನಿರ್ದಿಷ್ಟ ಕಾರ್ಯಕ್ಷೇತ್ರದ ಕಾರ್ಯಾನುಭವದಲ್ಲಿ ಸ್ಪಷ್ಟತೆ ಇಲ್ಲ' ಎಂದು ಕಾರಣ ನೀಡಿ ಅರ್ಹರಾಗಿದ್ದ ಹಲವು ಅಭ್ಯರ್ಥಿಗಳನ್ನು ಕೆಪಿಎಸ್‌ಸಿ ತಿರಸ್ಕರಿಸಿತ್ತು.

ಹೈಕೋರ್ಟ್ ನಿರ್ದೇಶನದಂತೆ ಸಿದ್ಧಪಡಿಸಿದ ಪರಿಷ್ಕೃತ ತಾತ್ಕಾಲಿಕ ಪಟ್ಟಿಯನ್ನು ಕೆಪಿಎಸ್‌ಸಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದೆ. ವಿಚಾರಣೆ ವೇಳೆ ಈ ಲಕೋಟೆಯನ್ನು ತೆರೆದಿರುವ ನ್ಯಾಯಪೀಠ, ಈ ಪಟ್ಟಿಯನ್ನು ಜಾಲತಾಣದಲ್ಲಿ ಪ್ರಕಟಿಸುವಂತೆ ಮಾರ್ಚ್ 20ರಂದು ಕೆಪಿಎಸ್‌ಸಿಗೆ ನಿರ್ದೇಶನ ನೀಡಿದೆ.

ಅಲ್ಲದೆ, ತಾತ್ಕಾಲಿಕ ಪಟ್ಟಿ ಪ್ರಕಟಿಸಿದ ಬಳಿಕ, ಒಂದಕ್ಕಿಂತ ಹೆಚ್ಚು ವೃತ್ತಿಗಳಿಗೆ ಆಯ್ಕೆಯಾದವರ ಆದ್ಯತೆಯನ್ನು ಪಡೆದು ಮೂರು ತಿಂಗಳ ಒಳಗೆ (ಜೂನ್ 21ರ ಒಳಗೆ) ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಬೇಕು ಎಂದೂ ನಿರ್ದೇಶನ ನೀಡಿದೆ. ಸಿದ್ಧಪಡಿಸಿರುವ ತಾತ್ಕಾಲಿಕ ಪಟ್ಟಿಯನ್ನು ಮೂರು ದಿನಗಳ ಒಳಗೆ ಪ್ರಕಟಿಸಲಾಗುವುದು ಎಂದು ಹೈಕೋರ್ಟ್‌ಗೆ ಮಾತು ನೀಡಿದ್ದ ಕೆಪಿಎಸ್‌ಸಿ, ತಿಂಗಳು ಕಳೆಯುತ್ತಾ ಬಂದರೂ ಪ್ರಕಟಿಸದಿರುವುದು ಅಭ್ಯರ್ಥಿಗಳನ್ನು ನಿರಾಶರನ್ನಾಗಿ ಮಾಡಿದೆ.

'ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ತಾತ್ಕಾಲಿಕ ಪಟ್ಟಿಯನ್ನು ಜಾಲತಾಣದಲ್ಲಿ ಪ್ರಕಟಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಿ ಒಂದು ತಿಂಗಳಾಗುತ್ತಾ ಬಂದರೂ ಕೆಪಿಎಸ್‌ಸಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಹುದ್ದೆಗಳ ನೇಮಕಾತಿ ಅಧಿಸೂಚನೆಯ ಪ್ರಕ್ರಿಯೆ ಏಳು ವರ್ಷವಾದರೂ ಪೂರ್ಣಗೊಂಡಿಲ್ಲ. ಈ ಬಗ್ಗೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಹಲವು ಮನವಿಗಳನ್ನು ಸಲ್ಲಿಸಿದ್ದೇವೆ. ಹೈಕೋರ್ಟ್ ಆದೇಶಕ್ಕೂ ಕೆಪಿಎಸ್‌ಸಿ ಯಾವುದೇ ಬೆಲೆ ನೀಡುತ್ತಿಲ್ಲ' ಎಂದು ಅಭ್ಯರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಆಯೋಜಿಸಿದ್ದ 'ಎಡ್ಯುವರ್ಸ್' ಯಶಸ್ವಿ

ಮಾಹಿತಿ ಕಣಜ; ವಿದ್ಯಾರ್ಥಿಗಳ ಹರ್ಷ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ರಾಯ್ಕರ್ ಮೈದಾನದಲ್ಲಿ ಶನಿವಾರ ಮತ್ತು ಭಾನುವಾರ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ವತಿಯಿಂದ 14ನೇ ಎಡ್ಯುವರ್ಸ್ ಶೈಕ್ಷಣಿಕ ಮೇಳದಲ್ಲಿ ವೈವಿಧ್ಯಮಯ ಕೋರ್ಸ್‌ಗಳ ಕುರಿತು ಮಾಹಿತಿ ಪಡೆದು ವಿದ್ಯಾರ್ಥಿಗಳು ಹರ್ಷಗೊಂಡರು. ಅವರೊಂದಿಗೆ ಪೋಷಕರು ಸಹ ಖುಷಿಪಟ್ಟರು.

ಎರಡೂ ದಿನ ಪೋಷಕರು ಮತ್ತು ಸ್ನೇಹಿತರು ಜೊತೆ ಅಪಾರ ಸಂಖ್ಯೆಯಲ್ಲಿ ಮೇಳಕ್ಕೆ ಭೇಟಿ ನೀಡಿದ ವಿದ್ಯಾರ್ಥಿಗಳು 50ಕ್ಕೂ ಹೆಚ್ಚು ಮಳಿಗೆಗಳಿಗೆ ಭೇಟಿ ನೀಡಿದ್ದು, ಹಲವಾರು ಮಾಹಿತಿ ಸಂಗ್ರಹಿಸಿದರು. ಮಳಿಗೆಗಳಲ್ಲಿ ಲಭ್ಯವಿರುವ ಕರಪತ್ರ, ಮಾಹಿತಿಪತ್ರಗಳ ಮೂಲಕ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡರು.

ಸಿಇಟಿ ಮತ್ತು ನೀಟ್ ಪರೀಕ್ಷೆ ಸಿದ್ಧತೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಅಣಕು ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡರು. ಉತ್ತಮ ಅಂಕ ಗಳಿಸಿದವರಿಗೆ ಬಹುಮಾನ ನೀಡಲಾಯಿತು. ಅಣಕು ಪರೀಕ್ಷೆಯಿಂದ ತುಂಬಾ ಪ್ರಯೋಜನವಾಯಿತು ಎಂದು ವಿದ್ಯಾರ್ಥಿಗಳು ತಿಳಿಸಿದರು.

ಸೂಕ್ತ ವೃತ್ತಿಯ ಆಯ್ಕೆ ಕುರಿತು ವಿಶೇಷ ಉಪನ್ಯಾಸ ನೀಡಿದ ಶಿಕ್ಷಣ ತಜ್ಞ ಗಿರೀಶ ಮುತ್ತೂರ ಅವರು, 'ವಿದ್ಯಾರ್ಥಿ ಜೀವನದಲ್ಲಿ ಪಿಯುಸಿ ಎಂಬುದು ತುಂಬ ಮುಖ್ಯವಾದ ಕಾಲಘಟ್ಟ. ಈ ಸಮಯದಲ್ಲೇ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸರಿಯಾದ ನಿರ್ಣಯ ತೆಗೆದುಕೊಳ್ಳಬೇಕು' ಎಂದರು.

ಸಿಇಟಿ ಕೌನ್ಸಿಲಿಂಗ್ ಕುರಿತು ವಿಶೇಷ ಉಪನ್ಯಾಸ ನೀಡಿದ ಇಂಗ್ಲಿಷ್ ಪ್ರಾಧ್ಯಾಪಕ ಗುರುನಾಥ ಬಡಿಗೇರ ಅವರು, 'ಸಿಇಟಿಗೆ ಸಂಬಂಧಿಸಿದಂತೆ ಅರ್ಜಿ ಭರ್ತಿ ಮಾಡುವಾಗ, ಕಾಲೇಜು ಅಥವಾ ಕೋರ್ಸ್ ಆಯ್ಕೆ ಮಾಡಿಕೊಳ್ಳುವಾಗ ತುಂಬಾ ಜಾಗ್ರತೆ ವಹಿಸಬೇಕು. ಹಿರಿಯರ ಮಾರ್ಗದರ್ಶನ ಪಡೆಯಬೇಕು' ಎಂದರು.


ಹುಬ್ಬಳ್ಳಿಯಲ್ಲಿ ಭಾನುವಾರ ಶೈಕ್ಷಣಿಕ ಮೇಳದ ಮಳಿಗೆಯಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಮಾಹಿತಿ ಪಡೆದರು

ನಿರ್ಮಾಪಕ ಸೌಂದರ್ಯ ಜಗದೀಶ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಿರ್ಮಾಪಕ ಹಾಗೂ ಉದ್ಯಮಿ ಸೌಂದರ್ಯ ಜಗದೀಶ್ ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

'ಮಹಾಲಕ್ಷ್ಮಿ ಲೇಔಟ್ ಕ್ಲಬ್ ರಸ್ತೆಯಲ್ಲಿರುವ ಮನೆಯಲ್ಲಿ ಸೌಂದರ್ಯ ಜಗದೀಶ್ ಹಾಗೂ ಕುಟುಂಬದವರು ವಾಸವಿದ್ದರು. ಭಾನುವಾರ ಬೆಳಿಗ್ಗೆ ಮನೆಯ ಕೊಠಡಿಯಲ್ಲಿ ಜಗದೀಶ್ ನೇಣು ಹಾಕಿಕೊಂಡಿದ್ದರು. ಅದನ್ನು ಗಮನಿಸಿದ್ದ ಕುಟುಂಬದವರು, ಕೆಳಗೆ ಇಳಿಸಿ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು, ಸೌಂದರ್ಯ ಜಗದೀಶ್ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಜಗದೀಶ್ ಅವರ ಅಂಗರಕ್ಷಕರೊಬ್ಬರು ಇತ್ತೀಚೆಗೆ ತೀರಿಕೊಂಡಿದ್ದರು. ಅತ್ತೆ ಸಹ ಎರಡು ವಾರದ ಹಿಂದೆಯಷ್ಟೇ ಮೃತಪಟ್ಟಿದ್ದಾರೆ. ಇವರಿಬ್ಬರ ಸಾವಿನಿಂದ ಜಗದೀಶ್ ನೊಂದಿದ್ದರು. ಮಾನಸಿಕ ಖಿನ್ನತೆಗೂ ಒಳಗಾಗಿದ್ದರೆಂಬುದು ಗೊತ್ತಾಗಿದೆ. ಹಣಕಾಸು ವ್ಯವಹಾರದಲ್ಲಿ ನಷ್ಟ ಕಂಡಿದ್ದರು ಎಂಬ ಬಗ್ಗೆ ಮಾಹಿತಿ ಇದ್ದು, ಈ ಬಗ್ಗೆ ಸದ್ಯಕ್ಕೆ ಪುರಾವೆಗಳು ಲಭ್ಯವಾಗಿಲ್ಲ' ಎಂದು ಪೊಲೀಸರು ತಿಳಿಸಿದರು.


ಸೌಂದರ್ಯ ಜಗದೀಶ್

'ಜಗದೀಶ್ ಆತ್ಮಹತ್ಯೆ ಸಂಬಂಧ ಕುಟುಂಬಸ್ಥರು ಹೇಳಿಕೆ ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ' ಎಂದು ಪೊಲೀಸರು ಹೇಳಿದರು.

ಯಾವುದೇ ಸಮಸ್ಯೆ ಇರಲಿಲ್ಲ: ಮಾಧ್ಯಮದವರ ಜೊತೆ ಮಾತನಾಡಿದ ಜಗದೀಶ್ ಅವರ ಕುಟುಂಬಸ್ಥರು, 'ಮನೆಯಲ್ಲಿ ಜಗದೀಶ್ ನೇಣು ಹಾಕಿಕೊಂಡಿದ್ದರು. ಅದು ಗೊತ್ತಾಗುತ್ತಿದ್ದಂತೆ ಅವರನ್ನು ಬೆಳಿಗ್ಗೆ 9 ಗಂಟೆಗೆ ಆಸ್ಪತ್ರೆಗೆ ಕರೆತರಲಾಯಿತು. ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದರು.

'ಯಾವುದೇ ಸಮಸ್ಯೆ ಇರಲಿಲ್ಲ. ಆರೋಗ್ಯ ಮತ್ತು ವ್ಯವಹಾರ ಎಲ್ಲವೂ ಚೆನ್ನಾಗಿತ್ತು. ಆತ್ಮಹತ್ಯೆ ಏಕೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಪೊಲೀಸರಿಗೆ ಹೇಳಿಕೆ ನೀಡಲಾಗಿದೆ' ಎಂದು ಹೇಳಿದರು.

ನಿರ್ಮಾಪಕರಾಗಿದ್ದ ಸೌಂದರ್ಯ ಜಗದೀಶ್, 'ಅಪ್ಪು ಮತ್ತು ಪಪ್ಪು', 'ಮಸ್ತ್ ಮಜಾ ಮಾಡಿ', 'ರಾಮ್ ಲೀಲಾ', 'ಸ್ನೇಹಿತರು' ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ಮಾಣ ಮಾಡಿದ್ದರು.

ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಜೆಟ್‌ಲಾಗ್ ರೆಸ್ಟೊ ಬಾರ್ ಸಂಸ್ಥಾಪಕರಾಗಿದ್ದರು. ನಟ ದರ್ಶನ್ ಅಭಿನಯದ ಕಾಟೇರ ಸಿನಿಮಾ ಬಿಡುಗಡೆ ಸಂದರ್ಭದಲ್ಲಿ ಇದೇ ಬಾರ್‌ನಲ್ಲಿ ಅವಧಿ ಮೀರಿ ರಾತ್ರಿ ಪಾರ್ಟಿ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ರೆಸ್ಟೊ ಬಾರ್ ಕೆಲ ದಿನ ಬಂದ್ ಮಾಡಿಸಿದ್ದರು. ಸೌಂದರ್ಯ ಜಗದೀಶ್ ಹಾಗೂ ಪತ್ನಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿದ್ದರು.

'ಇಡಬ್ಲ್ಯುಎಸ್ ಮೀಸಲಾತಿ ಕಲ್ಪಿಸದೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಕಂದಾಯ ಸೇರಿ ವಿವಿಧ ಇಲಾಖೆಗಳಲ್ಲಿ ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿ (ಇಡಬ್ಲ್ಯುಎಸ್) ಕಲ್ಪಿಸದೆ ಅನ್ಯಾಯ ಮಾಡಿದೆ' ಎಂದು ಬಡಗನಾಡು ಬ್ರಾಹ್ಮಣ ಮಹಾಸಭಾ ತಿಳಿಸಿದೆ.

'ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗರ ಸಾವಿರಕ್ಕೂ ಅಧಿಕ ಹುದ್ದೆಗಳು, ಕೌಶಲಾಭಿವೃದ್ಧಿ ಇಲಾಖೆ ಅಡಿಯಲ್ಲಿ ಬರುವ ಜಿಟಿಟಿಸಿಯಲ್ಲಿ ನೂರಕ್ಕೂ ಹೆಚ್ಚು ಹುದ್ದೆಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ 152 ಹುದ್ದೆಗಳಿಗೆ ನೇಮಕಾತಿ ಆಗುತ್ತಿದೆ. ಆದರೆ, ಅಧಿಸೂಚನೆಯಲ್ಲಿ ಇಡಬ್ಲ್ಯುಎಸ್ ಮೀಸಲಾತಿ ಕಲ್ಪಿಸಿಲ್ಲ' ಎಂದು ಮಹಾಸಭಾದ ಗೌರವಾಧ್ಯಕ್ಷರು ತಿಳಿಸಿದ್ದಾರೆ.

'ರಾಜ್ಯ ಸರ್ಕಾರವು ಕೂಡಲೇ ಎಲ್ಲ ನೇಮಕಾತಿಗಳಲ್ಲಿಯೂ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೂ ಮೀಸಲಾತಿಯನ್ನು ಕಲ್ಪಿಸಬೇಕು. ಇಲ್ಲವಾದಲ್ಲಿ ಅರ್ಹ ಬಡ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ' ಎಂದು ಹೇಳಿದ್ದಾರೆ.

ಪೌರಾಯುಕ್ತ ಅಮಾನತು

ಹಾವೇರಿ: ಅಂಬೇಡ್ಕರ್ ಜಯಂತಿ ಆಚರಣೆ ಸಿದ್ಧತೆಯಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಹಾವೇರಿ ನಗರಸಭೆ ಪೌರಾಯುಕ್ತ ಪರಶುರಾಮ ಚಲವಾದಿ ಅವರನ್ನು ಜಿಲ್ಲಾಧಿಕಾರಿ ಅಮಾನತುಗೊಳಿಸಿದ್ದಾರೆ. 'ಅಂಬೇಡ್ಕರ್ ಜಯಂತಿಗೆ ನಗರದ ಅಂಬೇಡ್ಕರ್ ವೃತ್ತದಲ್ಲಿರುವ ಅವರ ಪುತ್ಥಳಿ, ವೃತ್ತದಲ್ಲಿ ಸುಣ್ಣ ಬಣ್ಣ ಮಾಡದೇ ನಿರ್ಲಕ್ಷ್ಯ ತೋರಿರುವ ಬಗ್ಗೆ ಸಾರ್ವಜನಿಕರು ದೂರಿದ್ದರು. ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿದರೂ ಪರಶುರಾಮ ಬರಲಿಲ್ಲ. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಅವರನ್ನು ಅಮಾನತುಗೊಳಿಸಿ, ಅನುಮೋದನೆಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ' ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.


ಪರಶುರಾಮ ಚಲವಾದಿ

ಸಾತೊಡ್ಡಿ: ನಿರ್ಬಂಧ

ಯಲ್ಲಾಪುರ: ಜೇನು ಹುಳಗಳು ದಾಳಿಮಾಡಿದ ಹಿನ್ನೆಲೆಯಲ್ಲಿ ಏಪ್ರಿಲ್ 17ರವರೆಗೆ ಸಾತೊಡ್ಡಿ ಜಲಪಾತಕ್ಕೆ ಪ್ರವಾಸಿಗರನ್ನು ನಿರ್ಬಂಧಿಸಲಾಗಿದೆ ಎಂದು ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿ ತಿಳಿಸಿದೆ. 'ಅಪರಿಚಿತರು ಕಲ್ಲು ಹೊಡೆದ ಪರಿಣಾಮ ಪ್ರವಾಸಿಗರ ಮೇಲೆ ಜೇನು ಹುಳಗಳು ದಾಳಿ ಮಾಡಿದ್ದವು. ಹೀಗಾಗಿ ಪ್ರವೇಶ ನಿರ್ಬಂಧಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಶಂಕಿತರಿಬ್ಬರ ವಿಚಾರಣೆ ಮುಂದುವರಿಕೆ

ಸ್ಫೋಟದ ಸಂಚಿಗೆ 'ಕೋಡ್ ವರ್ಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳು, ಶಂಕಿತರಾದ ಅಬ್ದುಲ್ ಮಥೀನ್ ಅಹಮದ್ ತಾಹಾ ಹಾಗೂ ಮುಸಾವೀರ್ ಹುಸೇನ್ ಶಾಜೀಬ್ ತಮ್ಮದೇ ಪ್ರತ್ಯೇಕ ಕೋಡ್ ವರ್ಡ್‌ಗಳ ಮೂಲಕ ಸಂಭಾಷಣೆ ನಡೆಸುತ್ತಿದ್ದರೆಂಬ ಮಾಹಿತಿ ಕಲೆಹಾಕಿದ್ದಾರೆ.

ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರರೊಂದಿಗೆ ನಂಟು ಹೊಂದಿದ್ದವರ ಜೊತೆ ತಾಹಾ ಹಾಗೂ ಮುಸಾವೀರ್ ಸಂಪರ್ಕದಲ್ಲಿದ್ದರು. ಪ್ರಮುಖ ಉಗ್ರರ ಸೂಚನೆಯಂತೆ ವಿಧ್ವಂಸಕ ಕೃತ್ಯ ಎಸಗಲು ಅವರಿಬ್ಬರು ತಯಾರಿ ನಡೆಸುತ್ತಿದ್ದರು ಎಂಬ ಸಂಗತಿಯೂ ತನಿಖೆಯಿಂದ ಗೊತ್ತಾಗಿದೆ.

'ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಲು ಕಾರಣವೇನು ಎಂಬುದರ ಬಗ್ಗೆ ಮಾಹಿತಿ ತಿಳಿಯಬೇಕಿದೆ. ಈ ಬಗ್ಗೆ ಮುಸಾವೀರ್ ಹಾಗೂ ತಾಹಾನನ್ನು ವಿಚಾರಣೆ ನಡೆಸಲಾಗುತ್ತಿದೆ. ಆದರೆ, ಅವರಿಂದ ಯಾವುದೇ ನಿಖರ ಮಾಹಿತಿ ಲಭ್ಯವಾಗುತ್ತಿಲ್ಲ' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

'ಬಾಂಬ್ ಸ್ಫೋಟದ ಸಂಚು ಹಾಗೂ ಪರಾರಿ ಮಾರ್ಗದ ಬಗ್ಗೆ ಶಂಕಿತರಿಬ್ಬರು ಕೋಡ್ ವರ್ಡ್ ಮೂಲಕ ಸಂಭಾಷಣೆ ನಡೆಸಿರುವುದಕ್ಕೆ ಪುರಾವೆಗಳು ಸಿಕ್ಕಿವೆ. ಆದರೆ, ಕೋಡ್ ವರ್ಡ್‌ಗಳ ಅರ್ಥವೇನು ಎಂಬುದು ಸದ್ಯಕ್ಕೆ ಗೊತ್ತಾಗುತ್ತಿಲ್ಲ. ಶಂಕಿತರು, ತಮ್ಮದೇ ಪ್ರತ್ಯೇಕ ಭಾಷೆಯ ರೀತಿಯಲ್ಲಿ ಕೋಡ್ ವರ್ಡ್ ಬಳಸುತ್ತಿದ್ದರು. ಈ ಕೋಡ್ ವರ್ಡ್‌ಗಳನ್ನು ಭೇದಿಸಲು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ಆ್ಯಪ್‌ನಲ್ಲೂ ಕೋಡ್ ವರ್ಡ್: 'ಮುಸಾವೀರ್ ಹಾಗೂ ತಾಹಾ ಮಾತ್ರವಲ್ಲದೇ ಇನ್ನು ಹಲವು ಶಂಕಿತರು ಪ್ರಕರಣದಲ್ಲಿ ಭಾಗಿಯಾಗಿರುವ ಅನುಮಾನವಿದೆ. ಇವರೆಲ್ಲರೂ ಆ್ಯಪ್ ಮೂಲಕ ಸಂಭಾಷಣೆ ನಡೆಸುತ್ತಿದ್ದರು. ಪ್ರತಿಯೊಬ್ಬರು ತಮ್ಮದೇ ಕೋಡ್ ವರ್ಡ್ ಮೂಲಕ ಸಂದೇಶ ವಿನಿಮಯ ಮಾಡಿಕೊಳ್ಳುತ್ತಿದ್ದರು' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

'ಕೃತ್ಯದ ಬಗ್ಗೆ ಯಾರಿಗೂ ಯಾವ ಮಾಹಿತಿಯೂ ಗೊತ್ತಾಗಬಾರದೆಂಬ ಕಾರಣಕ್ಕೆ ಶಂಕಿತರೇ ಪ್ರತ್ಯೇಕ ಭಾಷೆ ರೂಪಿಸಿರುವ ಶಂಕೆಯೂ ಇದೆ. ಮುಸಾವೀರ್ ಬಳಿ ಸಿಕ್ಕಿರುವ ಕೆಲ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ, ಕೋಡ್ ವರ್ಡ್‌ಗಳ ಪಟ್ಟಿಯೇ ಇದೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿವೆ.

ಮತ್ತಷ್ಟು ಮಂದಿ ವಿಚಾರಣೆ: 'ಮುಸಾವೀರ್ ಹಾಗೂ ತಾಹಾನಿಂದ ಹೇಳಿಕೆಪಡೆಯಲಾಗುತ್ತಿದೆ. ಹೇಳಿಕೆಯಲ್ಲಿ ಉಲ್ಲೇಖವಾಗುವ ಎಲ್ಲರನ್ನೂ ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ಹೇಳಿವೆ.



ಸ್ಫೋಟ ಸಂಭವಿಸಿದ್ದ 'ದಿ ರಾಮೇಶ್ವರಂ ಕೆಫೆ'

ಸೋಮವಾರ, ಏಪ್ರಿಲ್ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 105 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಬಿಜೆಪಿ ‘ಸಂಕಲ್ಪ ಪತ್ರ’ ಪ್ರಕಟ

ಜಗತ್ತಿನ ಅತಿದೊಡ್ಡ ಆರ್ಥಿಕತೆಯಾಗಿ ಭಾರತ: ಪ್ರಣಾಳಿಕೆಯಲ್ಲಿ ಭರವಸೆ

ನವದೆಹಲಿ (ಪಿಟಿಐ): ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಬರುವ ಕನಸಿನೊಂದಿಗೆ ಬಿಜೆಪಿಯು, ಲೋಕಸಭಾ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದೆ.

‘ಮೋದಿ ಗ್ಯಾರಂಟಿ’ ಹೆಸರಿನ ‘ಸಂಕಲ್ಪ ಪತ್ರ’ದಲ್ಲಿ ಎನ್‌ಆರ್‌ಸಿಯಂತಹ ವಿವಾದಿತ ಅಂಶಗಳನ್ನು ಪ್ರಸ್ತಾಪಿಸಲಾಗಿಲ್ಲ. ಬಡವರು, ಯುವಜನರು, ರೈತರು ಮತ್ತು ಮಹಿಳೆಯರಿಗೆ ವಿವಿಧ ಭರವಸೆಗಳನ್ನು ನೀಡಲಾಗಿದೆ. ಅಸ್ಥಿರ ಜಗತ್ತಿನಲ್ಲಿ ಸಂಪೂರ್ಣ ಬಹುಮತದ ಸ್ಥಿರ ಸರ್ಕಾರ ಮುಖ್ಯ ಎಂದು ಪ್ರತಿಪಾದಿಸಲಾಗಿದೆ.

ಪ್ರಣಾಳಿಕೆ ಬಿಡುಗಡೆ ಮಾಡಿದ ಮೋದಿ ಅವರು ನಾಲ್ಕು ಪ್ರತಿಗಳನ್ನು ಸರ್ಕಾರದ ಯೋಜನೆಗಳ ಮುಖ್ಯ ಫಲಾನುಭವಿಗಳಾದ ಬಡವರು, ಯುವಜನತೆ, ರೈತರು ಮತ್ತು ಮಹಿಳಾ ಗುಂಪಿನ ಪ್ರತಿನಿಧಿಗಳಿಗೆ ಹಸ್ತಾಂತರಿಸಿದರು.

13ನೇ ಪುಟ ನೋಡಿ

ಪ್ರಮುಖ ಭರವಸೆಗಳು

- ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆಯಲ್ಲಿ 70 ವರ್ಷ ದಾಟಿದ ಎಲ್ಲ ಹಿರಿಯರ ಸೇರ್ಪಡೆ
- ಆಯ್ದ ಸ್ಥಳಗಳನ್ನು ಮದುವೆಗೆ ಸಜ್ಜುಗೊಳಿಸುವ ಮೂಲಕ ‘ವೆಡ್ ಇನ್ ಇಂಡಿಯಾ’ಗೆ ಉತ್ತೇಜನ
- ಮೂರು ಕೋಟಿ ಗ್ರಾಮೀಣ ಮಹಿಳೆಯರನ್ನು ‘ಲಕ್‌ಪತಿ ದೀದಿ’ ಮಾಡಲು ಪ್ರಯತ್ನ
- ಮಹಿಳಾ ಉದ್ಯೋಗಿಗಳನ್ನು ಬೆಂಬಲಿಸಲು ವಸತಿ ನಿಲಯಗಳು, ಶಿಶುಪಾಲನಾ ಕೇಂದ್ರಗಳ ಸ್ಥಾಪನೆಯಂಥ ಕ್ರಮಗಳ ಮೂಲಕ ಕೈಗಾರಿಕೆ ಮತ್ತು ವ್ಯಾಪಾರಿ ವಲಯಗಳಲ್ಲಿ ಮೂಲಸೌಕರ್ಯ ವೃದ್ಧಿ
- ‘ನಾರಿ ಶಕ್ತಿ ವಂದನ್ ಅಧಿನಿಯಮ್’ ಜಾರಿ ಮೂಲಕ ಸಂಸತ್ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಖಾತರಿ
- 5ಜಿ ಸೇವೆಗಳ ವಿಸ್ತರಣೆ, ಜಗತ್ತಿನಾದ್ಯಂತ ರಾಮಾಯಣ ಹಬ್ಬದ ಆಯೋಜನೆ
- ಸರ್ಕಾರಿ ನೇಮಕಾತಿ ವ್ಯವಸ್ಥೆಯಲ್ಲಿ ಪಾರದರ್ಶಕತೆ
- ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಕಾನೂನು
- ರೈತರಿಗೆ ಆರ್ಥಿಕ ಬೆಂಬಲ ನೀಡುವ ‘ಕಿಸಾನ್ ಸಮ್ಮಾನ್ ನಿಧಿ’, ‘ಫಸಲ್ ಬಿಮಾ ಯೋಜನೆ’ಗೆ ಬಲ
- ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳ
- ನೀರಾವರಿ, ಕೃಷಿ ಉತ್ಪನ್ನಗಳ ದಾಸ್ತಾನು, ಶ್ರೇಣೀಕರಣ, ವಿಂಗಡಣೆ ಘಟಕಗಳು, ಶೀತಲೀಕರಣ ಘಟಕಗಳು, ಆಹಾರ ಸಂಸ್ಕರಣೆ ಘಟಕಗಳ ಸ್ಥಾಪನೆ ಮೂಲಕ ಕೃಷಿ ಮೂಲಸೌಕರ್ಯ ವೃದ್ಧಿ
- ಕೃಷಿ ಸಂಬಂಧಿ ಚಟುವಟಿಕೆಗಳಾದ ಬೆಳೆ ಮುನ್ಸೂಚನೆ, ಕೀಟನಾಶಕ ಬಳಕೆ, ನೀರಾವರಿ, ಮಣ್ಣಿನ ಆರೋಗ್ಯ, ಹವಾಮಾನ ಮುನ್ಸೂಚನೆಗಾಗಿ ಸ್ವದೇಶಿ ನಿರ್ಮಿತ ‘ಭಾರತ್ ಕೃಷಿ’ ಉಪಗ್ರಹ ಉಡಾವಣೆ
- ತಳ ಮಟ್ಟದಲ್ಲಿ ಕನಿಷ್ಠ ಕೂಲಿಯ ಪರಿಷ್ಕರಣೆ
- ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಆಟೋ, ಟ್ಯಾಕ್ಸಿ, ಟ್ರಕ್ ಚಾಲಕರ ಒಳಗೊಳ್ಳುವಿಕೆ
- ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿ
- ಭಾರತವನ್ನು ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿ ರೂಪಿಸುವುದು
- ಉದ್ಯೋಗಾವಕಾಶಗಳ ಹೆಚ್ಚಳ
- ಎಲೆಕ್ಟ್ರಾನಿಕ್ಸ್ ಸೇರಿದಂತೆ ವಿವಿಧ ವಲಯಗಳಲ್ಲಿ 2030ರ ವೇಳೆಗೆ ಭಾರತವನ್ನು ಜಾಗತಿಕ ಉತ್ಪಾದನಾ ತಾಣವನ್ನಾಗಿ ರೂಪಿಸುವುದು

> ಬಿಜೆಪಿಯು ಕಳೆದ ಹತ್ತು ವರ್ಷಗಳಲ್ಲಿ ತನ್ನ ಪ್ರಣಾಳಿಕೆಯ ಪ್ರತಿ ಅಂಶವನ್ನೂ ಅನುಷ್ಠಾನಗೊಳಿಸಿದೆ. ಪಕ್ಷವು ಪ್ರಣಾಳಿಕೆಯ ಪಾವಿತ್ರ್ಯವನ್ನು ಮರುಸ್ಥಾಪಿಸಿದೆ
> **ನರೇಂದ್ರ ಮೋದಿ,** ಪ್ರಧಾನಿ

> ‘ಹಳೆಯ ಗ್ಯಾರಂಟಿಗಳಿಗೆ ಯಾವ ಹೊಣೆಗಾರಿಕೆಯೂ ಇಲ್ಲ, ಕೇವಲ ಪದಗಳ ಕಣ್ಕಟ್ಟು! ಮೋದಿ ಗ್ಯಾರಂಟಿ ಎಂದರೆ, ‘ಜುಮ್ಲಾಗಳ (ಸುಳ್ಳು) ವಾರಂಟಿ’
> **ಮಲ್ಲಿಕಾರ್ಜುನ ಖರ್ಗೆ**
> ಎಐಸಿಸಿ ಅಧ್ಯಕ್ಷ

> ಪ್ರಧಾನಿ ಅವರು ದೇಶದ ಜನರಿಗೆ ನೀಡಿರುವ ಭರವಸೆಗಳನ್ನು ಪ್ರಣಾಳಿಕೆ ಒಳಗೊಂಡಿದೆ. ‘ಮೋದಿ ಗ್ಯಾರಂಟಿ’ಯು 24 ಕ್ಯಾರೆಟ್ ಚಿನ್ನಕ್ಕೆ ಸಮನಾಗಿದೆ
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

> ದೇಶದ ಪ್ರತಿಯೊಂದು ಕುಟುಂಬವೂ ಬೆಲೆಯೇರಿಕೆಯಿಂದ ಕಷ್ಟ ಅನುಭವಿಸುತ್ತಿದೆ. ಸುಳ್ಳುಗಳೇ ತುಂಬಿರುವ ಬಿಜೆಪಿಯ ಪ್ರಣಾಳಿಕೆಯನ್ನು ಯಾರೂ ನಂಬುವುದಿಲ್ಲ
> **ಆತಿಶಿ,** ಎಎಪಿ ನಾಯಕಿ

‘ಸಿರಿಯಾದ ದೂತಾವಾಸ ಕಚೇರಿ ಮೇಲಿನ ದಾಳಿಗೆ ಪ್ರತೀಕಾರ’

ಇಸ್ರೇಲ್ ಮೇಲೆ ಇರಾನ್ ದಾಳಿ

ಟೆಲ್ ಅವಿವ್/ಜೆರುಸಲೇಂ/ದುಬೈ/ವಾಷಿಂಗ್ಟನ್ (ಎಪಿ/ರಾಯಿಟರ್ಸ್): ಇಸ್ರೇಲ್ ಮೇಲೆ ಇರಾನ್ ಇದೇ ಮೊದಲ ಬಾರಿಗೆ ನೇರವಾಗಿ ಸೇನಾ ದಾಳಿ ನಡೆಸಿದೆ. ಆದರೆ, ಇರಾನ್ ಕಡೆಯಿಂದ ಭಾನುವಾರ ನುಗ್ಗಿಬಂದ ಕ್ಷಿಪಣಿಗಳು ಹಾಗೂ ಡ್ರೋನ್‌ಗಳ ಪೈಕಿ ಶೇಕಡ 99ರಷ್ಟನ್ನು ಆಗಸದಲ್ಲಿಯೇ ಹೊಡೆದುರುಳಿಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಸಿರಿಯಾದಲ್ಲಿ ಇರುವ ಇರಾನ್‌ನ ದೂತಾವಾಸ ಕಚೇರಿಯ ಮೇಲೆ ಈ ತಿಂಗಳ ಆರಂಭದಲ್ಲಿ ನಡೆದ ದಾಳಿಗೆ ಪ್ರತೀಕಾರವಾಗಿ ಇರಾನ್, ಇಸ್ರೇಲ್ ಮೇಲೆ ಭಾನುವಾರ ನಸುಕಿನಲ್ಲಿ ದಾಳಿ ನಡೆಸಿದೆ. ಸಿರಿಯಾದಲ್ಲಿನ ದಾಳಿಯನ್ನು ಇಸ್ರೇಲ್ ನಡೆಸಿದೆ ಎಂದು ಆರೋಪಿಸಲಾಗಿದೆ. ಈ ದಾಳಿಯಲ್ಲಿ ಇರಾನ್‌ನ ಸೇನೆಯ ಅಧಿಕಾರಿಗಳು ಮೃತಪಟ್ಟಿದ್ದರು. ಭಾನುವಾರದ ದಾಳಿಯಲ್ಲಿ ಇರಾನ್ 30ಕ್ಕೂ ಹೆಚ್ಚು ಕ್ಷಿಪಣಿಗಳನ್ನು, 170 ಡ್ರೋನ್‌ಗಳನ್ನು ಹಾಗೂ 120ಕ್ಕೂ ಹೆಚ್ಚು ಗುರಿನಿರ್ದೇಶಿತ ಕ್ಷಿಪಣಿಗಳನ್ನು ಬಳಸಿದೆ ಎಂದು ಇಸ್ರೇಲ್ ಹೇಳಿದೆ.

ಇರಾನ್ ವಿರುದ್ಧ ಇಸ್ರೇಲ್ ಪ್ರತಿದಾಳಿ ಆರಂಭಿಸಿದರೆ ಮಧ್ಯಪ್ರಾಚ್ಯದಲ್ಲಿನ ಪರಿಸ್ಥಿತಿಯು ಇನ್ನಷ್ಟು ಪ್ರಕ್ಷುಬ್ಧಗೊಳ್ಳುವ ಅಪಾಯ ಇದೆ. ಇರಾನ್ ಜೊತೆ ಸಂಘರ್ಷವನ್ನು ತಾನು ಬಯಸುವುದಿಲ್ಲ ಎಂದು ಅಮೆರಿಕ ಹೇಳಿದೆ. ಆದರೆ ಇಸ್ರೇಲ್‌ನ ರಕ್ಷಣೆಗೆ ಹಿಂಜರಿಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ.



ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸಿದ ಬೆನ್ನಲ್ಲೇ ಜಿ7 ಒಕ್ಕೂಟದ ನಾಯಕರು ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ಚರ್ಚಿಸಿದರು

> ನಾವು ಹೊಡೆದುರುಳಿಸಿದ್ದೇವೆ. ನಾವು ತಡೆಹಿಡಿದಿದ್ದೇವೆ. ಗೆಲ್ಲುತ್ತೇವೆ
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

> ಇಸ್ರೇಲ್ ವಿರುದ್ಧದ ಕಾರ್ಯಾಚರಣೆ ಮುಂದುವರಿಸುವ ಬಯಕೆ ಇಲ್ಲ
> **ಮೊಹಮ್ಮದ್ ಹುಸೇನ್ ಬಘೇರಿ,** ಇರಾನ್ ಸಶಸ್ತ್ರ ಪಡೆಗಳ ಮುಖ್ಯಸ್ಥ

> ಸಂಘರ್ಷವನ್ನು ತೀವ್ರಗೊಳಿಸುವ ಇರಾನ್‌ನ ನಡೆಯನ್ನು ಖಂಡಿಸುತ್ತೇನೆ. ಇನ್ನೊಂದು ಯುದ್ಧವನ್ನು ತಡೆದುಕೊಳ್ಳುವ ಶಕ್ತಿ ಜಗತ್ತಿಗಿಲ್ಲ
> **ಆ್ಯಂಟನಿಯೊ ಗುಟೆರಸ್,** ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ

‘ಇರಾನ್ ನಡೆಸಿದ ನಿರ್ಲಜ್ಜ ದಾಳಿಗೆ ಒಗ್ಗಟ್ಟಿನ ರಾಜತಾಂತ್ರಿಕ ಪ್ರತಿಕ್ರಿಯೆಯ ಬಗ್ಗೆ ಚರ್ಚಿಸಲು ಮುಂದುವರಿದ ಪ್ರಜಾತಂತ್ರ ರಾಷ್ಟ್ರಗಳ (ಜಿ7) ಸಭೆ ನಡೆಸಲಾಯಿತು’ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

13ನೇ ಪುಟ ನೋಡಿ

ಭಾರತ ಕಳವಳ

ನವದೆಹಲಿ(ಪಿಟಿಐ): ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಉಲ್ಬಣಿಸುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಭಾರತ, ‘ಈ ಎರಡೂ ದೇಶಗಳ ನಡುವಿನ ಯುದ್ಧ ಪ್ರಾದೇಶಿಕ ಶಾಂತಿ ಮತ್ತು ಸುರಕ್ಷತೆಗೆ ಬೆದರಿಕೆ ಒಡ್ಡಲಿದೆ’ ಎಂದು ಭಾನುವಾರ ಹೇಳಿದೆ.

ಇರಾನ್, ಇಸ್ರೇಲ್ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ಭಾರತ ಈ ಪ್ರತಿಕ್ರಿಯೆ ನೀಡಿದೆ.

‘ಉಭಯ ದೇಶಗಳ ನಡುವಿನ ಸಂಘರ್ಷವನ್ನು ಕೂಡಲೇ ಶಮನ ಮಾಡಬೇಕು. ರಾಜತಾಂತ್ರಿಕ ಮಾರ್ಗದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು’ ಎಂದೂ ಭಾರತ ಹೇಳಿದೆ.

ಈ ಬೆಳವಣಿಗೆಯ ಬಳಿಕ ಎರಡೂ ದೇಶಗಳಲ್ಲಿರುವ ರಾಯಭಾರ ಕಚೇರಿಗಳು ಅಲ್ಲಿ ವಾಸಿಸುತ್ತಿರುವ ಭಾರತೀಯ ಸಮುದಾಯದೊಂದಿಗೆ ನಿರಂತರ ಸಂಪರ್ಕದಲ್ಲಿವೆ. ‘ಸಂಘರ್ಷದಿಂದಾಗಿ ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಉದ್ಭವಿಸಲಿರುವ ಸನ್ನಿವೇಶವನ್ನು ಭಾರತ ಗಮನಿಸುತ್ತಿದೆ’ ಎಂದೂ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

‘14 ಕ್ಷೇತ್ರಗಳಲ್ಲಿ ಮತದಾನಕ್ಕೆ ಸಿದ್ಧತೆ ಪೂರ್ಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಪ್ರಿಲ್ 26ರಂದು ರಾಜ್ಯದಲ್ಲಿ ಮೊದಲ ಹಂತದ ಮತದಾನ ನಡೆಯಲಿದ್ದು, 14 ಕ್ಷೇತ್ರಗಳಲ್ಲಿ ಸಿದ್ಧತೆ ಬಹುತೇಕ ಪೂರ್ಣಗೊಂಡಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ಬೆಂಗಳೂರು ಪ್ರೆಸ್ ಕ್ಲಬ್ ಭಾನುವಾರ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ಮೊದಲ ಹಂತದ ಮತದಾನಕ್ಕಾಗಿ 30,602 ಮತಗಟ್ಟೆಗಳನ್ನು ಸಜ್ಜುಗೊಳಿಸಲಾಗಿದೆ’ ಎಂದರು.

14 ಕ್ಷೇತ್ರಗಳಿಗೂ ವಿದ್ಯುನ್ಮಾನ ಮತಯಂತ್ರಗಳನ್ನು ಪೂರೈಕೆ ಮಾಡಲಾಗಿದೆ. ಕೊನೆಯ ಹಂತದ ಪ್ರಕ್ರಿಯೆ, ಮಸ್ಟರಿಂಗ್ ಕಾರ್ಯ ಮಾತ್ರ ಬಾಕಿ ಇದೆ. ತಮಿಳುನಾಡಿನಲ್ಲಿ ಮತದಾನ ಮುಗಿದ ಬಳಿಕ ಅರೆಸೇನಾ ಪಡೆಯ ತುಕಡಿಗಳು ರಾಜ್ಯಕ್ಕೆ ಬರಲಿವೆ ಎಂದು ಹೇಳಿದರು.

ಏ.26ರಂದು ಮತದಾನ ನಡೆಯುವ 14 ಲೋಕಸಭಾ ಕ್ಷೇತ್ರಗಳಲ್ಲಿ 2.88 ಕೋಟಿ ಮತದಾರರಿದ್ದಾರೆ. ಅವರಲ್ಲಿ 5.99 ಲಕ್ಷ ಜನರು ಮೊದಲ ಬಾರಿ ಮತ ಚಲಾಯಿಸುವವರು ಎಂದರು. 15ಕ್ಕಿಂತ ಕಡಿಮೆ ಅಭ್ಯರ್ಥಿಗಳಿರುವ ಆರು ಕ್ಷೇತ್ರಗಳಲ್ಲಿ ಒಂದೇ ಮತಯಂತ್ರ ಬಳಸಲಾಗುತ್ತದೆ. 15ಕ್ಕಿಂತ ಹೆಚ್ಚು ಅಭ್ಯರ್ಥಿಗಳಿರುವ ಎಂಟು ಕ್ಷೇತ್ರಗಳಲ್ಲಿ ಎರಡು ಮತಯಂತ್ರ ಬಳಸಲಾಗುವುದು ಎಂದು ವಿವರಿಸಿದರು. ಮತದಾನದ ದಿನ ನೆರೆಯ ರಾಜ್ಯಗಳಿಗೆ ಹೊಂದಿಕೊಂಡಿರುವ ರಾಜ್ಯದ ಗಡಿಗಳನ್ನು ಮುಚ್ಚಲಾಗುವುದು ಎಂದರು.



ಮಂಗಳೂರಿನಲ್ಲಿ ಭಾನುವಾರ ರೋಡ್ ಶೋ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರತ್ತ ಅಭಿಮಾನಿಗಳು ಹೂಮಳೆಗರೆದರು. ಕೋಟ ಶ್ರೀನಿವಾಸ ಪೂಜಾರಿ, ಬೃಜೇಶ್ ಚೌಟ ಜೊತೆಗಿದ್ದರು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಮೈಸೂರಿನಲ್ಲಿ ಪ್ರಧಾನಿ ಮೋದಿ ಚುನಾವಣಾ ಪ್ರಚಾರ

‘ಕಾಂಗ್ರೆಸ್‌ಗೆ ಶಿಕ್ಷೆ ಕೊಡಿ’

● ಕೆ.ನರಸಿಂಹಮೂರ್ತಿ

ಮೈಸೂರು: ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಗಟ್ಟಿ ಬಾಂಧವ್ಯವನ್ನು ಪ್ರತಿಪಾದಿಸಿದ ಪ್ರಧಾನಿ ನರೇಂದ್ರ ಮೋದಿ, ‘ದೇಶ ಒಡೆಯುವ ದುರುದ್ದೇಶದಿಂದ ತುಕ್ಡೆ ಗ್ಯಾಂಗ್‌ನೊಂದಿಗೆ ಅಲೆದಾಡುತ್ತಿರುವ ಕಾಂಗ್ರೆಸ್‌ಗೆ ಏಪ್ರಿಲ್ 26ರಂದು ಶಿಕ್ಷೆ ಕೊಡಿ’ ಎನ್ನುವ ಮೂಲಕ ರಾಜ್ಯದಲ್ಲಿ ಲೋಕಸಭೆ ಚುನಾವಣಾ ಪ್ರಚಾರಕ್ಕೆ ಚಾಲನೆ ಕೊಟ್ಟರು. ‘ರಾಜ್ಯದ ಮನೆ ಮನೆಗೂ ಹೋಗಿ ನನ್ನ ಬಗ್ಗೆ ಹೇಳಿ’ ಎಂಬ ಮನವಿಯನ್ನೂ ಮಾಡಿದರು.

ಮುಖ್ಯಾಂಶಗಳು

- ಮೈಸೂರು ಭಾಗದಲ್ಲಿ ಮೈತ್ರಿ ಪಕ್ಷಗಳ ಒಗ್ಗಟ್ಟು ಪ್ರದರ್ಶನ
- ಪ್ರಧಾನಿ ಮೋದಿ ನೋಡಲು ಬಂದ ಲಕ್ಷಕ್ಕೂ ಹೆಚ್ಚು ಜನ
- ಬಿರುಬಿಸಿಲ ನಡುವೆಯೇ ಮಧ್ಯಾಹ್ನದಿಂದಲೂ ಕಾದರು

ಮೈತ್ರಿ ಪಕ್ಷಗಳು ಏರ್ಪಡಿಸಿದ್ದ ‘ವಿಕಸಿತ ಭಾರತಕ್ಕೆ ವಿಜಯ ಸಂಕಲ್ಪ ಸಮಾವೇಶ’ದಲ್ಲಿ ಬಿರುಬಿಸಿಲನ್ನೂ ಲೆಕ್ಕಿಸದೆ ಪಾಲ್ಗೊಂಡಿದ್ದ ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು, ಭಾಷಣದ ನಡುವೆಯೇ, ‘ಮತ್ತೊಮ್ಮೆ ಮೋದಿ ಸರ್ಕಾರ’ ಎಂದು ಪದೇ ಪದೇ ಘೋಷಣೆ ಕೂಗಿ ಪ್ರಧಾನಿಗೆ ಬೆಂಬಲ ಸೂಚಿಸಿದರು.

28 ನಿಮಿಷಗಳ ತಮ್ಮ ಭಾಷಣದ ಉದ್ದಕ್ಕೂ ಪ್ರಧಾನಿಯು ಹತ್ತು ವರ್ಷಗಳ ತಮ್ಮ ಸರ್ಕಾರದ ಸಾಧನೆಯನ್ನು ಹೇಳುತ್ತಲೇ, ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಲ್ಲೇ ಸಮಾವೇಶ ನಡೆದರೂ, ಎಲ್ಲಿಯೂ ಅವರ ಹೆಸರನ್ನು ಉಲ್ಲೇಖಿಸಲಿಲ್ಲ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಚ್‌.ಡಿ.ಕೆ, ಸಂಜಯಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌.ಡಿ. ಕುಮಾರಸ್ವಾಮಿ ನೀಡಿದ ಹೇಳಿಕೆಯಿಂದ ಮಹಿಳೆಯರ ಘನತೆ ಹಾಗೂ ಚಾರಿತ್ರ್ಯಕ್ಕೆ ಧಕ್ಕೆಯಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಅವರಿಗೆ ನೋಟಿಸ್ ನೀಡಲಾಗುವುದು’ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ತಿಳಿಸಿದ್ದಾರೆ.

‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ಕುರಿತು ಅಪಮಾನಕಾರಿ ಹೇಳಿಕೆ ನೀಡಿರುವ ಸಂಜಯ ಪಾಟೀಲ ವಿರುದ್ಧವೂ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದಿದ್ದಾರೆ.



ಕುಮಾರಸ್ವಾಮಿ



ಸಂಜಯ ಪಾಟೀಲ

‘ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವ ರಾಜಕೀಯ ನಾಯಕರು ಮಹಿಳೆಯರ ಬಗ್ಗೆ ಹಾಗೂ ಅವರ ಘನತೆಯನ್ನು ಕುಂದಿಸುವ ರೀತಿಯಲ್ಲಿ ಹೇಳಿಕೆ ನೀಡುತ್ತಿರುವುದು ದುರದೃಷ್ಟಕರ ವಿಚಾರ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಮಹಿಳಾ ಆಯೋಗ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಿದೆ’ ಎಂದೂ ಅವರು ಹೇಳಿದ್ದಾರೆ.

ತುರುವೇಕೆರೆ ಪಟ್ಟಣದಲ್ಲಿ ಶನಿವಾರ ನಡೆದ ಹಮ್ಮಿಕೊಂಡಿದ್ದ ಪ್ರಚಾರದ ರ‍್ಯಾಲಿಯಲ್ಲಿ ಮಾತನಾಡಿದ್ದ ಕುಮಾರಸ್ವಾಮಿ, ‘ಗ್ಯಾರಂಟಿ ಯೋಜನೆಗಳಿಂದ ಹಳ್ಳಿಯ ತಾಯಂದಿರು ದಾರಿ ತಪ್ಪಿದ್ದಾರೆ’ ಎಂದು ಹೇಳಿದ್ದರು.

ಹಿಂಡಲಗಾದಲ್ಲಿ ಶನಿವಾರ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ್ದ ಬೆಳಗಾವಿ ಕ್ಷೇತ್ರದ ಬಿಜೆಪಿ ಉಸ್ತುವಾರಿ ಸಂಜಯ ಪಾಟೀಲ, ‘ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಬಿಜೆಪಿಗೆ ಸಿಕ್ಕ ಬೆಂಬಲ ನೋಡಿದರೆ ‘ಅಕ್ಕ’ ನಿದ್ದೆಗೆಡುತ್ತಾರೆ. ಅವರಿಂದು ನಿದ್ದೆ ಮಾತ್ರೆ ತೆಗೆದುಕೊಳ್ಳಬೇಕು ಇಲ್ಲವೇ ಒಂದು ‘ಪೆಗ್’ ಹೆಚ್ಚುವರಿ ಕುಡಿಯಬೇಕು’ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೆಸರು ಹೇಳದೇ ಮೂದಲಿಸಿದ್ದರು.

ಇನ್ನಷ್ಟು ಸುದ್ದಿಗಳು 06







1. ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಭಾನುವಾರ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಪುಷ್ಪ ನಮನ ಸಲ್ಲಿಸಿದರು. 2. ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್ ವತಿಯಿಂದ ಅಂಬೇಡ್ಕರ್ ಜಯಂತಿಯಲ್ಲಿ ವೈ.ಬಿ.ಎಚ್. ಜಯದೇವ್ ಮಾತನಾಡಿದರು. 3. ಬಾಗಲಗುಂಟೆಯ ಎನ್‌ಡಿಎ ಕಚೇರಿಯಲ್ಲಿ ದಾಸರಹಳ್ಳಿ ಕ್ಷೇತ್ರ ಘಟಕ ಎಸ್ಸಿ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತಿ ಆಚರಣೆಯಲ್ಲಿ ಶಾಸಕ ಎಸ್. ಮುನಿರಾಜು ಅವರು ಪಾಲ್ಗೊಂಡಿದ್ದರು. ಬಿಜೆಪಿ ಪದಾಧಿಕಾರಿಗಳು ಉಪಸ್ಥಿತರಿದ್ದರು

ಎಲ್ಲೆಡೆ ಸಂವಿಧಾನ ಶಿಲ್ಪಿಯ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಭಾನುವಾರ ನಗರದ ವಿವಿಧೆಡೆ ವಿವಿಧ ಸಂಘಟನೆಗಳು, ಸರ್ಕಾರಿ ಸಂಸ್ಥೆಗಳು ಸಂಭ್ರಮದಿಂದ ಆಚರಿಸಿದವು.

ಬಿಬಿಎಂಪಿ: ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕೆ. ಹರೀಶ್ ಕುಮಾರ್, ಪ್ರೀತಿ ಗೆಹಲೋತ್, ವಲಯ ಆಯುಕ್ತರಾದ ರಮ್ಯಾ, ಶಿವಾನಂದ ಕಾಪಶಿ, ಸ್ನೇಹಲ್, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತೆ ಪ್ರತಿಭಾ, ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರಹ್ಲಾದ್, ಕಂದಾಯ ವಿಭಾಗದ ಜಂಟಿ ಆಯುಕ್ತೆ ಲಕ್ಷ್ಮಿದೇವಿ ಉಪಸ್ಥಿತರಿದ್ದರು.

ಪೀಣ್ಯ ದಾಸರಹಳ್ಳಿ: ‘ಸಂವಿಧಾನಾತ್ಮಕವಾದ ಕಾನೂನುಗಳ ಮೂಲಕ ಹಿಂದುಳಿದ ವರ್ಗಗಳನ್ನು ಮೇಲೆತ್ತಿದ ಮಹಾ ನಾಯಕ ಡಾ. ಬಿ.ಆರ್. ಅಂಬೇಡ್ಕರ್’ ಎಂದು ಸಾಹಿತಿ ವೈ.ಬಿ.ಎಚ್.ಜಯದೇವ್ ತಿಳಿಸಿದರು.

ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್ ವತಿಯಿಂದ ಆಯೋಜಿಸಲಾದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವಾಧ್ಯಕ್ಷ ಗುರುನಾಥ್, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಸುರೇಶ್ ಬಿರಾದಾರ್, ಕಾದಂಬರಿಗಾರ್ತಿ ಭಾರತಿ ವೈ.ಕೋಕಲೆ, ಕವಯಿತ್ರಿ ಗೀತಾ ಭಾಗವಹಿಸಿದ್ದರು.

ಬಾಗಲಗುಂಟೆ: ‘ಸಮಾಜದಲ್ಲಿ ತುಳಿತಕ್ಕೆ ಒಳಗಾದವರಿಗೆ ನ್ಯಾಯ ಒದಗಿಸಿ ಸಮಾನತೆಯ ಹರಿಕಾರರಾದವರು ಬಾಬಾ ಸಾಹೇಬ್ ಅಂಬೇಡ್ಕರ್’ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಬಾಗಲಗುಂಟೆಯಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಘಟಕದ ಎಸ್ಸಿ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಷೇತ್ರದ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿ.ಜಿ. ಗಂಗಾಧರ್, ಎಂ. ಮುನಿರಾಜು, ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಟಿ. ಶಿವಕುಮಾರ್, ಪಿ.ಎಚ್. ರಾಜು, ಪಾಂಡುರಂಗ ರಾವ್, ಬಿ. ಕೃಷ್ಣಮೂರ್ತಿ, ಗುರುಪ್ರಸಾದ್, ಕೇಬಲ್ ಜಗದೀಶ್, ನಾಣಯ್ಯ, ವಿನೋದ್ ಗೌಡ, ರಘು, ಗಿರಿಜಾ, ಸುಜಾತ ಭಾಗವಹಿಸಿದ್ದರು.

ಕೆ.ಆರ್.ಪುರ: ಶ್ರೇಷ್ಠ ಸಂವಿಧಾನವನ್ನು ಭಾರತಕ್ಕೆ ರೂಪಿಸಿ ಕೊಟ್ಟ ಸಂವಿಧಾನ ಶಿಲ್ಪಿ, ಸಾಮಾಜಿಕ ನ್ಯಾಯ ಮತ್ತು ಸಮಾನತೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟವರು ಡಾ.ಬಿ.ಆರ್. ಅಂಬೇಡ್ಕರ್. ಅವರು ದಿನ ದಲಿತರಿಗಾಗಿ ಕಾನೂನು ರಚಿಸಿ ನ್ಯಾಯದ ಕಲ್ಪನೆಗೆ ಅಡಿಗಲ್ಲು ಹಾಕಿದರು ಎಂದು ಮಾಜಿ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಮಹದೇವಪುರ ಕ್ಷೇತ್ರದ ಮಾರತ್ತಹಳ್ಳಿಯ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜಾಜಿನಗರ: ಮೂಕನಾಯಕನಿಂದ ಪ್ರಬುದ್ಧ ಭಾರತದವರೆಗಿನ ಹೋರಾಟ ರಾಷ್ಟ್ರದ ಏಕತೆಗಾಗಿ ನಡೆದಿದ್ದು. ರಾಷ್ಟ್ರದ ಮುಖ್ಯವಾಹಿನಿಗೆ ಶೋಷಿತರನ್ನು ತರುವುದು ಅಂಬೇಡ್ಕರ್ ಪ್ರಯತ್ನವಾಗಿತ್ತು. ನಾನೊಬ್ಬ ಮೊದಲು ಭಾರತೀಯ ಆನಂತರವೂ ಭಾರತೀಯ ಎಂದಂತಹ ಮಹಾನ್ ನಾಯಕನನ್ನು ಒಂದು ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ಮಾಜಿ ಸಚಿವ ಎನ್. ಮಹೇಶ್ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಂಗಳೂರು ಮಹಾನಗರ ವತಿಯಿಂದ ರಾಜಾಜಿನಗರದ ಕೆ.ಎಲ್.ಇ. ಶಾಲಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ ಉಪಸ್ಥಿತರಿದ್ದರು.





ಮಾಜಿ ಶಾಸಕ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಲಿಂಬಾವಳಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು (ಎಡಚಿತ್ರ) ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಂಗಳೂರು ಮಹಾನಗರ ವತಿಯಿಂದ ರಾಜಾಜಿನಗರದ ಕೆ.ಎಲ್.ಇ. ಶಾಲಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎನ್. ಮಹೇಶ್, ಆರ್‌ಎಸ್‌ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ ಎಸ್ ಉಮಾಪತಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ನಮಿಸಿದರು

ನಿವೃತ್ತ ಪೊಲೀಸ್ ಅಧಿಕಾರಿ ಮನೆಗೆ ಕನ್ನ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿಯ ಬಿಎಚ್‌ಸಿಎಸ್ ಲೇಔಟ್‌ನಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರ ಮನೆಯಲ್ಲಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿದ್ದ ರೌಡಿ ಸೇರಿದಂತೆ ನಾಲ್ವರು ಆರೋಪಿಗಳನ್ನು ರಾಜಗೋಪಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಣಿ ಅಲಿಯಾಸ್ ಕಳ್ಳ ಮಣಿ, ದೀಕ್ಷಿತ್, ಕೀರ್ತಿ ಹಾಗೂ ಅಜಯ್ ಅಲಿಯಾಸ್ ಕ್ಯಾಟು ಬಂಧಿತ ಆರೋಪಿಗಳು. ಬಂಧಿತರಿಂದ ₹28.50 ಲಕ್ಷ ಮೌಲ್ಯದ 470 ಗ್ರಾಂ ಚಿನ್ನಾಭರಣ, 500 ಗ್ರಾಂ ಬೆಳ್ಳಿ ಆಭರಣ ಹಾಗೂ ₹50 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಲಗ್ಗೆರೆ ವ್ಯಾಪ್ತಿಯ ಮುಖ್ಯರಸ್ತೆಯಲ್ಲಿ ಸಿಬ್ಬಂದಿ ಗಸ್ತಿನಲ್ಲಿದ್ದರು. ಅದೇ ರಸ್ತೆಯಲ್ಲಿದ್ದ ಚಿನ್ನಾಭರಣ ಮಳಿಗೆ ಎದುರು ಇಬ್ಬರು ಅನುಮಾನಾಸ್ಪದ ರೀತಿಯಲ್ಲಿ ಓಡಾಟ ನಡೆಸುತ್ತಿದ್ದರು. ಅವರನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಅವರ ಬಳಿ, ಚಿನ್ನದ ಆಭರಣಗಳು ಇರುವುದು ಪತ್ತೆಯಾಗಿತ್ತು. ನಂತರ ಬಂಧಿಸಲಾಯಿತು’ ಎಂದು ಹೇಳಿದರು.

ಮೂವರ ಬಂಧನ: ಸಂಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಗಳ ಬೀಗ ಒಡೆದು ಚಿನ್ನಾಭರಣ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬೈಕ್ ಡಿಕ್ಕಿ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರ–ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಶನಿವಾರ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ದರ್ಶನ್ (21) ಎಂಬುವವರು ಮೃತಪಟ್ಟಿದ್ದಾರೆ.

‘ಹೆಸರಘಟ್ಟ ಬಳಿಯ ಬ್ಯಾತ ಗ್ರಾಮದ ದರ್ಶನ್, ಶನಿವಾರ ಸಂಜೆ 7.30 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಚಿಕ್ಕಬಾಣಾವರ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ದರ್ಶನ್ ಅವರ ಬೈಕ್ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಮರಕ್ಕೆ ಡಿಕ್ಕಿ ಹೊಡೆದಿತ್ತು. ನಂತರ, ಕಾಂಪೌಂಡ್‌ಗೂ ಬೈಕ್ ಗುದ್ದಿ ಉರುಳಿ ಬಿದ್ದಿತ್ತು. ಅಪಘಾತದಿಂದ ತೀವ್ರ ಗಾಯಗೊಂಡು ದರ್ಶನ್ ಮೃತಪಟ್ಟಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

‘ರನ್ 4 ನಮೋ’ ಓಟಕ್ಕೆ ಚಾಲನೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೆಂಬಲಿಸಿ ಜಯನಗರದ ಜಾಗ್ವಾರ್ಸ್ ತಂಡ, ಭಾನುವಾರ ಆಯೋಜಿಸಿದ್ದ ‘ರನ್ 4 ನಮೊ’ ಓಟಕ್ಕೆ ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ, ಬ್ಯಾಡ್ಮಿಂಟನ್ ಕ್ರೀಡಾಪಟು ರೋಹನ್ ಬೋಪಣ್ಣ ಅವರು ಚಾಲನೆ ನೀಡಿದರು.

ಆರ್‌ವಿ ಟೀಚರ್ಸ್ ಕಾಲೇಜಿನಿಂದ ಬೆಳಿಗ್ಗೆ 6.30ಕ್ಕೆ ಪ್ರಾರಂಭವಾದ ಓಟ, ಮಯ್ಯಾಸ್ ಹೋಟೆಲ್ ಜಂಕ್ಷನ್, ಯಡಿಯೂರು ಕೆರೆ ಮೂಲಕ ಹಾದು ಲಾಲ್‌ಬಾಗ್ ಪಶ್ಚಿಮ ದ್ವಾರದಲ್ಲಿ ಮುಕ್ತಾಯಗೊಂಡಿತು.

ತೇಜಸ್ವಿ ಸೂರ್ಯ ಮಾತನಾಡಿ, ‘ಮತದಾನದ ಶೇಕಡವಾರು ಪ್ರಮಾಣ ಹೆಚ್ಚಾಗಲು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ತಮ್ಮ ಹಕ್ಕು ಚಲಾಯಿಸಬೇಕು’ ಎಂದು ಮನವಿ ಮಾಡಿದರು.

‘2019ರಲ್ಲಿ ಬೆಂಗಳೂರು ದಕ್ಷಿಣದಲ್ಲಿ ಕೇವಲ ಶೇ 53ರಷ್ಟು ಮತದಾನವಾಗಿತ್ತು. ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ನಡೆಯಬೇಕು. ಅಪಾರ್ಟ್‌ಮೆಂಟ್ ನಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಧಾವಿಸಿ ಹಕ್ಕು ಚಲಾಯಿಸಬೇಕು’ ಎಂದು ಹೇಳಿದರು.

ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ‘ಮಡಕೆ ನೀರು’



ಬೆಂಗಳೂರು: ರೈಲು ಪ್ರಯಾಣಿಕರಿಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಕೊರತೆಯಾಗಬಾರದು ಎಂಬ ಕಾರಣಕ್ಕೆ ನೈರುತ್ಯ ರೈಲ್ವೆಯು ನಿಲ್ದಾಣಗಳಲ್ಲಿ ಮಣ್ಣಿನ ಮಡಕೆಯಲ್ಲಿ ನೀರು ಇಡುವ ವ್ಯವಸ್ಥೆ ಮಾಡಿದೆ.

ಇಲ್ಲಿನ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ರೈಲು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್‌ಗಳಿಗೆ ಪ್ರವೇಶಿಸುವ ಮತ್ತು ನಿರ್ಗಮಿಸುವಲ್ಲಿ ಮಣ್ಣಿನ ಮಡಕೆಯಲ್ಲಿ ನೀರು ಇಡಲಾಗಿದೆ. ಮಣ್ಣಿನ ಮಡಕೆಯಲ್ಲಿ ನೀರು ತಂಪಾಗಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ನೈರುತ್ಯ ರೈಲ್ವೆ ವ್ಯಾಪ್ತಿಯ ಎಲ್ಲ ನಿಲ್ದಾಣಗಳಲ್ಲಿ ಮತ್ತು ಕೆಲವೇ ನಿಮಿಷ ನಿಲುಗಡೆ ಇರುವ ನಿಲ್ದಾಣಗಳಲ್ಲಿಯೂ ಮಡಕೆಯಲ್ಲಿ ನೀರನ್ನು ಇಡಲಾಗಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಈಗಾಲೇ ಅಸ್ತಿತ್ವದಲ್ಲಿ ಇರುವ ಎಲ್ಲ ವಾಟರ್ ಕೂಲರ್‌ಗಳು ಕಾರ್ಯನಿರ್ವಹಿಸುವಂತೆ ಮಾಡಲಾಗುತ್ತಿದೆ. ಪ್ರಮುಖ ನಿಲ್ದಾಣಗಳಲ್ಲಿ ಅಗತ್ಯ ಬಿದ್ದರೆ ನೀರು ಪೂರೈಸಲು ಟ್ಯಾಂಕರ್‌ಗಳನ್ನು ನಿಯೋಜಿಸಲಾಗಿದೆ. ಸರ್ಕಾರೇತರ ಸಂಸ್ಥೆಗಳು, ಸ್ಕೌಟ್ಸ್, ಗೈಡ್ಸ್, ಸ್ವಸಹಾಯ ಗುಂಪುಗಳ ಸಹಯೋಗ ಪಡೆದು ಸಾಮಾನ್ಯ ಕೋಚ್‌ಗಳ ಬಳಿ ತಂಪಾದ ನೀರು ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ. ನಿಯಮಿತವಾಗಿ ನೀರಿನ ಲಭ್ಯತೆಯ ಪರಿಶೀಲನೆ ನಡೆಯಲಿದೆ.

ನಿಲ್ದಾಣಗಳಲ್ಲಿನ ಎಲ್ಲ ಅಡುಗೆ ಘಟಕಗಳಲ್ಲಿ (ಪ್ಯಾಂಟ್ರಿ) ರೈಲು ಬದಿ ಮಾರಾಟ ಮಾಡುವ ಸಂಚಾರ ಘಟಕಗಳಲ್ಲಿಯೂ ಸಾಕಷ್ಟು ನೀರಿನ ಸಂಗ್ರಹ ಇಟ್ಟುಕೊಳ್ಳಲು ಸೂಚನೆ ನೀಡಲಾಗಿದೆ. ಬೇಸಿಗೆಯಲ್ಲಿ ಶುದ್ಧಕುಡಿಯುವ ನೀರು ಒದಗಿಸಲು ನೈರುತ್ಯ ರೈಲ್ವೆ ಬದ್ಧವಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬಿಸಿಲ ತಾಪಕ್ಕೆ ಉದುರುತ್ತಿವೆ ಮಾವಿನ ಕಾಯಿಗಳು

• ಮೋಹನ್ ಕುಮಾರ್ ಸಿ.ಜಿ.

ದಾಬಸ್ ಪೇಟೆ: ಏರುತ್ತಿರುವ ಬಿಸಿಲ ತಾಪಕ್ಕೆ ನೆಲಮಂಗಲ ತಾಲ್ಲೂಕು ಹಾಗೂ ದಾಬಸ್ ಪೇಟೆ ವ್ಯಾಪ್ತಿಯಲ್ಲಿನ ಮಾವಿನ ಮರಗಳಲ್ಲಿ ಕಾಯಿಗಳು ಉದುರುತ್ತಿದ್ದು, ಫಸಲು ಕಡಿಮೆಯಾಗುವ ಆತಂಕ ರೈತರನ್ನು ಕಾಡುತ್ತಿದೆ.

ತಾಲ್ಲೂಕಿನಲ್ಲಿ 1,259 ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ಮರಗಳಿವೆ. ಈ ಬಾರಿ ಮಳೆ ಕೊರತೆಯಿಂದಾಗಿ ಮತ್ತು ಹೂ ಬಿಡುವ ಕಾಲಕ್ಕೆ ಮರಗಳು ಚಿಗುರಿದವು. ಇದರಿಂದಾಗಿ ಹೂವು ಕಡಿಮೆಯಾಯಿತು. ಇರುವ ಹೂವು ಹೀಚಾಗಿ, ಕಾಯಿ ಕಚ್ಚಿ ಬಲಿಯುತ್ತಿರುವ ಕಾಲಕ್ಕೆ ಬಿಸಿಲ ಝಳ ಹೆಚ್ಚಾಯಿತು. ಈಗ ಕಾಯಿಗಳು ಉದುರಲು ಆರಂಭಿಸಿವೆ.

‘ಇರುವಷ್ಟು ಕಾಯಿಗಳಾದರೂ ಉಳಿದುಕೊಂಡು, ಹಾಕಿರುವ ಬಂಡವಾಳವಾದರೂ ಕೈಗೆ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದೆವು. ಈಗ ಬಿಸಿಲ ತಪಕ್ಕೆ ಆ ಕಾಯಿಗಳೂ ಉದುರುತ್ತಿವೆ’ ಎಂದು ರೈತ ತ್ಯಾಗರಾಜು ಬೇಸರ ವ್ಯಕ್ತಪಡಿಸಿದರು.

ರೈತ ಪ್ರವೀಣ್, ‘ನಮ್ಮಲ್ಲಿ ನೀರಾವರಿ ವ್ಯವಸ್ಥೆ ಇಲ್ಲ. ಮಳೆ ಕೊರತೆಯ ಜೊತೆಗೆ, ಬಿರು ಬಿಸಿಲಿನಿಂದ ಇಳುವರಿಯೂ ಕುಸಿಯುತ್ತಿದೆ. ಸಿಕ್ಕ ಫಸಲಿಗೂ ಸೂಕ್ತ ಬೆಲೆ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ’ ಎಂದು ಬೇಸರಿಸಿದರು.

‘ಹೂವು ಉಳಿಸಿಕೊಳ್ಳಲು ಔಷಧಿ ಸಿಂಪಡಿಸಿದ್ದೆವು. ಈಗ ಅದೂ ವ್ಯರ್ಥ-ವಾಗುತ್ತಿದೆ. ಮಾವಿನ ಬೆಳೆಯಲ್ಲಾದರೂ ಒಂದಷ್ಟು ಹಣ ಬಂದರೆ, ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಬಹುದೆಂಬ ನಿರೀಕ್ಷೆ ಇತ್ತು. ಅದು ಹುಸಿಯಾಗುವಂತೆ ಕಾಣುತ್ತಿದೆ’ ಎಂದು ಅವರು ಅಳಲು ತೋಡಿ ಕೊಂಡರು.‘ತೋಟಗಳಲ್ಲಿ ಹೂವು ಬಿಟ್ಟಾಗಲೇ ವ್ಯಾಪಾರಿಗಳಿಂದ ಮುಂಗಡವಾಗಿ ಒಂದಷ್ಟು ಹಣ ತೆಗೆ-ದುಕೊಂಡಿದ್ದೇವೆ. ಈಗ ಕಾಯಿ ಉದು-ರುತ್ತಿರುವುದರಿಂದ ವ್ಯಾಪಾರಸ್ಥರು, ‘ನಮಗೆ ನಷ್ಟವಾಗುತ್ತದೆ’ ಎಂದು ಇರುವ ಫಸಲನ್ನು ಕಡಿಮೆ ಬೆಲೆಗೆ ಕೇಳುತ್ತಿದ್ದಾರೆ. ಒಪ್ಪದಿದ್ದರೆ, ಗುತ್ತಿಗೆಯೇ ಬೇಡ ಎನ್ನುತ್ತಿದ್ದಾರೆ. ನಮಗೆ ದಿಕ್ಕೇ ತೋಚದಂತಾಗಿದೆ’ ಎಂದರು ರೈತ ಮಂಜುನಾಥ್.

‘ಮಾವಿನ ಬೆಳೆಗೆ 25 ಡಿಗ್ರಿ ಯಿಂದ 28 ಡಿಗ್ರಿ ತಾಪಮಾನ ಸೂಕ್ತ. ಆದರೆ ಈ ಬಾರಿತಾಲ್ಲೂಕಿನಲ್ಲಿ 32ರಿಂದ 35 ಡಿಗ್ರಿ ತಾಪಮಾನವಿದೆ. ಇದರಿಂದ ಫಸಲು ಕಡಿಮೆಯಾಗುವ ಸಾಧ್ಯತೆ ಇದೆ’ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು.



ರೈತ ತ್ಯಾಗರಾಜ್ ಅವರ ಮಾವಿನ ತೋಟ

‘ಸಂಚಲನ’ ಪ್ರಶಸ್ತಿ ಪ್ರದಾನ, ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಬಂಜಗೆರೆ ಜಯಪ್ರಕಾಶ್

ಭಾಷೆ, ದೇಶವಾಸಿಗಳ ಬೆಳೆಸಿದ ಕ್ರೈಸ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೌಕಿಕ ಶಿಕ್ಷಣದಿಂದ ವಂಚಿತವಾಗಿದ್ದ ಭಾರತಕ್ಕೆ ಕ್ರೈಸ್ತರು ಬಂದ ಬಳಿಕ ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಗಳನ್ನು ಸರ್ವರಿಗೆ ಸಿಗುವಂತೆ ಮಾಡಿದರು. ದೇಶಭಾಷೆ, ದೇಶವಾಸಿಗಳನ್ನೂ ಬೆಳೆಸಿದರು ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ‘ಸಂಚಲನ’ ಪ್ರಶಸ್ತಿ ಪ್ರದಾನ ಹಾಗೂ ‘ಘಟ ಉರುಳಿತು’, ‘ಡಿಟೆಕ್ಟಿವ್ ಸ್ಟೋರೀಸ್’ ಕೃತಿಗಳ ಬಿಡುಗಡೆ ಕಾರ್ಯ-ಕ್ರಮದಲ್ಲಿ ಅವರು ಮಾತನಾಡಿದರು.

‘ಎಲ್ಲರಿಗೂ ಶಿಕ್ಷಣ ಎಂಬ ಕಲ್ಪನೆಯೇ ನಮ್ಮಲ್ಲಿ ಇರಲಿಲ್ಲ. ಗುರುಕುಲ ಶಿಕ್ಷಣ ಪದ್ಧತಿ ಇತ್ತಾದರೂ ಅದು ಜಾತಿ ಆಧಾರಿತವಾಗಿತ್ತು. ಮೌಢ್ಯಗಳಿಂದ ತುಂಬಿಹೋಗಿತ್ತು. ಚರಕ–ಸುಶ್ರುತ ವೈದ್ಯಕೀಯ ಪದ್ಧತಿ ಭಾರತದಲ್ಲಿ ಇದ್ದರೂ ಅದನ್ನು ಅನುಸರಿಸುತ್ತಿರಲಿಲ್ಲ. ಯಾಕೆಂದರೆ ಈ ಪದ್ಧತಿಯಲ್ಲಿ ಚಿಕಿತ್ಸೆ ನೀಡಬೇಕಿದ್ದರೂ ರೋಗಿಯನ್ನು ಮುಟ್ಟಿ, ದೇಹವನ್ನು ಪರೀಕ್ಷಿಸಬೇಕಿತ್ತು. ಮುಟ್ಟುವುದೇ ನಿಷಿದ್ಧವಾಗಿದ್ದು ಇದಕ್ಕೆ ಕಾರಣವಾಗಿತ್ತು. ಇಂಥ ಕಾಲದಲ್ಲಿ ಭಾರತಕ್ಕೆ ಬಂದ ಕ್ರೈಸ್ತರು ಎಲ್ಲರನ್ನು ನಾಗರಿಕರು ಎಂದು ಪರಿಗಣಿಸಿದರು’ ಎಂದು ವಿವರಿಸಿದರು.

ಇಂಥದ್ದೇ ಆಶಯಗಳನ್ನು ಇಟ್ಟುಕೊಂಡು ‘ಸಂಚಲನ’ ಸಂಘಟನೆ ಮೂರು ದಶಕಗಳಿಂದ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಎಫ್.ಎಂ. ನಂದಗಾವ ಅವರ ‘ಘಟ ಉರುಳಿತು’ ಕಥಾ ಸಂಕಲನ ಬಗ್ಗೆ ಲೇಖಕ ಎಚ್. ದಂಡಪ್ಪ ಮಾತನಾಡಿ, ‘ಚರ್ಚ್ ಮತ್ತು ಧರ್ಮಗುರುಗಳ ಕೇಂದ್ರಿತವಾಗಿರುವ ಕಥೆಗಳೇ ಈ ಕೃತಿಯಲ್ಲಿ ಹೆಚ್ಚಿವೆ. ಪಾದ್ರಿಗಳ ಗುಣ ಮತ್ತು ಅವಗುಣಗಳನ್ನು ಲೇಖಕರು ತೆರೆದಿಟ್ಟಿದ್ದಾರೆ. ಕ್ರೈಸ್ತ ಪುರೋಹಿತ ವ್ಯವಸ್ಥೆಯ ಬಗ್ಗೆ ತಿಳಿಸುತ್ತಲೇ ಜಗತ್ತಿನ ವಿವಿಧ ಧರ್ಮಗಳ ಪುರೋಹಿತಶಾಹಿ ವ್ಯವಸ್ಥೆಯನ್ನೂ ವಿವರಿಸಿದ್ದಾರೆ. ಶಾಸ್ತ್ರಕ್ಕಿಂತ ಅನುಭವ ದೊಡ್ಡದು ಎಂಬುದನ್ನು ಸಾರಿದ್ದಾರೆ’ ಎಂದು ವಿಶ್ಲೇಷಿಸಿದರು.

ಗಿರೀಶ್ ತಾಳಿಕೋಟೆ ಅವರ ‘ಡಿಟೆಕ್ಟಿವ್ ಸ್ಟೋರೀಸ್’ ಬಗ್ಗೆ ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ ಮಾತನಾಡಿ, ‘ಹೆಸರು ಡಿಟೆಕ್ಟಿವ್ ಎಂದಿದ್ದರೂ ಇದು ಜಗತ್ತಿನ ಅನ್‌ಡಿಟೆಕ್ಟಿವ್ (ಪತ್ತೆಯಾಗದ) ಸ್ಟೋರಿಗಳನ್ನು ಕಟ್ಟಿ ಕೊಡುತ್ತದೆ. ಮಗು ಕಳೆದುಕೊಂಡ ತಾಯಿಗೆ ಬೇರೆ ಮಗುವನ್ನು ತೋರಿಸಿ ‘ಇದೇ ನಿನ್ನ ಮಗು’ ಎಂದು ಪೊಲೀಸರು ನಂಬಿಸುವ ಪ್ರಯತ್ನ, ಒಪ್ಪದೇ ಇದ್ದಾಗ ಆಕೆಯನ್ನು ಮಾನಸಿಕ ಅಸ್ವಸ್ಥೆ ಎಂದು ಬಿಂಬಿಸುವ ಪ್ರಕರಣವನ್ನು ಮನಕಲಕುವಂತೆ ವಿವರಿಸಿದ್ದಾರೆ. ವಿಮಾನ ಹೈಜಾಕ್ ಮಾಡಿಯೂ ಸಿಕ್ಕಿ ಬೀಳದವನ ಕಥೆ ಸಹಿತ ಜಗತ್ತಿನ 18 ರೋಚಕ ಪ್ರಕರಣಗಳು ಈ ಕೃತಿಯಲ್ಲಿವೆ’ ಎಂದು ವಿವರಿಸಿದರು.

ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಅವರಿಗೆ ‘ಸಂಚಲನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.ರೀಟಾ ರೀನಿ ಸಂಚಲನದ ಬಗ್ಗೆ ವಿವರಿಸಿದರು.

ಕೃತಿಗಳ ಪರಿಚಯ

ಕೃತಿ	ಘಟ ಉರುಳಿತು
ಪ್ರಕಾರ	ಕಥಾ ಸಂಕಲನ
ಲೇಖಕ	ಎಫ್.ಎಂ. ನಂದಗಾವ
ಪುಟ	164
ಬೆಲೆ	₹180
ಕೃತಿ	ಡಿಟೆಕ್ಟಿವ್ ಸ್ಟೋರೀಸ್
ಪ್ರಕಾರ	ಪೊಲೀಸ್ ಕಥೆಗಳು
ಲೇಖಕ	ಗಿರೀಶ್ ತಾಳಿಕಟ್ಟೆ
ಪುಟ	180
ಬೆಲೆ	₹200
ಪ್ರಕಾಶನ	ಸಂಚಲನ



ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಅವರಿಗೆ ‘ಸಂಚಲನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಚಲನದ ರೀಟಾ ರೀನಿ, ಲೇಖಕ ಎಫ್.ಎಂ ನಂದಗಾವ, ಲೇಖಕ ಎಚ್.ದಂಡಪ್ಪ, ಸಾಹಿತಿ ಬಂಜಗೆರೆ ಜಯಪ್ರಕಾಶ್ ಮತ್ತು ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಮ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

‘ಚಾತುರ್ವರ್ಣ ಪೋಷಿಸುವ ಪಕ್ಷಗಳನ್ನು ದೂರವಿಡಿ’

ಪ್ರಜಾವಾಣಿ ವಾರ್ತೆ


ನಗರದ ಸ್ಫೂರ್ತಿಧಾಮದಲ್ಲಿ ಭಾನುವಾರ ನಡೆದ ‘ಅಂಬೇಡ್ಕರ್ ಹಬ್ಬ– ನನ್ನ ಮತ ನನ್ನ ಭವಿಷ್ಯ’ ವಿಚಾರ ಸಂಕಿರಣದಲ್ಲಿ ಸುಶೀಲ ನಾಡ ಅವರಿಗೆ ‘ಬೋಧಿವರ್ಧನ’ ಪ್ರಶಸ್ತಿ ಪ್ರದಾನ ಮಾಡಲಾಯಿತು

ಬೆಂಗಳೂರು: ಮೇಲು– ಕೀಳು ಎಂದು ಇಬ್ಭಾಗ ಮಾಡುವ ಚಾತುರ್ವರ್ಣವನ್ನು ವಿರೋಧಿಸಿದ್ದ ಅಂಬೇಡ್ಕರ್, ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯನ್ನು ಪ್ರತಿಪಾದಿಸಿದ್ದರು. ಚಾತುರ್ವರ್ಣ ವ್ಯವಸ್ಥೆಯನ್ನು ಪೋಷಿಸುವ ಪಕ್ಷಗಳನ್ನು ಈ ಬಾರಿಯ ಚುನಾವಣೆಯಲ್ಲಿ ದೂರ ಇಡಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಟಿ.ಆರ್. ಚಂದ್ರಶೇಖರ ತಿಳಿಸಿದರು.

ನಗರದ ಸ್ಫೂರ್ತಿಧಾಮದಲ್ಲಿ ಭಾನುವಾರ ನಡೆದ ‘ಅಂಬೇಡ್ಕರ್ ಹಬ್ಬ- ನನ್ನ ಮತ ನನ್ನ ಭವಿಷ್ಯ, ವಿಚಾರ ಸಂಕಿರಣ, ‘ಬೋಧಿವೃಕ್ಷ’, ‘ಬೋಧಿವರ್ಧನ’ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಗೆ ಅಪಾಯ ಎದುರಾಗಿದೆ. ಒಬ್ಬ ವ್ಯಕ್ತಿ ಒಂದು ಮತ, ಒಂದು ಮೌಲ್ಯ ಎಂಬ ಸೂತ್ರ ಅರ್ಥ ಕಳೆದುಕೊಳ್ಳುತ್ತಿದೆ. ಬಂಡವಾಳಶಾಹಿಗಳು, ಹಣದ ಬಲ, ತೋಳ್ಬಲ ಇರುವವರು, ಹಿಂದುತ್ವವಾದಿಗಳು, ಸರ್ವಾಧಿಕಾರಿಗಳು ಅಧಿಕಾರ ನಡೆಸುತ್ತಿದ್ದಾರೆ. ಅಂಬೇಡ್ಕರ್ ಮೌಲ್ಯಕ್ಕೆ ಮತ ಚಲಾಯಿಸಬೇಕೇ ಹೊರತು ಸಂವಿಧಾನ, ಪ್ರಜಾಪ್ರಭುತ್ವವನ್ನು ದುರ್ಬಲ ಗೊಳಿಸುವವರಿಗೆ ಅಲ್ಲ’ ಎಂದು ಪ್ರತಿಪಾದಿಸಿದರು.

‘ಸಂವಿಧಾನದ ಆಶಯದಲ್ಲಿ ದೇಶ ನಡೆಯಬೇಕೇ ಹೊರತು, ಮನುವಾದದ ಕಡೆಗೆ ದೇಶವನ್ನು ಒಯ್ಯಬಾರದು. ಹಾಗಾಗಿ ದೇವಾಲಯದ ಪ್ರವೇಶ ನಿರಾಕರಿಸಿದವರನ್ನು, ಫ್ಯಾಸಿಸ್ಟ್‌ಗಳನ್ನು, ಮನುವಾದಿಗಳನ್ನು, ಅಕ್ಷತೆ ಹಾಕಿಸಿದವರನ್ನು, ಇಟ್ಟಿಗೆ ಹೊರಿಸಿದವರನ್ನು, ಮೌಢ್ಯಕ್ಕೆ ದೂಡುವವರನ್ನು, ಅಭಿವೃದ್ಧಿಯ ಪರಿಭಾಷೆಯಲ್ಲಿ ಜನರನ್ನು ಸಂಕಷ್ಟಕ್ಕೆ ದೂಡುವವರನ್ನು ಆರಿಸಬಾರದು’ ಎಂದು ಸಲಹೆ ನೀಡಿದರು.

ಸ್ಫೂರ್ತಿಧಾಮ ಅಧ್ಯಕ್ಷ ಎಸ್. ಮರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಸಬಿಹಾ ಭೂಮಿಗೌಡ, ಚಿಂತಕ ಇಂದೂಧರ ಹೊನ್ನಾಪುರ ಪ್ರಶಸ್ತಿ ಪ್ರದಾನ ಮಾಡಿದರು.

‘ಬೋಧಿವೃಕ್ಷ’ ಪ್ರಶಸ್ತಿ: ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಎಸ್.ಆರ್. ಹಿರೇಮಠ ಅವರಿಗೆ ‘ಬೋಧಿವೃಕ್ಷ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿಯು ₹ 1 ಲಕ್ಷ ನಗದು ಬಹುಮಾನ ಹೊಂದಿದೆ.

‘ಬೋಧಿವರ್ಧನ’ ಪ್ರಶಸ್ತಿ: ದಲಿತ ಚಳವಳಿಯನ್ನು ಕಟ್ಟಿದ್ದ ಪತ್ರಕರ್ತ ರಾಮ್‌ದೇವ್ ರಾಕೆ, ಕರ್ನಾಟಕದ ಅರಣ್ಯಮೂಲ ಬುಡಕಟ್ಟು ಸಮುದಾಯಗಳ ಧ್ವನಿಯಾಗಿ ಕೆಲಸ ಮಾಡುತ್ತಿರುವ ಸುಶೀಲ ನಾಡ, ಚಾರ್ಮಾಡಿ ಘಾಟ್‌ನಲ್ಲಿ ಅಪಘಾತ ಉಂಟಾದಾಗಲೆಲ್ಲ ಆಪತ್ಬಾಂಧವನಾಗಿ ಬಂದು ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿ ಜೀವ ಉಳಿಸುತ್ತಿರುವ ಹಸನಬ್ಬ, ಋತುಮತಿಯಾದ ಮಕ್ಕಳನ್ನು ಮನೆಯಿಂದ ಹೊರಗೆ ಕೂರಿಸುವ ಅನಿಷ್ಟ ಪದ್ಧತಿಯ ವಿರುದ್ಧ ಹೋರಾಡುತ್ತಿರುವ ಜಿ.ಕೆ. ಪ್ರೇಮಾ ಅವರಿಗೆ ‘ಬೋಧಿವರ್ಧನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ತಲಾ ₹ 25 ಸಾವಿರ ನಗದು ಹೊಂದಿದೆ.

‘ವೈಚಾರಿಕತೆ ರೋಚಕತೆ ಆಗಬಾರದು’
ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ

ಪ್ರಜಾವಾಣಿ ವಾರ್ತೆ


ಕಾರ್ಯಕ್ರಮದಲ್ಲಿ ‘ಬದುಕಿನ ಬೆರಗು: ನಮ್ಮ ಕಣ್ಣಲ್ಲಿ ಸುಜ್ಞಾನಮೂರ್ತಿ’ ಪುಸ್ತಕವನ್ನು ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ಪ್ರಕಾಶಕ ಪಲ್ಲವ ವೆಂಕಟೇಶ್, ಸುಜ್ಞಾನಮೂರ್ತಿ, ರಾಜಪ್ಪ ದಳವಾಯಿ ಮತ್ತು ಸಂಶೋಧಕ ಪ್ರದೀಪ್ ಮಾಲ್ಗುಡಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ.

ಬೆಂಗಳೂರು: ‘ಸಮಕಾಲೀನ ಸಂದರ್ಭಕ್ಕೆ ಅನುಗುಣವಾದ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಆದರೆ, ವೈಚಾರಿಕತೆ ರಚನಾತ್ಮಕ ಆಗಿರಬೇಕೆ ಹೊರತು, ರೋಚಕತೆ ಆಗಬಾರದು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಪಲ್ಲವ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪ್ರದೀಪ್ ಮಾಲ್ಗುಡಿ ಅವರು ಸಂಪಾದಿಸಿರುವ ‘ಬದುಕಿನ ಬೆರಗು: ನಮ್ಮ ಕಲ್ಲಣ್ಣಿ ಸುಜ್ಞಾನಮೂರ್ತಿ’ ಪುಸ್ತಕ ಬಿಡುಗಡೆ ಮಾಡಿ, ಮಾನತಾಡಿದರು.

‘ವೈಚಾರಿಕತೆ ವಿಶಾಲವಾದ ಚೌಕಟ್ಟನ್ನು ಒಳಗೊಂಡಿದೆ. ಆದರೆ, ಇತ್ತೀಚೆಗೆ ವೈಚಾರಿಕತೆ ಅಂದರೆ ಒಂದೇ ರೀತಿಯಲ್ಲಿ ಇರಬೇಕು ಎನ್ನುವಂತಾಗಿದೆ. ಅಂತಿಮ ಸತ್ಯದ ಹರಿಕಾರರು ಜಾಸ್ತಿಯಾಗಿದ್ದಾರೆ. ಕೆಲವರು ನಾಸ್ತಿಕವಾದವೇ ವಿಚಾರವಾದ ಅಂದುಕೊಳ್ಳುತ್ತಾರೆ. ವಿಚಾರವಾದವನ್ನು ಹೀಗೇ ಎಂದು ಹೇಳಲು ಸಾಧ್ಯವಿಲ್ಲ. ವೈಚಾರಿಕತೆಯ ವ್ಯಾಪ್ತಿ, ಆಯಾಮಗಳನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಹೇಳಿದರು.

‘ಜನಮಾನಸವನ್ನು ಅರ್ಥ ಮಾಡಿಕೊಳ್ಳದೆ ಹೋದರೆ ನಮ್ಮ ಯಾವ ವಿಚಾರವೂ ಜನರನ್ನು ತಲುಪಿ, ಅವರನ್ನು ಬದಲಾಯಿಸುವುದಿಲ್ಲ. ವಿಚಾರವಾದ ಏಕರೂಪಾತ್ಮಕವಾದದ್ದಲ್ಲ. ಒಬ್ಬಬ್ಬರು ಒಂದೊಂದು ವಿಷಯದಲ್ಲಿ ವೈಚಾರಿಕ ಪ್ರಜ್ಞೆ ಹೊಂದಿರುತ್ತಾರೆ. ಈ ವೈರುಧ್ಯದ ನಡುವೆ ನಾವು ಜೀವಿಸುತ್ತೇವೆ. ಜಡ ಸಂಪ್ರದಾಯ, ಅಮಾನವೀಯ ಸಂಪ್ರದಾಯಗಳಿಗೆ ವಿರುದ್ಧವಾದದ್ದೇ ನಿಜವಾದ ವೈಚಾರಿಕತೆಯೆಂದು ಭಾವಿಸಿಕೊಳ್ಳಬೇಕಾಗಿದೆ. ವೈಚಾರಿಕತೆ ಅಂಹಕಾರವಾಗದೆ, ವಿನಯದಿಂದ ಕೂಡಿರಬೇಕು’ ಎಂದು ಹೇಳಿದರು.

ಕೃತಿಯ ಬಗ್ಗೆ ಮಾತನಾಡಿದ ನಾಟಕಕಾರ ರಾಜಪ್ಪ ದಳವಾಯಿ, ‘ಕೃತಿಯು ಸುಜ್ಞಾನಮೂರ್ತಿ ಅವರ ಬದುಕು ಹಾಗೂ ಬರಹ ಒಳಗೊಂಡಿದೆ. ಅವರು ಕನ್ನಡ ಸಾಹಿತ್ಯವನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ. ಅವರು ಮೇಷ್ಟ್ರು ಆಗಿದ್ದರೆ ವಿದ್ಯಾರ್ಥಿಗಳಿಗೆ ಅನುಕೂಲ ಆಗುತ್ತಿತ್ತು. ಅವರು ಕನ್ನಡ– ತೆಲುಗು ನಿಘಂಟು ಹೊರತರಬೇಕಿದೆ’ ಎಂದು ತಿಳಿಸಿದರು.

‘ಚುನಾವಣಾ ಆಯೋಗ ಪ್ರಕರಣ ದಾಖಲಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್.ಡಿ.ಕುಮಾರಸ್ವಾಮಿ ಅವರು ವಿಚಲಿತರಾಗಿದ್ದು, ಅವರ ಹೇಳಿಕೆ ಮಹಿಳಾ ಕುಲಕ್ಕೆ ಮಾಡಿದ ಅಪಮಾನ. ಈ ವಿಚಾರದಲ್ಲಿ ಚುನಾವಣಾ ಆಯೋಗ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು’ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಆಗ್ರಹಿಸಿದರು.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ‘ಕುಮಾರಸ್ವಾಮಿ ಅವರು ಪ್ರತಿ ಹಂತದಲ್ಲೂ ಮಹಿಳೆಯರ ಬಗ್ಗೆ ಕೇವಲವಾಗಿ ಮಾತನಾಡಿದ್ದಾರೆ. ಈ ಹಿಂದೆಯೂ ಅನೇಕ ಬಾರಿ ಇಂತಹ ಹೇಳಿಕೆ ನೀಡಿದ್ದಾರೆ’ ಎಂದರು.


‘ಮಹಿಳೆಯರು ಸ್ವಾಭಿಮಾನದ ಬದುಕು ಬದುಕಲು ನಾವು ಈ ಯೋಜನೆ ಕೊಟ್ಟಿದ್ದೇವೆ. ಮಹಿಳಾ ಸಬಲೀಕರಣದ ಬಗ್ಗೆ ನಾವೆಲ್ಲರೂ ಮಾತನಾಡುತ್ತೇವೆ. ಅದಕ್ಕೆ ಪ್ರೋತ್ಸಾಹ ನೀಡುವ ಕಾರ್ಯಕ್ರಮದ ಬಗ್ಗೆ ಇಷ್ಟು ಕೀಳಾಗಿ ಮಾತನಾಡಿರುವುದು ಎಲ್ಲರೂ ತಲೆತಗ್ಗಿಸುವ ವಿಚಾರ’ ಎಂದರು.

‘ಬೇರೆ ರಾಜ್ಯಗಳಿಗೆ ಡಿ.ಕೆ ಸಹೋದರರು ಹಣ ರವಾನಿಸುತ್ತಿದ್ದಾರೆ’ ಎಂಬ ಪ್ರಧಾನಿ ಮೋದಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ನಮ್ಮ ತೆರಿಗೆ ಹಣವನ್ನು ಬೇರೆ ರಾಜ್ಯಗಳಿಗೆ ನೀಡುತ್ತಿರುವ ಬಗ್ಗೆ ಪ್ರಧಾನಿ ಮೊದಲು ಮಾತನಾಡಲಿ. ಬೇರೆ ರಾಜ್ಯಗಳಿಗೆ ಯಾಕೆ ಹೆಚ್ಚು ಹಣ ನೀಡಿ ನಮಗೆ ಅನ್ಯಾಯ ಮಾಡುತ್ತಿದ್ದಾರೆ. ಕರ್ನಾಟಕಕ್ಕೆ ಅವರ ಕೊಡುಗೆ ಏನು. ನೀರಾವರಿ ವಿಚಾರದಲ್ಲಿ ಯಾವ ಸಮಸ್ಯೆ ಬಗೆಹರಿಸಿದ್ದಾರೆ. ಹತ್ತು ವರ್ಷಗಳಲ್ಲಿ ಬೆಂಗಳೂರಿಗೆ ಕೊಟ್ಟಿರುವ ಕೊಡುಗೆ ಏನು’ ಎಂದು ಅವರು ಪ್ರಶ್ನಿಸಿದರು.

‘ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಕಳೆದ ಮೂರು ಚುನಾವಣೆಗಳಿಗಿಂತ ಹೆಚ್ಚಿನ ಉತ್ಸಾಹ ಹಾಗೂ ಪ್ರೋತ್ಸಾಹ ಕಾಣಿಸುತ್ತಿದೆ. ನಮ್ಮ ವಿರುದ್ಧ ನಡೆಯುತ್ತಿರುವ ಬೇರೆ ರೀತಿಯ ಪ್ರಚಾರಕ್ಕೆ ವಿರುದ್ಧವಾಗಿ ಜನ ನನಗೆ ಬೆಂಬಲ ನೀಡುತ್ತಿದ್ದಾರೆ’ ಎಂದೂ ಹೇಳಿದರು.

ಒಕ್ಕಲಿಗರ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷರ ಮಾಹಿತಿ
‘ಜುಲೈನಲ್ಲಿ ಉದ್ಯೋಗ ಮೇಳ’

ಪ್ರಜಾವಾಣಿ ವಾರ್ತೆ


ನಗರದಲ್ಲಿ ಭಾನುವಾರ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ವೈದ್ಯರೊಬ್ಬರು ಮಹಿಳೆಯ ಆರೋಗ್ಯ ತಪಾಸಣೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದ ಪ್ಯಾಲೇಸ್ ಗುಟ್ಟಹಳ್ಳಿಯ ಬಿಲ್ವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಒಕ್ಕಲಿಗರ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್ ವತಿಯಿಂದ ಭಾನುವಾರ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ ಪರೀಕ್ಷೆ ಸೇರಿದಂತೆ ದಂತ, ಚರ್ಮರೋಗ, ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು, ಮೂಳೆ ತಜ್ಞರು ನೂರಾರು ಮಂದಿಯ ಆರೋಗ್ಯ ತಪಾಸಣೆ ನಡೆಸಿದರು. ಇದೇ ವೇಳೆ ಉಚಿತ ಔಷಧಗಳನ್ನೂ ವಿತರಿಸಲಾಯಿತು.

ಒಕ್ಕಲಿಗರ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ಮಾತನಾಡಿ, ‘ಸಂಸ್ಥೆಯ ಮೂಲಕ ಕಳೆದ ವರ್ಷ ಸುಮಾರು ಮೂರು ಸಾವಿರ ಯುವಜನರಿಗೆ ಉಚಿತ ಉದ್ಯೋಗಾವಕಾಶ ಕಲ್ಪಿಸಿದ್ದು, ಸುಮಾರು 150 ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ದಾರಿ ಮಾಡಿಕೊಡಲಾಗಿದೆ. ಬೆಂಗಳೂರು ಹಾಗೂ ಮೈಸೂರಿನಲ್ಲಿ ಉಚಿತ ಆರೋಗ್ಯ ಮೇಳ ನಡೆಸಿ ಗ್ರಾಮೀಣ ಜನರಿಗೆ ಸೇವೆ ಒದಗಿಸಲು ಸಹಕಾರ ನೀಡಿದ್ದೇವೆ’ ಎಂದರು.

‘ಈ ವರ್ಷ ನಾಲ್ಕು ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಲಾಗಿದೆ. ತುಮಕೂರಿನಲ್ಲಿ ಉದ್ಯೋಗ ಮೇಳ ಆಯೋಜಿಸಿ, 750 ಯುವಕರಿಗೆ ಉದ್ಯೋಗ ದೊರಕಿಸಲಾಗಿದೆ. ಮುಂದಿನ ಉದ್ಯೋಗ ಮೇಳವನ್ನು ಮೈಸೂರಿನ ಪಿರಿಯಾಪಟ್ಟಣದಲ್ಲಿ ಜುಲೈ ವೇಳೆಗೆ ಆಯೋಜಿಸಲು ತೀರ್ಮಾನಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಬೆಂಗಳೂರು ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಮಾತನಾಡಿ, ‘ಹಿಂದೆ ಆರೋಗ್ಯ ಸ್ಥಿತಿ ಚೆನ್ನಾಗಿ ಇರುತ್ತಿತ್ತು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಉತ್ತಮ ಆಹಾರ ಪದ್ಧತಿ ಅಳವಡಿಕೆ ಮಾಡಿಕೊಳ್ಳುವ ಜತೆಗೆ ದೈಹಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಿದೆ’ ಎಂದು ಹೇಳಿದರು.

ಬಿಲ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಕೇಶವಮೂರ್ತಿ ಮಾತನಾಡಿ, ‘ಮುಂದಿನ ದಿನಗಳಲ್ಲಿ ಬಡವರು ಮತ್ತು ಮಧ್ಯಮ ವರ್ಗದ ಜನರಿಗೂ ಗುಣಮಟ್ಟ ಆರೋಗ್ಯ ಸೇವೆ ಕಲ್ಪಿಸಲಾಗುವುದು. ದೊಡ್ಡ ಮಟ್ಟದಲ್ಲಿ ಉಚಿತ ಆರೋಗ್ಯ ಮೇಳವನ್ನು ನಡೆಸುವ ಮೂಲಕ ವೈದ್ಯಕೀಯ ಸೇವೆ ಪ್ರತಿಯೊಬ್ಬರಿಗೂ ತಲುಪಿಸುವ ಕಾರ್ಯ ಮಾಡಲಾಗುವುದು’ ಎಂದು ಹೇಳಿದರು.

ಎಂಜಿನಿಯರ್ ಬಿ.ಕೆ.ಪವಿತ್ರಾ, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಟಿ.ಆರ್.ಚಂದ್ರಶೇಖರ್ ಸ್ತ್ರೀರೋಗ ತಜ್ಞರಾದ ಡಾ.ಗೋಪಿನಾಥ್, ಮಾಜಿ ಸಿಂಡಿಕೇಟ್ ಸದಸ್ಯ ನಂಜುಂಡಯ್ಯ ಹಾಜರಿದ್ದರು.

ಆಶ್ವಾಸನೆ ಮರೆತ ಜನಪ್ರತಿನಿಧಿಗಳು ● ಮತದಾನದಿಂದ ದೂರ ಉಳಿಯುವ ಬೆದರಿಕೆ

ವಸತಿ ಸಮುಚ್ಚಯಗಳಲ್ಲಿ ಸಮಸ್ಯೆಗಳೂ ಅಗಾಧ

● ಆದಿತ್ಯ ಕೆ.ಎ.



ಮತ ಮಂಥನ

ಬೆಂಗಳೂರು: ಬೆಂಗಳೂರು ಈಗ 'ಅಪಾರ್ಟ್‌ಮೆಂಟ್ ನಗರ'ವೆಂದೂ ಕರೆಸಿಕೊಳ್ಳುತ್ತಿದೆ. ಆ ಸಂಖ್ಯೆಯಲ್ಲಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಅಲ್ಲದೇ ಫ್ಲ್ಯಾಟ್‌ಗಳತ್ತ ಜನರ ಒಲವು ಹಾಗೂ ವಾಸ್ತವ್ಯವೂ ಹೆಚ್ಚುತ್ತಿದೆ. ಕಟ್ಟಡಗಳು ದೊಡ್ಡದಾಗಿ ಕಂಡರೂ ಅಲ್ಲಿನ ನಿವಾಸಿಗಳಿಗೆ ಸಮಸ್ಯೆಗಳೂ ಅಗಾಧವಾಗಿಯೇ ಕಾಡುತ್ತಿವೆ.

ಚುನಾವಣೆ ವೇಳೆ ಅಭ್ಯರ್ಥಿಗಳಿಗೆ ಮೊದಲು ನೆನಪಾಗುವುದೇ ಈ ರೀತಿ ಗಗನಚುಂಬಿ ಕಟ್ಟಡಗಳಲ್ಲಿ (ಅಪಾರ್ಟ್‌ಮೆಂಟ್‌ಗಳು) ನೆಲೆಸಿ ರುವ ಮತದಾರರು. ಲೋಕಸಭಾ ಚುನಾವಣೆಗಾಗಿ ಮತಬ್ಯಾಂಕ್ ಭದ್ರ ಪಡಿಸಿಕೊಳ್ಳಲು ಪ್ರತಿಷ್ಠಿತ ಅಪಾರ್ಟ್ ಮೆಂಟ್‌ನಿಂದ ಹಿಡಿದು ಸಣ್ಣಪುಟ್ಟ ಕಟ್ಟಡಗಳ ಸಮುಚ್ಚಯಗಳತ್ತಲೂ ಎಲ್ಲ ಪಕ್ಷದ ಅಭ್ಯರ್ಥಿಗಳೂ ಹೆಜ್ಜೆ ಹಾಕುತ್ತಿದ್ದಾರೆ.

'ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ನೀವೆಲ್ಲರೂ ಸೇರಿ ನಮಗೆ ಶಕ್ತಿ ನೀಡಬೇಕು. ನೀವು ನಮಗೆ ಸಹಾಯ ಮಾಡಿದರೆ ಮಾತ್ರ ನಿಮಗೆ ಸಹಾಯ ಮಾಡಲು ಸಾಧ್ಯವಿದೆ' ಎಂಬ ತಂತ್ರವನ್ನು ಅಪಾರ್ಟ್‌ಮೆಂಟ್ ಭೇಟಿ ವೇಳೆ ಹಾಗೂ ಸಭೆಗಳಲ್ಲಿ ರಾಜಕಾರಣಿಗಳು ಪ್ರಸ್ತಾಪಿಸುತ್ತಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಇದು ಫಲ ನೀಡುವುದೇ ಎಂಬ ಚರ್ಚೆ ಆರಂಭವಾಗಿದೆ.

ಮಹಾನಗರದಲ್ಲಿ ಪ್ರತ್ಯೇಕವಾಗಿ ಮನೆ ನಿರ್ಮಿಸಲು ಜಾಗದ ಕೊರತೆ. ಇತ್ತೀಚಿನ ವರ್ಷಗಳಲ್ಲಿ ಈ ಸಮಸ್ಯೆ ಮತ್ತಷ್ಟು ಉಲ್ಬಣಿಸಿದೆ. ಈಗ ವಸತಿ ಕಲ್ಪಿಸಲು ಅಪಾರ್ಟ್ ಮೆಂಟ್‌ಗಳೇ ಆಧಾರ. ನಗರದ ಹಲವು ಬಡಾವಣೆಗಳಲ್ಲಿ ಈಗಾಗಲೇ ಹಲವು ಗಗನಚುಂಬಿ ಅಪಾರ್ಟ್‌ಮೆಂಟ್ ಗಳು ತಲೆಯೆತ್ತಿದ್ದು, ಇನ್ನೂ ನೂರಾರು ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ.

ಕ್ರೆಡೈ ಬಿಲ್ಡರ್ಸ್ (ಅಸೋಸಿಯೇಷನ್ ಆಫ್ ಬಿಲ್ಡರ್ಸ್) ಪ್ರತಿವರ್ಷ ಅಂದಾಜು 200 ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಮುಂದಾಗುತ್ತದೆ. ಸಣ್ಣಪುಟ್ಟ ಬಿಲ್ಡರ್ ಗಳು, ಸುಮಾರು 150ರಿಂದ 200 ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸು ತ್ತಾರೆ ಎಂದು ಬೆಂಗಳೂರು ಅಪಾರ್ಟ್ ಮೆಂಟ್ ಫೆಡರೇಷನ್ ಅಂದಾಜಿಸಿದೆ. ದೊಡ್ಡ ಸಂಖ್ಯೆಯ ಜನರು ಅಪಾರ್ಪ್ ಮೆಂಟ್‌ಗಳಲ್ಲಿ ನೆಲೆಸಿರುವ ಕಾರಣಕ್ಕೆ ರಾಜಕೀಯ ಪಕ್ಷಗಳ ಚಿತ್ತವೂ ಚುನಾವಣೆ ವೇಳೆ ಫ್ಲ್ಯಾಟ್‌ಗಳತ್ತ ನೆಟ್ಟಿರುತ್ತದೆ.

ಮಾಲೀಕತ್ವದ್ದೇ ಸಮಸ್ಯೆ: ನಗರದ ಹೃದಯ ಭಾಗದಲ್ಲಿ ಪ್ರತಿಷ್ಠಿತ ಬಿಲ್ಡರ್‌ಗಳು ನಿರ್ಮಿಸಿದ ಅಪಾರ್ಟ್‌ಮೆಂಟ್ ಗಳಲ್ಲಿನ ಒಂದು ಮನೆ(ಫ್ಲ್ಯಾಟ್) ಒಂದರಿಂದ ಎರಡು ಕೋಟಿ ರೂಪಾಯಿಗೂ ಅಧಿಕ ಬೆಲೆಯಿದೆ. ಆದರೆ, ಅಷ್ಟು ದೊಡ್ಡಮೊತ್ತದ ಹಣ ನೀಡಿ ಫ್ಲ್ಯಾಟ್ ಖರೀದಿಸಿದ್ದರೂ ಮಾಲೀಕತ್ವ ಮಾತ್ರ ದೊರೆಯುತ್ತಿಲ್ಲ ಎಂಬ ಕೊರಗು ಮಾಲೀಕರದ್ದು.

'ಅಪಾರ್ಟ್‌ಮೆಂಟ್ ನಿವಾಸಿಗಳ ಅಸೋಸಿಯೇಷನ್‌ನವರೇ ಆ ಜಾಗದ ಮಾಲೀಕರಾಗುವಂತೆ ಕಾನೂನು ರೂಪಿಸುವುದಾಗಿ ಸರ್ಕಾರ ಈ ಹಿಂದೆ ಹೇಳಿತ್ತು. ಆದರೆ, ಇದುವರೆಗೂ ಮಾಲೀಕತ್ವದ ಬಲ ಸಿಕ್ಕಿಲ್ಲ. ಇದರಿಂದ ಬಹುತೇಕ ಫ್ಲ್ಯಾಟ್ ಮಾಲೀಕರು ಕಂಗಾಲಾಗಿದ್ದಾರೆ' ಎಂದು ಚೇಂಜ್‌ಮೇಕರ್ಸ್ ಆಫ್ ಕನಕಪುರ ಅಸೋಸಿಯೇಷನ್ ಅಧ್ಯಕ್ಷ ಅಬ್ದುಲ್ ಅಲೀಂ ನೋವು ತೋಡಿಕೊಳ್ಳುತ್ತಾರೆ.

'ಅಪಾರ್ಟ್‌ಮೆಂಟ್‌ಗಳ ನಿರ್ಮಾಣದ ಜಾಗವು ಜಮೀನಿನ ಮಾಲೀಕನ ಹೆಸರಿನಲ್ಲೇ ಇರುವುದರಿಂದ ಅನೇಕರು ಆ ಜಾಗದ ಮೇಲೆ ಸಾಲ ಪಡೆಯುತ್ತಿ ದ್ದಾರೆ. ಕಟ್ಟಡದ ಆಯಸ್ಸು ಮುಕ್ತಾಯ ವಾದ ಮೇಲೆ ಫ್ಲ್ಯಾಟ್ ನಿವಾಸಿಗಳಿಗೆ ಜಾಗದ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ನಮ್ಮ ಹೆಸರಿಗೆ ಫ್ಲ್ಯಾಟ್ ನೋಂದಣಿ ಆಗಿದ್ದರೂ ಲಕ್ಷಾಂತರ ರೂಪಾಯಿ ಕಳೆದು ಕೊಳ್ಳುವ ಪರಿಸ್ಥಿತಿಯಿದೆ' ಎಂದು ಆತಂಕ ವ್ಯಕ್ತಪಡಿಸುತ್ತಾರೆ ಅಲೀಂ.

ಜಾಗದ ಮಾಲೀಕತ್ವಕ್ಕೆ ಸಂಬಂಧಿಸಿ ದಂತೆ ಒಡಿಶಾದಲ್ಲಿ ಹೊಸ ನಿಯಮ ರೂಪಿಸಲಾಗಿದೆ. ರಾಜ್ಯದಲ್ಲಿ ಮಾತ್ರ ಈ ಮಾಲೀಕತ್ವಕ್ಕೆ ಸಂಬಂಧಿಸಿದ ಷೇರು, ಫ್ಲ್ಯಾಟ್ ಮಾಲೀಕರಿಗೆ ದೊರೆಯುತ್ತಿಲ್ಲ. ಜಾರಿಯಲ್ಲಿರುವ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯ್ದೆಗೆ ತಕ್ಷಣ ತಿದ್ದುಪಡಿ ತರಬೇಕು ಎಂಬ ಕೂಗು ಈಗ ಬಲವಾಗಿದೆ.

ಈಗಿರುವ ನಿಯಮಗಳಂತೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ವಿರುದ್ಧ ದೂರು ಸಲ್ಲಿಕೆಗೂ ಅವಕಾಶ ಇಲ್ಲ. ಸಣ್ಣಪುಟ್ಟ ಸಮಸ್ಯೆಗಳು ಎದುರಾದರೂ ಕೋರ್ಟ್‌ನಲ್ಲೇ ಪರಿಹರಿಸಿ ಕೊಳ್ಳಬೇಕಾಗಿದೆ. ರೇರಾ ಕಾಯ್ದೆ ಅನ್ವಯ ಬಿಲ್ಡರ್‌ಗಳ ಸಮಸ್ಯೆಗಳನ್ನು ಮಾತ್ರ ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಅಸೋಸಿಯೇಷನ್‌ಗಳ ನಿಯಂತ್ರಣಕ್ಕೆ ಪ್ರತ್ಯೇಕ ಏಜೆನ್ಸಿ ರಚಿಸಬೇಕು ಎಂಬುದು ಫ್ಲ್ಯಾಟ್ ಮಾಲೀಕರ ಬೇಡಿಕೆ.

ಹಲವು ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರು ಸೇರಿದಂತೆ ಮೂಲಸೌಲಭ್ಯಗಳು ಇಲ್ಲ. ಇದು ನಿವಾಸಿಗಳಿಗೆ ಸಿಟ್ಟು ತರಿಸಿದೆ. ಮೂಲಸೌಲಭ್ಯ ಕಲ್ಪಿಸಿದಿದ್ದರೆ ಮತದಾನ ಬಹಿಷ್ಕಾರ ಮಾಡುತ್ತೇವೆ ಎಂದು ನಿವಾಸಿಗಳು ಬೆದರಿಕೆ ಹಾಕಿದ್ದಾರೆ. ಜೆ.ಪಿ. ನಗರ 8ನೇ ಹಂತದ ಅಪಾರ್ಟ್‌ಮೆಂಟ್‌ವೊಂದರ ನಿವಾಸಿಗಳು ಚುನಾವಣೆ ಆಯೋಗಕ್ಕೂ ಪತ್ರ ಬರೆದಿದ್ದಾರೆ.

ನಿಯಮ ಸಡಿಲಿಕೆ: ಇನ್ನೂ ಎಲ್ಲ ಅಪಾರ್ಟ್‌ಮೆಂಟ್‌ಗಳಲ್ಲೂ ಎಸ್.ಟಿ.ಪಿ (ತ್ಯಾಜ್ಯ ನೀರು ಶುದ್ಧೀಕರಣ ಘಟಕ) ಕಡ್ಡಾಯ ಎಂಬ ನಿಯಮವನ್ನು ಈ ಹಿಂದೆ ಜಾರಿಗೆ ತರಲಾಗಿತ್ತು. ಎಸ್‌ಟಿಪಿ ನಿರ್ವಹಣೆ ದುಬಾರಿ ಎನ್ನುವ ಕಾರಣಕ್ಕೆ ನಿವಾಸಿಗಳಿಂದಲೇ ವಿರೋಧ ವ್ಯಕ್ತವಾಗಿತ್ತು. ಈಗ ಜಲಮಂಡಳಿ ನಿಯಮ ಸಡಿಲಗೊಳಿಸಿದ್ದು ದೊಡ್ಡ ಅಪಾರ್ಟ್‌ಮೆಂಟ್‌ಗಳಿಗೆ ಮಾತ್ರ ಎಸ್‌ಟಿಪಿ ಕಡ್ಡಾಯಗೊಳಿಸಿದೆ. ಸಂಸ್ಕರಿಸಿದ ತ್ಯಾಜ್ಯದ ನೀರಿನಲ್ಲಿ ಶೇ 50ರಷ್ಟು ಬಳಕೆ ಮಾಡಿಕೊಂಡು ಉಳಿದ ನೀರನ್ನು ಮಾರಾಟ ಮಾಡಬಹುದು ಎಂಬ ನಿಯಮವನ್ನೂ ಇತ್ತೀಚೆಗೆ ರೂಪಿಸಲಾಗಿದೆ. ಇದು ತುಸು ನೆಮ್ಮದಿ ತಂದಿದೆ ಎಂದು ಅಸೋಸಿಯೇಷನ್ ಸದಸ್ಯರು ಹೇಳುತ್ತಾರೆ.

ಫ್ಲ್ಯಾಟ್ ಮಾಲೀಕರಿಗೆ ಸೆಸ್ 'ಬರೆ'



ಬಹುತೇಕ ಅಪಾರ್ಟ್‌ಮೆಂಟ್‌ಗಳೇ ತ್ಯಾಜ್ಯ ವಿಲೇವಾರಿ ನಿರ್ವಹಣೆ ಮಾಡುತ್ತಿವೆ. ಆದರೂ ತ್ಯಾಜ್ಯಕ್ಕೆ ಸಂಬಂಧಿಸಿದ ಸೆಸ್ ಬರೆ ಮಾಲೀಕರ ಮೇಲೆಯೇ ಬೀಳುತ್ತಿದೆ. ಸಾಮಾನ್ಯ ಮನೆಗಳಿಗೆ ತ್ಯಾಜ್ಯಕ್ಕೆ ಸಂಬಂಧಿಸಿದ ಸೆಸ್ ಇಲ್ಲ. ಆದರೆ, ಫ್ಲ್ಯಾಟ್ ನಿವಾಸಿಗಳು ಸೆಸ್, ಕಟ್ಟಡ ಹಾಗೂ ಉದ್ಯಾನ ನಿರ್ವಹಣೆ, ತ್ಯಾಜ್ಯವನ್ನು ಹೊರಗೆ ಸಾಗಿಸಲು ಹಣ ಪಾವತಿಸುವ ಸ್ಥಿತಿಯಿದೆ.

ಅಬ್ದುಲ್ ಅಲೀಂ,
ಅಧ್ಯಕ್ಷ, ಚೇಂಜ್‌ಮೇಕರ್ಸ್ ಆಫ್ ಕನಕಪುರ ಅಸೋಸಿಯೇಷನ್

ಶೇ 50ರಷ್ಟು ಕಟ್ಟಡಕ್ಕೆ ಕಾವೇರಿ ನೀರು ಅಲಭ್ಯ



'ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್' ಅಡಿ 180 ವಾರ್ಡ್‌ಗಳ 1,280 ಅಪಾರ್ಟ್ ಮೆಂಟ್ ಅಸೋಸಿ ಯೇಷನ್ ಗಳು ನೋಂದಣಿ ಮಾಡಿಕೊಂಡಿವೆ. ಶೇ 50ರಷ್ಟು ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ ಇಲ್ಲವಾಗಿದೆ. ಬೇಸಿಗೆಯಲ್ಲಿ ನೀರಿನ ಸಮಸ್ಯೆ ತೀವ್ರವಾಗಿ ಕಾಡುತ್ತದೆ.

ಸತೀಶ್ ಮಲ್ಯ, ಉಪಾಧ್ಯಕ್ಷ, ಬೆಂಗಳೂರು ಅಪಾರ್ಟ್‌ಮೆಂಟ್

ಸುದ್ದಿ 2 ನಿಮಿಷ

ಬೆಂಗಳೂರು ದಕ್ಷಿಣ ಕ್ಷೇತ್ರ 'ರ‍್ಯಾಂಡಮೈಸೇಷನ್' ಪೂರ್ಣ

ಬೆಂಗಳೂರು: ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಇವಿಎಂ, ವಿವಿ ಪ್ಯಾಟ್‌ಗಳ 2ನೇ ಹಂತದ ರ‍್ಯಾಂಡಮೈಸೇಷನ್ ಕಾರ್ಯ ಭಾನುವಾರ ಪೂರ್ಣಗೊಂಡಿದೆ.



ದಕ್ಷಿಣ ಚುನಾವಣಾಧಿಕಾರಿ ಕಚೇರಿಯಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ವಿನೋತ್ ಪ್ರಿಯಾ, ಬೊಮ್ಮನಹಳ್ಳಿಯ ಸಹಾಯಕ ಚುನಾವಣಾಧಿಕಾರಿ ಅಜಿತ್, ಸಾಮಾನ್ಯ ವೀಕ್ಷಕ ಮಕರಂದ್ ಪಾಂಡುರಂಗ್ ಸಮ್ಮುಖದಲ್ಲಿ ಪೂರ್ಣಗೊಳಿಸಲಾಯಿತು.

ಗೋವಿಂದರಾಜನಗರ, ವಿಜಯನಗರ, ಚಿಕ್ಕಪೇಟೆ, ಬಸವನಗುಡಿ, ಪದ್ಮನಾಭನಗರ, ಬಿಟಿಎಂ ಲೇಔಟ್, ಜಯನಗರ ಹಾಗೂ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳು ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ.

'ಗೋಪ್ಯತೆ ಉಲ್ಲಂಘನೆಯಾಗಿಲ್ಲ'

ಬೆಂಗಳೂರು: 'ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 85 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಿರಿಯ ನಾಗರಿಕರು ಶನಿವಾರ ಮನೆಯಲ್ಲಿ ಮತ ಚಲಾಯಿಸಿದ ಸಂದರ್ಭದಲ್ಲಿ ಗೋಪ್ಯತೆ ಉಲ್ಲಂಘನೆಯಾಗಿಲ್ಲ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಹಿರಿಯ ನಾಗರಿಕರೊಬ್ಬರು ಮತ ಚಲಾಯಿಸುವಾಗ ಬಿಜೆಪಿ ಕಾರ್ಯಕರ್ತರೊಬ್ಬರು ಹಾಜರಿದ್ದರು ಎಂದು ದೂರಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರ ಚುನಾವಣಾ ಏಜೆಂಟ್ ದೂರು ನೀಡಿದ್ದರು.

ಈ ಕುರಿತು ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟನೆ ನೀಡಿರುವ ಮೀನಾ, 'ದೂರಿನ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾ ಚುನಾವಣಾಧಿಕಾರಿಗೆ ಸೂಚಿಸಲಾಗಿತ್ತು. ಮತದಾನದ ಸಮಯದ ವಿಡಿಯೊ, ಫೋಟೊಗಳನ್ನು ಪರಿಶೀಲಿಸಲಾಗಿದೆ. ಮತದಾನದಲ್ಲಿ ಗೋಪ್ಯತೆ ಉಲ್ಲಂಘಿಸಿಲ್ಲ ಮತ್ತು ಪ್ರಭಾವ ಬೀರುವ ಚಟುವಟಿಕೆಯೂ ನಡೆದಿಲ್ಲ ಎಂಬುದು ಖಚಿತವಾಗಿದೆ' ಎಂದಿದ್ದಾರೆ.

ಒಂದು ಮನೆಯಲ್ಲಿ ಮತದಾನ ಪೂರೈಸಿ ಮತ್ತೊಂದು ಮನೆಗೆ ಹೋಗುವಾಗ ಮತಗಟ್ಟೆ ಅಧಿಕಾರಿಯ ಗುರುತಿನ ಚೀಟಿ ಕಳೆದುಹೋಗಿತ್ತು. ಉಳಿದ ಮತಗಟ್ಟೆ ಸಿಬ್ಬಂದಿ ಗುರುತಿನ ಚೀಟಿ ಧರಿಸಿಕೊಂಡು ಕರ್ತವ್ಯ ನಿರ್ವಹಿಸಿದ್ದರು. ತಕ್ಷಣ ಮತಗಟ್ಟೆ ಅಧಿಕಾರಿಗೆ ಮತ್ತೊಂದು ಗುರುತಿನ ಚೀಟಿ ವಿತರಿಸಲಾಗಿದೆ. ಶನಿವಾರ ಮನೆ ಮತದಾನದಲ್ಲಿ ಯಾವುದೇ ಲೋಪವೂ ಆಗಿಲ್ಲ ಎಂದು ಹೇಳಿದ್ದಾರೆ.

ಸುಧಾಕರ್ ವಿರುದ್ಧ ಸಿಡಿದ ತಿಗಳರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಸಮುದಾಯ ವಿರೋಧಿ ಮನಸ್ಥಿತಿಯ ಡಾ.ಕೆ.ಸುಧಾಕರ್ ಅಂಥವರು ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ ಅವನತಿಗೆ ಕಾರಣವಾಗುತ್ತದೆ ಎಂದು ಹೊಸಕೋಟೆ ಬಿಜೆಪಿ ತಾಲ್ಲೂಕು ಅಧ್ಯಕ್ಷ ಜಯರಾಜ್ ಸ್ವಪಕ್ಷೀಯ ಅಭ್ಯರ್ಥಿ ವಿರುದ್ಧವೇ ಬಹಿರಂಗವಾಗಿ ಹರಿಹಾಯ್ದರು.

ತಿಗಳ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಸಿಗದಂತೆ ಸುಧಾಕರ್ ಷಡ್ಯಂತ್ರ ರೂಪಿಸಿದ್ದರು. ಅವರದು ಕಿರುಕುಳ ನೀಡುವ ಮನಸ್ಥಿತಿ. ಅವರ ಧೋರಣೆಯಿಂದ ನಿಷ್ಠಾವಂತ ಕಾರ್ಯಕರ್ತರ ರಾಜಕೀಯ ಜೀವನ ಕೊನೆಗೊಳ್ಳುತ್ತದೆ ಎಂದು ದೂರಿದರು.

ಕರ್ನಾಟಕ ರಾಜ್ಯ ತಿಗಳರ ವಹ್ನಿಕುಲ ಕ್ಷತ್ರಿಯ ಸಂಘ ಭಾನುವಾರ ಪಟ್ಟಣದಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಸಮುದಾಯದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

'ಸಣ್ಣ ಸಮುದಾಯಗಳ ಮೇಲಿನ ಅಗೌರವ, ನಾಯಕರ ಬೆಳವಣಿಗೆ ಸಹಿಸದ ಮನಸ್ಥಿತಿಯ ಸುಧಾಕರ್ ಅವರನ್ನು ರಾಜಕೀಯ ಶಕ್ತಿಯಿಂದ ದೂರವಿಡಬೇಕು. ಕೇವಲ ಶಾಸಕರು, ಸಂಸದರನ್ನು ಗೆಲ್ಲಿಸಲು ಮಾತ್ರ ನಾವಿಲ್ಲ. ಸಮುದಾಯದ ಏಳಿಗೆಗೆ ನಮ್ಮವರನ್ನೇ ನಾಯಕರನ್ನಾಗಿಸಲು ಸಿದ್ಧರಿದ್ದೇವೆ ಎಂದು ಮನದಟ್ಟು ಮಾಡಿಕೊಡಬೇಕು' ಎಂದು ಹೇಳಿದರು.

'ಬಿಜೆಪಿ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಹೂಡಿ ವಿಜಯ್‌ಕುಮಾರ್ ರಾಜಕೀಯ ಜೀವನ ಹಾಳು ಮಾಡಿ, ಹೊಂದಾಣಿಕೆ ರಾಜಕೀಯದಲ್ಲಿ ಸಮುದಾಯದ ನಂಬಿಕೆಯನ್ನು ಮಣ್ಣು ಪಾಲು ಮಾಡಿದ ಸುಧಾಕರ್ ರಾಜಕೀಯಕ್ಕೆ ಅರ್ಹರಲ್ಲ' ಎಂದು ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಟೀಕಿಸಿದರು.

'ತಿಗಳ ಸಮುದಾಯದ ರಾಜಕೀಯ ಮುಖಂಡರು ಸಮಾಜದ ಏಳಿಗೆಗಾಗಿ ಸರ್ವ ತ್ಯಾಗಕ್ಕೂ ಸಿದ್ಧರಾಗಿರಬೇಕು. ಚುನಾವಣೆಯಲ್ಲಿ ಕೆಲಸ ಮಾಡಿಲ್ಲವೆಂದು ನಿಮ್ಮ ಕ್ಷೇತ್ರದ ಶಾಸಕರು ಬೇಸರ ಮಾಡಿಕೊಳ್ಳುತ್ತಾರೆ ಎಂಬುದನ್ನು ಬದಿಗೊತ್ತಿ, ಸಮಾಜದ ಪರ ರಾಜಕೀಯ ನಿಲುವು ತಾಳಬೇಕು' ಎಂದು ಸಲಹೆ ನೀಡಿದರು.

ಸಂಘದ ಉಪಾಧ್ಯಕ್ಷ ಶಾಮಣ್ಣ, ಮುನಿರಾಜು, ಪುರಸಭೆ ಮಾಜಿ ಸದಸ್ಯ ಚಿನ್ನಪ್ಪ, ದೇವನಹಳ್ಳಿ ಪುರಸಭೆ ಸದಸ್ಯ ಎಚ್.ಸಿ.ಚಂದ್ರಪ್ಪ, ತಾಲ್ಲೂಕು ಅಧ್ಯಕ್ಷ ಗೋಪಾಲಕೃಷ್ಣ ಉಪಸ್ಥಿತರಿದ್ದರು.

ಸಚಿವ ಕೆ.ಎಚ್. ಮುನಿಯಪ್ಪಗೆ ಘೇರಾವ್ ● ಪೇಚಿಗೆ ಸಿಲುಕಿದ ಕಾಂಗ್ರೆಸ್ ಮುಖಂಡರು

ಪ್ರತಿಭಟನೆ ಬಿಸಿ: ಪ್ರಚಾರ ಸಭೆ ಮೊಟಕು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯರ ಪರ ಭಾನುವಾರ ಚುನಾವಣಾ ಪ್ರಚಾರಕ್ಕೆ ಆಗಮಿಸಿದ ಸಚಿವ ಕೆ.ಎಚ್.ಮುನಿಯಪ್ಪ ಅವರಿಗೆ ಸ್ವಕ್ಷೇತ್ರದಲ್ಲೇ ರೈತರು ಘೇರಾವ್ ಹಾಕಿ, ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು.

ಚನ್ನರಾಯಪಟ್ಟಣದಲ್ಲಿ ಪ್ರಚಾರದ ವೇಳೆ ಮುನಿಯಪ್ಪ ಭಾಷಣ ಆರಂಭಿಸುತ್ತಿದ್ದಂತೆ ಭೂಸ್ವಾಧೀನ ವಿರೋಧಿ ಹೋರಾಟನಿರತ ರೈತರು ಹಸಿರು ಬಾವುಟ ಪ್ರದರ್ಶಿಸಿ, ಘೋಷಣೆ ಕೂಗಿದರು.

ಇದರಿಂದ ಪೇಚಿಗೆ ಸಿಲುಕಿದ ಕಾಂಗ್ರೆಸ್ ಮುಖಂಡರು ಪ್ರತಿಭಟನನಿರತ ರೈತರನ್ನು ಸಮಾಧಾನ ಮಾಡಲು ಜಿ.ಪಂ. ಮಾಜಿ ಅಧ್ಯಕ್ಷ ಚನ್ನಹಳ್ಳಿ ಬಿ.ರಾಜಣ್ಣ ಅವರನ್ನು ಕಳುಹಿಸಿದರು.



ದೇವನಹಳ್ಳಿಯ ಚನ್ನರಾಯಪಟ್ಟಣ ಹೋಬಳಿಯ ರೈತರು ಕಾಂಗ್ರೆಸ್ ಮತ ಪ್ರಚಾರದ ವೇಳೆ ಧಿಕ್ಕಾರ ಕೂಗಿದರು

ಸಂಧಾನ ವಿಫಲವಾಗಿ ಹೋರಾಟ ಇನ್ನಷ್ಟು ತೀವ್ರಗೊಂಡಿತು. ಇದರಿಂದಾಗಿ ಪ್ರಚಾರ ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಲಾಯಿತು.

ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಜತೆ ಧರಣಿ ಸ್ಥಳಕ್ಕೆ ತೆರಳಿದ ಸಚಿವ ಕೆ.ಎಚ್.ಮುನಿಯಪ್ಪ ರೈತರೊಂದಿಗೆ ಮಾತುಕತೆ ನಡೆಸಿದರು.

'ನನ್ನಿಂದ ತಪ್ಪಾಗಿದೆ. ಲೋಕಸಭಾ ಚುನಾವಣೆಯ ನಂತರ ಪ್ರಾಮಾಣಿಕವಾಗಿ ಮುಖ್ಯಮಂತ್ರಿ, ಕೈಗಾರಿಕಾ ಸಚಿವರ ಚರ್ಚಿಸಿ ಸಮಸ್ಯೆ ಬಗೆಹರಿಸಲಾಗುವುದು' ಎಂದು ಆಶ್ವಾಸನೆ ನೀಡಿದರು. ಚುನಾವಣೆ ಬಹಿಷ್ಕಾರ ಮಾಡದಂತೆ ಸಚಿವರು ಮನವಿ ಮಾಡಿದರು.

'ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿದರೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವುದಾಗಿ ಆಶ್ವಾಸನೆ ನೀಡಿದ್ದಿರಿ. ಈಗಾಗಲೇ ನಿಮ್ಮನ್ನು 20ಕ್ಕೂ ಹೆಚ್ಚು ಬಾರಿ ಭೇಟಿ ಮಾಡಿದರೂ ಪ್ರಯೋಜನವಾಗಿಲ್ಲ. ನೀವು ಬಂದು ಮನವೊಲಿಸಿದ ತಕ್ಷಣ ಕಾಂಗ್ರೆಸ್ ನಂಬಲು ಸಿದ್ಧರಿಲ್ಲ' ಎಂದು ರೈತರು ಮತ್ತು ಹೋರಾಟಗಾರ ಚೀಮಾಚನಹಳ್ಳಿ ರಮೇಶ್ ತರಾಟೆಗೆ ತೆಗೆದುಕೊಂಡರು.

ಬಿಜೆಪಿ ಸರ್ಕಾರದಲ್ಲಿ 72 ರೈತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿ, ಪೊಲೀಸರಿಂದ ದಬ್ಬಾಳಿಕೆ ಮಾಡಲಾಯಿತು ಎಂದು ರೈತರು ಈ ವೇಳೆ ಕಣ್ಣೀರು ಹಾಕಿದರು. ರೈತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಮುನಿಯಪ್ಪ ಸ್ಥಳದಿಂದ ತೆರಳಿದರು.

'ರೈತರ ಹೋರಾಟ ಗೊತ್ತಿಲ್ಲ'

ಚನ್ನರಾಯಪಟ್ಟಣದ 13 ಹಳ್ಳಿಗಳ ರೈತ ಹೋರಾಟಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ 742 ದಿನಗಳಿಂದ ಕೃಷಿ ಭೂಮಿಯ ಉಳಿವಿಗಾಗಿ ಹೋರಾಟ ಮಾಡುತ್ತಿರುವುದು ಗೊತ್ತೇ ಇಲ್ಲ ಎಂದರು.

'ಈ ಬಾರಿ ಕಾಂಗ್ರೆಸ್ ಬೆಂಬಲಿಸಿ. ಯಾವುದೇ ಕಾರಣಕ್ಕೂ ಕೃಷಿಕರಿಗೆ ಅನ್ಯಾಯವಾಗಲು ಬಿಡುವುದಿಲ್ಲ' ಎಂದು ಸಮಾಧಾನ ಪಡಿಸಲು ಯತ್ನಿಸಿದರು.

ಧರ್ಮಸ್ಥಳದಲ್ಲಿ ಪ್ರಮಾಣ ಗೌಡರ ಕುಟುಂಬಕ್ಕೆ ಸವಾಲು

ತುಮಕೂರು: 'ಕಳೆದ ಲೋಕಸಭೆ ಚುನಾವಣೆಯಲ್ಲಿ ಎಚ್.ಡಿ. ದೇವೇಗೌಡರ ಸೋಲಿಗೆ ನಾನು ಕಾರಣ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಹಾಗಾದರೆ ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಲು ಸಿದ್ಧನಿದ್ದೇನೆ. ನೀವು ಬಂದು ಪ್ರಮಾಣ ಮಾಡಿ' ಎಂದು ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ಅವರು ದೇವೇಗೌಡರ ಕುಟುಂಬಕ್ಕೆ ಸವಾಲು ಹಾಕಿದರು.

ತಿಪಟೂರು ತಾಲ್ಲೂಕಿನ ಕೆ.ಬಿ.ಕ್ರಾಸ್ ಬಳಿ ಭಾನುವಾರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ದೇವೇಗೌಡರ ವಿರುದ್ಧ ಪ್ರಚಾರ ಮಾಡಿಲ್ಲ ಎಂದು ಪ್ರಮಾಣ ಮಾಡುತ್ತೇನೆ. ನೀವು ಬಂದು ಪ್ರಮಾಣ ಮಾಡಿ. ಅನಗತ್ಯವಾಗಿ ನನ್ನ ಮೇಲೆ ಸುಳ್ಳು ಆಪಾದನೆ ಹೊರಿಸಬೇಡಿ. ಸೋಲಿಸಿದ್ದಾರೆ ಎಂಬ ವಿಚಾರ ಈವರೆಗೂ ಪ್ರಸ್ತಾಪವೇ ಆಗಿರಲಿಲ್ಲ. ನಾನು ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ ನಂತರ ಈ ರೀತಿ ಮಾಡಲಾಗುತ್ತಿದೆ' ಎಂದರು.



ನೀರು ಅರಸಿ ಬಂದ ಬೆಳ್ಳಕ್ಕಿಗಳು...

ನಗರದ ಎಸ್.ಎಂ.ವಿಶ್ವೇಶ್ವರಯ್ಯ ಲೇಔಟ್‌ನಲ್ಲಿರುವ ರಾಮಚಂದ್ರ ಕೆರೆಯಲ್ಲಿ ಉಳಿದಿರುವ ಅಲ್ಪ ನೀರನ್ನು ಕುಡಿಯುತ್ತಾ ದಣಿವಾರಿಸಿಕೊಳ್ಳುತ್ತಿರುವ ಬೆಳ್ಳಕ್ಕಿಗಳು

ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಬಿಜೆಪಿ–ಜೆಡಿಎಸ್ ಕಾರ್ಯಕರ್ತರಲ್ಲಿ ಒಗ್ಗಟ್ಟು: ಸುಧಾಕರ್

ನೆಲಮಂಗಲ: 'ಬಿಜೆಪಿ-ಜೆಡಿಎಸ್ ಕಾರ್ಯಕರ್ತರು ಒಟ್ಟಾಗಿ ನನ್ನ ಗೆಲುವಿಗೆ ಶ್ರಮಿಸುತ್ತಿದ್ದಾರೆ' ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಡಾ. ಕೆ.ಸುಧಾಕರ್ ತಿಳಿಸಿದರು.

ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ- ಜೆಡಿಎಸ್ ಸಮನ್ವಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 'ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಮಿಕರಿಗಾಗಿ ಸುಸಜ್ಜಿತ ಇಎಸ್‌ಐ ಆಸ್ಪತ್ರೆ ಮಂಜೂರು ಮಾಡಿಸುತ್ತೇನೆ. ತ್ಯಾಮಗೊಂಡ್ಲು ಕೆರೆಗೆ ನೀರು ತುಂಬಿಸಿ ಪುನಶ್ಚೇತನಗೊಳಿಸುತ್ತೇನೆ. ಇಂತಹ ಹಲವು ಯೋಜನೆಗಳ ಮೂಲಕ ಜನರ ಬದುಕನ್ನು ಅಭಿವೃದ್ಧಿಪಡಿಸುವ ಶಾಶ್ವತ ಗ್ಯಾರಂಟಿಗಳನ್ನು ಮೋದಿ ಸರ್ಕಾರ ನೀಡುತ್ತಿದೆ' ಎಂದರು.

'ಸಂವಿಧಾನ ವಿರೋಧಿಗಳನ್ನು ಸೋಲಿಸಿ'

ಬಂಜಾರ ಸಮುದಾಯದ ಮುಖಂಡರ ರಾಜ್ಯಮಟ್ಟದ ಚಿಂತನಾ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ಎಲ್ಲ ವರ್ಗದವರಿಗೂ ಸಾಮಾಜಿಕ ನ್ಯಾಯ ಕಲ್ಪಿಸುತ್ತಿದೆ' ಎಂದು ಕೆಎಂಎಫ್ ಅಧ್ಯಕ್ಷ ಭೀಮನಾಯ್ಕ ಹೇಳಿದರು.

ನಗರದಲ್ಲಿ ಭಾನುವಾರ ಸಮಸ್ತ ಬಂಜಾರ ಸಮುದಾಯ ಸಂಘಟನೆ, ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಚಿಂತನಾ ಸಮಾವೇಶದಲ್ಲಿ ಅವರು ಮಾತನಾಡಿದರು

'ಅಂಬೇಡ್ಕರ್ ಅವರ ಮೌಲ್ಯಗಳನ್ನು ಉಳಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರ ಪ್ರಯತ್ನ ಮಾಡುತ್ತಿದೆ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಮಾತನಾಡಿ, 'ಅಂಬೇಡ್ಕರ್ ಅವರ ಕೊಡುಗೆಯಿಂದಲೇ ಇಂದು ಬಂಜಾರ ಸಮುದಾಯಕ್ಕೆ ರಾಜ್ಯದಲ್ಲಿ ಸೂಕ್ತ ನ್ಯಾಯ ದೊರಕಿದೆ. ಅಂಬೇಡ್ಕರ್ ಅವರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು' ಎಂದು ಕರೆ ನೀಡಿದರು.



ನಗರದಲ್ಲಿ ಭಾನುವಾರ ಸಮಸ್ತ ಬಂಜಾರ ಸಮುದಾಯ ಸಂಘಟನೆ ಆಯೋಜಿಸಿದ್ದ ಚಿಂತನಾ ಸಮಾವೇಶದಲ್ಲಿ(ಎಡದಿಂದ) ಬಂಜಾರ ಸಮುದಾಯದ ಮಹಿಳಾ ಮುಖಂಡರಾದ ಶೈಲಜಾ ಬಾಯಿ ಹಾಗೂ ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ವಕೀಲ ಅನಂತನಾಯ್ಕ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ವಕೀಲ ಎನ್.ಅನಂತನಾಯ್ಕ ಮಾತನಾಡಿ, 'ಬಿಜೆಪಿಯವರು ಸಂವಿಧಾನ ಬದಲಾಯಿಸುವ ಷಡ್ಯಂತರ ನಡೆಸುತ್ತಿದ್ದಾರೆ. ಸಂವಿಧಾನ ಬದಲಾವಣೆ ಮಾಡುವುದಕ್ಕೆ ನಾವು ಬಂದಿರುವುದು ಎಂದು ಹೇಳಿದ್ದ ಮುಖಂಡರ ವಿರುದ್ಧ ಬಿಜೆಪಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಸಂವಿಧಾನ ವಿರೋಧಿಗಳನ್ನು ಸೋಲಿಸಬೇಕು' ಎಂದು ಕರೆ ನೀಡಿದರು.

'ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದ ನಮ್ಮ ಬದುಕಿಗೆ ಘನತೆ ಮತ್ತು ಸಮಾನತೆ ಲಭಿಸಿದೆ. ಸಂವಿಧಾನದ ಮೂಲಕ ಸಾಮಾಜಿಕ ನ್ಯಾಯ ದೊರಕುತ್ತಿದೆ. ಸಂವಿಧಾನ ಸಂರಕ್ಷಣೆಯ ಪ್ರತಿಜ್ಞೆ ಮಾಡಬೇಕು. ಅಂಬೇಡ್ಕರ್ ನಮಗೆ ಮಾದರಿಯಾಗಬೇಕು' ಎಂದರು.

ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ರಾಜ್ಯ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ ಮಾತನಾಡಿ, 'ಸಂವಿಧಾನ ಉಳಿಸಿಕೊಳ್ಳುವ ಜವಾಬ್ದಾರಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ಸಮುದಾಯಗಳ ಮೇಲಿದೆ. ಲೋಕಸಭಾ ಚುನಾವಣೆ, ದೇಶದ ಭವಿಷ್ಯವನ್ನು ಬದಲಾಯಿಸುವ ಚುನಾವಣೆ ಆಗಿದೆ. ಸಂವಿಧಾನ ವಿರೋಧಿಗಳನ್ನು ಸೋಲಿಸುವ ಮೂಲಕ ಬುದ್ಧಿಕಲಿಸಿ' ಎಂದು ಹೇಳಿದರು.

ನಗರದಲ್ಲಿ ಇಂದು

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಇಂದ್ರ ವಿಮಾನ ಉತ್ಸವ, ಕುದುರೆ ವಾಹನ ಉತ್ಸವ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ಕರ್ನಾಟಕ ದಲಿತ ಸಂಘರ್ಷ ಸಮಿತಿ ಸುವರ್ಣ ಮಹೋತ್ಸವ: ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಜಯಂತಿ ಅಂಗವಾಗಿ '2024ರ ಲೋಕಸಭೆ ಚುನಾವಣೆಯಲ್ಲಿ ಬಹುಜನರ ಒಲವು-ನಿಲುವು?' ರಾಷ್ಟ್ರೀಯ ವಿಚಾರ ಸಂಕಿರಣ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

'ಮಕ್ಕಳ ಕತೆಗಳ ಅನನ್ಯ ಪ್ರೀತಿ–ರಾಮೇಂದ್ರ ಕುಮಾರ' ಕುರಿತು ವಿಚಾರಸಂಕಿರಣ: ಅತಿಥಿ: ಬೈರಮಂಗಲ ರಾಮೇಗೌಡ, ನರಹಳ್ಳಿ ಬಾಲಸುಬ್ರಹ್ಮಣ್ಯ, ಪತ್ತಿಪಾಕ ಮೋಹನ, ಗೋಷ್ಠಿಯಲ್ಲಿ ಭಾಗವಹಿಸುವವರು: ಆನಂದ ಪಾಟೀಲ, ಶಿವಲಿಂಗಪ್ಪ ಹಂದಿಹಾಳ, ಕಾವ್ಯಾ, ತಮ್ಮಣ್ಣ ಬೀಗಾರ, ಆಯೋಜನೆ: ಅಭಿನವ, ಮಕ್ಕಳ ಸಾಹಿತ್ಯಾಸಕ್ತ ಗೆಳೆಯರ ಬಳಗ ಧಾರವಾಡ, ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನದ ಎಂ.ವಿ.ಸಿ. ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 11ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಅತಿಥಿ: ಎಚ್.ಎನ್. ನಾಗಮೋಹನದಾಸ್, ಅಧ್ಯಕ್ಷತೆ: ಬಿ.ಎ. ಸಾವಲೆ, ಆಯೋಜನೆ ಮತ್ತು ಸ್ಥಳ: ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ, ಸರ್ ಸಿ.ವಿ. ರಾಮನ್ ರಸ್ತೆ, ಸದಾಶಿವನಗರ, ಮಧ್ಯಾಹ್ನ 2

'ತವನಿಧಿ ದೇವರ ದಾಸಿಮಯ್ಯ ಜಯಂತಿ': ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಕೃಷ್ಣ, ವಚನ ಗಾಯನ: ನರಸಿಂಹಲು ಕಲಾತಂಡ, ಸುಗಮ ಸಂಗೀತ, ನೃತ್ಯ ಪ್ರದರ್ಶನ: ಪೊಲೀಸ್ ಇಲಾಖೆ ತಂಡ, ನೃತ್ಯ, ಗಾಯನ: ಬಿಎಂಟಿಸಿ ಕಲಾತಂಡ, ಆಯೋಜನೆ: ಅಂಜನಾದ್ರಿ ನೇಕಾರರ ಸೇವಾ ಚಾರಿಟಬಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಶ್ರೀರಾಮನವಮಿ ಸಂಗೀತ ಮಹೋತ್ಸವ: ಭರತನಾಟ್ಯ ಪ್ರದರ್ಶನ: ರಶ್ಮಿ ಕಾರ್ತಿಕ್, ರಶ್ಮಿರಾವ್, ಮಾನಸಗೌರಿ, ಕಥಕ್ ನೃತ್ಯ: ಮೀನಾಕ್ಷಿ ಕಾಮತ್, ರಕ್ಷರಾವ್ ಮತ್ತು ತಂಡ, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30ರಿಂದ

ರಾಮನವಮಿ ಸಂಗೀತೋತ್ಸವ–2024: ಕರ್ನಾಟಕ ಸಂಗೀತ ಕಛೇರಿ: ಬೆಂಗಳೂರು ಎಸ್. ಶಂಕರ್, ಬೆಂಗಳೂರು ರಮಣಿ ಶಂಕರ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ತುಮಕೂರು ರವಿಶಂಕರ್, ಭಾರದ್ವಾಜ್ ಶತವಲ್ಲಿ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್, ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6.30ರಿಂದ

'ಮಿಸ್ ಸೇವಂತಿ' ನಾಟಕ ಪ್ರದರ್ಶನ: ರೂಪಾಂತರ: ಜಯಂತ ಕಾಯ್ಕಿಣಿ, ನಿರ್ದೇಶನ: ಸಾಗರ್ ಕುರಿಬಾಂಡ್, ಆಯೋಜನೆ: ರಂಗ ಸಾಗರ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6.45

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನೂತನ ಸಂಸತ್ತಿನಲ್ಲಿ ಸಂವಿಧಾನ ಪ್ರತಿ ಇರಿಸಲು ಆಗ್ರಹ

ಸೆಂಗೋಲ್ ತೆರವುಗೊಳಿಸಿ: ಮಾವಳ್ಳಿ ಶಂಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ಸಂಸತ್ತಿನಲ್ಲಿ ಸ್ಥಾಪಿಸಿರುವ ಸೆಂಗೋಲ್ (ರಾಜದಂಡ) ವೈದಿಕಶಾಹಿ ಮತ್ತು ಜಾತಿ ವ್ಯವಸ್ಥೆಯ ಸಂಕೇತ. ಅದನ್ನು ತೆರವುಗೊಳಿಸಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನ ಪ್ರತಿಯನ್ನು ಇಡಬೇಕು' ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಭಾನುವಾರ ಆಯೋಜಿಸಿದ್ದ 'ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ–ಮುಕ್ತ ಸಂವಾದ'ದಲ್ಲಿ ಅವರು ಮಾತನಾಡಿದರು.

'ನೂತನ ಸಂಸತ್ತಿನ ಉದ್ಘಾಟನೆ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇರಬೇಕಾಗಿತ್ತು. ಆದರೆ ಅವರು ಇರಲಿಲ್ಲ, ಏಕೆಂದರೆ ವೈದಿಕ ಪರಂಪರೆಯ ಪ್ರಕಾರ ಗಂಡ ಸತ್ತ ಹೆಣ್ಣುಮಗಳು ಯಾವುದೇ ಶುಭ ಸಮಾರಂಭಗಳಲ್ಲಿ ಭಾಗವಹಿಸಬಾರದು ಎಂಬ ನಿಯಮವಿದೆ. ಆ ಕಾರಣಕ್ಕಾಗಿ ಆದಿವಾಸಿ ಪಂಗಡಕ್ಕೆ ಸೇರಿದ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸದೇ, ಬೌದ್ಧ ಬ್ರಾಹ್ಮಣರು, ಪೂಜಾರಿಗಳು ಹಾಗೂ ಪುರೋಹಿತರನ್ನು ಆಹ್ವಾನಿಸಲಾಗಿತ್ತು' ಎಂದರು.

'ಲೋಕಸಭಾ ಚುನಾವಣೆ ಸಂವಿಧಾನ ಮತ್ತು ಮನುಧರ್ಮದ ನಡುವಿನ ಬಹುದೊಡ್ಡ ಸಂಘರ್ಷ ಪ್ರಾರಂಭವಾಗಿದೆ. ಈ ಚುನಾವಣೆ ಸಂಘರ್ಷ ಕಣದಲ್ಲಿ ನಾವು ಸಂವಿಧಾನದ ಪರವಾಗಿ ಇದ್ದೇವೆ ಎಂಬುದನ್ನು ರುಜುವಾತು ಮಾಡಬೇಕಿದೆ. ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಜಾತಿ ಜನಗಣತಿ, ಎಂಎಸ್‌ಪಿ ಜಾರಿಗೊಳಿಸುವ ಭರವಸೆ, ಶೇ 50ರಷ್ಟಿರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಭರವಸೆ ನೀಡಿದ್ದಾರೆ. ಆದ್ದರಿಂದ, ದೇಶದ ಬಹುಸಂಖ್ಯಾತರು ಕಾಂಗ್ರೆಸ್‌ಗೆ ಬೆಂಬಲ ನೀಡುವುದರ ಮೂಲಕ ಸಂಸತ್ತಿನಲ್ಲಿ ಸ್ಥಾಪಿಸಿರುವ ಸೆಂಗೋಲ್ ತೆರವುಗೊಳಿಸಿ ಕೈ ಜೋಡಿಸಬೇಕು' ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯ ಮುಖಂಡರಾದ ವೆಂಕಟೇಶ್ ಕುಮಾರ್, ಶಿವಕುಮಾರ್ ಹೆಗ್ಗನೂರು, ವೆಂಕಟೇಶ್ ಕೋರಮಂಗಲ್ ಅವರನ್ನು ಸನ್ಮಾನಿಸಲಾಯಿತು.



ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಮತ್ತು ಮುಕ್ತ ಸಂವಾದದಲ್ಲಿ (ಎಡದಿಂದ) ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, ಮಾವಳ್ಳಿ ಶಂಕರ್, ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಅಧ್ಯಕ್ಷ ಮುನಿ ನಂಜಪ್ಪ, ಬರಹಗಾರ ಹುಲಿಕುಂಟೆ ಮೂರ್ತಿ ಮತ್ತು ಸಮಿತಿಯ ಜಿಲ್ಲಾ ಸಂಚಾಲಕಿ ದಾನಮ್ಮ ಅವರು ಡಾ.ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

₹ 2,956 ಕೋಟಿ ಮೌಲ್ಯದ ಬಿಟ್ ಕಾಯಿನ್ ಅಕ್ರಮ: ಒಬ್ಬರನ್ನೂ ಬಂಧಿಸದ ವಿಶೇಷ ತನಿಖಾ ತಂಡ

‘ಬಿಟಿಸಿ ಲಾಗ್’ ಅಲಭ್ಯ: ತನಿಖೆಗೆ ಹಿನ್ನಡೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚು ಸದ್ದು ಮಾಡಿದ್ದ ಬಿಟ್ ಕಾಯಿನ್ (ಬಿಟಿಸಿ) ಅಕ್ರಮ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಿ 10 ತಿಂಗಳಾಗಿದ್ದು, ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ದೋಚಿದ್ದವರು ಯಾರು ? ಎಂಬುದರ ಬಗ್ಗೆ ನಿಖರ ಮಾಹಿತಿ ಇದುವರೆಗೂ ಪತ್ತೆಯಾಗಿಲ್ಲ. ಬಿಟ್ ಕಾಯಿನ್ ವಹಿವಾಟಿನ ವಿವರ ಕೋರಿ ಹಲವು ಕಂಪನಿಗಳಿಗೆ ಪತ್ರ ಬರೆದರೂ ಮಾಹಿತಿ ಸಿಗದಿದ್ದರಿಂದ ಎಸ್ಐಟಿ ತನಿಖೆಗೆ ಹಿನ್ನಡೆ ಉಂಟಾಗಿದೆ.

ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿದ್ದ ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ಕೆಲ ರಾಜಕಾರಣಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಭಾಗಿಯಾಗಿರುವ ಆರೋಪ ವ್ಯಕ್ತವಾಗಿತ್ತು. ಪ್ರಕರಣದ ಪ್ರಮುಖ ಆರೋಪಿಯಾಗಿರುವ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ಹಲವರು ಬಿಟ್ ಕಾಯಿನ್ ದೋಚಿರುವ ಬಗ್ಗೆ ಚರ್ಚೆಯಾಗಿತ್ತು. ಇದೇ ಕಾರಣಕ್ಕೆ ಪ್ರಕರಣದ ತನಿಖೆಗಾಗಿ ಕಾಂಗ್ರೆದ್ ಸರ್ಕಾರ, 2023ರ ಜುಲೈ 3ರಂದು ಎಸ್ಐಟಿ ರಚಿಸಿದೆ.

ಶ್ರೀಕಿ ಹಾಗೂ ಇತರರ ವಿರುದ್ಧ ಕೆಂಪೇಗೌಡ ನಗರ, ಕಾಟನ್‌ಪೇಟೆ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಈ ಪ್ರಕರಣಗಳ ತನಿಖೆ ನಡೆಸಿದ್ದ ಇನ್‌ಸ್ಪೆಕ್ಟರ್‌ಗಳಾದ ಲಕ್ಷ್ಮಿಕಾಂತಯ್ಯ, ಚಂದ್ರಾಧರ್, ಶ್ರೀಧರ್ ಕೆ. ಪೂಜಾರ್ ಹಾಗೂ ಸಹಾಯ ಮಾಡಿದ್ದ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್ ಬಾಬು, ಸೈಬರ್ ತಜ್ಞ ಕೆ.ಎಸ್. ಸಂತೋಷ್‌ಕುಮಾರ್ ವಿರುದ್ಧವೂ ಸಾಕ್ಷ್ಯ ನಾಶ ಆರೋಪದಡಿ ಸಿಐಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಶಾಂತ್ ಬಾಬು ಹಾಗೂ ಸಂತೋಷ್‌ಕುಮಾರ್‌ನನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು. ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಒಬ್ಬರನ್ನೂ ಬಂಧಿಸದ ಎಸ್ಐಟಿ: ‘ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ಎಸ್ಐಟಿ ಇದುವರೆಗೂ ಯಾರೊಬ್ಬರನ್ನೂ ಬಂಧಿಸಿಲ್ಲ. ಅಪರಾಧಿಕ ಸಂಚು ಹಾಗೂ ಸಾಕ್ಷ್ಯ ನಾಶ ಆರೋಪದಡಿ ಪ್ರಶಾಂತ್ ಬಾಬು ಹಾಗೂ ಸಂತೋಷ್‌ಕುಮಾರ್‌ನನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ಶ್ರೀಧರ್ ಪೂಜಾರ ಹಾಗೂ ಇತರರ ಬಂಧನಕ್ಕೂ ಕ್ರಮ ಕೈಗೊಂಡಿದ್ದಾರೆ. ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ವಿಚಾರಣೆ ಮಾತ್ರ ಎಸ್ಐಟಿ ಮಾಡುತ್ತಿದೆ’ ಎಂದು ಪೊಲೀಸ್ ಇಲಾಖೆಯ ಮೂಲಗಳು ಹೇಳಿವೆ.

‘ಶ್ರೀಕಿ ವಿರುದ್ಧದ ಪ್ರಕರಣಗಳ ತನಿಖೆಯಲ್ಲಾದ ಲೋಪ ಹಾಗೂ ಇತರೆ ಆರೋಪಗಳು ತನಿಖಾಧಿಕಾರಿಗಳ ಮೇಲಿವೆ. ಹೀಗಾಗಿ, ಸಿಐಡಿ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಈ ಪ್ರಕರಣವನ್ನು ಎಸ್ಐಟಿಗೆ ಸದ್ಯಕ್ಕೆ ಹಸ್ತಾಂತರಿಸಿಲ್ಲ.



ಮುಂದಿನ ದಿನಗಳಲ್ಲಿ ಹಸ್ತಾಂತರ ಆಗಬಹುದು’ ಎಂದು ತಿಳಿಸಿವೆ.

5,000ಕ್ಕೂ ಹೆಚ್ಚು ಬಿಟಿಸಿ ವರ್ಗಾವಣೆ: ‘ಶ್ರೀಕಿ ಕಡೆಯಿಂದ ಬೇರೆ ಬೇರೆ ಖಾತೆಗಳಿಗೆ 5,000ಕ್ಕೂ ಹೆಚ್ಚು ಬಿಟ್ ಕಾಯಿನ್‌ಗಳು (ಸದ್ಯದ ಮಾರುಕಟ್ಟೆ ಮೌಲ್ಯ ₹ 2,956 ಕೋಟಿ) ವರ್ಗಾವಣೆ ಆಗಿರುವ ಬಗ್ಗೆ ಮಾಹಿತಿ ಇದೆ. ಆದರೆ, ಪುರಾವೆ ಇಲ್ಲ’ ಎಂದು ಮೂಲಗಳು ಹೇಳಿವೆ.

‘ಬಿಟ್ ಕಾಯಿನ್ ಏನು? ವರ್ಗಾವಣೆ ಹೇಗೆ? ಎಂಬುದನ್ನು ತಿಳಿಯಲು ಎರಡು ತಿಂಗಳು ಬೇಕಾಯಿತು. ನಂತರ, ಪ್ರಮುಖ ಆರೋಪಿ ಶ್ರೀಕಿ ಹಾಗೂ ಪೊಲೀಸ್ ಅಧಿಕಾರಿಗಳನ್ನು ವಿಚಾರಣೆ ನಡೆಸಲಾಯಿತು. ಇವರ ಹೇಳಿಕೆ ಪರಿಶೀಲಿಸಿದಾಗ, ₹ 5,000ಕ್ಕೂ ಹೆಚ್ಚು ಬಿಟ್ ಕಾಯಿನ್ ಅಕ್ರಮ ನಡೆದಿರುವುದು ಗೊತ್ತಾಗಿದೆ. ಜೊತೆಗೆ, ತನಿಖೆ ಮುಂದುವರಿದಂತೆ ಬಿಟ್ ಕಾಯಿನ್ ಪ್ರಮಾಣ

‘ಅಳಿಸಿರುವ ತಾಂತ್ರಿಕ ಸಾಕ್ಷ್ಯ’

‘ಬಿಟ್ ಕಾಯಿನ್ ಅಕ್ರಮ ಹಲವು ವರ್ಷಗಳ ಹಳೆಯದ್ದು. ಬಹುತೇಕ ಕಂಪನಿಗಳು, ವ್ಯವಹಾರಗಳ ತಾಂತ್ರಿಕ ಸಾಕ್ಷ್ಯಗಳನ್ನು ಬಹಳ ವರ್ಷ ನಿರ್ವಹಣೆ ಮಾಡುವುದಿಲ್ಲ. ಪ್ರತಿ ವರ್ಷವೂ ದತ್ತಾಂಶಗಳನ್ನು ಅಳಿಸಿ ಹಾಕಿರುವ ಸಾಧ್ಯತೆಯಿದೆ. ಹೀಗಾಗಿ, ಕಂಪನಿಗಳು ಉತ್ತರ ನೀಡುತ್ತಿಲ್ಲ. ತಾಂತ್ರಿಕ ಸಾಕ್ಷ್ಯಗಳು ಇದ್ದರೆ ಮಾತ್ರ ತನಿಖೆ ಸಮರ್ಪಕವಾಗಿ ಮುಂದುವರಿಯಲಿದೆ. ಇಲ್ಲದಿದ್ದರೆ, ತನಿಖೆ ನಡೆಸುವುದು ದೊಡ್ಡ ಸವಾಲು’ ಎಂದು ಮೂಲಗಳು ಹೇಳಿವೆ.

ಕಂಪನಿವಾರು ಬಿಟಿಸಿ ವರ್ಗಾವಣೆ ವಿವರ

ಬಿಟ್ ಫಿನೆಕ್ಸ್	₹ 1183 ಕೋಟಿ (2,000 ಬಿಟಿಸಿ)
ಬಿಟ್ ಸೆಂಟ್ರಲ್	₹ 74.89 ಲಕ್ಷ
ಸ್ಲಸ್ ಪೂಲ್	₹ 37.44 ಲಕ್ಷ
ಬಿಟ್ ಕ್ಲಬ್ ನೆಟ್‌ವರ್ಕ್	₹ 59.15 ಕೋಟಿ (100 ಬಿಟಿಸಿ)
ಹೆಲಿಕ್ಸ್ ಮಿಕ್ಸರ್	₹ 301.56 ಕೋಟಿ (510 ಬಿಟಿಸಿ)
ಜಿಜಿ ಪೋಕರ್	₹ 53.23 ಕೋಟಿ (90 ಬಿಟಿಸಿ)

ಹೆಚ್ಚಾಗುವ ಸಾಧ್ಯತೆ ಇದೆ’ ಎಂದು ಮೂಲಗಳು ತಿಳಿಸಿವೆ.

ಲಾಗ್ ವಿವರ ನೀಡದ ಕಂಪನಿಗಳು: ‘ಬಿಟ್ ಕಾಯಿನ್ ವಿನಿಮಯ ನಡೆಸುವ ಅಂತರರಾಷ್ಟ್ರೀಯ ಕಂಪನಿಗಳ ಆನ್‌ಲೈನ್ ವೇದಿಕೆಗಳ ಮೂಲಕ ಬಿಟ್ ಕಾಯಿನ್ ವ್ಯವಹಾರ ನಡೆದಿದೆ. ಶ್ರೀಕಿ ಹಾಗೂ ಇತರರು, ಆನ್‌ಲೈನ್ ವೇದಿಕೆ ಮೂಲಕ ವ್ಯವಹಾರ ನಡೆಸಿದ್ದಾರೆ. ಈ ವ್ಯವಹಾರದ ‘ಲಾಗ್ (ಆನ್‌ಲೈನ್ ವೇದಿಕೆಯಲ್ಲಿ ನಡೆಸಿದ್ದ ಎಲ್ಲ ವ್ಯವಹಾರಗಳ ದತ್ತಾಂಶ)’ ಮಾಹಿತಿ ನೀಡುವಂತೆ ಕೋರಿ ಅಂತರರಾಷ್ಟ್ರೀಯ ಮಟ್ಟದ 25ಕ್ಕೂ ಹೆಚ್ಚು ಕಂಪನಿಗಳಿಗೆ ಕೇಂದ್ರದ ತನಿಖಾ ಸಂಸ್ಥೆಗಳ ಮಧ್ಯಸ್ಥಿಕೆಯಲ್ಲಿ ಪತ್ರ ಬರೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಅಮೆಜಾನ್, ಬಿಟ್ ಫಿನೆಕ್ಸ್, ಬಿಟ್‌ಕ್ಲಬ್ ನೆಟ್‌ವರ್ಕ್, ಬಿಟ್ ಪ್ಲೇಯರ್, ಬಿಟ್ ಕಾಯಿನ್ ಟಾಲ್ಕ್ ಡಾಟ್ ಒಆರ್‌ಜಿ, ಬಿಟ್ ಸೆಂಟ್ರಲ್, ಸ್ಲಸ್ ಪೂಲ್ ಸೇರಿದಂತೆ 25 ಕಂಪನಿಗಳಿಂದ ಯಾವುದೇ ಉತ್ತರ ಬಂದಿಲ್ಲ. ಹೀಗಾಗಿ, ಆರೋಪಿ ಯಾರು ಎಂಬುದನ್ನು ನಿಖರವಾಗಿ ಹೇಳುವ ಪುರಾವೆ ಎಸ್ಐಟಿ ಬಳಿ ಇಲ್ಲ. ಕಂಪನಿಗಳಿಂದ ಉತ್ತರ ಬಂದ ಬಳಿಕವೇ ಪುರಾವೆ ಆಧರಿಸಿ ತನಿಖೆ ಮುಂದುವರಿಯಲಿದೆ’ ಎಂದು ತಿಳಿಸಿವೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**



ಕೆಂಪಾಪುರ ಅರ್ಧಕ್ಕೆ ನಿಂತಿರುವ ಸೇತುವೆ ಕಾಮಗಾರಿ.

‘ಸೇತುವೆ ಕಾಮಗಾರಿ ಪ್ರಾರಂಭಿಸಿ’

ವಿಜಯನಗರ ವಿಧಾನಸಭೆ ಕ್ಷೇತ್ರದ ಕೆಂಪಾಪುರ ವಾರ್ಡ್ ಸಂಖ್ಯೆ 122ರ ಗುರುಕುಲ ಶಾಲೆಯ ಸಮೀಪದ 9ನೇ ಅಡ್ಡರಸ್ತೆಯಲ್ಲಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿಯನ್ನು ಆರು ತಿಂಗಳಿಂದ ಸ್ಥಗಿತಗೊಳಿಸಲಾಗಿದೆ. ಇದರಿಂದ, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಈ ರಸ್ತೆಯಲ್ಲಿ ರಾಜಕಾಲುವೆಯ ಮೇಲೆ ಸೇತುವೆ ಕಾಮಗಾರಿ ಪ್ರಾರಂಭಿಸಲಾಗಿತ್ತು. ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ರಾಜಕಾಲುವೆಯ ನೀರು ಕಟ್ಟಿಕೊಂಡು ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಕಾಟ ವಿಪರೀತವಾಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ಕಾಮಗಾರಿ ಪ್ರಾರಂಭಿಸಿ ಸಮಸ್ಯೆಗೆ ಮುಕ್ತಿ ಹಾಡಬೇಕು.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ, ಮಾಗಡಿ ರಸ್ತೆ

‘ರಸ್ತೆ ಗುಂಡಿ ಮುಚ್ಚಿ’

ಹೈದರಾಬಾದ್, ಬಳ್ಳಾರಿ ಮತ್ತು ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಎಸ್ಟೀಮ್ ಮಾಲ್ ಮುಂಭಾಗದ ಹೆಬ್ಬಾಳ ಕೆಂಪಾಪುರ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆಯಲ್ಲ ಹಾಳಾಗಿದೆ. ಈ ಭಾಗದ ಪ್ರಮುಖ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಹಾಳಾಗಿದ್ದು, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ರಸ್ತೆಯಲ್ಲಿರುವ ಗುಂಡಿಗಳಿಂದ ದ್ವಿಚಕ್ರ ವಾಹನ ಸವಾರರಿಗೆ ಹೆಚ್ಚು ಅಪಾಯವಿದ್ದು, ಅನಾಹುತಗಳು ಸಂಭವಿಸುವ ಮುನ್ನ ರಸ್ತೆ ದುರಸ್ತಿಗೊಳಿಸುವ ಅಗತ್ಯವಿದೆ. ಈ ಬಗ್ಗೆ ಬಿಬಿಎಂಪಿ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಈ ಬಗ್ಗೆ ಯಾರು ಸ್ಪಂದಿಸುತ್ತಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಸ್. ಶಿವಪ್ರಸಾದ್, ಹೆಬ್ಬಾಳ



ಎಸ್ಟೀಮ್ ಮಾಲ್ ಮುಂಭಾಗದ ಹೆಬ್ಬಾಳ ಕೆಂಪಾಪುರದ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು.

ಯುಗಾದಿ ಹೊಸ ತೊಡಕು: ಆರೋಪಿ ಬಂಧನ

₹ 1.6 ಕೋಟಿ ‘ಮಾಂಸ ಚೀಟಿ’ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಯುಗಾದಿ ಹೊಸ ತೊಡಕು ಸಂದರ್ಭದಲ್ಲಿ ‘ಮಾಂಸ’ ನೀಡುವುದಾಗಿ ಸಾರ್ವಜನಿಕರಿಂದ ಚೀಟಿ ಕಟ್ಟಿಸಿಕೊಂಡು ವಂಚಿಸಿದ್ದ ಆರೋಪದಡಿ ಪುಟ್ಟಸ್ವಾಮಿ ಗೌಡ ಎಂಬುವವರನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದು, ಆರೋಪಿ ಮನೆಯಲ್ಲಿ ಶೋಧ ನಡೆಸಿ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

‘ಬಟ್ಟೆ ಮಾರಾಟ ಮಳಿಗೆ ಮಾಲೀಕ ಪುಟ್ಟಸ್ವಾಮಿಗೌಡ, ಹೊಸ ತೊಡಕು ಮಾಂಸದ ಚೀಟಿ ನಡೆಸುತ್ತಿದ್ದ. ಬ್ಯಾಟರಾಯನಪುರ, ಗಿರಿನಗರ ಹಾಗೂ ಸುತ್ತಮುತ್ತಲಿನ ಜನರು ಈತನ ಬಳಿ ಪ್ರತಿ ತಿಂಗಳು ಚೀಟಿ ಹಣ ತುಂಬುತ್ತಿದ್ದರು. ಈ ಬಾರಿಯ ಹೊಸ ತೊಡಕು ಸಂದರ್ಭದಲ್ಲಿ ಯಾವುದೇ ಮಾಂಸ ಹಾಗೂ ಪಡಿತರ ನೀಡದೇ ಆರೋಪಿ ವಂಚಿಸಿದ್ದ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪರಾರಿಯಾಗಿದ್ದ. ವಂಚನೆ ಬಗ್ಗೆ ದೂರು ದಾಖಲಿಸಿಕೊಂಡು ಪುಟ್ಟಸ್ವಾಮಿಗೌಡನನ್ನು ಇತ್ತೀಚೆಗೆ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘2 ಸಾವಿರಕ್ಕೂ ಹೆಚ್ಚು ಮಂದಿ ಸುಮಾರು ₹ 1.60 ಕೋಟಿ ಚೀಟಿ ಕಟ್ಟಿದ್ದರೆಂಬ ಮಾಹಿತಿ ಸದ್ಯಕ್ಕೆ ಲಭ್ಯವಾಗಿದೆ. ಈ ಬಗ್ಗೆ ಹಲವರು ದಾಖಲೆಗಳನ್ನು ನೀಡಿದ್ದರು. ಎಲ್ಲ ಪುರಾವೆಗಳನ್ನು ಆಧರಿಸಿ ನ್ಯಾಯಾಲಯದ ಅನುಮತಿ ಪಡೆದು ಆರೋಪಿ ಮನೆಯಲ್ಲಿ ಶೋಧ ಸಹ ನಡೆಸಲಾಯಿತು’ ಎಂದು ತಿಳಿಸಿದರು.

‘ಆರೋಪಿ ಮನೆಯಲ್ಲಿ ಚೀಟಿಗೆ ಸಂಬಂಧಪಟ್ಟ ದಾಖಲೆಗಳು ಸಿಕ್ಕಿವೆ. ಎಲ್ಲವನ್ನೂ ಜಪ್ತಿ ಮಾಡಿ, ಪರಿಶೀಲಿಸಲಾಗುತ್ತಿದೆ’ ಎಂದು ಹೇಳಿದರು.

ಬಡ್ಡಿಗೆ ಹಣ ನೀಡಿರುವ ಆರೋಪಿ: ‘ಪುಟ್ಟಸ್ವಾಮಿಗೌಡ ಪ್ರತಿ ವರ್ಷವೂ ಮಾಂಸದ ಚೀಟಿ ನಡೆಸುತ್ತಿದ್ದ. ಹೊಸ ತೊಡಕು ಸಂದರ್ಭದಲ್ಲಿ ಚೀಟಿದಾರರಿಗೆ ಕುರಿ ಮಾಂಸ ಹಾಗೂ ಪಡಿತರ ನೀಡುವುದಾಗಿ ಹೇಳುತ್ತಿದ್ದ. ಜನರ ನಂಬಿಕೆಯನ್ನೂ ಸಂಪಾದಿಸಿದ್ದ’ ಎಂದು ಪೊಲೀಸರು ತಿಳಿಸಿದರು.

‘ಈ ವರ್ಷವೂ 4 ಸಾವಿರಕ್ಕೂ ಹೆಚ್ಚು ಮಂದಿ, ಪ್ರತಿ ತಿಂಗಳು ₹ 400 (ವರ್ಷಕ್ಕೆ ₹ 4,800) ಚೀಟಿ ಕಟ್ಟಿದ್ದರೆಂಬ ಮಾಹಿತಿ ಇದೆ. ಆದರೆ, 2 ಸಾವಿರ ಮಂದಿಯ ಚೀಟಿ ದಾಖಲೆಗಳು ಮಾತ್ರ ಸದ್ಯಕ್ಕೆ ಸಿಕ್ಕಿವೆ. ಈ ಬಾರಿ ಜನರು ಕಟ್ಟಿದ್ದ ಚೀಟಿ ಹಣವನ್ನು ಆರೋಪಿ ಬೇರೆಯವರಿಗೆ ಬಡ್ಡಿಗಾಗಿ ಸಾಲ ನೀಡಿದ್ದ. ಅವರು ವಾಪಸು ಕೊಟ್ಟಿಲ್ಲವೆಂದು ಆರೋಪಿ ಹೇಳುತ್ತಿದ್ದಾನೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದು ಹೇಳಿದರು.

‘ಐಷಾರಾಮಿ ಜೀವನ ನಡೆಸಲು ಇಚ್ಛಿಸುತ್ತಿದ್ದ ಆರೋಪಿ, ಹಲವರ ಬಳಿ ಸಾಲ ಮಾಡಿಕೊಂಡಿದ್ದ. ಚೀಟಿ ಹಣದಲ್ಲಿಯೇ ಸಾಲ ತೀರಿಸಿರುವ ಮಾಹಿತಿ ಇದೆ’ ಎಂದು ಪೊಲೀಸರು ವಿವರಿಸಿದರು.

‘ಅಕ್ರಮ ನಡೆಯದಂತೆ ನಿಗಾವಹಿಸಿ’

ಪ್ರಜಾವಾಣಿ ವಾರ್ತೆ



ವಾಣಿ ಮೋಹನ್

ಬೆಂಗಳೂರು: ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಅಕ್ರಮಗಳು ನಡೆಯದಂತೆ ನಿಗಾವಹಿಸಬೇಕು ಎಂದು ಕ್ಷೇತ್ರದ ಸಾಮಾನ್ಯ ವೀಕ್ಷಕಿ ವಾಣಿ ಮೋಹನ್ ಅಧಿಕಾರಿಗಳಿಗೆ ಸೂಚಿಸಿದರು.

ಭಾನುವಾರ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಅವರು ಮಾತನಾಡಿದರು.

ಎಸ್ಎಸ್‌ಟಿ ಹಾಗೂ ಎಫ್‌ಎಸ್‌ಟಿ ತಂಡಗಳು ಮೂರು ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಚೆಕ್‌ಪೋಸ್ಟ್‌ಗಳಲ್ಲಿ ಎಲ್ಲ ವಾಹನಗಳನ್ನು ಸರಿಯಾಗಿ ಪರಿಶೀಲಿಸಬೇಕು. ದಾಖಲೆಗಳಿಲ್ಲದೆ ಸಿಗುವಂತಹ ಹಣ, ಮದ್ಯ, ಮಾದಕದ್ರವ್ಯಗಳು ಹಾಗೂ ಇನ್ನಿತರೆ ವಸ್ತುಗಳನ್ನು ವಶಪಡಿಸಿಕೊಂಡು ಕೂಡಲೇ ವರದಿ ಮಾಡಬೇಕು ಎಂದು ಹೇಳಿದರು.

ಈ ಕ್ಷೇತ್ರದ ಚುನಾವಣಾಧಿಕಾರಿ ಕೆ.ಎ. ದಯಾನಂದ ಮಾತನಾಡಿ, ‘ಮೂರಕ್ಕಿಂತ ಹೆಚ್ಚಿರುವ ಮತಗಟ್ಟೆಗಳ ಬಳಿ ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಸ್ವಯಂ ಸೇವಕರನ್ನಾಗಿ ನಿಯೋಜಿಸಿಕೊಳ್ಳಲಾಗಿದೆ. ಮತದಾನದ ದಿನ ಮತದಾರರಿಗೆ ಅಗತ್ಯ ಮಾಹಿತಿ ನೀಡಲು, ವಾಹನ ಪಾರ್ಕಿಂಗ್ ನಿರ್ವಹಣೆಗಾಗಿ ಈ ಸ್ವಯಂ ಸೇವಕರನ್ನು ಬಳಸಿಕೊಳ್ಳಲಾಗುವುದು’ ಎಂದರು.

ಮತಗಟ್ಟೆಗಳ ಮಾಹಿತಿಯನ್ನು ಮತದಾರರು ತಿಳಿಯಲು ಈ ಬಾರಿ ಮತ ಚೀಟಿಗಳಲ್ಲಿ ‘ಮತಗಟ್ಟೆಗಳ ಸ್ಥಳ ಮಾಹಿತಿ’ (ಲೊಕೇಶನ್‌ವುಳ್ಳ ಕ್ಯೂ ಆರ್ ಕೋಡ್) ಯನ್ನು ಅಳವಡಿಸಲಾಗಿದೆ. ಅದನ್ನು ಸ್ಕ್ಯಾನ್ ಮಾಡಿದರೆ ನಕ್ಷೆಯಲ್ಲಿ ಮತಗಟ್ಟೆಯಿರುವ ಸ್ಥಳವನ್ನು ತೋರಿಸುತ್ತದೆ ಎಂದು ಮಾಹಿತಿ ನೀಡಿದರು.

ಎಂಸಿಸಿ ನೋಡಲ್ ಅಧಿಕಾರಿ ಬಾಲಚಂದ್ರ, ಪೊಲೀಸ್ ನೋಡಲ್ ಅಧಿಕಾರಿ ಸೈದುಲ್ ಅದಾವತ್, ಚುನಾವಣಾ ವೆಚ್ಚ ನೋಡಲ್ ಅಧಿಕಾರಿ ಕೆ. ಲಲಿತಾ ಉಪಸ್ಥಿತರಿದ್ದರು.

ಟಿಪ್ಪರ್ ಹಾಯ್ದು ಐವರು ಸಾವು

ಬಾಗಲಕೋಟೆ: ಜಿಲ್ಲೆಯ ಬೀಳಗಿ ತಾಲ್ಲೂಕಿನ ಕಟ್ಟಿಗ್ಯಾನಮಡ್ಡಿ ಕ್ರಾಸ್ ಬಳಿ ಭಾನುವಾರ ಹೊಲದ ಕೆಲಸ ಮುಗಿಸಿಕೊಂಡು ಮನೆ ಮರಳುತ್ತಿದ್ದವರಿಗೆ ಟಿಪ್ಪರ್ ಹಾಯ್ದು ಒಂದೇ ಕುಟುಂಬದ ಐವರು ಮೃತಪಟ್ಟಿದ್ದಾರೆ. ಬಾದರದಿನ್ನಿ ಗ್ರಾಮದ ಯಂಕಪ್ಪ ತೋಳಮಟ್ಟಿ (70), ಪತ್ನಿ ಯಲ್ಲವ್ವ (60), ಪುತ್ರ ಪುಂಡಲೀಕ (35), ಅಳಿಯ ಗಿರಿಸಾಗರದ ಅಶೋಕ ಬೊಮ್ಮಣ್ಣವರ (50), ಅಶೋಕ ಪತ್ನಿ ನಾಗವ್ವ ಬೊಮ್ಮಣ್ಣವರ (45) ಮೃತರು. ‘ಯಂಕಪ್ಪ ಹಾಗೂ ಇತರರು ಹೊಲದಲ್ಲಿನ ಕೆಲಸ ಮುಗಿಸಿಕೊಂಡು ರಸ್ತೆ ದಾಟಲು ಬದಿ ನಿಂತಿದ್ದರು. ಅಲ್ಲಿ ಹೊರಟಿದ್ದ ಟಿಪ್ಪರ್ ಟಯರ್ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿ ಇದ್ದವರ ಮೇಲೆ ಹರಿದಿದೆ.

ಸಾರ್ವಜನಿಕ ಜೀವನದಿಂದ ದೂರ ಹೋಗಲ್ಲ: ರಮೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ: ‘ಕೋಮುವಾದಿಗಳು ಹಾಗೂ ಸಂವಿಧಾನ ವಿರೋಧಿಗಳು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ನಾನು ಸಾರ್ವಜನಿಕ ಜೀವನದಿಂದ ದೂರ ಹೋಗುವುದಿಲ್ಲ’ ಎಂದು ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಭಾವುಕರಾಗಿ ಹೇಳಿದರು.

ಪಟ್ಟಣದ ಮಾವಿನಕಾಯಿ ಮಂಡಿಯಲ್ಲಿ ಕೋಲಾರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ. ಗೌತಮ್ ಪರ ಭಾನುವಾರ ಏರ್ಪಡಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

‘ಅಂದು ಕವಿ ರವೀಂದ್ರನಾಥ್ ಠ್ಯಾಗೋರ್ ಭಾರತದ ಸಾಕ್ಷಿಪ್ರಜ್ಞೆಯಾಗಿದ್ದರು. ಇಂದು ಸಾಹಿತಿ ದೇವನೂರ ಮಹಾದೇವ ಅವರಂಥ ವ್ಯಕ್ತಿಗಳು ಭಾರತದ ಸಾಕ್ಷಿಪ್ರಜ್ಞೆಯಾಗಿದ್ದಾರೆ’ ಎಂದರು.

‘ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕೆಲವರು ಹಾಡಹಗಲೇ ನನ್ನ ಬೆನ್ನಿಗೆ ಚೂರು ಹಾಕಿದರು. ಮೋಸದಿಂದ ಸೋಲುಣಿಸಿದರು. ಆದರೆ, ನಾನು ದೇವರಾಜ ಅರಸು ಅವರ ಆದರ್ಶಗಳಿಗೆ ಬೆನ್ನು ತೋರಿಸುವುದಿಲ್ಲ. ಮತದಾರರು ಕಾಂಗ್ರೆಸ್ ಅಭ್ಯರ್ಥಿ ಗೌತಮ್ ಅವರ ಪರ ನಿಲ್ಲಬೇಕು. ಗೌತಮ್ ಗೆಲುವಿನಲ್ಲಿ ನನ್ನ ಸೋಲಿನ ಕಹಿ ಮರೆಯಬೇಕು’ ಎಂದು ತಿಳಿಸಿದರು.

ಪಾಕಿಸ್ತಾನ: ಭಾರತೀಯ ಕೈದಿ ಹಂತಕನ ಕೊಲೆ

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಭಾರತೀಯ ಸರಬ್ಜಿತ್ ಸಿಂಗ್ ಅವರನ್ನು ಹತ್ಯೆ ಮಾಡಿದ್ದ ಆರೋಪಿ ಅಮೀರ್ ಸರ್ಫರಾಜ್ ತಾಂಬಾನನ್ನು ಲಾಹೋರ್‌ನಲ್ಲಿ ಭಾನುವಾರ ಅಪರಿಚಿತ ಬಂದೂಕುಧಾರಿಗಳು ಗುಂಡಿಕ್ಕಿ ಕೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಾಂಬಾ, ಲಷ್ಕರ್–ಎ–ತಯಬಾ (ಎಲ್ಇಟಿ) ಭಯೋತ್ಪಾದಕ ಸಂಘಟನೆಯ ಸಂಸ್ಥಾಪಕ ಹಫೀಜ್ ಸಯೀದ್‌ನ ನಿಕಟವರ್ತಿಯಾಗಿದ್ದ.

ಲಾಹೋರ್‌ನ ಇಸ್ಲಾಂಪುರ ಪ್ರದೇಶದಲ್ಲಿ ಮೋಟಾರು ಸೈಕಲ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು, ತಾಂಬಾ ಮೇಲೆ ಗುಂಡಿನ ದಾಳಿ ನಡೆಸಿದರು. ಗಂಭೀರವಾಗಿ ಗಾಯಗೊಂಡಿದ್ದ ತಾಂಬಾನನ್ನು ಸಮೀಪದ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಅಲ್ಲಿ ಆತ ಮೃತಪಟ್ಟ ಎಂದು ಮೂಲಗಳು ತಿಳಿಸಿವೆ.

ಹೆಲ್ಮೆಟ್ ಮತ್ತು ಮುಸುಕು ಧರಿಸಿದ್ದ ದುಷ್ಕರ್ಮಿಗಳು ತಾಂಬಾ ಮೇಲೆ ನಾಲ್ಕು ಗುಂಡುಗಳನ್ನು ಹಾರಿಸಿದರು. ಅದರಲ್ಲಿ ಎರಡು ಅವರ ಎದೆ ಭಾಗ ಹೊಕ್ಕಿದ್ದರೆ, ಮತ್ತೆರಡು ಅವರ ಕಾಲಿಗೆ ತಾಗಿತ್ತು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ ಎಂದು ವರದಿಯಾಗಿದೆ. ಸರ್ಫರಾಜ್ ಜಾವೇದ್ ಅವರ ಮಗನಾದ ಅಮೀರ್ ಸರ್ಫರಾಜ್ ತಾಂಬಾ ಲಾಹೋರ್‌ನಲ್ಲಿ 1979ರಲ್ಲಿ ಜನಿಸಿದ್ದ. ಆಸ್ತಿ ವ್ಯವಹಾರ, ಮಾದಕವಸ್ತು ಕಳ್ಳಸಾಗಣೆಯಲ್ಲಿ ತೊಡಗಿದ್ದ ತಾಂಬಾ, ‘ಲಾಹೋರ್ ಕಾ ಅಸ್ಲಿ ಡಾನ್’ ಎಂದು ಕುಖ್ಯಾತಿಯಾಗಿದ್ದು, ‘ಟ್ರಕೆನ್‌ವಾಲಾ ಗ್ಯಾಂಗ್’ನ ಭಾಗವಾಗಿದ್ದ ಎಂದು ಮೂಲಗಳು ಹೇಳಿವೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಸ್. ಓಕಾ ಕಳವಳ

ಧಾರ್ಮಿಕ ಆಚರಣೆ ನೆಪದಲ್ಲಿ ಶಬ್ದ ಮಾಲಿನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧಾರ್ಮಿಕ ಉತ್ಸವಗಳ ಆಚರಣೆ ನೆಪದಲ್ಲಿ ರಾತ್ರಿ 10 ಗಂಟೆಯ ನಂತರವೂ ಭಾರಿ ಉಲ್ಲಾಸಗಳಿಂದ ಸಡಗರ ವ್ಯಕ್ತಪಡಿಸುವ ಜನರು ಶಬ್ದಮಾಲಿನ್ಯ ಉಂಟುಮಾಡುವುದರ ಜೊತೆಗೆ ಬೆದರಿಕೆ ಹುಟ್ಟಿಸುತ್ತಿದ್ದಾರೆ’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಎಸ್.ಓಕಾ ತೀವ್ರ ಕಳವಳ ವ್ಯಕ್ತಪಡಿಸಿದರು.

ಹೈಕೋರ್ಟ್‌ನ ಹಿರಿಯ ವಕೀಲ ಡಿ.ಎಲ್.ಎನ್.ರಾವ್ ಪ್ರತಿಷ್ಠಾನದ ವತಿಯಿಂದ ಶನಿವಾರ ಇಲ್ಲಿ ಆಯೋಜಿಸಲಾಗಿದ್ದ, ‘ಪರಿಸರ ನ್ಯಾಯವನ್ನು ನಿಶ್ಚಿತಗೊಳಿಸುವ ಹಾದಿಗಳು’ ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದ ಅವರು, ‘ಇಂದು ಎಲ್ಲೆಡೆ ವಾಹನಗಳ ಸಮಸ್ಯೆ ಭಾರಿ ಪ್ರಮಾಣದಲ್ಲಿ ಕಂಡುಬರುತ್ತಿದೆ. ಒಂದೆಡೆ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ವೇಗದ ನಗರೀಕರಣದಿಂದ ಪರಿಸರ ಕಲುಷಿತಗೊಳ್ಳುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ನಮ್ಮ ಅಭಿವೃದ್ಧಿ ಪರಿಕಲ್ಪನೆಯೇ ಸರಿಯಿಲ್ಲ. ಅಭಿವೃದ್ಧಿ ಎಂದರೆ ಸೇತುವೆ, ರಸ್ತೆಗಳ ನಿರ್ಮಾಣ ಅಥವಾ ಮೆಟ್ರೊ ರೈಲುಗಳ ಸಂಪರ್ಕ ಕಲ್ಪಿಸುವುದು ಎಂಬಂತಹ ತಪ್ಪು ಅಭಿಪ್ರಾಯ ತಲೆಯಲ್ಲಿದೆ. ಕಟ್ಟಕಡೆಯ ಬಡವನಿಗೆ ಒಂದು ಪುಟ್ಟ ಮನೆ, ಆತನ ಮಕ್ಕಳಿಗೆ ಕೈಗೆಟುಕುವ ದರದಲ್ಲಿ ಉತ್ತಮ ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯ ಸಿಗುವಂತಾಗುವುದೇ ನಿಜವಾದ ಅಭಿವೃದ್ಧಿ’ ಎಂದರು.



ವಿಚಾರಣ ಸಂಕಿರಣದಲ್ಲಿ ಹೈಕೋರ್ಟ್ ಹಿರಿಯ ವಕೀಲೆ ಎಸ್‌ಆರ್‌ಅನೂರಾಧ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಸ್‌ಸುನಿಲ್ ದತ್ ಯಾದವ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಎಸ್‌ಓಕಾ, ಹಿರಿಯ ವಕೀಲರಾದ ಡಿ.ಎಲ್‌ಎನ್‌ರಾವ್ ಮತ್ತು ಕೆ.ಎನ್‌ಫಣೀಂದ್ರ ಇದ್ದರು

‘ಬ್ರ್ಯಾಂಡ್ ಮಾಡುವುದು ಸಲ್ಲ’

‘ಪರಿಸರ ನ್ಯಾಯ ಎಂಬುದು ಸಮಾಜದ ದಟ್ಟ ದರಿದ್ರರಿಗೆ ಒದಗಿಸುವ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ. ನೀರು, ಗಾಳಿಯನ್ನು ಕಲುಷಿತಗೊಳಿಸುತ್ತಿರುವ ನಾವು ಪರಿಸರವನ್ನು ಮುಂದಿನ ಪೀಳಿಗೆಗೆ ಉತ್ತಮ ರೀತಿಯಲ್ಲಿ ಸಂರಕ್ಷಿಸಬೇಕಿದೆ. ಪರಿಸರ ಸಂರಕ್ಷಣೆಗಾಗಿ ಕೋರ್ಟ್‌ಗಳ ಮೆಟ್ಟಿಲೇರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವ ಹೋರಾಡುವ ಉತ್ಸಾಹಿಗಳನ್ನು ಅಭಿವೃದ್ಧಿ ವಿರೋಧಿಗಳೆಂದು ಬ್ರ್ಯಾಂಡ್ ಮಾಡಲಾಗುತ್ತಿರುವುದು ಸಲ್ಲ’ ಎಂದು ನ್ಯಾ.ಓಕಾ ಹೇಳಿದರು.



2023ನೇ ಸಾಲಿನಲ್ಲಿ ರಾಷ್ಟ್ರೀಯ ಕ್ರೀಡಾಕೂಟ, ದಕ್ಷಿಣ ವಲಯ ಚಾಂಪಿಯನ್‌ಷಿಪ್ ಮತ್ತು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ರಾಜ್ಯದ ಬ್ಯಾಡ್ಮಿಂಟನ್ ಆಟಗಾರರನ್ನು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯಿಂದ ಶುಕ್ರವಾರ ಗೌರವಿಸಿ, ಒಟ್ಟು ₹ 10 ಲಕ್ಷ ಬಹುಮಾನ ನೀಡಲಾಯಿತು – ಪ್ರಜಾವಾಣಿ ಚಿತ್ರ

ತಲೆಮರೆಸಿಕೊಂಡಿದ್ದ ಇಬ್ಬರು ರೌಡಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 8 ಹಾಗೂ 15 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಇಬ್ಬರು ರೌಡಿಗಳನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

8 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಮೋಹನ್ ಅಲಿಯಾಸ್ ಮೋನಿ ಎಂಬಾತನನ್ನು ಎನ್.ಆರ್ ಕಾಲೊನಿಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಮೋಹನ್ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆ ಹಾಗೂ ತಮಿಳುನಾಡಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 10 ಪ್ರಕರಣಗಳು ದಾಖಲಾಗಿದ್ದವು. ಈತ, ಬಸವನಗುಡಿ ಪೊಲೀಸ್ ಠಾಣೆಯಲ್ಲಿ(2012) ಒಂದು ದರೋಡೆ ಹಾಗೂ ಹಾಗೂ 2009ರಲ್ಲಿ ಒಂದು ಹಲ್ಲೆ ಪ್ರಕರಣದಲ್ಲಿ ಭಾಗಿಯಾಗಿದ್ದ. ಆಗಲೇ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿತ್ತು. ಆದರೆ, ಅಂದಿನಿಂದ ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಕರ್ನಾಟಕದ ಬಾಲಕಿಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಧಿ ಉಮೇಶ್ ಮತ್ತು ತಾರುಶ್ರೀ ಅವರ ಆಟದ ಬಲದಿಂದ ಕರ್ನಾಟಕದ ಬಾಲಕಿಯರ ತಂಡವು ಪುದುಚೇರಿಯಲ್ಲಿ ನಡೆಯುತ್ತಿರುವ 38ನೇ ಯೂತ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದೆ.

ಕರ್ನಾಟಕ ತಂಡವು ಸೆಮಿಫೈನಲ್‌ನಲ್ಲಿ 59–50ರಿಂದ ಕೇರಳ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿತು. ಕರ್ನಾಟಕದ ಪರ ನಿಧಿ 25, ತಾರುಶ್ರೀ 10 ಪಾಯಿಂಟ್ಸ್ ಗಳಿಸಿದರು.

ಕರ್ನಾಟಕವು ಫೈನಲ್‌ನಲ್ಲಿ ತಮಿಳುನಾಡು ತಂಡವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ತಮಿಳುನಾಡು ತಂಡವು 78–73ರಿಂದ ರಾಜಸ್ಥಾನ ತಂಡವನ್ನು ಸೋಲಿಸಿತು.

ಚರಣ್‌ರಾಜ್ ಸೇರಿ ಮೂವರಿಗೆ ‘ಯುಗಾದಿ ಪುರಸ್ಕಾರ’ ಪ್ರದಾನ

‘ದ್ವಿತೀಯ ಭಾಷೆಯಾಗಿ ತೆಲುಗು ಬೋಧಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದಲ್ಲಿ 1.35 ಕೋಟಿ ತೆಲುಗು ಭಾಷಿಕರು ಇದ್ದಾರೆ. ಆದ್ದರಿಂದ ಇಲ್ಲಿ ತೆಲುಗನ್ನು ದ್ವಿತೀಯ ಭಾಷೆಯಾಗಿ ಬೋಧಿಸಬೇಕು’ ಎಂದು ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು ತಿಳಿಸಿದರು.

ತೆಲುಗು ವಿಜ್ಞಾನ ಸಮಿತಿಯು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಯುಗಾದಿ ಉತ್ಸವದಲ್ಲಿ ಬಹುಭಾಷಾ ನಟ ಚರಣ್‌ರಾಜ್ ಅವರಿಗೆ ‘ಯುಗಾದಿ ವಿಶಿಷ್ಟ ಪುರಸ್ಕಾರ’, ಸಾಹಿತಿ ಕಮಲಾ ಹಂಪನಾ ಹಾಗೂ ತೆಲುಗು ಕವಯಿತ್ರಿ ಮೃಣಾಲಿನಿ ಅವರಿಗೆ ‘ಯುಗಾದಿ ಸಾಹಿತ್ಯ ಪುರಸ್ಕಾರ’ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ತಲಾ ₹10ಸಾವಿರ ನಗದು ಒಳಗೊಂಡಿದೆ.

ಈ ವೇಳೆ ಮಾತನಾಡಿದ ರಾಧಾಕೃಷ್ಣ ರಾಜು, ‘ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಬೋಧಿಸಿದರೆ ವಿಷಯ ಪರಿಣಾಮಕಾರಿಯಾಗಿ ತಲುಪಲಿದೆ. ಮಕ್ಕಳು ಕೂಡ ಬೇಗ ಗ್ರಹಿಸುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಸಹ ಶಾಲೆಗಳಲ್ಲಿ ಮಾತೃಭಾಷೆಯನ್ನು ಬೋಧನಾ ಮಾಧ್ಯಮವನ್ನಾಗಿ ಬಳಸಬೇಕೆಂದು ಹೇಳಿದ್ದಾರೆ. ಬೆಂಗಳೂರು, ಕೋಲಾರ ಸೇರಿ ರಾಜ್ಯದ ವಿವಿಧೆಡೆ ನೆಲೆಸಿರುವ ತೆಲುಗು ಭಾಷಿಕರು ಕನ್ನಡವನ್ನೂ ಪ್ರೀತಿಸಿ, ಬೇರೆ ಭಾಷಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಹರಿಯಾಣ ಮತ್ತು ಪಶ್ಚಿಮ ಬಂಗಾಳದಲ್ಲಿ ತೆಲುಗನ್ನು ದ್ವಿತೀಯ ಭಾಷೆಯಾಗಿ ಬೋಧಿಸಲಾಗುತ್ತಿದೆ. ಅದೇ ರೀತಿ, ಕರ್ನಾಟಕದಲ್ಲಿಯೂ ಬೋಧಿಸಲು ಕ್ರಮವಹಿಸಬೇಕು’ ಎಂದರು.

ಕಮಲಾ ಹಂಪನಾ, ‘ಭಾಷೆಗಳಲ್ಲಿ ಹಿರಿಯ–ಕಿರಿಯವೆಂಬ ಭೇದಭಾವವಿಲ್ಲ. ಲಿಪಿ ಇರುವ, ಇರದಿರುವ ಭಾಷೆಗಳಲ್ಲಿಯೂ ಮೇಲು–ಕೀಳು ಎಂಬುದಿಲ್ಲ. ಎಲ್ಲ ಭಾಷೆಗಳನ್ನೂ ಗೌರವಿಸಬೇಕು’ ಎಂದು ಹೇಳಿದರು.

ಚರಣ್‌ರಾಜ್, ‘ತೆಲುಗು ಭಾಷಿಕರು ಮತ್ತು ಕನ್ನಡಿಗರು ಅಣ್ಣ ತಮ್ಮಂದಿರ ರೀತಿ ಇದ್ದಾರೆ. ಮನೆಯಲ್ಲಿ ಯಾವುದೇ ಭಾಷೆ ಬಳಸಿದರೂ ಹೊರಗಡೆ ಒಟ್ಟಾಗಿ ಇರಬೇಕು’ ಎಂದು ತಿಳಿಸಿದರು.

ಮೃಣಾಲಿನಿ, ‘ವಿಜಯನಗರ ಸಾಮ್ರಾಜ್ಯವನ್ನು ಆಳಿದ ಕೃಷ್ಣದೇವರಾಯ ಅವರು ತೆಲುಗು ಹಾಗೂ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ತೆಲುಗು ಹಾಗೂ ಕನ್ನಡದ ಸಂಬಂಧ ಮೊದಲಿನಿಂದಲೂ ಇದ್ದು, ಈ ಸಂಬಂಧ ಹೀಗೇ ಮುಂದುವರಿಯಬೇಕು’ ಎಂದರು.

ಸಾಹಿತಿ ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಚರಣ್‌ರಾಜ್ ಅವರಿಗೆ ‘ಯುಗಾದಿ ವಿಶಿಷ್ಟ ಪುರಸ್ಕಾರ’, ಕಮಲಾ ಹಂಪನಾ ಮತ್ತು ಮೃಣಾಲಿನಿ ಅವರಿಗೆ ‘ಯುಗಾದಿ ಸಾಹಿತ್ಯ ಪುರಸ್ಕಾರ’ವನ್ನು ಚಂದ್ರಶೇಖರ ಕಂಬಾರ ಪ್ರದಾನ ಮಾಡಿದರು. ಎ. ರಾಧಾಕೃಷ್ಣ ರಾಜು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ತೆಲುಗು ವಿಜ್ಞಾನ ಸಮಿತಿ ಉಪಾಧ್ಯಕ್ಷ ಗಂಗರಾಜ್, ಪ್ರಧಾನ ಕಾರ್ಯದರ್ಶಿ ಐ. ಲಕ್ಷ್ಮೀರೆಡ್ಡಿ, ಉಪಾಧ್ಯಕ್ಷ ಆದಿಕೇಶವ ನಾಯ್ಡು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಉತ್ತರಾದಿ ಮಠಕ್ಕೆ ದಲಿತರ ಪ್ರವೇಶ

ಸಂವಿಧಾನ ರಕ್ಷಣಾ ಹೋರಾಟ ಸಮಿತಿಯಿಂದ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಇಲ್ಲಿನ ಸಂವಿಧಾನ ರಕ್ಷಣಾ ಹೋರಾಟ ಸಮಿತಿಯಿಂದ ಭಾನುವಾರ ಉತ್ತರಾದಿ ಮಠಕ್ಕೆ ದಲಿತರ ಪ್ರವೇಶ ಕಾರ್ಯಕ್ರಮ ನಡೆಯಿತು.

ಅಂಬೇಡ್ಕರ್ ವೃತ್ತದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ನಮನ ಸಲ್ಲಿಸಿದ ಬಳಿಕ ಹೋರಾಟ ಸಮಿತಿ ಸಂಚಾಲಕ ಎ.ಕರುಣಾನಿಧಿ, ಸಿಪಿಎಂ ಮುಖಂಡರಾದ ಮರಡಿ ಜಂಬಯ್ಯ ನಾಯಕ, ಭಾಸ್ಕರ ರೆಡ್ಡಿ ಇತರರು ಮೆರವಣಿಗೆ ಮೂಲಕ ರೈಲ್ವೆ ನಿಲ್ದಾಣ ರಸ್ತೆಯ ಉತ್ತರಾದಿ ಮಠದೊಳಗೆ ಪ್ರವೇಶಿಸಿ, ಕಾರ್ಯಕ್ರಮದ ಉದ್ದೇಶ ವಿವರಿಸಿದರು.

‘ಸಾಮಾಜಿಕ ಸೌಹಾರ್ದ ಮತ್ತು ಸಹೋದರತ್ವ ಸಂದೇಶ ಸಾರುವುದೇ ಈ ಕಾರ್ಯಕ್ರಮ ಉದ್ದೇಶ. ನಮ್ಮ ಮನಸ್ಸು ಬದಲಾಗಬೇಕೇ ಹೊರತು ಸಂವಿಧಾನವಲ್ಲ. ಇದು ಜನರಿಗೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ’ ಎಂದರು.

ಜಂಬಯ್ಯ ನಾಯಕ ಮಾತನಾಡಿ, ‘ಧರ್ಮ, ಅಸಮಾನತೆ ನಾವು ಒಪ್ಪಲ್ಲ. ಯಾರೋ ಕೆಲವರು ಸಮಾಜದಲ್ಲಿ ಮೇಲು, ಕೀಳು ಎಂಬ ವ್ಯವಸ್ಥೆ ಸೃಷ್ಟಿಸಿದ್ದಾರೆ. ಜನಸಾಮಾನ್ಯರು ಸೌಹಾರ್ದದಿಂದ ಬಾಳ್ವೆ ನಡಸಿದರೂ ರಾಜಕೀಯ ಶಕ್ತಿಗಳು ಜನರ ಒಗ್ಗಟ್ಟು ಮುರಿಯಲು ಯತ್ನಿಸುತ್ತವೆ. ಇದಕ್ಕೆ ಆಸ್ಪದ ಕೊಡಬಾರದು’ ಎಂದರು.


ಮಠದ ಪರವಾಗಿ ಬ್ರಾಹ್ಮಣ ಸಂಘದ ಅಧ್ಯಕ್ಷ ದಿವಾಕರ್ ಭಟ್ ಮಾತನಾಡಿ, ‘ಬ್ರಾಹ್ಮಣ ಸಮಾಜ ಎಲ್ಲರನ್ನೂ ಸಮಾನವಾಗಿ ಕಾಣುತ್ತದೆ. ಮಠ ಪ್ರವೇಶಕ್ಕೆ ಯಾವ ಅಡ್ಡಿಯೂ ಇಲ್ಲ. ಇದೇ ಪರಂಪರೆ ಮುಂದುವರಿಯಲಿದೆ’ ಎಂದರು.

ನಂತರ ಮಠದಲ್ಲಿನ ಜಯತೀರ್ಥರು, ರಾಘವೇಂದ್ರ ಯತಿಗಳು, ಸತ್ಯಪ್ರಮೋದ ತೀರ್ಥರ ಮೃತ್ತಿಕಾ ಬೃಂದಾವನಕ್ಕೆ ಆರತಿ ಬೆಳಗಿ ಬಂದವರಿಗೆಲ್ಲ ತೀರ್ಥ, ಮಂತ್ರಾಕ್ಷತೆ, ಫಲ ಪ್ರಸಾದ ನೀಡಿದರು.



ಅಂಬೇಡ್ಕರ್ ಜಯಂತಿ ಪ್ರಯುಕ್ತ ಭಾನುವಾರ ಹೊಸಪೇಟೆಯ ಉತ್ತರಾದಿ ಮಠಕ್ಕೆ ದಲಿತರ ಪ್ರವೇಶ ಕಾರ್ಯಕ್ರಮ ನಡೆಯಿತು – ಪ್ರಜಾವಾಣಿ ಚಿತ್ರ

ದ್ವಿತೀಯ ಪಿಯು ಸಾಧಕ



ಇಶಾನ್ ಎಸ್. ಮಹೇಶ್

ಶೇ 97.5 (ವಿಜ್ಞಾನ ವಿಭಾಗ) ಜ್ಞಾನ ಸುಧಾ ಪದವಿ ಪೂರ್ವ ಕಾಲೇಜು, ಕಾರ್ಕಳ. ಇವರು ಬೆಂಗಳೂರಿನ ಪೂರ್ಣಪ್ರಜ್ಞಾ ಲೇಔಟ್‌ನವರು.

ಎಚ್‌ಡಿಕೆ ಹೇಳಿಕೆ: ವಾಕ್ಸಮರದ ಕಿಡಿ

‘ಗ್ಯಾರಂಟಿಗಳಿಂದ ಹಳ್ಳಿಗಳ ಹೆಣ್ಣು ಮಕ್ಕಳು ದಾರಿ ತಪ್ಪಿದ್ದಾರೆ’ ಎಂಬ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಭಾರಿ ವಾಕ್ಸಮರಕ್ಕೆ ಕಾರಣವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನ ಹಲವರು ಕುಮಾರಸ್ವಾಮಿ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ. ಮಂಡ್ಯದಲ್ಲಿ ಕಾಂಗ್ರೆಸ್ ಕಾರ್ಯಕರ್ತೆಯರು ಕುಮಾರಸ್ವಾಮಿ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ

ಹೆಣ್ಣುಮಕ್ಕಳ ಕುರಿತ ಮನಃಸ್ಥಿತಿ ಬಯಲಾಗಿದೆ: ಮುಖ್ಯಮಂತ್ರಿ


ಸಿದ್ದರಾಮಯ್ಯ

ಮಡಿಕೇರಿ: ‘ಗ್ಯಾರಂಟಿ ಯೋಜನೆಗಳಿಂದ ಹೆಣ್ಣು ಮಕ್ಕಳು ದಿಕ್ಕು ತಪ್ಪಿದ್ದಾರೆ ಎನ್ನುವ ಮೂಲಕ ಎಚ್.ಡಿ. ಕುಮಾರಸ್ವಾಮಿ ಅವರು ಹೆಣ್ಣು ಮಕ್ಕಳ ಬಗ್ಗೆ ಅವರಿಗಿರುವ ಭಾವನೆಯನ್ನು ಹೊರ ಹಾಕಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಹೆಲಿಪ್ಯಾಡ್‌ನಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ಗ್ಯಾರಂಟಿ ಯೋಜನೆಗಳಿಂದ ಹೆಣ್ಣು ಮಕ್ಕಳು ದಾರಿ ತಪ್ಪಿದ್ದಾರೆ ಎಂದರೆ ಏನರ್ಥ? ಎರಡು ಬಾರಿ ಮುಖ್ಯಮಂತ್ರಿ ಆಗಿದ್ದ ಕುಮಾರಸ್ವಾಮಿ ಅವರ ಮನಃಸ್ಥಿತಿ, ಹೆಣ್ಣುಮಕ್ಕಳ ಬಗ್ಗೆ ಅವರಿಗಿರುವ ಭಾವನೆ ಈಗಲಾದರೂ ಅರ್ಥವಾಯಿತಾ? ಆ ರೀತಿ ಮಾತನಾಡಿದರೆ ಜನರು ಸಹಿಸಿಕೊಳ್ಳುತ್ತಾರಾ’ ಎಂದು ಪ್ರಶ್ನಿಸಿದರು.

ದಂಗೆ ಏಳಬಹುದು: ‘ಪ್ರಜಾಧ್ವನಿ -2’ ಸಮಾವೇಶದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ನನಗೆ ಕುಮಾರಸ್ವಾಮಿಯವರ ಕ್ಷಮೆ ಬೇಕಿಲ್ಲ. ಇಡೀ ಮನುಕುಲಕ್ಕೆ ಅಪಮಾನ ಮಾಡಿದ ಅವರನ್ನು ತಮ್ಮ ಜೊತೆಗೆ ಸೇರಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಸ್ಮೃತಿ ಇರಾನಿ, ನಿರ್ಮಲಾ ಸೀತಾರಾಮನ್ ಖುದ್ದು ಹೇಳಿಕೆ ನೀಡಬೇಕು’ ಎಂದು ಒತ್ತಾಯಿಸಿದರು.

‘ಕುಮಾರಸ್ವಾಮಿ ಹೇಳಿಕೆ ವಿರೋಧಿಸಿ ಹೆಣ್ಣುಮಕ್ಕಳು ದಂಗೆ ಏಳುವ ಪರಿಸ್ಥಿತಿ ಬರಬಹುದು. ನಾನು ಹೋರಾಟವನ್ನು ತಡೆಯುವುದಿಲ್ಲ. ಆದರೆ, ಹೋರಾಟ ಗೌರವಯುತವಾಗಿರಬೇಕು’ ಎಂದು ಹೇಳಿದರು.

‘ಮಹಿಳೆಯರು ಎಲ್ಲಿ ದಾರಿ ತಪ್ಪಿದ್ದಾರೆ ತೋರಿಸಿ?’


ಡಿ.ಕೆ. ಶಿವಕುಮಾರ್

ತುಮಕೂರು: ಮಾಜಿ ಪ್ರಧಾನಿ ಇಂದಿರಾ ಗಾಂಧಿ ಹತ್ಯೆಯಾದಾಗ ಮನಸ್ಸಿಗೆ ತೀವ್ರ ನೋವಾಗಿತ್ತು. ಅದು ಬಿಟ್ಟರೆ ಈಗ ‘ಗ್ರಾಮೀಣ ಮಹಿಳೆಯರು ದಾರಿ ತಪ್ಪಿದ್ದಾರೆ’ ಎಂಬ ಕುಮಾರಸ್ವಾಮಿ ಮಾತು ಕೇಳಿ ಅಷ್ಟೇ ನೋವಾಗಿದೆ...

‘ಗ್ಯಾರಂಟಿ ಯೋಜನೆಗಳಿಂದ ಗ್ರಾಮೀಣ ಭಾಗದ ಮಹಿಳೆಯರು ದಾರಿ ತಪ್ಪಿದ್ದಾರೆ’ ಎಂಬ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ ರೀತಿ ಇದು.

ತಿಪಟೂರು ತಾಲ್ಲೂಕಿನ ಕೆ.ಬಿ.ಕ್ರಾಸ್ ಬಳಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ಪರ ಭಾನುವಾರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಮಹಿಳೆಯರು ಎಲ್ಲಿ ದಾರಿ ತಪ್ಪಿದ್ದಾರೆ ತೋರಿಸಿ? ನೀವು ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದೀರಿ ಎಂಬುದನ್ನು ಮರೆಯಬೇಡಿ’ ಎಂದು ಕುಟುಕಿದರು.

‘ಗೃಹಲಕ್ಷ್ಮಿ ಯೋಜನೆಯಿಂದ ತಾಯಂದಿರು, ಸಹೋದರಿಯರು ಕೆಟ್ಟು ಹೋಗಿದ್ದಾರೆ ಎಂದಿರುವ ಎಚ್.ಡಿ.ಕುಮಾರಸ್ವಾಮಿ ಕ್ಷಮೆ ಕೇಳಬೇಕು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಒತ್ತಾಯಿಸಿದರು.

ಹತಾಶೆಯಿಂದ ಕಾಂಗ್ರೆಸ್ ಹೇಳಿಕೆ ತಿರುಚಿದೆ: ಎಚ್‌ಡಿಕೆ



ಬೆಂಗಳೂರು: ‘ಗ್ಯಾರಂಟಿಗಳ ಹೆಸರಿನಲ್ಲಿ ಮಹಿಳೆಯರನ್ನು ದಾರಿ ತಪ್ಪಿಸಲಾಗುತ್ತಿದೆ ಎಂದು ನಾನು ಹೇಳಿದ್ದೆ. ಆದರೆ, ಚುನಾವಣೆಯಲ್ಲಿ ಸೋಲಿನ ಭೀತಿಯಲ್ಲಿರುವ ಕಾಂಗ್ರೆಸ್ ಪಕ್ಷದವರು ಅದನ್ನು ತಿರುಚಿ ರಾಜಕೀಯ ಮಾಡುತ್ತಿದ್ದಾರೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ದೂರಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಮಹಿಳೆಯರನ್ನು ಅವಮಾನಿಸುವಂತಹ ಮಾತನ್ನು ನಾನು ಹೇಳಿಯೇ ಇಲ್ಲ. ಗ್ಯಾರಂಟಿಗಳ ಹೆಸರಿನಲ್ಲಿ ಮುಗ್ಧ ಜನರು, ಮಹಿಳೆಯರನ್ನು ದಾರಿ ತಪ್ಪಿಸಲಾಗುತ್ತಿದೆ. ಎಚ್ಚರಿಕೆಯಿಂದ ಇರಿ ಎಂಬುದು ನನ್ನ ಮಾತು. ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ. ಅದಕ್ಕಾಗಿ ನನ್ನ ಹೇಳಿಕೆಯನ್ನು ತಿರುಚಿ ಲಾಭ ಪಡೆಯಲು ಹೊರಟಿದ್ದಾರೆ’ ಎಂದರು.

‘ನಾನಾಗಲಿ, ನನ್ನ ಕುಟುಂಬವಾಗಲಿ ಮಹಿಳೆಯರ ಬಗ್ಗೆ ಅಗೌರವದಿಂದ ನಡೆದುಕೊಂಡಿಲ್ಲ. ನಡೆದುಕೊಳ್ಳುವುದೂ ಇಲ್ಲ. ಕಷ್ಟ ಹೇಳಿಕೊಂಡು ಬರುವ ಮಹಿಳೆಯರಿಗೆ ನೆರವಾಗಿದ್ದೇನೆ. ಅಧಿಕಾರದಲ್ಲಿದ್ದಾಗ ಮಹಿಳೆಯರ ಪರವಾದ ಯೋಜನೆಗಳನ್ನು ಜಾರಿಗೊಳಿಸಿದ್ದೇನೆ’ ಎಂದು ಹೇಳಿದರು.

‘ಮಹಿಳೆಯರ ಕೂಗಿಗೆ ಸ್ಪಂದಿಸಿ ಸಾರಾಯಿ, ಲಾಟರಿ ನಿಷೇಧಿಸಿದ್ದೇನೆ. ಯಾವತ್ತೂ ಮಹಿಳೆಯರಿಗೆ ಅವಮಾನ ಆಗುವಂತೆ ಮಾತನಾಡಿಲ್ಲ. ನನ್ನ ಹೇಳಿಕೆಯನ್ನು ಅರ್ಥ ಮಾಡಿಕೊಳ್ಳದೇ ತಪ್ಪಾಗಿ ಬಿಂಬಿಸುತ್ತಿದ್ದಾರೆ. ಕಾಂಗ್ರೆಸ್ ನಾಯಕರು ತಪ್ಪು ಹೊರಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಹೇಳಿದರು.

ಎಚ್‌ಡಿಕೆ ವಿರುದ್ಧ ಗೋಬ್ಯಾಕ್ ಚಳವಳಿ



ಎಚ್.ಡಿ.ಕುಮಾರಸ್ವಾಮಿ ಅವರು ಮಹಿಳೆಯರ ಕುರಿತು ಅವಹೇಳನಾಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮಹಿಳಾ ಘಟಕದ ಸದಸ್ಯೆಯರು ಮಂಡ್ಯದ ಜೆ.ಸಿ.ವೃತ್ತದಲ್ಲಿ ‘ಗೋ ಬ್ಯಾಕ್ ಕುಮಾರಸ್ವಾಮಿ’ ಚಳವಳಿ ನಡೆಸಿದರು

ಮಂಡ್ಯ: ‘ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಅವರು ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಭರದಲ್ಲಿ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ’ ಎಂದು ಆರೋಪಿಸಿ ಕಾಂಗ್ರೆಸ್ ಮಹಿಳಾ ಘಟಕದ ಕಾರ್ಯಕರ್ತೆಯರು ನಗರದ ಜೆ.ಸಿ. ವೃತ್ತದಲ್ಲಿ ಭಾನುವಾರ ‘ಗೋಬ್ಯಾಕ್ ಕುಮಾರಸ್ವಾಮಿ’ ಚಳವಳಿ ನಡೆಸಿದರು.

‘ಮಹಿಳೆಯರ ವಿರುದ್ಧ ಮಾತನಾಡಿರುವ ಅವರು ಕ್ಷೇತ್ರಕ್ಕೆ ಕಾಲಿಡಬಾರದು’ ಎಂದು ಎಚ್ಚರಿಕೆ ನೀಡಿದರು.

‘ಹಿಂದೆಯೂ ಅವರು ಹಲವು ಬಾರಿ ಮಹಿಳೆಯರ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ. ಸುಮಲತಾ ವಿರುದ್ಧ ಕೆಟ್ಟದಾಗಿ ಮಾತನಾಡಿದ ಕಾರಣದಿಂದ ಅವರ ಪುತ್ರ ಸೋಲಬೇಕಾಯಿತು. ಬೆಳಗಾವಿಯ ರೈತ ಮಹಿಳೆಯನ್ನು ‘ಇಷ್ಟು ದಿನ ಎಲ್ಲಿ ಮಲಗಿದ್ದೆಯಮ್ಮ’ ಎಂದು ಪ್ರಶ್ನಿಸಿದ್ದರು. ಇದು ಅವರ ಮನಃಸ್ಥಿತಿಯನ್ನು ತೋರಿಸುತ್ತದೆ. ಕೂಡಲೇ ಅವರು ಕ್ಷಮೆ ಯಾಚಿಸಬೇಕು’ ಎಂದು ಒತ್ತಾಯಿಸಿದರು.

ಜನವಾದಿ ಮಹಿಳಾ ಸಂಘಟನೆ ಆಕ್ರೋಶ

‘ಗ್ಯಾರಂಟಿ ಯೋಜನೆಯಿಂದ ಮಹಿಳೆಯರು ದಾರಿ ತಪ್ಪಿದ್ದಾರೆ’ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ನೀಡಿರುವ ಹೇಳಿಕೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ.

‘ಚುನಾವಣೆಯಲ್ಲಿ ವಿರೋಧ ಪಕ್ಷಗಳ ವಿರುದ್ಧ ಮಾತನಾಡುವ ಭರಾಟೆಯಲ್ಲಿ ನಾಲಿಗೆ ಹರಿಬಿಟ್ಟ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು, ಮಹಿಳೆಯರ ಕುರಿತು ಕನಿಷ್ಠ ಗೌರವ ಇಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ. ಅವರು ರಾಜ್ಯದ ಮಹಿಳೆಯರಲ್ಲಿ ಬೇಷರತ್ ಕ್ಷಮೆ ಯಾಚಿಸಬೇಕು’ ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಹಾಗೂ ಪ್ರಧಾನ ಕಾರ್ಯದರ್ಶಿ ದೇವಿ ಅವರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಗ್ಯಾರಂಟಿ ಯೋಜನೆಗಳಿಂದ ಹೆಣ್ಣುಮಕ್ಕಳು ಹಾದಿ ತಪ್ಪಿದ್ದಾರೆ ಎಂದು ಕುಮಾರಣ್ಣ ಹೇಳಿಕೆ ನೀಡಿದ್ದಾರೆ. ನೀವು ದಾರಿ ತಪ್ಪಿ ಎಷ್ಟು ವರ್ಷವಾಯಿತು? ಎಲ್ಲಿ ಓಡಾಡಿಕೊಂಡಿದ್ದೀರಿ, ಇನ್ನೂ ಒಂದ್ಕಡೆ ಸೇರಿಕೊಂಡಿಲ್ಲವಲ್ಲ?
ಪ್ರಕಾಶ್ ರಾಜ್, ಚಿತ್ರ ನಟ

‘ಕ್ಲಬ್‌ಗೆ ಹೋಗುವ ಮಹಿಳೆಯರಿಗೆ ‘ಗ್ಯಾರಂಟಿ’ ಯೋಜನೆಗಳನ್ನು ನೀಡುತ್ತಿಲ್ಲ. ದುಡಿಯುವ ಮಹಿಳೆಯರಿಗೆ ನೀಡುತ್ತಿದ್ದೇವೆ. ದುಡಿಯುವ ವರ್ಗದ ಮಹಿಳೆಯರು ದಾರಿ ತಪ್ಪಿದ್ದಾರೆ ಎಂದಿರುವುದು ಖಂಡನೀಯ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು, ದಾರಿ ತಪ್ಪಿದ್ದಾರೆ. ಹೀಗಾಗಿ ಅವರು ಉಳಿದವರೂ ದಾರಿ ತಪ್ಪಿದ್ದಾಗಿ ಹೇಳಿಕೆ ನೀಡಿದ್ದಾರೆ
ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ಸಬಲರಾಗುವುದನ್ನು ಕಂಡು ಸಹಿಸಿಕೊಳ್ಳಲಾಗದ ಎಚ್.ಡಿ. ಕುಮಾರಸ್ವಾಮಿ, ಹಳ್ಳಿಯ ಮಹಿಳೆಯರ ಬಗ್ಗೆ ಕೀಳು ಮಟ್ಟದ ಹೇಳಿಕೆ ನೀಡಿದ್ದಾರೆ
ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ಉಸ್ತುವಾರಿ

ಕುಮಾರಸ್ವಾಮಿ ತಮ್ಮ ಹೇಳಿಕೆಯನ್ನು ಬೇರೆ ಬೇರೆ ಅರ್ಥಗಳಲ್ಲಿ ಉಲ್ಲೇಖಿಸಿ ಸಮರ್ಥಿಸಿಕೊಳ್ಳುತ್ತಿರುವುದು ಸರಿಯಲ್ಲ. ಕ್ಷಮೆಯಾಚಿಸುವ ಮೂಲಕ ಘನತೆಯನ್ನು ಉಳಿಸಿಕೊಳ್ಳಬೇಕು
ಮುಖ್ಯಮಂತ್ರಿ ಚಂದ್ರು, ರಾಜ್ಯಾಧ್ಯಕ್ಷ, ಎಎಪಿ

ಸುದ್ದಿ 2 ನಿಮಿಷ

ಸೋಮಣ್ಣ ಚುನಾವಣೆ ಖರ್ಚು ₹60 ಕೋಟಿ: ಸಿದ್ದರಾಮಯ್ಯ

ತುಮಕೂರು: ‘ಮಾಜಿ ಸಚಿವ ವಿ. ಸೋಮಣ್ಣ ಬಳಿ ಹಣವಿದೆ ಎಂದು ತುಮಕೂರಿಗೆ ಕರೆತಂದು ನಿಲ್ಲಿಸಿದ್ದಾರೆ. ವರುಣ, ಚಾಮರಾಜ ನಗರದಲ್ಲಿ ಅಷ್ಟೊಂದು ದೊಡ್ಡ ಮೊತ್ತದ ಹಣ ಖರ್ಚು ಮಾಡಿದ್ದರು. ಚುನಾವಣೆ ನಡೆದು ಇನ್ನೂ ಹತ್ತು ತಿಂಗಳು ಕಳೆಯುವುದರ ಒಳಗೆ ಮತ್ತೊಂದು ಚುನಾವಣೆಗೆ ನಿಂತಿದ್ದಾರೆ. ಹಾಗಾದರೆ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದಾಗ ಸೋಮಣ್ಣ ಇನ್ನೆಷ್ಟು ಭ್ರಷ್ಟಾಚಾರ ನಡೆಸಿ, ಹಣ ಮಾಡಿರಬಹುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ತಿಪಟೂರು ತಾಲ್ಲೂಕಿನ ಕೆ.ಬಿ. ಕ್ರಾಸ್ ಬಳಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇ ಗೌಡ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದರು.

‘ಕಳೆದ ವಿಧಾನಸಭೆ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ನನ್ನ ವಿರುದ್ಧ ಸ್ಪರ್ಧಿಸಿದ್ದ ವಿ.ಸೋಮಣ್ಣ ₹50 ಕೋಟಿಯಿಂದ ₹60 ಕೋಟಿ ಮತ್ತು ಚಾಮರಾಜನಗರದಲ್ಲೂ ಅಷ್ಟೇ ಪ್ರಮಾಣದ ಹಣ ಖರ್ಚು ಮಾಡಿ ಸೋತಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಲೂಟಿ ಮಾಡಿದ ಹಣ ಖರ್ಚು ಮಾಡಲು ಇಲ್ಲಿಗೆ ಬಂದಿದ್ದಾರೆ. ಹಣ ಇದೆ ಎಂಬ ಒಂದೇ ಕಾರಣಕ್ಕೆ ಕರೆತಂದು ನಿಲ್ಲಿಸಿದ್ದಾರೆ’ ಎಂದು ಟೀಕಿಸಿದರು.

ಮೈಸೂರು ಭಾಗದ ಜನರು ಸೋಮಣ್ಣ ಅವರನ್ನು ಸೋಲಿಸಿ ಮನೆಗೆ ಕಳುಹಿಸಿದಂತೆ ತುಮಕೂರು ಜಿಲ್ಲೆಯ ಜನರು ಆ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

‘ಸೋಮಣ್ಣ ಕೆಲಸಗಾರ, ವೋಟು ಕೊಡಿ’ ಎಂದು ಹೇಳುತ್ತಿದ್ದಾರೆ. ವಸತಿ ಸಚಿವರಾಗಿದ್ದ ಸಮಯದಲ್ಲಿ ಬಡವರಿಗೆ ಹೊಸದಾಗಿ ಒಂದೇ ಒಂದು ಮನೆ ಕಟ್ಟಿಸಿಕೊಟ್ಟಿದ್ದರೆ ದಾಖಲೆ ತೋರಿಸಲಿ. ಅಭಿವೃದ್ಧಿ ಕೆಲಸ ಮಾಡಿಲ್ಲ. ಮಾಡಿದ್ದರೆ ಯಾವ ಕೆಲಸ ಮಾಡಿದ್ದಾರೆ ಎಂಬುದನ್ನು ಜನರ ಮುಂದಿಡಲಿ ಎಂದು ಸವಾಲು ಹಾಕಿದರು.

ನಾಸಿರ್ ಸ್ವಾಗತಕ್ಕೆ ವಿರೋಧ



ಬಳ್ಳಾರಿ: ರಾಜ್ಯಸಭಾ ಸದಸ್ಯರಾದ ಬಳಿಕ ಮೊದಲ ಬಾರಿಗೆ ಬಳ್ಳಾರಿಗೆ ಬಂದ ನಾಸಿರ್ ಹುಸೇನ್ ಅವರಿಗೆ ಭಾನುವಾರ ಅದ್ದೂರಿ ಸ್ವಾಗತ ಸಿಕ್ಕಿತು. ಆದರೆ ಅವರ ಆಗಮನ ವಿರೋಧಿಸಿ ಬಿಜೆಪಿ ಪ್ರತಿಭಟನೆ ನಡೆಸಿತು.

ಕಾಂಗ್ರೆಸ್ ಕಾರ್ಯಕರ್ತರು ಹೂಮಳೆ ಸುರಿಸಿ, ನಗರದಲ್ಲಿ ಅವರನ್ನು ಮೆರವಣಿಗೆ ಮಾಡಿದರು.

‘ಪಾಕಿಸ್ತಾನ ಪರ ಘೋಷಣೆ ಕೂಗಿದವರಿಗೆ ನಾಸಿರ್ ಹುಸೇನ್ ಬೆಂಬಲವಾಗಿ ನಿಂತಿದ್ದರು’ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ಮಾಡಿದರು. ಕಾಂಗ್ರೆಸ್ ಕಾರ್ಯಕರ್ತರ ಬೈಕ್ ರ‍್ಯಾಲಿ ತಡೆದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

‘ಕಾರ್ಯಕರ್ತರನ್ನು ಬಂಧಿಸುವ ವೇಳೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದೌರ್ಜನ್ಯ ನಡೆಸಿದ್ದಾರೆ’ ಎಂದು ಬಿಜೆಪಿ ಆರೋಪಿಸಿದೆ. ‘ಕಾಂಗ್ರೆಸ್ ಏಜೆಂಟರಂತೆ ಎಎಸ್‌ಪಿ ವರ್ತಿಸುತ್ತಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

‘ಬಿಜೆಪಿ ನಾಯಕರು ಸ್ತ್ರೀ ವಿರೋಧಿಗಳು’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬಿಜೆಪಿ ನಾಯಕರು ಸ್ತ್ರೀ ವಿರೋಧಿಗಳು. ಮಹಿಳೆಯರ ಬಗ್ಗೆ ಮನಬಂದಂತೆ ಮಾತನಾಡುತ್ತಾರೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿ, ಅಪಪ್ರಚಾರ ಮಾಡುತ್ತಾರೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಆರೋಪಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹವಾನಿಯಂತ್ರಿತ ವ್ಯವಸ್ಥೆಯುಳ್ಳ ಕೊಠಡಿಯಲ್ಲಿ ಕೂರುವ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರಿಗೆ ಕಷ್ಟ–ಸುಖದ ಅರಿವಿಲ್ಲ. ಗ್ಯಾರಂಟಿ ಯೋಜನೆಗಳ ಬಗ್ಗೆ ನಕಾರಾತ್ಮಕವಾಗಿ ಮಾತನಾಡುವುದನ್ನು ಅವರು ನಿಲ್ಲಿಸಲಿ’ ಎಂದರು.

‘ಸಂಜಯ ಪಾಟೀಲ ಹೇಳಿಕೆಯಿಂದ ಮಹಿಳೆಯರ ಆತ್ಮಗೌರವಕ್ಕೆ ಧಕ್ಕೆಯಾಗಿದೆ. ನಾನು ಲಿಂಗಾಯತ ಸಮಾಜಕ್ಕೆ ಸೇರಿದವಳು. ಇದು ಲಿಂಗಾಯತ ಸಮಾಜಕ್ಕೆ ಮಾಡಿದ ಅವಮಾನ. ಈ ಹೇಳಿಕೆ ಧಿಕ್ಕರಿಸುವಂತೆ ರಾಜ್ಯದ ಮಹಿಳೆಯರಿಗೆಲ್ಲ ಕರೆ ನೀಡುವೆ. ಇಡೀ ಸಮಾಜ ನನ್ನ ಜೊತೆಗಿದೆ’ ಎಂದರು.

‘ಗ್ರಾಮೀಣ ಹೆಣ್ಣುಮಕ್ಕಳು ಗ್ಯಾರಂಟಿ ಯೋಜನೆಗಳಿಂದ ದಾರಿ ತಪ್ಪಿದ್ದಾರೆ’ ಎಂಬ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಹೆಬ್ಬಾಳಕರ, ‘ಯಾವ ಊರಿನ ಹೆಣ್ಣುಮಕ್ಕಳು ದಾರಿ ತಪ್ಪಿದ್ದಾರೆ ಎಂಬುದನ್ನು ಕುಮಾರಸ್ವಾಮಿ ಸ್ಪಷ್ಟಪಡಿಸಲಿ. ಗ್ರಾಮೀಣ ಹೆಣ್ಣುಮಕ್ಕಳ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಅವರು ನಿಲ್ಲಿಸಲಿ’ ಎಂದರು.

‘ಏಕೆ ಖಂಡಿಸುವುದಿಲ್ಲ’

‘ಸಂಜಯ ಪಾಟೀಲ ಅವರು ನೀಡಿದ ಹೇಳಿಕೆಯನ್ನು ಬಿಜೆಪಿ ವರಿಷ್ಠರು ಏಕೆ ಖಂಡಿಸುವುದಿಲ್ಲ. ರಾಷ್ಟ್ರೀಯ ಮಹಿಳಾ ಆಯೋಗ ಏನು ಮಾಡುತ್ತಿದೆ’ ಎಂದು ಪ್ರಶ್ನಿಸಿದ ಶಾಸಕ ಆಸಿಫ್ ಸೇಠ್, ‘ಬೆಳಗಾವಿ ಮತ್ತು ಚಿಕ್ಕೋಡಿ ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಬಿಜೆಪಿಯವರಿಗೆ ತಕ್ಕ ಉತ್ತರ ಕೊಡುತ್ತೇವೆ’ ಎಂದರು.

ಸಚಿವೆ ಸೇರಿ 100 ಜನರ ವಿರುದ್ಧ ದೂರು

ಬೆಳಗಾವಿ: ‘100ಕ್ಕೂ ಹೆಚ್ಚು ಮಂದಿ ಆದರ್ಶ ನಗರದ ಒಂದನೇ ಅಡ್ಡ ರಸ್ತೆಯಲ್ಲಿರುವ ನನ್ನ ಮನೆಗೆ ಮುತ್ತಿಗೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿ ಬಿಜೆಪಿ ಮುಖಂಡ ಸಂಜಯ ಪಾಟೀಲ ಶಹಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

‘ಲಕ್ಷ್ಮಿ ಹೆಬ್ಬಾಳಕರ ಪ್ರಚೋದನೆ ನೀಡಿದ್ದರಿಂದ ಆಯೇಷಾ ಸನದಿ, ಸಂಜಯ ಜಾಧವ, ಜಯಶ್ರೀ ಸೂರ್ಯವಂಶಿ, ಪ್ರಭಾವತಿ ಮಾಸ್ತಮರ್ಡಿ, ಮುಸ್ತಾಕ್ ಮುಲ್ಲಾ, ಸದ್ದಾಮ್ ವೈಭವ ನಗರ, ರೋಹಿಣಿ ಬಾಬ್ಳೆ, ಶಂಕರಗೌಡ ಪಾಟೀಲ, ಸಂಗನಗೌಡ ಪಾಟೀಲ, ಭಾರತಿ ಬುಡವಿ ಮತ್ತು ಇತರೆ 100 ಜನರು ಏಪ್ರಿಲ್ 13ರಂದು ನನ್ನ ಮನೆಗೆ ಮುತ್ತಿಗೆ ಹಾಕಿದ್ದಾರೆ. ಮಾರಕಾಸ್ತ್ರಗಳಿಂದ ಮನೆಯಲ್ಲಿನ ಬೆಲೆಬಾಳುವ ವಸ್ತುಗಳನ್ನು ಒಡೆದು ಹಾಕಿದ್ದಾರೆ. ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ. ಜೀವ ಬೆದರಿಕೆ ಒಡ್ಡಿದ್ದಾರೆ. ಇವರೆಲ್ಲರ ಮೇಲೆ ಕಾನೂನು ಕ್ರಮ ಜರುಗಿಸಬೇಕು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಹೆಚ್ಚುವರಿ ಪೆಗ್’ ಎಂದರೆ ಎನರ್ಜಿ ಡ್ರಿಂಕ್’

ಬೆಳಗಾವಿ:‘ನಾನು ಮಾಡಿದ ಭಾಷಣದಲ್ಲಿ ಅವರ (ಲಕ್ಷ್ಮಿ ಹೆಬ್ಬಾಳಕರ) ಹೆಸರಿದ್ದರೆ ತೋರಿಸಿ. ಅಕ್ಕಾಬಾಯಿ ಎಂದರೆ, ಅವರೇ ಎಂದು ಏಕೆ ತಿಳಿಯುತ್ತೀರಿ? ‘ಹೆಚ್ಚುವರಿ ಪೆಗ್’ ಎಂದರೆ ಎನರ್ಜಿ ಡ್ರಿಂಕ್’ ಎಂದು ಬಿಜೆಪಿ ಮುಖಂಡ ಸಂಜಯ ಪಾಟೀಲ ಸಮರ್ಥಿಸಿಕೊಂಡರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನ್ನ ತಾಯಿ, ಪತ್ನಿ ಮತ್ತು ಮಗಳೂ ಮಹಿಳೆಯೇ. ಮಹಿಳೆಯರಿಗೆ ಹೇಗೆ ಗೌರವ ಕೊಡಬೇಕು ಎಂಬುದನ್ನು ಭಾರತೀಯ ಸಂಸ್ಕೃತಿ ಕಲಿಸಿದೆ’ ಎಂದರು.

‘ನಾನು ಲಕ್ಷ್ಮಿ ಅವರ ಹೆಸರು ತೆಗೆದುಕೊಂಡಿದ್ದರೆ ಇಲ್ಲಿಯೇ ಶಿಕ್ಷೆ ಕೊಡಿ. ಯಾರಿಗೂ ನಾನು ಅಪಮಾನಿಸಿಲ್ಲ. ತಪ್ಪು ಮಾಡಿದ್ದರೆ ಚುನಾವಣೆ ಆಯೋಗ, ಪೊಲೀಸರಿಗೆ ದೂರು ಕೊಡಿ. ಸಿಬಿಐ ತನಿಖೆ ಆಗಲಿ. ತಪ್ಪು ಸಾಬೀತಾದರೆ ಅವರು ಶಿಕ್ಷೆ ನೀಡುತ್ತಾರೆ. ಆದರೆ, ರಾತ್ರಿ ನಮ್ಮ ಮನೆ ಎದುರು ಕಾಂಗ್ರೆಸ್‌ನವರು ಪ್ರತಿಭಟನೆ ಮಾಡಿದ್ದು ಎಷ್ಟು ಸರಿ? ನನ್ನ ಮನೆ ಎದುರು ಪ್ರತಿಭಟಿಸಿದ್ದಕ್ಕೆ ಕ್ರಿಮಿನಲ್ ಪ್ರಕರಣ ದಾಖಲಿಸುವೆ’ ಎಂದರು.

‘ಪಾಟೀಲ ಸ್ಪಷ್ಟನೆ ಕೊಡುತ್ತಾರೆ’

ಬೆಳಗಾವಿ: ‘ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ಹೇಳಿಕೆ ನೀಡಿದ್ದರ ಬಗ್ಗೆ ಸಂಜಯ ಪಾಟೀಲ ಜೊತೆ ಮಾತನಾಡಿದ್ದೇನೆ. ಯಾವ ಹಿನ್ನೆಲೆಯಲ್ಲಿ ಈ ರೀತಿ ಮಾತನಾಡಿದ್ದಾರೆ ಎಂಬುದನ್ನು ಚರ್ಚಿಸಿದ್ದೇನೆ. ಈ ಬಗ್ಗೆ ಅವರೇ ಸ್ಪಷ್ಟೀಕರಣ ನೀಡುವರು’ ಎಂದು ಬೆಳಗಾವಿ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಗದೀಶ ಶೆಟ್ಟರ್ ಹೇಳಿದರು.

‘ಪ್ರಧಾನಿ ಸೇರಿ ಬಿಜೆಪಿ ನಾಯಕರ ಬಗ್ಗೆ ಕೀಳಾಗಿ ಮತ್ತು ಏಕವಚನದಲ್ಲಿ ಕಾಂಗ್ರೆಸ್‌ನವರು ಸಾಕಷ್ಟು ಸಲ ಮಾತನಾಡಿ, ನಿಂದಿಸಿದ್ದಾರೆ. ಸಂಜಯ ಪಾಟೀಲ ಅವರ ಮಾತು ಬಿಜೆಪಿ ಅಜೆಂಡಾ ಅಲ್ಲ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಡಿಕೆಶಿ ಆಪ್ತನ ಮನೆಯಲ್ಲಿ ಐ.ಟಿ ಶೋಧ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತ, ಯುವ ಕಾಂಗ್ರೆಸ್ ಮುಖಂಡ ಕನಕಪುರ ಕೆಂಪರಾಜು ಮನೆ ಸೇರಿದಂತೆ ಐದು ಸ್ಥಳಗಳ ಮೇಲೆ ಭಾನುವಾರ ದಾಳಿ ಮಾಡಿದ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಶೋಧ ನಡೆಸಿದರು.

ಕೆಂಪರಾಜು ಅವರ ವಾಜರಹಳ್ಳಿಯ ಮನೆ ಸೇರಿದಂತೆ ಐದು ಸ್ಥಳಗಳ ಮೇಲೆ ಭಾನುವಾರ ಮಧ್ಯಾಹ್ನ ದಾಳಿ ಮಾಡಿದ ಐ.ಟಿ ಅಧಿಕಾರಿಗಳು, ರಾತ್ರಿಯವರೆಗೂ ಶೋಧ ನಡೆಸಿದರು. ಚುನಾವಣೆಯಲ್ಲಿ ಮತದಾರರಿಗೆ ಆಮಿಷ ಒಡ್ಡಲು ಹಣ ಸಂಗ್ರಹಿಸಿರುವ ಶಂಕೆಯ ಮೇಲೆ ಈ ಕಾರ್ಯಾಚರಣೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಚುನಾವಣಾ ಅಕ್ರಮ ತಡೆ ಕಾರ್ಯಾಚರಣೆ ಭಾಗವಾಗಿ ಈ ಶೋಧ ನಡೆದಿದೆ. ಕೆಂಪರಾಜು ಅವರ ಮನೆಯಿಂದ ಹಲವು ದಾಖಲೆಗಳನ್ನು ವಶಕ್ಕೆ ಪಡೆದಿರುವ ಐ.ಟಿ ಅಧಿಕಾರಿಗಳು, ಅವುಗಳನ್ನು ಕೊಂಡೊಯ್ದಿದ್ದಾರೆ ಎಂದು ತಿಳಿಸಿವೆ.

ಕುಡ್ಲದಲ್ಲಿ ಮೋದಿ ರೋಡ್ ಶೋ ಮೋಡಿ

ಮಂಗಳೂರು: ಕುಡ್ಲದಲ್ಲಿ (ಮಂಗಳೂರು) ರೋಡ್ ಶೋ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಕಡಲ ತಡಿಯಲ್ಲಿ ‘ಮೋದಿ ಅಲೆ’ ಎಬ್ಬಿಸುವ ಮತ್ತು ಆ ಮೂಲಕ ‘ಹಿಂದುತ್ವದ ನೆಲ’ದಲ್ಲಿ ‘ಮತ ಫಸಲು’ ಹುಲುಸಾಗಿಸುವ ಪ್ರಯತ್ನ ಮಾಡಿದರು.

ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ 33 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿದೆ. ಕಾಂಗ್ರೆಸ್‌ನ ಗ್ಯಾರಂಟಿ ತಂತ್ರದ ಮುಂದೆ ‘ಕಮಲ ಬಾಡದಂತೆ’ ನೋಡಿಕೊಳ್ಳಲು ಹಿಂದುತ್ವದ ಅಸ್ಮಿತೆಯನ್ನು ಜಾಗೃತಗೊಳಿಸಲು ಯತ್ನಿಸಿದರು.

ಮೋದಿ ಅವರನ್ನು ಕಾಣಲೆಂದೇ ರಸ್ತೆ ಪಕ್ಕದಲ್ಲಿ ಜನರು ತಾಸುಗಟ್ಟಲೆ ಕಾದು ಕುಳಿತಿದ್ದರು. ಇಲ್ಲಿಯ ನಾರಾಯಣ ಗುರು ವೃತ್ತದಿಂದ ಪ್ರಾರಂಭವಾದ ರೋಡ್ ಶೋ ಸುಮಾರು 2 ಕಿ.ಮೀ. ವರೆಗೆ ನಡೆಯಿತು. ದಾರಿಯುದ್ದಕ್ಕೂ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳು, ಕಾರ್ಯಕರ್ತರು ಹೂಮಳೆಗರೆದರು.

ತೆರೆದ ವಾಹನದಲ್ಲಿ ನಗು ಬೀರುತ್ತಾ, ಕಮಲದ ಚಿಹ್ನೆಯನ್ನು ಹಿಡಿದು ಅಭಿಮಾನಿಗಳತ್ತ ಕೈ ಬೀಸುತ್ತಾ ಪ್ರಧಾನಿ ಸಾಗಿದರು. ಮೋದಿ ಅವರು ರೋಡ್ ಶೋ ಆರಂಭಕ್ಕೂ ಮುನ್ನ ಬ್ರಹ್ಮಶ್ರೀ ನಾರಾಯಣಗುರು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಿಲ್ಲವ ಸಮುದಾಯದ ಮುನಿಸು ಶಮನಗೊಳಿಸುವ ಪ್ರಯತ್ನ ಮಾಡಿದರು.

‘ಕಾಂಗ್ರೆಸ್‌ಗೆ ಶಿಕ್ಷೆ ಕೊಡಿ’

ಒಂದನೇ ಪುಟದಿಂದ...

‘ಕೇಂದ್ರ ಸರ್ಕಾರದ ಯೋಜನೆಗಳಿಂದ ರಾಜ್ಯದ ಜನರಿಗೆ ಹಲವು ಅನುಕೂಲಗಳಾಗಿವೆ’ ಎಂದು ಹೇಳುತ್ತಲೇ, ‘ರಾಜ್ಯದ ಕಾಂಗ್ರೆಸ್ ಸರ್ಕಾರದ ಖಜಾನೆ ಖಾಲಿಯಾಗಿದೆ. ಪಂಪ್‌ಸೆಟ್ ಸ್ಟಾರ್ಟ್ ಮಾಡಲು ಕೂಡ ರೈತರಿಗೆ ವಿದ್ಯುತ್ ಕೊಡುತ್ತಿಲ್ಲ. ಐಟಿ ಹಬ್ ಎಂದೇ ಖ್ಯಾತವಾದ ಬೆಂಗಳೂರು ನೀರಿನ ಅಭಾವದಲ್ಲಿ ನರಳುತ್ತಿದೆ. ಅಭಿವೃದ್ಧಿ ಯೋಜನೆಗಳು ಕುಂಟುತ್ತಿವೆ. ರಾಜ್ಯದ ನೂರಾರು ಕೋಟಿ ಕಪ್ಪು ಹಣವನ್ನು ಇಡೀ ದೇಶಕ್ಕೆ ಹಂಚಲಾಗುತ್ತಿದೆ’ ಎಂದು ಆರೋಪಿಸಿದರು.

‘ಈ ಚುನಾವಣೆಯು ಕೇವಲ ಐದು ವರ್ಷದ್ದಲ್ಲ. 2047ರ ಹೊತ್ತಿನ ವಿಕಸಿತ ಭಾರತದ ಭವಿಷ್ಯವನ್ನು ನಿರ್ಧರಿಸುವಂಥದ್ದು. ಅದಕ್ಕಾಗಿ ಪ್ರತಿ ಕ್ಷಣವನ್ನೂ ಮೀಸಲಿಟ್ಟಿದ್ದೇನೆ. 2047ರವರೆಗೂ ದೇಶ ಮತ್ತು ಜನರಿಗಾಗಿ 24X7 ಕೆಲಸ ಮಾಡುತ್ತೇನೆ’ ಎಂದಾಗ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ತಮ್ಮ ಪಕ್ಕದಲ್ಲಿ ಕುಳಿತಿದ್ದ ಪ್ರಧಾನಿಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರು ಹೇಳದೆಯೇ, ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

‘91ನೇ ವಯಸ್ಸಿನಲ್ಲಿ ದೇವೇಗೌಡರು ಬಿಜೆಪಿ ಜೊತೆ ಹೋಗುವುದು ಎಂತಹಾ ದುರ್ದೈವವೆಂದು ಕೆಲವರು ಹೇಳಿದ್ದಾರೆ. ತಲೆಯಲ್ಲಿ ಬುದ್ಧಿ ಇಲ್ಲದೆಯೇ ಕುಮಾರ ಸ್ವಾಮಿಯನ್ನು ಮೋದಿ ಜೊತೆ ಹೋಗೆಂದು ಹೇಳಿಲ್ಲ. ರಾಜ್ಯವನ್ನು ಸೂರೆ ಮಾಡುತ್ತಿರುವುದನ್ನು ತಪ್ಪಿಸಲು ಹೋಗೆಂದೆ’ ಎಂದು ಬಿಜೆಪಿ ಜೊತೆಗಿನ ಮೈತ್ರಿಯನ್ನು ಸಮರ್ಥಿಸಿಕೊಂಡರು.

ಈ ಸನ್ನಿವೇಶಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಮೈತ್ರಿ ಅಭ್ಯರ್ಥಿಗಳಾದ ಮೈಸೂರಿನ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಂಡ್ಯದ ಎಚ್.ಡಿ.ಕುಮಾರಸ್ವಾಮಿ, ಹಾಸನದ ಪ್ರಜ್ವಲ್ ರೇವಣ್ಣ, ಚಾಮರಾಜ ನಗರದ ಎಸ್.ಬಾಲರಾಜು ಅಲ್ಲದೆ ಬಿಜೆಪಿಯ ಸಂಸದರು, ಶಾಸಕರು, ಮಾಜಿ ಸಂಸದರು, ಶಾಸಕರು ಸೇರಿದಂತೆ ವೇದಿಕೆಯಲ್ಲಿದ್ದ ಗಣ್ಯರೆಲ್ಲರೂ ಸಾಕ್ಷಿಯಾದರು. ಸಭೆಯ ಕೊನೆಗೆ ಎಲ್ಲರೂ ಪರಸ್ಪರ ಕೈಹಿಡಿದೆತ್ತಿ ಒಗ್ಗಟ್ಟು ಪ್ರದರ್ಶಿಸಿದರು.

‘ಭಾರತಮಾತೆಗೆ ಜೈ ಎನ್ನದ ಕಾಂಗ್ರೆಸ್ ಆಯ್ಕೆ ಮಾಡ್ತೀರಾ?’

‘ಭಾರತ ಮಾತೆಗೆ ಜೈಕಾರ ಕೂಗಲು ಕೂಡ ಕಾಂಗ್ರೆಸ್ ಪಕ್ಷದಲ್ಲಿ ಅನುಮತಿ ಪಡೆಯಬೇಕಾದ ಪರಿಸ್ಥಿತಿ ಇದೆ. ಇಂಥ ಪಕ್ಷವನ್ನು ಆಯ್ಕೆ ಮಾಡುತ್ತೀರಾ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಶ್ನಿಸಿದರು.

‘ಕಾಂಗ್ರೆಸ್ ಮೊದಲು ವಂದೇ ಮಾತರಂ ಗೀತೆಗೆ ವಿರೋಧ ವ್ಯಕ್ತಪಡಿಸಿತ್ತು. ಈಗ ಅಲ್ಲಿ ಭಾರತ ಮಾತೆಗೆ ಜೈಕಾರ ಹಾಕಲೂ ಕಷ್ಟವಿದೆ. ಇದು ಕಾಂಗ್ರೆಸ್ ಪತನದ ಪರಾಕಾಷ್ಠೆ’ ಎಂದು ಬಣ್ಣಿಸಿದರು.

‘ಇಡೀ ವಿಶ್ವದಲ್ಲಿ ದೇಶದ ಘನತೆ ಹೆಚ್ಚಿದೆ. ಆದರೆ ಕಾಂಗ್ರೆಸ್ ನಾಯಕರು ವಿದೇಶಗಳಿಗೆ ಹೋದಾಗ, ಅದನ್ನು ಕುಗ್ಗಿಸುವ ಅವಕಾಶಗಳನ್ನು ಹುಡುಕುತ್ತಿರುತ್ತಾರೆ. ನಮ್ಮ ಸೇನೆ ನಡೆಸಿದ ಸರ್ಜಿಕಲ್ ಸ್ಟ್ರೈಕ್‌ಗೆ ಸಾಕ್ಷ್ಯ ಕೇಳುತ್ತಾರೆ. ರಾಜ್ಯದಲ್ಲಿ ತುಷ್ಟೀಕರಣದ ಆಟ ನಡೆಯುತ್ತಿದೆ’ ಎಂದು ದೂರಿದರು.

‘ಮೋದಿಗೆ ನಿಮ್ಮ ಆಶೀರ್ವಾದವಿರುವವರೆಗೂ ಕಾಂಗ್ರೆಸ್‌ನ ದ್ವೇಷದ ಶಕ್ತಿಗೆ ಗೆಲುವು ಸಿಗುವುದಿಲ್ಲ. ಇದು ಮೋದಿ ಗ್ಯಾರಂಟಿ. ನಿಮ್ಮ ಒಂದು ಮತ ನನ್ನ ಗ್ಯಾರಂಟಿ ಶಕ್ತಿಯನ್ನು ಹೆಚ್ಚಿಸುತ್ತದೆ’ ಎಂದರು.

ರಾಜ್ಯ ಸರ್ಕಾರ ಕೊಳ್ಳೆ ಹೊಡೆಯುತ್ತಿದೆ ಎನ್ನುತ್ತೀರಿ. ರಾಜ್ಯದಲ್ಲಿ ಬಿಜೆಪಿ ಸರ್ಕಾರಕ್ಕೆ ಶೇ 40 ಕಮಿಷನ್ ಸರ್ಕಾರ ಎಂದು ಕರೆದಿದ್ದೇ ಹೊರತು ಕಾಂಗ್ರೆಸ್‌ಗೆ ಅಲ್ಲ
ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಆ ಇಬ್ಬರಿಗೂ ನಮೋ ನಮಃ’

‘₹ 2 ಸಾವಿರ ಕೊಡುತ್ತೇವೆಂದು ಇಬ್ಬರು ಮಹಾನುಭಾವರು 136 ಸ್ಥಾನ ಗೆದ್ದರು. ಈಗ ರಾಜ್ಯ ಹೇಗೆ ನಡೆಯುತ್ತಿದೆ ಎಂಬುದು ಗೊತ್ತಿದೆ. ಆ ಇಬ್ಬರಿಗೂ ನಮೋ ನಮಃ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

‘ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಿಸಲು ಆ ಮಹನೀಯರು ರಾಜ್ಯದ ಸಂಪತ್ತನ್ನು, ಬೆಂಗಳೂರಿನ ಬಿಡಿಎ, ಪಾಲಿಕೆ, ನೀರಾವರಿ ಹಣವನ್ನು ಬಾಚಿ ಬಾಚಿ ನೀಡಿದ್ದಾರೆ’ ಎಂದು ಬಾಚಿಕೊಳ್ಳುವ ರೀತಿಯಲ್ಲಿ ಅಭಿನಯಿಸಿ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪಿಸದೇ ಹರಿಹಾಯ್ದರು.


‘ಮೋದಿಯವರು ಮೂರನೇ ಬಾರಿಗೆ ಪ್ರಧಾನಿಯಾಗಬೇಕು. ಯಡಿಯೂರಪ್ಪನವರೇ, ಇಳಿ ವಯಸ್ಸಿನಲ್ಲಿ ತುಮಕೂರು, ರಾಯಚೂರು, ವಿಜಯಪುರ ಸೇರಿದಂತೆ ಎಲ್ಲಿಗೆ ಕರೆದರೂ ಬರುತ್ತೇನೆ. ನಮ್ಮ ಜವಾಬ್ದಾರಿಯ ಕೆಲಸವನ್ನು ಮಾಡೋಣ’ ಎಂದರು.

ಶಿಕ್ಷಣ

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

NEET PHYSICS

(Contd…….)



Now C μ F and 1 μ F are in parallel which is in series with 1 μ F

$\therefore C_{eff} = \frac{(C+1)\times 1}{(C+1)+1} = \frac{C+1}{C+2}$


Given, $q = 0.75\times10^{-3}$ C $= 750\times10^{-6}$ C, $V = 10^3$ V

So, $C_{eff} = \frac{q}{v}$

$\Rightarrow \frac{C+1}{C+2} = \frac{750\times10^{-6}}{10^3} = 750\times10^{-3}$ F $= 0.75$ μF

$\Rightarrow 0.75 = \frac{C+1}{C+2} \Rightarrow \frac{3}{4} = \frac{C+1}{C+2} \Rightarrow 3C+6 = 4C+4 \Rightarrow C = 2\mu F$

7) In the circuit diagram, heat produces in R, 2R and 1.5 R are in the ratio of



(a) 4 : 2 : 3 **(b) 8 : 4 : 27**
(c) 2 : 4 : 3 **(d) 27 : 8 : 4**

Ans:- (b)

Exp ln– We have $I_1 = \frac{I\times 2R}{3R} = \frac{2I}{3}$

$\therefore H_1 = I_1^2 R = \frac{4I^2}{9}\times R$........(i)

Also, $I_2 = \frac{I\times R}{3R} = \frac{I}{3}$

$\therefore H_2 = I_2^2(2R) = \frac{I^2}{9}\times 2R$.........(ii)

and $H_3 = I^2(1.5\ R)$ .... (iii)

From Eqns. (i), (ii) and (iii),

$H_1 : H_2 : H_3 = \frac{4I^2}{9}\times R : \frac{I^2}{9}\times 2R : I^2 \times 1.5\ R$

$= \frac{4}{9} : \frac{2}{9} : 1.5 = 4:2:13.5 = 8:4:27$


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

8) The output of an OR gate is connected to both the inputs of a NAND gate. The combination will serve as...................

(a) AND gate (b) NOT gate
(c) NAND gate (d) NOR gate

Ans:- (d)

Expln- The given situation can be shown as



The output $Y' = \overline{A+B}$ is the output of NOR gate.

9) White light reflected from a soap film (RI=1.5) has a maxima at 600 nm and a minima at 450 nm with no minimum in between. Then the thickness of the film is

(a) 1 (b) 2
(c) 3 (d) 4

Ans:- (c)

Expln- We know for maxima

$2\mu t \cos r = \frac{(2n+1)\lambda_1}{2}$ ....(i)

For minima $2\mu t \cos r = (n+1)\lambda_2$ …(ii)

Given here, $\lambda_1 = 600$ nm and $\lambda_2 = 450$ nm

Dividing Eq. (i) by (ii) and substituting values of λ_1 and λ_2, we get

$\frac{(2n+1)\lambda_1}{2(n+1)\lambda_2} = 1$

$\Rightarrow 90n+90 = 60n+60$

$30n = 30 \Rightarrow n = 1$

Using one of the equation, we get

In given condition $2\mu t = (2n+1)\frac{\lambda}{2}$

$2\times1.5\times t = (2\times1+1)\frac{600}{2}$

$3t = \frac{3\times600}{2}$

$\Rightarrow t = 300\ nm = 3\times10^{-6}\ m = 3$ units

10) A small oil drop of mass 10^{-6} kg is hanging in at rest between two plates separated by 1 mm having a potential difference of 500 V. The charge on the drop is ($g = 10\ ms^{-2}$)

(a) 2×10^{-9} C (b) 2×10^{-11} C
(c) 2×10^{-6} C (d) 2×10^{-9} C

Ans:- (b)

Expn- Given, the drop rests between the two plates

$\therefore qE = mg$

(or) $q\frac{V}{r} = mg$ $\left(\because E = \frac{V}{r}\right)$

$\Rightarrow q = \frac{mgr}{V}$

Here, $m = 10^{-6}$ kg, $g = 10\ m/s^2$, $r = 1$ mm $= 10^{-3}$ m & V = 500 V

Substituting all the values, we get

$q = \frac{10^{-6}\times10\times10^{-3}}{500} = 2\times10^{-11}$ C

11) A bullet is fired from a gun at the speed of 280 m/s in the direction 30° above the horizontal. The maximum height attained by the bullet is (g = 9.8 ms–2, sin 30° = 0.5)

a) 3000 m **b) 2800 m**
c) 2000 m **d) 1000 m**

Ans:- d

$h_{max} = \frac{u^2\sin^2\theta}{2g} = \frac{280\times280}{2\times9.8}\times\frac{1}{4}$

$= 1000$ m

12) A cylindrical tube of length 0.2 m and radius R with sugar solution of concentration C produce a rotation of θ in the plane of vibration of a plane polarized light. The same sugar solution is transferred to another tube of length 0.3 m of same radius. The remaining gap is filled by distilled water. Now the optical rotation produced is *(Contd….)*

II PUC CET BIOLOGY

34) Diseases are broadly groups grouped into infectious and non-infectious diseases. In the list given below, identify the infectious diseases.

i) Cancer ii) Influenza
iii) Allergy iv) Small pox
a) i and ii b) ii and iii
c) iii and iv d) ii and iv

Ans:- d

35) The sporozoites that cause infection when a female Anopheles mosquito bites a human being are formed in -

a) Liver of human b) RBCs of mosquito
c) Salivary glands of mosquito
d) Intestine of human

Ans:- c

36) The chances of contacting bird flu from a properly cooked (above 100°C) chicken and egg are:

a) very high b) high
c) moderate d) none

Ans:- d

37) What is the function of protein GLUT-4?

a) Acts as an enzyme
b) Enables glucose transport into cells
c) Fight infectious agents
d) Functions as intercellular ground substance

Answer: (b)

Expln:- GLUT-4 is an insulin-responsive glucose transporter that is found in the adipose tissue, and brain. It is present in the cytoplasm of cells in vesicles from which it is translocated to the plasma membrane under the influence of insulin.

38) A group of animals which are related by descent and share many similarities are referred to as:

a) breed b) race
c) variety d) species

Ans:- a

39) Cell in the quiescent stage (G_0)

a) Always become cancerous
b) Show indefinite proliferation
c) Remain metabolically inactive
d) Remain metabolically active

Ans: (d)

Expln:- In G_0, some cells in the adult animals do not appear to exhibit division (e.g., heart cells) and many other cells divide only occasionally. These cells that do not divide further exist G_1 phase to enter an inactive stage called quiescent stage (G_0) of the cell cycle. Cells in this stage remain metabolically active but no longer proliferate unless called on to do so depending on the requirement of the organism.

40) Inbreeding is carried out in animal husbandry because it:

a) increases vigour b) improves the breed
c) increases heterozygosity
d) increases homozygosity

Ans:- d

41) Consider the following statements i, ii, and iii regarding criteria for the essentiality of the nutrients in plants:

i. The presence of elements is must for plants to complete their life cycle.
ii. The role of the element can be replaced by another in their life cycle.
iii. The elements must be directly involved in the metabolism of the plant.

Choose the correct statement/s:

a) i and iii b) i and ii
c) iii only d) ii and iii

Ans: (a)

Expln:- The criteria for the essentiality of an element are given below:

(a) The element must be absolutely necessary for supporting normal growth and reproduction. In the absence of the element, the plants do not complete their life cycle or set the seeds.

(b) The requirement of the element must be specific and not replaceable by another element. In other words, deficiency of any one element cannot be met by supplying some other element.

(c) The element must be directly involved in the metabolism of the plant.

42). Sonalika and Kalyan Sona are varieties of:

a) wheat b) rice
c) millet d) tobacco

Ans:- a

43) During the chemiosmotic synthesis of ATP in photosynthesis:

a) The protons accumulate in the intermembrane space of chloroplast
b) The proton gradient is not required
c) The protons accumulate in the intermembrane space of the mitochondrion
d) The protons accumulate within the lumen of the thylakoids

Ans: (c)

Expln:- During chemiosmotic synthesis, ATP synthesis is linked to the development of a proton gradient across a membrane. This time these are membranes of the thylakoid. There is one difference though, here the proton accumulation is towards the inside of the membrane, i.e., in the lumen. In respiration, protons accumulate in the intermembrane space of the mitochondria when electrons move through the ETS.



ವಿದ್ಯಾರ್ಥಿಗಳಿಗೆ ಅಗತ್ಯವಿರುವ ಜ್ಞಾನಸಂಪನ್ಮೂಲಗಳನ್ನು ಒದಗಿಸುವ ಗ್ರಂಥಾಲಯಗಳು ಸ್ವಯಂಕಲಿಕೆಯನ್ನು ಉತ್ತೇಜಿಸುತ್ತದೆ. ಗ್ರಂಥಾಲಯಗಳ ಮಹತ್ವವನ್ನು ಅರಿತು, ಅವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಪ್ರಯತ್ನಿಸೋಣ.


ಕಾಲೇಜು ಲೈಬ್ರರಿ ಎಂಬ ಆಪ್ತಮಿತ್ರ

ಆರ್.ಜಿ. ಲತ

ಕಾಲೇಜು ಗ್ರಂಥಾಲಯವು ವಿದ್ಯಾರ್ಥಿಗಳಿಗೆ ಅಮೂಲ್ಯವಾದ ಜ್ಞಾನಸಂಪನ್ಮೂಲವಾಗಿದೆ. ಅದರ ಉಪಯೋಗಗಳು ಅನನ್ಯ.

ಶೈಕ್ಷಣಿಕ ಪ್ರಯೋಜನ: ಕಾಲೇಜು ಗ್ರಂಥಾಲಯವು ನಮ್ಮ ಶೈಕ್ಷಣಿಕ ಮಿತ್ರ ಇದ್ದಂತೆ. ಅಲ್ಲಿ ಸಿಗುವ ಪುಸ್ತಕಗಳು, ನಿಯತಕಾಲಿಕೆಗಳು, ಶೈಕ್ಷಣಿಕ ಸಾಮಗ್ರಿಗಳ ಬಳಕೆಯಿಂದ ಸಮಗ್ರ ತಿಳಿವಳಿಕೆ ಸಿಗುತ್ತದೆ. ಅಧ್ಯಯನಕ್ಕೆ ಅಗತ್ಯವಿರುವ ಉತ್ಕೃಷ್ಟವಾದ ಮಾಹಿತಿಯನ್ನು ಹುಡುಕಲು ನೆರವಾಗುತ್ತದೆ. ವಿಸ್ತೃತ ಅಧ್ಯಯನಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ಗ್ರಂಥಾಲಯ ಒದಗಿಸುತ್ತದೆ. ಪಠ್ಯಕ್ರಮಕ್ಕೆ ನಿಗದಿಯಾದ ಎಲ್ಲಾ ಪುಸ್ತಕಗಳು ಲಭ್ಯ ಇಲ್ಲದಿದ್ದಾಗಲೂ ಆಕರ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ಗ್ರಂಥಾಲಯವು ಸಹಾಯ ಮಾಡುತ್ತದೆ.

ಭವಿಷ್ಯದ ಬುನಾದಿಗೆ ಅಗತ್ಯ ಸಾಮಗ್ರಿ: ಪಿ.ಯು, ಪದವಿ ಅಥವಾ ಸ್ನಾತಕೋತ್ತರ ಪದವಿ ನಂತರ ಉದ್ಯೋಗ ಗಳಿಸಲು ಬೇಕಾದ, ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತೆಗೆ ಅಗತ್ಯವಿರುವ ಸಂಪನ್ಮೂಲವನ್ನು ಕಾಲೇಜು ಗ್ರಂಥಾಲಯ ಒದಗಿಸುತ್ತದೆ. ಯುಪಿಎಸ್‌ಸಿ, ಕೆಪಿಎಸ್‌ಸಿಯಂಥ ಮಹತ್ತರ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನಲ್ಲಿ ಗ್ರಂಥಾಲಯದ ಪಾತ್ರ ಮಹತ್ವದ್ದು.



ಸೂಕ್ತ ಅಧ್ಯಯನದ ಸ್ಥಳ: ಗ್ರಂಥಾಲಯಗಳಲ್ಲಿ ನಿಶ್ಯಬ್ದ ವಾತಾವರಣ ಇರುವುದರಿಂದ ಯಾವುದೇ ಅಡೆತಡೆಗಳಿಲ್ಲದೆ ಗಂಭೀರವಾಗಿ ಓದಿನ ಮೇಲೆ ಗಮನ ಕೇಂದ್ರೀಕರಿಸಬಹುದು. ಮನೆ ಅಥವಾ ವಸತಿನಿಲಯಗಳಲ್ಲಿ ಸಿಗದಿರುವ ಪ್ರಶಾಂತ ವಾತಾವರಣ ಇಲ್ಲಿರುವುದರಿಂದ ಪರೀಕ್ಷೆ ತಯಾರಿಗೆ ಇದು ಪೂರಕ ಸ್ಥಳವಾಗಿರುತ್ತದೆ.

ವಿಮರ್ಶಾತ್ಮಕ ಚಿಂತನೆಗೆ ರಹದಾರಿ: ಗ್ರಂಥಾಲಯದಲ್ಲಿನ ಪುಸ್ತಕಗಳು ವೈವಿಧ್ಯಮಯವಾಗಿರುವುದರಿಂದ ಅವುಗಳ ಓದಿನಿಂದ ಒಂದೇ ವಿಷಯಕ್ಕೆ ಪೂರಕವಾದ ವಿವಿಧ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. ಅಲ್ಲಿನ ಪುಸ್ತಕಗಳ ಓದು ನಮ್ಮಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಮೂಡಿಸುತ್ತದೆ. ಇದು ಸ್ವತಂತ್ರ ಆಲೋಚನಾ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಸ್ವಯಂ ಕಲಿಕೆಗೆ ಸಹಾಯ ಮಾಡುತ್ತದೆ.

ಹಣಕಾಸಿನ ಉಳಿತಾಯ: ಗ್ರಂಥಾಲಯಗಳ ಸಮರ್ಪಕ ಬಳಕೆಯಿಂದ ಪಠ್ಯಪುಸ್ತಕಗಳು ಮತ್ತು ಇತರೆ ಶೈಕ್ಷಣಿಕ ಸಾಮಗ್ರಿಗಳನ್ನು ಕೊಂಡುಕೊಳ್ಳದೇ, ಅಗತ್ಯವಿರುವ ಹಣವನ್ನು ಉಳಿಸಬಹುದು. ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ಪಾಲಿಗೆ ಗ್ರಂಥಾಲಯಗಳು ಅತ್ಯಮೂಲ್ಯ ನಿಧಿಗಳಾಗಿವೆ. ಪಠ್ಯಪುಸ್ತಕಗಳು ಮತ್ತು ಇತರೆ ಅಧ್ಯಯನ ಸಾಮಗ್ರಿಗಳನ್ನು ಎರವಲು ಪಡೆದು ಓದಬಹುದು.

ಗ್ರಂಥಾಲಯ ಹೀಗೆ ಬಳಸಿ

- ನಿಯಮಿತವಾಗಿ ಗ್ರಂಥಾಲಯಕ್ಕೆ ಭೇಟಿ ನೀಡಿ ಜ್ಞಾನವನ್ನು ಅಪ್‌ಡೇಟ್ ಮಾಡಿಕೊಳ್ಳಿ.
- ಗ್ರಂಥಪಾಲಕರ ಸಹಾಯದಿಂದ ಉತ್ತಮ ಪುಸ್ತಕಗಳನ್ನು ಎರವಲು ಪಡೆದು ಓದಿ ಹಿಂದಿರುಗಿಸಿ.
- ಕಾಲೇಜು ಗ್ರಂಥಾಲಯದಲ್ಲಿ ಆಯೋಜಿಸುವ ಚರ್ಚೆ, ಸಂವಾದದಲ್ಲಿ ಭಾಗವಹಿಸಿ.
- ವಿರಾಮ ವೇಳೆಯಲ್ಲಿ ಅಲ್ಲಲ್ಲಿ ಕುಳಿತು ಸಮಯ ವ್ಯರ್ಥ ಮಾಡುವ ಬದಲಾಗಿ ಪುಸ್ತಕ ಓದೋಣ.
- ಕೋರ್ಸ್‌ಗೆ ಮೀಸಲಾದ ಪರಾಮರ್ಶನ ಗ್ರಂಥಗಳನ್ನು ಓದಿ.
- ಗ್ರಂಥಾಲಯದ ಓದುಗರ ಬಳಗವನ್ನು ಸೇರಿಕೊಳ್ಳೋಣ ಅಥವಾ ನಮ್ಮದೇ ಆದ ಓದುಗರ ಬಳಗವನ್ನು ರೂಪಿಸಿಕೊಳ್ಳೋಣ. ಆ ಮೂಲಕ ಓದಿದ ಪುಸ್ತಕಗಳ ಕುರಿತು ಚರ್ಚಿಸಿ.
- ಗ್ರಂಥಾಲಯದ ಪಾವಿತ್ರ್ಯವನ್ನು ಕಾಪಾಡೋಣ.
- ಗ್ರಂಥಾಲಯದಲ್ಲಿ ಕೇವಲ ಪುಸ್ತಕಗಳಿರುವುದಿಲ್ಲ, ಬದಲಾಗಿ ನಮ್ಮ ಭವಿಷ್ಯದ ಬೆಳಕೂ ಇದೆ. ಸರಿಯಾಗಿ ಬಳಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ.

ವಿದ್ಯಾರ್ಥಿ ವೇತನ ಕೈಪಿಡಿ

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಸ್ಕಾಲರ್‌ಶಿಪ್

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಪ್ರಸ್ತುತ 9 ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವ ಅಥವಾ ಯಾವುದೇ ಸರ್ಕಾರಿ/ಖಾಸಗಿ ಮುಕ್ತ ಶಾಲೆಗಳು ಅಥವಾ ಮುಕ್ತ ವಿಶ್ವವಿದ್ಯಾಲಯಗಳಿಂದ ಯು.ಜಿ./ಪಿ.ಜಿ. (UG/PG) ಕೋರ್ಸ್‌ಗಳನ್ನು ಮಾಡುತ್ತಿರುವ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ವಿದ್ಯಾರ್ಥಿಗಳು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹10,00,000 ಮೀರಬಾರದು.

ಆರ್ಥಿಕ ಸಹಾಯ: ₹ 40,000 ವರೆಗೆ ಸ್ಕಾಲರ್‌ಶಿಪ್

ಅರ್ಜಿ ಸಲ್ಲಿಸಲು ಕೊನೆ ದಿನ: 30-04-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/USFB1

ಯೂನಿವರ್ಸಿಟಿ ಆಫ್ ಕೆಂಟ್ ಇಂಡಿಯಾ ವುಮೆನ್ ಇನ್ ಲೀಡರ್‌ಶಿಪ್

ಯೂನಿವರ್ಸಿಟಿ ಆಫ್ ಕೆಂಟ್ ಇಂಡಿಯಾ ಮಹಿಳೆಯರಿಗೆ ನೀಡುವ ಅವಕಾಶವಾಗಿದೆ.

ಅರ್ಹತೆ: ಭಾರತ ಮೂಲದ ಮಹಿಳಾ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಗಡುವಿನೊಳಗೆ ಅರ್ಜಿ ಸಲ್ಲಿಸಿ, ಆಯ್ಕೆಯಾಗಿರಬೇಕು.

ಆರ್ಥಿಕ ಸಹಾಯ: ಒಂದು ವರ್ಷದ ಅಧ್ಯಯನಕ್ಕಾಗಿ ಬೋಧನಾ ಶುಲ್ಕ ಶೇ 50ರಷ್ಟು.

ಅರ್ಜಿ ಸಲ್ಲಿಸಲು ಕೊನೆ ದಿನ: 24-05-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url: www.b4s.in/praja/LPUK1



ಸೀತಾರಾಮ್ ಜಿಂದಾಲ್ ಫೌಂಡೇಷನ್ ಆರ್ಥಿಕ ನೆರವು

ಸೀತಾರಾಮ್ ಜಿಂದಾಲ್ ಫೌಂಡೇಷನ್ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ಗುರಿಯನ್ನು ಹೊಂದಿದೆ.

ಅರ್ಹತೆ: ಪ್ರಸ್ತುತ 11, 12ನೇ ತರಗತಿ ಐಟಿಐ (ITI), ಡಿಪ್ಲೊಮಾ, ಪದವಿಪೂರ್ವ ಅಥವಾ ಸ್ನಾತಕೋತ್ತರ ಪದವಿಗಳಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳನ್ನು ಗಳಿಸಿರಬೇಕು.

ಆರ್ಥಿಕ ಸಹಾಯ: ತಿಂಗಳಿಗೆ ₹3,200 ವರೆಗೆ


ಅರ್ಜಿ ಸಲ್ಲಿಸಲು ಕೊನೆ ದಿನ: ವರ್ಷಪೂರ್ತಿ

ಅರ್ಜಿ ಸಲ್ಲಿಸುವ ವಿಧಾನ: ಅಂಚೆ ಮೂಲಕ: ದಿ ಟ್ರಸ್ಟಿ, ಸೀತಾರಾಮ್ ಜಿಂದಾಲ್ ಫೌಂಡೇಷನ್, ಜಿಂದಾಲ್ ನಗರ, ತುಮಕೂರು ರಸ್ತೆ, ಬೆಂಗಳೂರು - 560073

ಮಾಹಿತಿಗೆ: Short Url: www.b4s.in/praja/SJS2

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

ಎಂ.ಎಸ್ಸಿ (ಫೊರೆನ್ಸಿಕ್ ಸೈನ್ಸ್) ಮಾಡಬಹುದೇ?

1. ಸರ್, ನಾನು ಬಿ.ಎ (ಕ್ರಿಮಿನಾಲಜಿ ಮತ್ತು ಫೊರೆನ್ಸಿಕ್ ಸೈನ್ಸ್) 6ನೇ ಸೆಮಿಸ್ಟರ್ ಓದುತ್ತಿದ್ದು, ನನಗೆ ಎಂ.ಎ ಮಾಡುವುದರಲ್ಲಿ ಆಸಕ್ತಿ ಇಲ್ಲ; ಮುಂದೆ, ನಾನು ಎಂಎಸ್ಸಿ ಮಾಡಲು ಅವಕಾಶವಿದೆಯೇ?

ಯಶವಂತ್ ಗೌಡ ಪಾಟೀಲ್, ಧಾರವಾಡ.

ಸಾಮಾನ್ಯವಾಗಿ ಬಿಎ (ಕ್ರಿಮಿನಾಲಜಿ ಮತ್ತು ಫೊರೆನ್ಸಿಕ್ ಸೈನ್ಸ್) ನಂತರ ಎಂಎಸ್ಸಿ (ಫೊರೆನ್ಸಿಕ್ ಸೈನ್ಸ್) ಅಥವಾ ಎಂಎಸ್ಸಿ (ಕ್ರಿಮಿನಾಲಜಿ) ಮಾಡಬಹುದು. ಆದರೆ, ಪ್ರತಿ ವಿಶ್ವವಿದ್ಯಾಲಯದ ಅರ್ಹತೆಯ ನಿಯಮಗಳು, ಪ್ರವೇಶ ಪ್ರಕ್ರಿಯೆ, ಪಠ್ಯಕ್ರಮಗಳಲ್ಲಿ ವ್ಯತ್ಯಾಸಗಳಿವೆ. ಯಾವ ವಿಶ್ವವಿದ್ಯಾಲಯದಲ್ಲಿ ಅಧ್ಯಯನವನ್ನು ಮುಂದುವರಿಸಬೇಕೆಂದು ನಿರ್ಧರಿಸಿ, ಅದರಂತೆ ಯೋಜನೆ ರೂಪಿಸಿ.

2. ಸರ್, ನಾನು ಬಿಎ ಪ್ರಥಮ ಸೆಮಿಸ್ಟರ್ ಮುಗಿಸಿದ್ದೇನೆ. ಸದ್ಯಕ್ಕೆ, ನನಗೆ ಉದ್ಯೋಗದ ಅವಶ್ಯಕತೆ ಇದೆ. ಹಾಗಾಗಿ, ಏನು ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ, ಬಿಎ ಪದವಿಗೆ ಸೇರಿದ್ದರೆ ಒಂದು ವರ್ಷದ ಅವಧಿಯ ನಂತರ ಸರ್ಟಿಫಿಕೆಟ್ ಪಡೆದು ಪೂರ್ಣಾವಧಿ ಕೆಲಸಕ್ಕೆ ಸೇರಬಹುದು. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ, ಅನುಕೂಲವಾದಾಗ ಪದವಿ ಕೋರ್ಸಿಗೆ ಮರು ಸೇರ್ಪಡೆಯಾಗುವ ಅವಕಾಶವಿರುತ್ತದೆ. ಬಿಎ ಕೋರ್ಸ್ ಮಾಡುತ್ತಾ, ಅರೆಕಾಲಿಕ ಕೆಲಸಗಳನ್ನು ಮಾಡಬಹುದು. ಮಾರ್ಕೆಟಿಂಗ್, ಹೋಟೆಲ್ಸ್, ರೆಸ್ಟೋರೆಂಟ್ಸ್, ಮಾಧ್ಯಮ, ಬರವಣಿಗೆ ಹಲವು ಉದ್ಯೋಗಾವಕಾಶಗಳಿವೆ. ಮಾರ್ಗದರ್ಶನಕ್ಕಾಗಿ ಗಮನಿಸಿ: https://youtu.be/faQz_iLCWEk

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಇತಿಹಾಸವನ್ನು ಮರೆಯುವವರು ಇತಿಹಾಸವನ್ನು ಸೃಷ್ಟಿಸಲಾರರು.

-ಬಿ.ಆರ್.ಅಂಬೇಡ್ಕರ್

ಹೆಪಟೈಟಿಸ್ ಕಾಯಿಲೆಯ ನಿಯಂತ್ರಣ ಸಾಧ್ಯತೆಯ ಜೊತೆ ಸವಾಲುಗಳೂ ಇವೆ

ಜಾಗತಿಕವಾಗಿ ಯಕೃತ್ತಿನ ವೈರಾಣು ಸೋಂಕು (ವೈರಲ್ ಹೆಪಟೈಟಿಸ್) ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) 'ಹೆಪಟೈಟಿಸ್ 2024' ವರದಿಯು ಕಳವಳ ವ್ಯಕ್ತಪಡಿಸಿದೆ. ಭಾರತದಂತಹ ದೇಶಗಳಲ್ಲಿ ಈ ಕಾಯಿಲೆಯು ತಂದಿಡಬಹುದಾದ ಸಮಸ್ಯೆಗಳ ಬಗ್ಗೆಯೂ ವರದಿಯು ಕಳವಳ ವ್ಯಕ್ತಪಡಿಸಿದೆ. ಈ ಕಾಯಿಲೆಯಿಂದ ಜಾಗತಿಕವಾಗಿ ಸಾವನ್ನಪ್ಪುವವರ ಸಂಖ್ಯೆ ಪ್ರತಿವರ್ಷ 13 ಲಕ್ಷ. ಸೋಂಕಿನ ಮೂಲಕ ಹರಡಿ, ಮನುಷ್ಯನ ಸಾವಿಗೆ ಕಾರಣವಾಗುವ ಕಾಯಿಲೆಗಳ ಪಟ್ಟಿಯಲ್ಲಿ ಇದು ಎರಡನೆಯ ಸ್ಥಾನದಲ್ಲಿದೆ. ಭಾರತದಲ್ಲಿ ಹೆಪಟೈಟಿಸ್ ಬಿ ರೋಗಿಗಳ ಸಂಖ್ಯೆ ಸರಿಸುಮಾರು ಮೂರು ಕೋಟಿಯಷ್ಟಿದೆ. ಹೆಪಟೈಟಿಸ್ ಸಿ ಕಾಯಿಲೆಗೆ ತುತ್ತಾದವರ ಸಂಖ್ಯೆ 50 ಲಕ್ಷಕ್ಕೂ ಹೆಚ್ಚಿದೆ. ಅಂದರೆ, ಹೆಪಟೈಟಿಸ್‌ನ ಹೊರೆಯನ್ನು ಹೊತ್ತಿರುವ ದೇಶಗಳ ಸಾಲಿನಲ್ಲಿ ಭಾರತವು ಎರಡನೆಯ ಸ್ಥಾನದಲ್ಲಿದೆ. ಕಳೆದ ವರ್ಷ ಭಾರತದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಹೆಪಟೈಟಿಸ್‌ನಿಂದಾಗಿ ಮೃತಪಟ್ಟಿದ್ದಾರೆ. ಹೆಪಟೈಟಿಸ್ ಪತ್ತೆ ಹಾಗೂ ಅದಕ್ಕೆ ಚಿಕಿತ್ಸೆ ನೀಡುವ ವಿಚಾರದಲ್ಲಿ ಭಾರತದಲ್ಲಿ ಹಲವು ಸವಾಲುಗಳಿವೆ. ಈ ರೋಗದ ಪತ್ತೆ ಪ್ರಮಾಣವು ಬಹಳ ಕಡಿಮೆ ಇರುವುದೇ ಬಹುದೊಡ್ಡ ಸಮಸ್ಯೆ. ಹೆಪಟೈಟಿಸ್ ಸಿ ಪ್ರಕರಣಗಳ ಪೈಕಿ ಶೇಕಡ 30ಕ್ಕಿಂತ ಕಡಿಮೆ ಪ್ರಕರಣಗಳು ಸರಿಯಾದ ಸಮಯದಲ್ಲಿ ಪತ್ತೆಯಾಗುತ್ತಿವೆ. ಹೆಪಟೈಟಿಸ್ ಬಿ ವಿಚಾರದಲ್ಲಿ ಈ ಪ್ರಮಾಣವು ಶೇ 3ಕ್ಕಿಂತ ಕಡಿಮೆ. ರೋಗ ಪತ್ತೆ ಹಾಗೂ ಚಿಕಿತ್ಸೆ ಇಲ್ಲದಿದ್ದರೆ ಈ ಕಾಯಿಲೆಯು ಬಹುತೇಕರ ಪಾಲಿಗೆ ಮಾರಣಾಂತಿಕವಾಗಿ ಪರಿಣಮಿಸುತ್ತದೆ.



ಈ ರೋಗವನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡುವ ವ್ಯವಸ್ಥೆಯು ಸುಧಾರಿಸಬೇಕಿದೆ

ಹೆಪಟೈಟಿಸ್ ಎಂಬುದು ವೈರಾಣು ಸೋಂಕು. ಇದಕ್ಕೆ ತುತ್ತಾದ ಹಲವರು ಚೇತರಿಸಿಕೊಳ್ಳುತ್ತಾರೆ ಎಂಬುದು ನಿಜ. ಆದರೆ ಕೆಲವರಲ್ಲಿ ಇದು ಯಕೃತ್ತಿನ ವೈಫಲ್ಯಕ್ಕೆ ಕಾರಣವಾಗಬಹುದು ಅಥವಾ ಕ್ಯಾನ್ಸರ್‌ಗೆ ಕೂಡ ಇದು ಕಾರಣವಾಗಬಹುದು. ಹೆಪಟೈಟಿಸ್‌ನಿಂದ ಹೆಚ್ಚಿನ ತೊಂದರೆ ಆಗುವ ಸಾಧ್ಯತೆ ಇರುವುದು ಮಕ್ಕಳಲ್ಲಿ. ಈ ಕಾಯಿಲೆಗೆ ಕಾರಣವಾಗುವ ಸೋಂಕು ಅರಿವಿಗೆ ಬಾರದಂತೆ ದೇಹದಲ್ಲಿ ಬಹುಕಾಲ ಉಳಿದುಕೊಳ್ಳಬಹುದು. ಅಲ್ಲದೆ, ಸೋಂಕು ಇರುವ ವ್ಯಕ್ತಿಯ ಸಂಪರ್ಕಕ್ಕೆ ಬರುವ ಇತರರಿಗೆ ಹರಡುವ ಸಾಧ್ಯತೆಯೂ ಇರುತ್ತದೆ. ರಾಷ್ಟ್ರೀಯ ವೈರಾಣು ಹೆಪಟೈಟಿಸ್ ನಿಯಂತ್ರಣ ಯೋಜನೆಯ ಅಡಿಯಲ್ಲಿ ದೇಶದಲ್ಲಿ ರೋಗದ ಪತ್ತೆ ಸೇವೆ ಹಾಗೂ ರೋಗಕ್ಕೆ ಚಿಕಿತ್ಸೆ ಉಚಿತವಾಗಿ ಲಭ್ಯವಿವೆ. ರಕ್ತದಾನದ ಸಂದರ್ಭದಲ್ಲಿ ಈ ಕಾಯಿಲೆ ಹರಡುವ ಸಾಧ್ಯತೆಯನ್ನು ಕನಿಷ್ಠ ಮಟ್ಟಕ್ಕೆ ತರಲಾಗಿದೆ. ಆದರೆ ಜನನದ ಸಮಯದಲ್ಲಿ ಇದು ತಾಯಿಯಿಂದ ಮಗುವಿಗೆ ಬರುವ ಸಾಧ್ಯತೆ ಹೆಚ್ಚು. ಈ ಕಾಯಿಲೆಯನ್ನು ತಡೆಯುವಲ್ಲಿ ಲಸಿಕೆಯು ಪರಿಣಾಮಕಾರಿ ಆಗಿದ್ದರೂ ಬಹುತೇಕ ಶಿಶುಗಳಿಗೆ ಇದನ್ನು ನೀಡುತ್ತಿಲ್ಲ. ಏಕೆಂದರೆ ದೇಶದ ಹಲವು ಕಡೆಗಳಲ್ಲಿ ಆಸ್ಪತ್ರೆಗಳಲ್ಲಿ ಆಗುವ ಜನನ ಪ್ರಮಾಣವು ಶೇಕಡ 50ಕ್ಕಿಂತ ಕಡಿಮೆ. ನವಜಾತ ಶಿಶುಗಳಿಗೆ ಈ ಲಸಿಕೆ ಲಭ್ಯವಾಗುವಂತೆ ಮಾಡಬೇಕು. ಹಾಗೆಯೇ, ಲಸಿಕೆ ಪಡೆಯದ ವಯಸ್ಕರು ಕೂಡ ಅದನ್ನು ಪಡೆದುಕೊಳ್ಳಬೇಕು. ಹೆಪಟೈಟಿಸ್ ಸಿ ಕಾಯಿಲೆಗೆ ಚಿಕಿತ್ಸೆ ಕಷ್ಟವಲ್ಲ ಎಂದು ವೈದ್ಯಲೋಕ ಹೇಳುತ್ತದೆ. ಅಲ್ಲದೆ, ಇದು ದೀರ್ಘಕಾಲೀನ ಸಮಸ್ಯೆಯನ್ನು ಸೃಷ್ಟಿಸುವುದಿಲ್ಲ. ಈ ಎರಡೂ ವಿಧಗಳ ಕಾಯಿಲೆಗೆ ಚಿಕಿತ್ಸಾ ವೆಚ್ಚವು ದುಬಾರಿ ಅಲ್ಲದಿದ್ದರೂ, ರೋಗವನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡುವ ವ್ಯವಸ್ಥೆಯು ಸುಧಾರಿಸಬೇಕಿದೆ. ಆಗ ರೋಗದ ನಿಯಂತ್ರಣ ಸಾಧ್ಯವಾಗುತ್ತದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಇನ್ನಷ್ಟು ಚುರುಕಿನಿಂದ ಕೆಲಸ ಮಾಡುವ ಅಗತ್ಯವೂ ಇದೆ.

2030ಕ್ಕೆ ಮೊದಲು ಹೆಪಟೈಟಿಸ್ ಕಾಯಿಲೆಯನ್ನು ನಿರ್ಮೂಲನಗೊಳಿಸುವ ಗುರಿಯನ್ನು ಭಾರತ ಹೊಂದಿದೆ. ಇದೇ ಅವಧಿಯಲ್ಲಿ ವಿಶ್ವದ ಇತರೆಡೆಗಳಿಂದಲೂ ಈ ಕಾಯಿಲೆಯ ನಿರ್ಮೂಲನೆ ಆಗಬೇಕು ಎಂಬ ಗುರಿಯನ್ನು ಡಬ್ಲ್ಯುಎಚ್‌ಒ ನಿಗದಿ ಮಾಡಿದೆ. ಈ ಗುರಿಯನ್ನು ತಲುಪಲು ಸಾಧ್ಯವಿದೆ ಎಂದು ಡಬ್ಲ್ಯುಎಚ್‌ಒ ಭಾವಿಸಿದೆ. ಆದರೆ ಇಲ್ಲಿ ಸವಾಲುಗಳೂ ಇವೆ. ಏಷ್ಯಾದಲ್ಲಿ ಭಾರತ ಮತ್ತು ಚೀನಾ ಸೇರಿದಂತೆ ಕೆಲವು ದೇಶಗಳಲ್ಲಿ, ಆಫ್ರಿಕಾದ ಹಲವು ದೇಶಗಳಲ್ಲಿ ಈ ಕಾಯಿಲೆಯ ಪತ್ತೆ, ಚಿಕಿತ್ಸೆಗೆ 2025ರೊಳಗೆ ಎಲ್ಲರಿಗೂ ಸೌಲಭ್ಯಗಳು ಸಿಗುವಂತೆ ಮಾಡಿದರೆ, 2030ರ ಗುರಿಯನ್ನು ತಲುಪುವತ್ತ ಬಹುದೊಡ್ಡ ಹೆಜ್ಜೆ ಇರಿಸಿದಂತೆ ಆಗುತ್ತದೆ.

ದಿನದ ಟ್ವೀಟ್

ವೃತ್ತಿ ಮತ್ತು ಬದುಕು



ದುಡಿಯುವ ಮಹಿಳೆಯರು ತಮ್ಮ ತಲೆ ಮತ್ತು ಹೃದಯದಲ್ಲಿ, ಟಪ್ಪರ್‌ವೇರ್‌ನಂತೆ ಗಾಳಿಯಾಡದ ಕಂಪಾರ್ಟ್‌ಮೆಂಟುಗಳನ್ನು ಹೊಂದಿರಬೇಕು, ಹಾಗಾದಾಗ ವೃತ್ತಿ ಮತ್ತು ಬದುಕು ಒಂದರೊಳಗೊಂದು ಸೇರಿಕೊಳ್ಳುವುದಿಲ್ಲ ಎಂಬ ನಿರೀಕ್ಷೆ ಇರುತ್ತದೆ. ಆದರೆ ಕ್ಷಮಿಸಿ, ಹಾಗಾಗುವುದಿಲ್ಲ! ನಾವು ಟಿಫಿನ್ ಸೆಂಟರ್‌ನಲ್ಲಿನ ಟ್ರೇಗಳಂತೆ. ನಮ್ಮ ಇಡ್ಲಿ ಮತ್ತು ಸಾಂಬಾರ್ ಸಾಮಾನ್ಯವಾಗಿ ಮಿಕ್ಸ್ ಆಗಿಬಿಡುತ್ತವೆ. ಹಾಗಾಗಿ ರುಚಿ ಹೆಚ್ಚು! #WorkLifeBalance

ಪಮೇಲಾ ಸತ್ಪತಿ, ಐಎಎಸ್ ಅಧಿಕಾರಿ

ಕಿಡಿನುಡಿ



ಅತ್ಯಂತ ಸಕಾಲಿಕವಾದ ಎಚ್ಚರಿಕೆ. ಸಂಸ್ಕರಿತ ಆಹಾರೋದ್ಯಮವು ಮಾನವನ ಆರೋಗ್ಯದೊಂದಿಗೆ ಆಟವಾಡುವುದಕ್ಕೆ ಬಿಡಲಾಗದು. ಸೂಪರ್ ಮಾರ್ಕೆಟ್‌ಗಳ ಕಪಾಟುಗಳಲ್ಲಿನ ಶೇ 89ರಷ್ಟು ಆಹಾರ ಉತ್ಪನ್ನಗಳು ಅನಾರೋಗ್ಯಕರ ಎಂಬುದನ್ನು ಇತ್ತೀಚಿನ ಜಾಗತಿಕ ಅಧ್ಯಯನವೊಂದು ಪತ್ತೆ ಮಾಡಿದೆ.

ದೇವಿಂದರ್ ಶರ್ಮಾ, ಲೇಖಕ

25 ವರ್ಷಗಳ ಹಿಂದೆ

ಗುರುವಾರ, 15-4-1999

• ಬಿಕ್ಕಟ್ಟಿನಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇಂದೇ ವಿಶ್ವಾಸಮತ ಯಾಚನೆ

ನವದೆಹಲಿ, ಏ. 14– ದೆಹಲಿಯಲ್ಲಿ ಇಂದು ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಗಳಿಂದಾಗಿ 13 ತಿಂಗಳ ಬಿಜೆಪಿ ನೇತೃತ್ವದ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಪತನದ ಅಂಚಿಗೆ ಬಂದು ನಿಂತಿದೆ. ನಾಳೆ ಬೆಳಿಗ್ಗೆ 11 ಗಂಟೆಗೆ ಲೋಕಸಭೆಯಲ್ಲಿ ಸರ್ಕಾರ ವಿಶ್ವಾಸಮತ ನಿಲುವಳಿ ಮಂಡಿಸುವುದಾಗಿ ಸಂಸದೀಯ ವ್ಯವಹಾರಗಳ ಸಚಿವ ಪಿ.ಆರ್. ಕುಮಾರಮಂಗಳಂ ಮಧ್ಯರಾತ್ರಿ ಪ್ರಕಟಿಸಿದ್ದಾರೆ.

ಇಂದು ಬೆಳಿಗ್ಗೆ ಎಐಎಡಿಎಂಕೆ ನಾಯಕಿ ಜಯಲಲಿತಾ ಅವರು, ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರನ್ನು ಭೇಟಿಯಾಗಿ ಸರ್ಕಾರಕ್ಕೆ ನೀಡಿರುವ ತಮ್ಮ ಪಕ್ಷದ ಬೆಂಬಲವನ್ನು ವಾಪಸು ಪಡೆದಿರುವುದನ್ನು ಅಧಿಕೃತವಾಗಿ ತಿಳಿಸಿದರು. ಇದರೊಂದಿಗೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ಬಹುಮತ ಕುಸಿದು, ರಾಜಕೀಯ ಅಸ್ಥಿರತೆ ತಲೆದೋರಿತು. ಸಂಜೆಯವರೆಗೆ ರಾಜಧಾನಿಯಲ್ಲಿ ರಾಜಕೀಯ ಕೋಲಾಹಲ, ಪ್ರತಿಪಕ್ಷಗಳು ಗುಂಪುಗೂಡಿ ರಾಷ್ಟ್ರಪತಿಗಳ ಬಳಿ ತೆರಳಿ, ಪ್ರಸ್ತುತ ಸರ್ಕಾರ ಬಹುಮತ ಕಳೆದು ಕೊಂಡಿರುವುದನ್ನು ಒತ್ತಿಹೇಳಿ, ವಿಶ್ವಾಸಮತ ಯಾಚಿಸಲು ಸೂಚಿಸುವಂತೆ ಒತ್ತಾಯಿಸಿದ್ದವು. ಲೋಕಸಭೆಯಲ್ಲಿ ವಿಶ್ವಾಸಮತ ಯಾಚಿಸುವಂತೆ ವಾಜಪೇಯಿಯವರಿಗೆ ರಾಷ್ಟ್ರಪತಿಯವರು ರಾತ್ರಿ ಸೂಚಿಸಿದರು.

• ಸಮ್ಮಿಶ್ರ ಸರ್ಕಾರ ರಚನೆಗೆ ಕಾಂಗ್ರೆಸ್ ಒಲವು

ನವದೆಹಲಿ, ಏ. 14– ಎಐಎಡಿಎಂಕೆಯು ತನ್ನ ಬೆಂಬಲ ಹಿಂತೆಗೆದುಕೊಂಡಿರುವುದರಿಂದ ಬಿಜೆಪಿ ನೇತೃತ್ವದ ಸರ್ಕಾರವು ಬಹುಮತ ಕಳೆದುಕೊಂಡಿದ್ದು, ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿರುವ ಕಾಂಗ್ರೆಸ್ ಪಕ್ಷವು, ಸಮ್ಮಿಶ್ರ ಸರ್ಕಾರ ರಚನೆಗೆ ಒಲವು ತೋರಿದೆ.

ಪ್ರಸ್ತುತ ರಾಜಕೀಯ ಬಿಕ್ಕಟ್ಟಿನ ಬಗೆಗೆ ಪಕ್ಷದ ಪರವಾಗಿ ಮಾತನಾಡಲು ವಕ್ತಾರರಾಗಿ ನೇಮಕಗೊಂಡಿರುವ ಅರ್ಜುನ್ ಸಿಂಗ್, ರಾಷ್ಟ್ರವನ್ನು ಕೋಮುವಾದಿ ಮತ್ತು ಭ್ರಷ್ಟ ಸರ್ಕಾರದಿಂದ ಮುಕ್ತಗೊಳಿಸಬೇಕಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 15-4-1974

• ನೈಸರ್ಗಿಕ ಗೊಬ್ಬರದ ಬಳಕೆ ಅಗತ್ಯ ರೈತರಿಗೆ ಮನವರಿಕೆ ಮಾಡಿಕೊಡಲು ಕರೆ

ಬೆಂಗಳೂರು, ಏ. 14– ರಾಸಾಯನಿಕ ಗೊಬ್ಬರದ ಕೊರತೆ ಇರುವಾಗ, ಪರ್ಯಾಯವಾಗಿ ಅಷ್ಟೇ ಉಪಯುಕ್ತವಾಗಿರುವ ನೈಸರ್ಗಿಕ ಗೊಬ್ಬರದ ಬಳಕೆಯ ಅಗತ್ಯವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಬ್ಲಾಕ್ ಅಭಿವೃದ್ಧಿ ಅಧಿಕಾರಿಗಳು ಮನವರಿಕೆ ಮಾಡಿಕೊಡಬೇಕೆಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ಹೇಳಿದರು.

ರಾಜ್ಯ ಸಮುದಾಯ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧಿಕಾರಿಗಳ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಮುಖ್ಯಮಂತ್ರಿಗಳು, ಹಸಿರುಗೊಬ್ಬರ, ಗುಂಡಿಗೊಬ್ಬರ ಮತ್ತು ಕೆರೆಯ ಗೋಡುಮಣ್ಣು ಮುಂತಾದ ನೈಸರ್ಗಿಕ ಗೊಬ್ಬರವನ್ನು ಮತ್ತೆ ಜನಪ್ರಿಯಗೊಳಿಸಬೇಕಾದ ಕಾಲ ಸನ್ನಿಹಿತ ಆಗಿದೆ ಎಂದರು.

• 40 ಲಕ್ಷ ಜನರಿಂದ ಕುಂಭಮೇಳ ಸ್ನಾನ

ಹರಿದ್ವಾರ, ಏ. 14– ದೇಶದಾದ್ಯಂತ ಹಲವು ಊರುಗಳಿಂದ ಆಗಮಿಸಿದ್ದ ಸುಮಾರು 40 ಲಕ್ಷ ಜನ ಇಂದು ಕುಂಭಮೇಳದ ಸಂದರ್ಭದಲ್ಲಿ ಪವಿತ್ರ ಗಂಗಾಸ್ನಾನ ಮಾಡಿದರು. ಹರಕಿ ಪೌರೀ ಸ್ನಾನಘಟ್ಟವೊಂದರಲ್ಲೇ 20 ಲಕ್ಷ ಜನ ಮುಳುಗಿ ಎದ್ದರು.

ಹನ್ನೆರಡು ವರ್ಷಗಳಿಗೊಮ್ಮೆ ಆಗುವ ಕುಂಭಮೇಳವು ಸರತಿಯಂತೆ ಹರಿದ್ವಾರ, ಅಲಹಾಬಾದ್, ಉಜ್ಜಯಿನಿ ಮತ್ತು ನಾಸಿಕದಲ್ಲಿ ನಡೆಯುತ್ತದೆ.

'ಶೂನ್ಯ ಕಾರ್ಬನ್' ಉತ್ಸರ್ಜನೆಯ ಆಶ್ವಾಸನೆಯು ಎರ್ಲಡ್ಡುಗಳಿಗೆ ತೊಡಕಾಗದಂತೆ ಎಚ್ಚರ ವಹಿಸಬೇಕಿದೆ

ಅಭಿವೃದ್ಧಿ– ಪರಿಸರಕ್ಕೆ ಸಮನ್ವಯ ಸೂತ್ರ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಸಮಬಲದ ಇಬ್ಬರು ಸ್ಪರ್ಧಿಗಳ ನಡುವಿನ ಸೆಣಸಾಟ ಕುತೂಹಲಕಾರಿಯಷ್ಟೇ ಅಲ್ಲ ಆಕರ್ಷಣೀಯವೂ ಹೌದು. ಆದರೆ ಒಂದೆಡೆ ಪ್ರಬಲ, ಪ್ರತಿಷ್ಠಿತ, ಶ್ರೀಮಂತ ಔದ್ಯಮಿಕ ಸಂಸ್ಥೆಗಳು, ಇನ್ನೊಂದೆಡೆಯಲ್ಲಿ, ಅಳಿವಿನ ಅಂಚಿನ, ವಿಷಮ ಪರಿಸ್ಥಿತಿಯಲ್ಲಿರುವ ಎರ್ಲಡ್ಡು ಹಕ್ಕಿ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಎದುರಾದಾಗ, ಈ ಎರಡರ ನಡುವೆ ನಡೆಯುವ ಸೆಣಸಾಟ ಕಳವಳಕಾರಿ ಆಗುತ್ತದೆ. ಇಂಥದೊಂದು ಹೋರಾಟವು 2019ರಿಂದ ನಡೆಯುತ್ತಿದ್ದು, ಈ ಹಕ್ಕಿಯ ಹಿಂದೆ ಭದ್ರವಾಗಿ ನಿಂತಿರುವ ಸುಪ್ರೀಂ ಕೋರ್ಟ್, 2021ರ ಏಪ್ರಿಲ್‌ನಲ್ಲಿ ಹೊರಡಿಸಿದ್ದ ತನ್ನ ಆಜ್ಞೆಯನ್ನು ಪರಿಷ್ಕರಿಸಿ ಇತ್ತೀಚೆಗೆ ಹೊಸ ನಿರ್ದೇಶನಗಳನ್ನು ನೀಡಿದೆ.

ನವೀಕರಿಸಬಹುದಾದ ಮೂಲಗಳಿಂದ ಶಕ್ತಿಯ ಉತ್ಪಾದನೆಗೆ ನಮ್ಮ ದೇಶದಲ್ಲಿ ಇಂದು ಅತಿ ಹೆಚ್ಚಿನ ಆದ್ಯತೆಯಿದೆ. ಸದ್ಯ ದೇಶದ ಒಟ್ಟು ವಿದ್ಯುತ್ ಬೇಡಿಕೆಯ ಶೇಕಡ 38ರಷ್ಟು ನವೀಕರಿಸಬಹುದಾದ ಮೂಲಗಳಿಂದ ಬರುತ್ತಿದ್ದು, 2030ರ ವೇಳೆಗೆ ಇದನ್ನು ಶೇ 50ಕ್ಕೆ ಏರಿಸುವ ಗುರಿಯಿದೆ. ಹೀಗಾಗಿ, ಸೌರ ಮತ್ತು ವಾಯು ವಿದ್ಯುತ್ ಸ್ಥಾವರಗಳ ಸ್ಥಾಪನೆಯ ಕೆಲಸ ದೇಶದ ವಿವಿಧ ಭಾಗಗಳಲ್ಲಿ ಭರದಿಂದ ಸಾಗಿದೆ.

ಅಡೆತಡೆಗಳಿಲ್ಲದ ವಿಶಾಲ ಬಯಲು ಭೂಮಿ, ಪ್ರಖರ ಬಿಸಿಲು, ತೀವ್ರ ಗಾಳಿಯಂತಹವು ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳನ್ನು ಸೌರ ಮತ್ತು ವಾಯುವಿದ್ಯುತ್ ಉತ್ಪಾದನೆಗೆ ಮಾದರಿ ರಾಜ್ಯಗಳನ್ನಾಗಿ ಮಾಡಿವೆ. ನಮ್ಮ ದೇಶದಲ್ಲಿ ಸೌರ ಮತ್ತು ವಾಯುವಿದ್ಯುತ್ ಸ್ಥಾವರಗಳ ಉತ್ಪಾದನಾ ಸಾಮರ್ಥ್ಯದ ಶೇ 24ರಷ್ಟು ಈ ರಾಜ್ಯಗಳಿಂದ ಬರುತ್ತದೆ. ಸೌರವಿದ್ಯುತ್ ಪಾರ್ಕ್‌ಗಳು ಮತ್ತು ವಾಯುವಿದ್ಯುತ್ ಫಾರಂಗಳಲ್ಲಿ ಉತ್ಪಾದನೆ ಆಗುವ ವಿದ್ಯುತ್ತನ್ನು ಸಾಗಿಸಲು ಅಧಿಕ ವೋಲ್ಟೇಜ್ ಪ್ರಸರಣ ತಂತಿಗಳು, ಬೃಹದಾಕಾರದ ಸ್ತಂಭಗಳು, ಗೋಪುರಗಳನ್ನು ವ್ಯಾಪಕವಾಗಿ ಸ್ಥಾಪಿಸಲಾಗುತ್ತಿದೆ. ರಾಜಸ್ಥಾನದ ಜೈಸಲ್ಮೇರ್ ಮತ್ತು ಬಾರ್ಮೇಡ್ ಜಿಲ್ಲೆಗಳಲ್ಲಿ ಸಮರೋಪಾದಿಯಲ್ಲಿ ನಡೆಯುತ್ತಿರುವ ಈ ಚಟುವಟಿಕೆಗಳೇ ಅಳಿವಿನ ಅಂಚಿನಲ್ಲಿರುವ ಎರ್ಲಡ್ಡು ಹಕ್ಕಿಗಳಿಗೆ ಮಾರಕವಾಗುತ್ತಿವೆ.

ಒಂದು ಕಾಲದಲ್ಲಿ ಕರ್ನಾಟಕದ ಕೊಪ್ಪಳ, ರಾಯಚೂರು, ರಾಣೆಬೆನ್ನೂರಿನಲ್ಲಿ ಕಂಡುಬರುತ್ತಿದ್ದ ಈ ಹಕ್ಕಿ ಈಗ ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಿಗೆ ಮಾತ್ರ ಸೀಮಿತಗೊಂಡಿದೆ. ಕರ್ನಾಟಕದಲ್ಲಿ ಬಹಳ ಅಪರೂಪ. 2018ರಲ್ಲಿ ಈ ಹಕ್ಕಿಗಳ ಆವಾಸ ಪ್ರದೇಶದಲ್ಲಿ ನಡೆದ ಗಣತಿಯಂತೆ, ನಮ್ಮ ದೇಶದಲ್ಲಿದ್ದ ಎರ್ಲಡ್ಡುಗಳ ಸಂಖ್ಯೆ ಸುಮಾರು 150. ಇದರಲ್ಲಿ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ 122 ಹಕ್ಕಿಗಳನ್ನು ದಾಖಲಿಸಲಾಗಿದ್ದು, ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ತಲಾ 10 ಹಕ್ಕಿಗಳಿರಬಹುದೆಂಬ ಅಂದಾಜಿತ್ತು. 2022ರ ಅಂತ್ಯದಲ್ಲಿ ಈ ಹಕ್ಕಿಗಳ ಸಂಖ್ಯೆ 100ಕ್ಕಿಂತ ಹೆಚ್ಚು ಇರಲಾರದೆಂಬುದು ವನ್ಯಜೀವಿ ತಜ್ಞರ ಊಹೆಯಾಗಿತ್ತು.

ಎರ್ಲಡ್ಡು, ಕಿರಿದಾದ ಮುನ್ನೋಟ (ಫ್ರಾಂಟಲ್ ವಿಷನ್) ಮತ್ತು ಅಗಲವಾದ ಪಾರ್ಶ್ವನೋಟ (ಸೈಡ್‌ವೇಸ್ ವಿಷನ್) ಇರುವ ಹಕ್ಕಿ. ಅಂದರೆ, ಎರಡೂ ಪಕ್ಕಗಳಿಗೆ ಹೋಲಿಸಿದರೆ ಮುಂಭಾಗದ ದೃಷ್ಟಿ ಸ್ವಲ್ಪ ದುರ್ಬಲ. ಹೀಗಾಗಿ, ಈ ಹಕ್ಕಿಗಳು ಹಾರಾಡುವಾಗ ಬಹಳಷ್ಟು ಸಮೀಪ ಬರುವವರೆಗೂ ವಿದ್ಯುತ್ ತಂತಿಗಳು ಕಾಣಿಸುವುದಿಲ್ಲ. ಎರ್ಲಡ್ಡು 15ರಿಂದ 18 ಕಿಲೊಗಳಷ್ಟು ಭಾರವಾಗಿರುವುದರಿಂದ, ಅನಿರೀಕ್ಷಿತವಾಗಿ ತಂತಿಗಳು ಎದುರಾದಾಗ ಬಾಗಿ, ಬಳುಕಿ ತಂತಿಯನ್ನು ತಪ್ಪಿಸಿ ಹಾರುವುದು ಸಾಧ್ಯವಿಲ್ಲ. ಆದ್ದರಿಂದ ತಂತಿಗಳಿಗೆ ಡಿಕ್ಕಿ ಹೊಡೆದು, ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ, ಗಾಯಗೊಂಡು ಸಾಯುವ ಪ್ರಕರಣಗಳು ಹೆಚ್ಚುತ್ತಾ ಬಂದವು.

ಈ ಹಕ್ಕಿಗಳು ಸಂಪೂರ್ಣವಾಗಿ ಅಳಿದೇಹೋಗುವ ಸಾಧ್ಯತೆ ಸ್ಪಷ್ಟವಾಗಿ ಕಂಡುಬಂದಿದ್ದರಿಂದ ಸ್ಥಳೀಯ ಬೈಷ್ಣೋಯಿ ಸಮುದಾಯ, ವನ್ಯಜೀವಿ ಸಂಘಟನೆಗಳು ಈ ಅಪರೂಪದ ಹಕ್ಕಿಯನ್ನು ಉಳಿಸುವ ಪ್ರಯತ್ನವಾಗಿ ಸುಪ್ರೀಂ ಕೋರ್ಟ್‌ಗೆ 2019ರಲ್ಲಿ ಅರ್ಜಿ ಸಲ್ಲಿಸಿದವು. ನ್ಯಾಯಾಲಯವು 2021ರ ಏಪ್ರಿಲ್‌ನಲ್ಲಿ ತೀರ್ಪನ್ನು ನೀಡಿ, ರಾಜಸ್ಥಾನ ಮತ್ತು ಗುಜರಾತ್‌ನ ಒಟ್ಟು 99,000 ಚದರ ಕಿ.ಮೀ. ಪ್ರದೇಶದಲ್ಲಿ ನೆಲದ ಮೇಲಿನ ತಂತಿಗಳ ಮೂಲಕ ವಿದ್ಯುತ್ ಸಾಗಣೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಿತು. 'ತಾಂತ್ರಿಕವಾಗಿ ಸಾಧ್ಯವಾಗುವ ಎಲ್ಲ ಜಾಗಗಳಲ್ಲಿ ಹೈಟೆನ್ಶನ್ ವಿದ್ಯುತ್ ಕೇಬಲ್‌ಗಳನ್ನು ನೆಲದಡಿಯಲ್ಲಿ ಹಾಕಬೇಕು. ಎಲ್ಲ ವಿದ್ಯುತ್ ಕಂಪನಿಗಳೂ ಹಕ್ಕಿಗಳ ಆವಾಸದಲ್ಲಿ ಹಾದುಹೋಗುವ ಹೈಟೆನ್ಶನ್ ತಂತಿಗಳಲ್ಲಿ ಹಕ್ಕಿಗಳನ್ನು ನಿರ್ದಿಷ್ಟ ಅಂತರಗಳಲ್ಲಿ ಮುಂಚಿತವಾಗಿಯೇ ಎಚ್ಚರಿಸಿ, ಹಾರಾಟದ ಮಾರ್ಗ ಬದಲಿಸುವಂತೆ ಮಾಡುವ 'ಬರ್ಡ್ ಡೈವರ್ಟರ್ಸ್' ಅನ್ನು ಕಡ್ಡಾಯವಾಗಿ ಅಳವಡಿಸಬೇಕು' ಎಂಬ ನಿರ್ದೇಶನ ನೀಡಿತು.

ಈ ತೀರ್ಪು ಸೌರ ಮತ್ತು ವಾಯು ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ನುಂಗಲಾರದ ತುತ್ತಾಯಿತು. 2021ರಿಂದ ಈಚೆಗೆ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸುವ ಪ್ರಯತ್ನಗಳು ನಡೆದರೂ ಅವು ಯಶಸ್ವಿಯಾಗಲಿಲ್ಲ. ಹೀಗಾಗಿ, ಈ ವರ್ಷದ ಜನವರಿಯಲ್ಲಿ ಈ ಕಂಪನಿಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿಯೊಂದನ್ನು ಸಲ್ಲಿಸಿ, 2021ರ ತೀರ್ಪು ಥಾರ್ ಮತ್ತು ಕಚ್ ಪ್ರದೇಶಗಳಲ್ಲಿ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ಪ್ರಕ್ರಿಯೆಗೆ ತೀವ್ರ ಹಿನ್ನಡೆ ಉಂಟುಮಾಡಿರುವುದರಿಂದ, ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿದವು. 99,000 ಚದರ ಕಿ.ಮೀ. ಪ್ರದೇಶದಲ್ಲಿ ನೆಲದಡಿಯಲ್ಲಿ ಕೇಬಲ್‌ಗಳನ್ನು ಹಾಕುವುದರಲ್ಲಿರುವ ಆರ್ಥಿಕ ಹಾಗೂ ತಾಂತ್ರಿಕ ತೊಂದರೆಗಳನ್ನು ಕೇಂದ್ರ ಸರ್ಕಾರವು ನ್ಯಾಯಾಲಯಕ್ಕೆ ವಿವರಿಸಿತು.




'ಎರ್ಲಡ್ಡುಗಳ ಸಂರಕ್ಷಣೆಯ ದೃಷ್ಟಿಯಿಂದ ಸುಮಾರು 99,000 ಚದರ ಕಿ.ಮೀ. ಪ್ರದೇಶವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಈ ಪೈಕಿ ಸುಮಾರು 13,000 ಚದರ ಕಿ.ಮೀ. ಆದ್ಯತೆಯ ಪ್ರದೇಶ, ಸುಮಾರು 80,000 ಚದರ ಕಿ.ಮೀ. ಪ್ರದೇಶವನ್ನು ಪ್ರಬಲ ಸಂರಕ್ಷಣಾ ಸಾಧ್ಯತೆಯ ಪ್ರದೇಶ ಮತ್ತು ಸುಮಾರು 6,000 ಚದರ ಕಿ.ಮೀ. ಪ್ರದೇಶವನ್ನು ಸಂರಕ್ಷಣೆಯ ವಿಶೇಷ ಉದ್ದೇಶಗಳಿಗೆ ಮೀಸಲಿಡಬೇಕೆಂದು ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಶಿಫಾರಸು ಮಾಡಿತ್ತು. ಇದರಲ್ಲಿ 80,688 ಚದರ ಕಿ.ಮೀ. ಪ್ರದೇಶವು ಸೌರ ಮತ್ತು ವಾಯು ವಿದ್ಯುತ್ ಉತ್ಪಾದನೆಯ ದೃಷ್ಟಿಯಿಂದ ಅತ್ಯಂತ ಸೂಕ್ತ ಪ್ರದೇಶ. ಇದರ ಶೇ 3ರಷ್ಟು ಪ್ರದೇಶವನ್ನು ಮಾತ್ರ ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲಾಗಿದೆ. ಉಳಿದ ಪ್ರದೇಶವನ್ನು ನಾವು ಬಳಸಿಕೊಳ್ಳದಿದ್ದರೆ 93,000 ಮೆಗಾವಾಟ್ ವಿದ್ಯುತ್ತನ್ನು ಕಲ್ಲಿದ್ದಲು ಬಳಸಿ ಉತ್ಪಾದಿಸಬೇಕಾಗುತ್ತದೆ. ಇದರಿಂದ 623 ಶತಕೋಟಿ ಟನ್‌ಗಳಷ್ಟು ಕಾರ್ಬನ್ ಡೈ ಆಕ್ಸೈಡ್ ವಾಯುಮಂಡಲಕ್ಕೆ ಸೇರುತ್ತದೆ. ಈ ಕಾರಣದಿಂದ ನೆಲದ ಮೇಲಿನ ವಿದ್ಯುತ್ ಪ್ರಸರಣ ತಂತಿಗಳ ಮೇಲೆ ವಿಧಿಸಿರುವ ನಿರ್ಬಂಧವನ್ನು ತೆಗೆಯಬೇಕು' ಎಂದು ಕೇಂದ್ರ ಸರ್ಕಾರ ಮನವಿ ಸಲ್ಲಿಸಿತ್ತು.

'ಅಳಿವಿನ ಅಂಚಿನಲ್ಲಿರುವ ಎರ್ಲಡ್ಡುಗಳನ್ನು ಸಂರಕ್ಷಿಸಬೇಕು ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ಅದೇ ಸಂದರ್ಭದಲ್ಲಿ, 2070ರ ಸುಮಾರಿಗೆ 'ಶೂನ್ಯ ಕಾರ್ಬನ್ ಉತ್ಸರ್ಜನೆ'ಯ ದೇಶವಾಗಲಿರುವುದಾಗಿ ಭಾರತವು ಅಂತರರಾಷ್ಟ್ರೀಯ ಸಮುದಾಯಕ್ಕೆ ನೀಡಿರುವ ಆಶ್ವಾಸನೆಯೂ ಅಷ್ಟೇ ಮುಖ್ಯ. ಅದು ಕಾರ್ಯಗತವಾಗಬೇಕಾದರೆ ಸೌರ ಮತ್ತು ವಾಯುವಿದ್ಯುತ್ ಉತ್ಪಾದನೆಗೆ ಅತಿಹೆಚ್ಚಿನ ಪ್ರಾಶಸ್ತ್ಯ ಅಗತ್ಯ. ಈ ಎರಡೂ ಗುರಿಗಳನ್ನು, ಒಂದಕ್ಕಾಗಿ ಇನ್ನೊಂದನ್ನು ಬಲಿಗೊಡದೇ ಸಾಧಿಸಬೇಕು' ಎಂಬ ನಿಲುವನ್ನು ತಳೆದ ಸುಪ್ರೀಂ ಕೋರ್ಟ್, 2021ರ ಏಪ್ರಿಲ್ ಆಜ್ಞೆಯನ್ನು ಮಾರ್ಪಡಿಸಿ ಹಲವಾರು ನಿರ್ದೇಶನಗಳನ್ನು ನೀಡಿದೆ.

ಮೊದಲನೆಯದಾಗಿ, 99,000 ಚದರ ಕಿ.ಮೀ. ಪ್ರದೇಶದಲ್ಲಿ ನೆಲದ ಮೇಲಿನ ವಿದ್ಯುತ್ ಪ್ರಸರಣ ತಂತಿಗಳ ಮೇಲಿದ್ದ ಸಂಪೂರ್ಣ ನಿಷೇಧವನ್ನು ರದ್ದುಗೊಳಿಸಿದೆ. ಎರಡನೆಯದಾಗಿ, ಏಳು ಮಂದಿ ಪರಿಣತರು ಮತ್ತು ಅಧಿಕಾರಿಗಳ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿ, ಯಾವ ಪ್ರದೇಶಗಳಲ್ಲಿ ಕೇಬಲ್‌ಗಳು ನೆಲದಡಿಯಲ್ಲಿಯೇ ಇರಬೇಕು, ಎಲ್ಲಿ ಮೇಲಿರಬಹುದು, ಎರ್ಲಡ್ಡುಗಳ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಎರಡೂ ಗುರಿಗಳನ್ನು ಸಾಧಿಸುವ ಮಾರ್ಗಗಳ ಮೇಲೆ ಬೆಳಕು ಚೆಲ್ಲಲಿದೆ.

ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗಳೆರಡನ್ನೂ ಏಕಕಾಲದಲ್ಲಿ ಸಾಧಿಸುವ ಜಾಣ್ಮೆ, ಉಪಾಯಗಳನ್ನು ಸೂಚಿಸುವ ಹೊಣೆ ಹೊತ್ತಿರುವ ಈ ಪರಿಣತರ ಸಮಿತಿ ಈ ವರ್ಷದ ಜುಲೈ 31ರ ಒಳಗೆ ತನ್ನ ವರದಿಯನ್ನು ಸಲ್ಲಿಸಬೇಕಿದೆ. ಈ ಸಮಿತಿಯ ವರದಿ, ಬದಲಾಗುತ್ತಿರುವ ವಾಯುಗುಣದ ಸಂದರ್ಭದಲ್ಲಿ, ಅಭಿವೃದ್ಧಿ-ಪರಿಸರ ಸಂರಕ್ಷಣೆಯ ಸಂಘರ್ಷಗಳ ಎಲ್ಲ ಪ್ರಕರಣಗಳಿಗೂ ಅನ್ವಯವಾಗುವಂತಹ ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಬಹುದೆಂಬ ನಿರೀಕ್ಷೆಯಿದೆ.

ಚುರುಮುರಿ



ಚುನಾವಣಾ ಗೇಮ್

• ಸುಮಂಗಲಾ

'ನೋಡಿಲ್ಲಿ... ನಮ್ ಹೇಮಕ್ಕ ರೈತಾಪಿ ಹೆಣ್‌ಮಕ್ಕಳ ಜತಿಗೆ ಸೇರಿ ಬೆಳೆ ಕಟಾವು ಮಾಡಾಕೆ ಹತ್ಯಾಳೆ...' ರೇಷ್ಮೆ ಸೀರೆಯುಟ್ಟು ಮಿರಮಿರನೆ ಮಿಂಚುತ್ತ ಹೊಲದೊಳಗೆ ಗೋಧಿಯ ಫಸಲು ಹಿಡಿದು ನಿಂತಿದ್ದ ಹೇಮಾಮಾಲಿನಿಯ ಫೋಟೊ ತೋರಿಸಿ, ಬೆಕ್ಕಣ್ಣ ಖುಷಿಯಿಂದ ಬಡಬಡಿಸಿತು.

'ಆಕಿ ಕುಡಗೋಲು ಹಿಡಕೊಂಡು, ಎರಡೂ ಕೈಯಲ್ಲಿ ಗೋಧಿ ಬೆಳೆ ಹಿಡಿದು ಪೋಸ್ ಕೊಟ್ಟಿದ್ದು ನೋಡಿದರೆ ಗೊತ್ತಾಗತೈತಿ ಆಕಿ ಕೊಯ್ದಿಲ್ಲ, ಹೆಣ್‌ಮಕ್ಕಳು ಕೊಯ್ದಿಟ್ಟಿದ್ದನ್ನು ಈಕಿ ಕೈಯಾಗೆ ಹಿಡಿದು ನಿಂತಾಳೆ ಅಂತ. ಐದು ವರ್ಷದ ಹಿಂದೆನೂ ಚುನಾವಣೆ ಪ್ರಚಾರದ ಟೈಮಿನಾಗೆ ಹಿಂಗೇ ಪೋಸ್ ಕೊಟ್ಟಿದ್ದಳು' ಎಂದು ಹಿಂದಿನ ಫೋಟೊ ತೋರಿಸಿದೆ.

ಮೂತಿ ಉಬ್ಬಿಸಿ, ಮೊಬೈಲಿನಲ್ಲಿ ಮುಖ ಹುದುಗಿಸಿದ ಬೆಕ್ಕಣ್ಣ ಐದೇ ನಿಮಿಷದಲ್ಲಿ 'ಗೆದ್ದೆ... ಗೆದ್ದೆ' ಎಂದು ಹರ್ಷೋದ್ಗಾರ ಮಾಡಿತು.

'ಕೆಲಸ ಮಾಡೂದು ಬಿಟ್ಟು ವಿಡಿಯೊ ಗೇಮ್ ಆಡತೀಯೇನು' ಎಂದು ನಾನು ಬೈಯ್ದಿದ್ದು ಬೆಕ್ಕಣ್ಣನ ಬಾಲಕ್ಕೂ ಮುಟ್ಟಲಿಲ್ಲ!

'ಸುಮ್ ಸುಮ್ನೆ ನನಗ ಬೈಯಬ್ಯಾಡ. ನಮ್ ಮೋದಿಮಾಮನೇ ವಿಡಿಯೊ ಗೇಮ್ ಆಡೂದು ಕಲ್ತಾನೆ. ನೋಡಿಲ್ಲಿ... ನಮ್ ದೇಶದ ಟಾಪ್ ಗೇಮರ್ ಹುಡುಗ್ರ ಜೊತಿಗಿ ಕುಂತು ಎಷ್ಟ್ ಚಂದ ಮಾತುಕತೆ, ಆಟ ಎಲ್ಲ ನಡಸ್ಯಾನ! ಮೋದಿಮಾಮ ಆಡೂದು ನೋಡಿದ್ರ ಅಂವಾ ನೂಬ್ ಅಲ್ಲ, ಭಯಂಕರ ಎಕ್ಸ್‌ಪರ್ಟ್ ಅನ್ನಿಸತೈತಿ' ಎಂದು ಗೇಮರ್‌ಗಳ ಜೊತೆಗೆ ಮೋದಿಮಾಮ ಕುಂತು ಮಾತನಾಡಿ, ಗೇಮ್ ಆಡಿದ ವಿಡಿಯೊ ತೋರಿಸಿತು.

'ಮಣಿಪುರದವ್ರ ಜೊತೆಗಾಗಲೀ ಪ್ರತಿಭಟನೆ ನಡೆಸ್ತಿದ್ದ ರೈತರ ಜೊತೆಗಾಗಲೀ ಲಡಾಕ್ ಉಳಿಸಾಕೆ ಹೋರಾಟ ಮಾಡ್ತಿರೋ ಸೋನಂ ವಾಂಗ್ಚುಕ್ ಜೊತೆಗಾಗಲೀ ಇಷ್ಟ್ ಸಾವಧಾನದಿಂದ ಮಾತುಕತೆ ನಡೆಸಿದ್ದರೆ ಎಷ್ಟ್ ಸಮಸ್ಯೆ ಬಗೆಹರಿತಿದ್ವಲ್ಲ' ಎಂದೆ.

'ಇದೆಲ್ಲ ಆಂದೋಲನವಾದಿಗಳ ಸಮಸ್ಯೆ ಅಷ್ಟೆ. ಚುನಾವಣೆ ಒಳಗೆ ಇನ್ನಾ ಎಷ್ಟ್ ಥರದ ಜನರ ಗುಂಪಿನ ಜೊತಿಗಿ ಫೋಟೊ ಶೂಟ್ ಮಾಡಬಕು. ಮೋದಿಮಾಮಂಗೆ ಟೈಮೇ ಸಾಲವಲ್ದು, ಪಾಪ' ಎಂದು ಬೆಕ್ಕಣ್ಣ ಲೊಚಗುಟ್ಟಿತು.

ಸಂಗತ

ಪೇಮೆಂಟ್ಸ್ ಬ್ಯಾಂಕ್: ಎಷ್ಟು ಪ್ರಸ್ತುತ?

ಹಣಕಾಸಿನ ಒಳಗೊಳ್ಳುವಿಕೆಯನ್ನು ಈ ಬ್ಯಾಂಕ್‌ಗಳು ಎಷ್ಟರಮಟ್ಟಿಗೆ ಸಾಧ್ಯವಾಗಿಸಿವೆ ಎಂಬುದು ಪರಿಶೀಲನೆಗೆ ಅರ್ಹವಾದುದು

• ವಿಜಯ್ ಜೋಷಿ

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ತನ್ನ ಬಹುತೇಕ ಸೇವೆಗಳನ್ನು ಸ್ಥಗಿತಗೊಳಿಸಿದೆ. ಈ ಬ್ಯಾಂಕ್ ಮತ್ತೆ ತನ್ನ ಎಲ್ಲ ಸೇವೆಗಳನ್ನು ಆರಂಭಿಸುವಂತೆ ಆಗುತ್ತದೆಯೇ ಎಂಬುದು ಖಚಿತವಿಲ್ಲ. ಈ ಪೇಮೆಂಟ್ಸ್ ಬ್ಯಾಂಕ್‌ಗೆ ನೀಡಿರುವ ಪರವಾನಗಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಿಂದಕ್ಕೆ ಪಡೆಯುತ್ತದೆಯೇ, ಆ ಮೂಲಕ ಈ ಬ್ಯಾಂಕ್‌ನ ಬಾಗಿಲು ಶಾಶ್ವತವಾಗಿ ಮುಚ್ಚುವುದೇ? ಈ ಪ್ರಶ್ನೆಗೂ ಸದ್ಯಕ್ಕೆ ಉತ್ತರ ಇಲ್ಲ.

ಸಾಲ ನೀಡುವ ಅಧಿಕಾರ ಇಲ್ಲದ ಪೇಮೆಂಟ್ಸ್ ಬ್ಯಾಂಕ್‌ಗಳನ್ನು ಆರಂಭಿಸಲು ಆರ್‌ಬಿಐ ಮುಂದಾಗಿದ್ದು ಏಕೆ? ವಲಸೆ ಕಾರ್ಮಿಕರಿಗೆ, ಕಡಿಮೆ ವರಮಾನ ಇರುವ ಕುಟುಂಬಗಳಿಗೆ, ಸಣ್ಣ ಉದ್ದಿಮೆಗಳಿಗೆ ಹಾಗೂ ಅಸಂಘಟಿತ ವಲಯದ ಸಂಸ್ಥೆಗಳಿಗೆ ಕಿರು ಉಳಿತಾಯ ಖಾತೆ ಸೇವೆಗಳನ್ನು ಒದಗಿಸುವ ಉದ್ದೇಶವು ಪೇಮೆಂಟ್ಸ್ ಬ್ಯಾಂಕ್ ಸ್ಥಾಪನೆಯ ಹಿಂದೆ ಇದೆ ಎಂಬ ಮಾತನ್ನು ಆರ್‌ಬಿಐ ಹಿಂದಿನ ದಶಕದಲ್ಲಿ ಹೊರಡಿಸಿದ್ದ ಕರಡು ಮಾರ್ಗಸೂಚಿಯಲ್ಲಿ ಹೇಳಲಾಗಿತ್ತು. ಆ ಸಂದರ್ಭದಲ್ಲಿ ಜನಧನ ಯೋಜನೆಯು ಇನ್ನೂ ಜಾರಿಗೆ ಬಂದಿರಲಿಲ್ಲ. ಪೇಮೆಂಟ್ಸ್ ಬ್ಯಾಂಕ್‌ಗಳನ್ನು ಶುರುಮಾಡಿದ್ದರ ಹಿಂದೆ ಇದ್ದ 'ಹಣಕಾಸಿನ ಒಳಗೊಳ್ಳುವಿಕೆ'ಯ ಉದ್ದೇಶವನ್ನು ಜನಧನ ಖಾತೆಗಳೇ ಹೆಚ್ಚು ಪರಿಣಾಮಕಾರಿಯಾಗಿ ಈಡೇರಿಸಬಲ್ಲವು.

ಪೇಮೆಂಟ್ಸ್ ಬ್ಯಾಂಕ್‌ಗಳು ಸಾಲ ನೀಡಲು ಅವಕಾಶ ಇಲ್ಲದುದರ ಪರಿಣಾಮವಾಗಿ, ಈ ಬ್ಯಾಂಕ್‌ಗಳ ಗ್ರಾಹಕರಿಗೆ ಸಿಗುವ ಹಣಕಾಸು ಸೇವೆಗಳ ಸಂಖ್ಯೆ ಬಹಳ ಸೀಮಿತ. ₹ 2 ಲಕ್ಷದ ಮಿತಿಗೆ ಒಳಪಟ್ಟು ಠೇವಣಿ ಇರಿಸುವ ಅವಕಾಶ, ಆನ್‌ಲೈನ್ ಅಥವಾ ಭೌತಿಕ ಸ್ವರೂಪದ ಡೆಬಿಟ್ ಕಾರ್ಡ್ ಪಡೆಯುವ ಅವಕಾಶ, ಬೇರೆ ಬೇರೆ ಪಾವತಿ ಸೇವೆಗಳನ್ನು ಪಡೆದುಕೊಳ್ಳುವ ಅವಕಾಶ ಹಾಗೂ ಹಣದ ವರ್ಗಾವಣೆ ಮತ್ತಿತರ ಕೆಲವು ಸೇವೆಗಳು ಮಾತ್ರ ಪೇಮೆಂಟ್ಸ್ ಬ್ಯಾಂಕ್‌ಗಳ ಮೂಲಕ ಸಿಗುತ್ತವೆ. ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಸೇವೆಯು ವ್ಯಾಪಕವಾಗಿ ಬಳಕೆಗೆ ಬಂದ ನಂತರದಲ್ಲಿ, ಸಣ್ಣ ಮೊತ್ತದ ಹಣ ವರ್ಗಾವಣೆ ಹಾಗೂ ದಿನನಿತ್ಯದ ಬಿಲ್ ಪಾವತಿಗಳಿಗೆ ಗ್ರಾಹಕರಿಗೆ ಪೇಮೆಂಟ್ಸ್ ಬ್ಯಾಂಕ್ ಖಾತೆ ಅನಿವಾರ್ಯವೇನೂ ಅಲ್ಲ. ಯುಪಿಐ ಕಾರಣದಿಂದಾಗಿ ಜನಧನ ಬ್ಯಾಂಕ್ ಖಾತೆಗಳು ಸೇರಿದಂತೆ ಯಾವುದೇ ಬ್ಯಾಂಕ್ ಖಾತೆಯಿಂದ ಪಾವತಿಗಳು ಹಾಗೂ ಹಣ ವರ್ಗಾವಣೆ ಸಲೀಸಾಗಿದೆ. ಇದು ಪೇಮೆಂಟ್ಸ್ ಬ್ಯಾಂಕ್ ಎಂಬ ಪ್ರತ್ಯೇಕ ವರ್ಗದ ಬ್ಯಾಂಕ್‌ಗಳ ಅಗತ್ಯವನ್ನೇ ಪ್ರಶ್ನಿಸಬಲ್ಲದು.

ಸಾಲ ಸೌಲಭ್ಯ ಸಿಗದೇ ಇರುವುದು ಪೇಮೆಂಟ್ಸ್ ಬ್ಯಾಂಕ್‌ಗಳ ಬಹುದೊಡ್ಡ ಮಿತಿ. ಕಡಿಮೆ ವರಮಾನ ಹೊಂದಿರುವವರಿಗೆ, ಸಣ್ಣ ಉದ್ದಿಮೆಗಳಿಗೆ ಹಣಕಾಸಿನ ಒಳಗೊಳ್ಳುವಿಕೆಯ ವಿಚಾರವಾಗಿ ವಾಸ್ತವದಲ್ಲಿ ಇರುವ ಸಮಸ್ಯೆ ಖಾತೆ ತೆರೆಯುವುದಕ್ಕೆ ಸಂಬಂಧಿಸಿದ್ದಷ್ಟೇ ಅಲ್ಲ; ಬದಲಿಗೆ, ಅಗತ್ಯ ಸಂದರ್ಭಗಳಲ್ಲಿ ಸಾಲವನ್ನು ಪಡೆಯುವಲ್ಲಿ ಅವರಿಗೆ ಹೆಚ್ಚಿನ ಸಮಸ್ಯೆ ಇದೆ. ಈ ಸಮಸ್ಯೆಯನ್ನು ಪರಿಹರಿಸುವ ವಿಚಾರದಲ್ಲಿ ಪೇಮೆಂಟ್ಸ್ ಬ್ಯಾಂಕ್‌ಗಳಿಂದ ಯಾವುದೇ ನೆರವು ಸಿಗದು. ಕನಿಷ್ಠ ಪಕ್ಷ ಒಂದು ಕ್ರೆಡಿಟ್ ಕಾರ್ಡ್ ಸೌಲಭ್ಯ ಅಥವಾ ಅಡಮಾನ ಸಾಲದ ಸೌಲಭ್ಯ ಕೂಡ ಈ ಬ್ಯಾಂಕ್‌ಗಳಿಂದ ಸಿಗುವುದಿಲ್ಲ.

ಹೀಗಿರುವಾಗ, ಹಣಕಾಸಿನ ಒಳಗೊಳ್ಳುವಿಕೆಯನ್ನು ಪೇಮೆಂಟ್ಸ್ ಬ್ಯಾಂಕ್‌ಗಳು ಎಷ್ಟರಮಟ್ಟಿಗೆ ಸಾಧ್ಯವಾಗಿಸಿವೆ ಎಂಬುದು ಪರಿಶೀಲನೆಗೆ ಅರ್ಹವಾಗುತ್ತದೆ. ಅಸಂಘಟಿತ ವಲಯದವರಿಗೆ ಸಾಲ ಒದಗಿಸುವ ಕೆಲಸವನ್ನು ಅಥವಾ ಸಣ್ಣ ಉದ್ಯಮ ವಲಯಕ್ಕೆ ಅಗತ್ಯ ಹಣಕಾಸಿನ ನೆರವು ಒದಗಿಸುವ ಕೆಲಸವನ್ನು ಸ್ಥಳೀಯ ಮಟ್ಟದಲ್ಲಿ ಸಹಕಾರ ಸಂಘಗಳು ಬಹುಕಾಲದಿಂದ ಮಾಡುತ್ತಾ ಬಂದಿವೆ ಎಂಬುದು ಇಲ್ಲಿ ಗಮನಾರ್ಹ.



ಪೇಮೆಂಟ್ಸ್ ಬ್ಯಾಂಕ್‌ಗಳು ಸಾಂಪ್ರದಾಯಿಕ ಬ್ಯಾಂಕ್‌ಗಳಂತೆ ಶಾಖೆಗಳ ಮೂಲಕ ಸೇವೆಗಳನ್ನು ಒದಗಿಸುವುದಿಲ್ಲ. ಅವುಗಳ ಸೇವೆ ಲಭ್ಯವಾಗುವುದು ಮೊಬೈಲ್ ಆ್ಯಪ್‌ಗಳ ಮೂಲಕ. ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಪೇಮೆಂಟ್ಸ್ ಬ್ಯಾಂಕ್‌ಗಳ ಸೇವಾ ಕೇಂದ್ರಗಳು ಇವೆಯಾದರೂ, ಅವು ಸಾಂಪ್ರದಾಯಿಕ ಬ್ಯಾಂಕ್ ಶಾಖೆಗಳ ಮಾದರಿಯಲ್ಲಿ ಇರುವುದಿಲ್ಲ. ಪೇಮೆಂಟ್ಸ್ ಬ್ಯಾಂಕ್‌ಗಳು ಹಣಕಾಸಿನ ಒಳಗೊಳ್ಳುವಿಕೆಯ ಭಾಗವಾಗಿ ಯಾರಿಗೆ ಹೆಚ್ಚು ಸೇವೆ ಒದಗಿಸಲು ಬಯಸುತ್ತವೆಯೋ, ಆ ವರ್ಗದ ಜನರು ಸಂಪೂರ್ಣವಾಗಿ ಡಿಜಿಟಲ್ ವೇದಿಕೆಗಳ ಮೂಲಕವೇ ಬ್ಯಾಂಕಿಂಗ್ ಸೇವೆಗಳನ್ನು ಬಳಸಲು ಮುಂದಾಗಬೇಕು. ಅಲ್ಲದೆ, ಅವರು ಉತ್ತಮ ಇಂಟರ್ನೆಟ್ ಸಂಪರ್ಕವನ್ನು ಒದಗಿಸಬಲ್ಲ ಸ್ಮಾರ್ಟ್‌ಫೋನ್ ಹೊಂದಿರುವುದು ಅಗತ್ಯ. ಇದೇ ಕೆಲಸವನ್ನು ಕಿರು ಹಣಕಾಸು ಬ್ಯಾಂಕ್‌ಗಳು (ಸ್ಮಾಲ್ ಫೈನಾನ್ಸ್ ಬ್ಯಾಂಕ್) ಕೂಡ ಹೆಚ್ಚು ದಕ್ಷವಾಗಿ ನಿರ್ವಹಿಸಬಲ್ಲವು. ಅಲ್ಲದೆ, ಈ ಬಗೆಯ ಬ್ಯಾಂಕ್‌ಗಳು ಕೂಡ ಪೇಮೆಂಟ್ಸ್ ಬ್ಯಾಂಕ್‌ಗಳು ಗುರಿಯಾಗಿಸಿಕೊಂಡಿರುವ ಸಮುದಾಯವನ್ನೇ ಹೆಚ್ಚು ಕೇಂದ್ರೀಕರಿಸಿಕೊಂಡು ಸೇವೆ ಒದಗಿಸುವುದಾಗಿ ಹೇಳುತ್ತಿವೆ. ಪಾವತಿ ಸೇವೆ ಹಾಗೂ ಉಳಿತಾಯ ಖಾತೆ ಸೇವೆ ಮಾತ್ರವೇ ಅಲ್ಲದೆ ಇವು ಸಾಲ ಸೌಲಭ್ಯವನ್ನೂ ಒದಗಿಸಬಲ್ಲವು.

ಆರಂಭದಲ್ಲಿ ಒಟ್ಟು 11 ಸಂಸ್ಥೆಗಳಿಗೆ ಪೇಮೆಂಟ್ಸ್ ಬ್ಯಾಂಕ್ ಆರಂಭಿಸಲು ಪರವಾನಗಿ ನೀಡಲಾಗಿತ್ತು. ಈಗ ಅವುಗಳ ಪೈಕಿ ಕಾರ್ಯಾಚರಣೆ ನಡೆಸುತ್ತಿರುವ ಸಂಸ್ಥೆಗಳ ಸಂಖ್ಯೆ ಆರು ಮಾತ್ರ. ಇವುಗಳಲ್ಲಿ ಹೆಚ್ಚಿನವು ಷೇರುಪೇಟೆಯಲ್ಲಿ ನೋಂದಾಯಿತವಾಗಿಲ್ಲ. ಇವುಗಳ ಬೆಳವಣಿಗೆಯಲ್ಲಿ ಪಾಲು ಹೊಂದುವ ಅವಕಾಶ ಸಾರ್ವಜನಿಕರಿಗೆ ಇಲ್ಲ. ಪೇಮೆಂಟ್ಸ್ ಬ್ಯಾಂಕ್‌ಗಳು ಈಗಿನ ಸ್ವರೂಪದಲ್ಲೇ ಮುಂದುವರಿಯುವುದಾದರೆ, ಈ ಎಲ್ಲ ಮಿತಿಗಳು ಅವುಗಳ ಬೆಳವಣಿಗೆ ಸಾಧ್ಯತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿವೆ.

ವಾಚಕರ ವಾಣಿ

ರಂಗಮಂದಿರದ ಸುಸ್ಥಿತಿಗೆ ಆದ್ಯತೆ ಇರಲಿ

ಇದು ಡಿಜಿಟಲ್ ಯುಗ. ಸಂಸ್ಕೃತಿ, ಮಾನವೀಯತೆ ಮತ್ತು ಸಂಬಂಧಗಳ ಬಗ್ಗೆ ಯೋಚಿಸುವುದಕ್ಕೂ ಹೆಚ್ಚಿನವರಿಗೆ ಸಮಯ ಇರುವುದಿಲ್ಲ. ಚಲನಚಿತ್ರಗಳು ಅಭಿರುಚಿಯನ್ನು ಕಳೆದುಕೊಂಡಿವೆ. ಪುಸ್ತಕಗಳನ್ನು ಕೊಂಡರೂ ಓದುವ ತಾಳ್ಮೆ ಇಲ್ಲ. ಟಿ.ವಿ. ಪರದೆಯು ರಂಜನೆಯ ಸೋಗಿನಲ್ಲಿ ನೆಮ್ಮದಿ ಕದಡುವ ಕಾರ್ಯಕ್ರಮಗಳಿಗೆ ಸೀಮಿತವಾಗಿದೆ. ಇಂತಹ ದುರಿತ ಕಾಲದಲ್ಲಿ ಮನುಷ್ಯನ ದುಗುಡದ ಮನಃಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಹತೋಟಿಯಲ್ಲಿ ಇಡಲು ಸಾಧ್ಯವಾಗುವುದು ರಂಗಮಂದಿರದ ಚಟುವಟಿಕೆಗಳಿಂದ ಮಾತ್ರ.

ತಮ್ಮ ಎಲ್ಲಾ ಜಂಜಾಟಗಳಿಂದ ಹಾಗೂ ಮೊಬೈಲ್ ಫೋನ್ ಹಾವಳಿಯಿಂದ ದೂರವಾಗಿ ಒಂದೆರಡು ಗಂಟೆಗಳ ಕಾಲ ನಾಟಕ ವೀಕ್ಷಿಸಿದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ರಂಗಮಂದಿರದ ವಾತಾವರಣ ಮನುಷ್ಯನ ರೂಕ್ಷ ಸ್ವಭಾವವನ್ನು ಹದ ಮಾಡಿ ಆಮೋದದ ಸ್ಥಿತಿ ಉಂಟುಮಾಡುವುದರಲ್ಲಿ ಸಂದೇಹವಿಲ್ಲ. ರಂಗಮಂದಿರಗಳನ್ನು ಸುಸ್ಥಿತಿಯಲ್ಲಿ ಇಡುವುದು ಸರ್ಕಾರದ ಆದ್ಯತೆಯಾಗಬೇಕು.

ಡಾ. ಕೆ.ಎಸ್.ಗಂಗಾಧರ, ಬೆಂಗಳೂರು

ಧ್ವನಿವರ್ಧಕ ಬಳಕೆ: ಓಲೈಕೆ ರಾಜಕಾರಣ ತರವಲ್ಲ

ಧ್ವನಿವರ್ಧಕದ ಶಬ್ದ ಕಡಿಮೆ ಮಾಡಲು ಹೇಳಿದ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರ ಮೇಲೆ ಇತ್ತೀಚೆಗೆ ನಡೆದಿದೆ ಎನ್ನಲಾದ ಹಲ್ಲೆ ಖಂಡನೀಯ. ಇಂತಹ ಪ್ರಕರಣಗಳು ಆಗಾಗ ನಡೆಯುತ್ತಲೇ ಇರುತ್ತವೆ. ಧ್ವನಿವರ್ಧಕದ ಶಬ್ದದ ಕುರಿತ ಜಗಳಗಳು ಕೋಮು ಸಂಘರ್ಷಕ್ಕೆ ಕಾರಣವಾದದ್ದೂ ಇದೆ. ಆದ್ದರಿಂದ ಧ್ವನಿವರ್ಧಕದ ಬಳಕೆಗೆ ಅದರಲ್ಲೂ ಪೂಜಾ ಸ್ಥಳಗಳಲ್ಲಿ ಅವುಗಳ ಬಳಕೆ ಕುರಿತಂತೆ ಸರ್ಕಾರ ಸ್ಪಷ್ಟವಾದ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕು. ಬಳಿಕ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದ ಅವಶ್ಯಕತೆಯಿದೆ. ಆದರೆ ಓಲೈಕೆ ರಾಜಕಾರಣದ ದೆಸೆಯಿಂದ ಚುನಾಯಿತ ಸರ್ಕಾರಗಳು ಧ್ವನಿವರ್ಧಕದ ಶಬ್ದದಂತಹ ಸರಳ ಸಮಸ್ಯೆಯನ್ನೂ ಪರಿಹರಿಸಲಾರದಷ್ಟು ದುರ್ಬಲಗೊಂಡಿರುವುದು ಪ್ರಜಾಪ್ರಭುತ್ವದ ವ್ಯಂಗ್ಯ.

ಅನಿಲ್ ಎಂ. ಚಟ್ನಳ್ಳಿ, ಕಲಬುರಗಿ

ಕೆರೆ ತುಂಬಿಸುವ ಯೋಜನೆ ಹೆಚ್ಚು ಸೂಕ್ತ

ಜಗಳೂರಿಗೆ ಭದ್ರಾ ಮೇಲ್ದಂಡೆ ಯೋಜನೆಯ ನೀರಾವರಿ ಸೌಲಭ್ಯಕ್ಕಾಗಿ ಈಗ ಹೋರಾಟ ನಡೆಯುತ್ತಿದೆ. ಜಗಳೂರು ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಕೊನೆಯ ಭಾಗವಾಗಿದ್ದು, ನೀರು ತಲುಪುವುದು ಅನುಮಾನವಾಗಿದೆ. ಈಗ ದಾವಣಗೆರೆ ಬಲದಂಡೆಯ ನೀರು ಕೊಂಡಜ್ಜಿಯನ್ನು ತಲುಪುತ್ತಿಲ್ಲ. ತೀರ ಅತಿವೃಷ್ಟಿಯ ಸಮಯದಲ್ಲಿ ಮಾತ್ರ ಹರಿಯುತ್ತಿದೆ. ಈಗಿನ ಮಳೆಗಾಲ ಒಂದೇಸಮನೆ ಬಿಟ್ಟೂಬಿಡದೆ ಸುರಿದು ನಂತರ ಕಾಣೆಯಾಗುತ್ತದೆ. ಇದರ ಬದಲು ಕೆರೆ ತುಂಬಿಸುವ ಯೋಜನೆಗಳೇ ಮೇಲು. ಸರ್ಕಾರಗಳು ಜನಪ್ರತಿನಿಧಿಗಳ ಒತ್ತಡದಿಂದ ನೀರಾವರಿ ಯೋಜನೆಗಳಿಗೆ ಮಂಜೂರಾತಿ ನೀಡುತ್ತವೆ. ಆದರೆ ಗುಂಡಿಗಳಿಗೆ ನೀರು ಹರಿಯದೇ ಗಿಡಗಂಟಿ ಬೆಳೆದು ಹೂಳು ತುಂಬಿ ಕೆಲವೇ ದಿನಗಳಲ್ಲಿ ಹಾಳಾಗುತ್ತವೆ. ಸರ್ಕಾರವು ತಜ್ಞರಿಂದ ವರದಿ ತರಿಸಿಕೊಂಡು ಯೋಜನೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಮುಂದಡಿ ಇಡಬೇಕು. ಹಾಗೆ ಮಾಡಿದಲ್ಲಿ ಸಾರ್ವಜನಿಕರ ತೆರಿಗೆ ಹಣ ಪೋಲಾಗುವುದನ್ನು ತಡೆಯಬಹುದಾಗಿದೆ.

ಗುರು ಜಗಳೂರು, ಹರಿಹರ

ಎತ್ತ ಸಾಗುತ್ತಿದೆ ಜನನಾಯಕರ ಸಂದೇಶ?

ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಮತದಾರರಿಗೆ ಹಂಚಲು ಕೊಟ್ಟಿದ್ದ ಹಣ ಸರಿಯಾಗಿ ಹಂಚಿಕೆಯಾಗದೆ ಇದ್ದುದೂ ತಾವು ಸೋಲುವುದಕ್ಕೆ ಕಾರಣವಾದ ಅಂಶಗಳಲ್ಲಿ ಒಂದು ಎಂಬ ವಿಧಾನ ಪರಿಷತ್ತಿನ ಸದಸ್ಯ ಎಂ.ಟಿ.ಬಿ. ನಾಗರಾಜ್ ಅವರ (ಪ್ರ.ವಾ. ಏ. 12) ಹೇಳಿಕೆ ಅಚ್ಚರಿ ಉಂಟುಮಾಡುತ್ತದೆ. ಚುನಾವಣೆಯ ಹೊಸ್ತಿಲಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಹಣ, ಮದ್ಯ ಮತ್ತು ಉಡುಗೊರೆಗಳ ಮೂಲಕ ಆಮಿಷವೊಡ್ಡಿ ಮತ ಸೆಳೆಯುವುದು ಸಾಮಾನ್ಯವಾಗಿದೆ. ರಾಜಕಾರಣಿ ತನ್ನ ಕ್ಷೇತ್ರಕ್ಕೆ ತಾನು ಮಾಡಿದ ಸೇವೆಯನ್ನು ಮತದಾರರಿಗೆ ಮನವರಿಕೆ ಮಾಡಿಕೊಡುವ ಮೂಲಕ ಪುನರಾಯ್ಕೆ ಬಯಸಬೇಕು. ಅದುಬಿಟ್ಟು ಇಂದಿನ ಬಹುತೇಕ ಜನಪ್ರತಿನಿಧಿಗಳು ತಾವು ಕೊಟ್ಟ ಹಣ ಮತದಾರರಿಗೆ ಸಮರ್ಪಕವಾಗಿ ಹಂಚಿಕೆಯಾಗಿಲ್ಲ ಎಂಬ ನೋವನ್ನು ಬಹಿರಂಗವಾಗಿ ವ್ಯಕ್ತಪಡಿಸಿ, ಹಣದಿಂದ ಮತಗಳನ್ನು ಸೆಳೆಯಬಹುದು ಎಂಬ ಸಂದೇಶವನ್ನು ಸಾರುವುದು ಚುನಾವಣಾ ವ್ಯವಸ್ಥೆಯ ಕಗ್ಗೊಲೆ ಎನ್ನಬಹುದು.

ಇಂತಹ ಬೆಳವಣಿಗೆಗಳಿಂದ, ಸರ್ಕಾರ ಮತ್ತು ಚುನಾವಣಾ ಆಯೋಗವು ಮತದಾನದ ಹಕ್ಕು ಹಾಗೂ ಮತದಾರರ ಕರ್ತವ್ಯದ ಬಗ್ಗೆ ಬೀದಿ ನಾಟಕಗಳು, ವಾಕಥಾನ್, ಸೈಕಲ್ ಜಾಥಾದಂತಹ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲು ಮುಂದಾಗುವುದು ವ್ಯರ್ಥ ಪ್ರಯತ್ನವೇ ಎಂಬ ಅನುಮಾನ ಕೆಲವೊಮ್ಮೆ ಮೂಡುತ್ತದೆ. ಹಣಬಲದಿಂದ ಮಾತ್ರ ಚುನಾವಣೆ ಎದುರಿಸಬಹುದು ಎಂಬ ಸಂದೇಶವನ್ನು ಜನನಾಯಕರೇ ಸಾರಿದರೆ, ಈಗಿನ ಸುಸ್ಥಿರ ಪ್ರಜಾಪ್ರಭುತ್ವ ವ್ಯವಸ್ಥೆಯು ಶಿಥಿಲಗೊಳ್ಳಬಹುದು ಎಂಬ ಸಂಶಯ ಜನಸಾಮಾನ್ಯರಲ್ಲಿ ಮೂಡಿದರೆ ಅಚ್ಚರಿಯಿಲ್ಲ.

ಮಲ್ಲಿಕಾರ್ಜುನ್, ಬಾಗಲಕೋಟೆ

ಮತದಾನಕ್ಕೆ ಪೂರಕವಾದ ಮಾದರಿ ನಡೆ

ಇದೇ 26ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಎಲ್ಲರೂ ಮತದಾನ ಮಾಡಬೇಕೆಂಬ ಉದ್ದೇಶದಿಂದ, 24ರ ಸಂಜೆಯಿಂದ 26ರ ಮಧ್ಯರಾತ್ರಿಯವರೆಗೆ ಹಾಸನ ಜಿಲ್ಲೆಯ ಎಲ್ಲ ರೆಸಾರ್ಟ್‌ಗಳು, ಹೋಂಸ್ಟೇಗಳು ಮತ್ತು ವಸತಿಯುತ ಹೋಟೆಲ್‌ಗಳಲ್ಲಿನ ವಾಸ್ತವ್ಯವನ್ನು ಜಿಲ್ಲಾಧಿಕಾರಿಯು ನಿರ್ಬಂಧಿಸಿರುವುದು (ಪ್ರ.ವಾ., ಏ. 14) ಒಳ್ಳೆಯ ಆಲೋಚನೆ ಮತ್ತು ರಾಜ್ಯದ ಇತರ ಎಲ್ಲ ಜಿಲ್ಲೆಗಳಲ್ಲೂ ಇಂತಹ ಆದೇಶವನ್ನು ಜಾರಿಗೊಳಿಸುವುದು ಒಳ್ಳೆಯದು. ಇದರಿಂದಾಗಿ ಜನರು ಚುನಾವಣೆಯ ಸಮಯದಲ್ಲಿ ಮತದಾನ ಮಾಡುವುದನ್ನು ಬಿಟ್ಟು ಪ್ರವಾಸ ಹೋಗುವುದನ್ನು ಬಹಳಷ್ಟು ಮಟ್ಟಿಗೆ ತಡೆಯಬಹುದಾಗಿದೆ.

ಇದರೊಂದಿಗೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಸಹ ತಮ್ಮಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ವೋಟು ಮಾಡುವುದನ್ನು ಕಡ್ಡಾಯ ಮಾಡಬೇಕು. ಇತ್ತೀಚಿನ ಅಧ್ಯಯನದ ಪ್ರಕಾರ, ಮುಖ್ಯವಾಗಿ ಬೆಂಗಳೂರು ನಾಗರಿಕರು ಚುನಾವಣಾ ಸಮಯದಲ್ಲಿ, ವಿಶೇಷವಾಗಿ ವಾರಾಂತ್ಯದಲ್ಲಿ ಚುನಾವಣೆ ಬಂದರೆ ಹಿಂದುಮುಂದಿನ ರಜೆಗಳನ್ನು ಸೇರಿಸಿಕೊಂಡು ಪ್ರಯಾಣಿಸುವ ಪ್ರವೃತ್ತಿ ಹೊಂದಿದ್ದಾರೆ. ಕೆಲವು ಕಟ್ಟುನಿಟ್ಟಿನ ಕ್ರಮಗಳಿಂದ ಮತದಾನದ ಪ್ರಮಾಣವನ್ನು ಹೆಚ್ಚಿಸಬಹುದು.

ಕಡೂರು ಫಣಿಶಂಕರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.


ಇಸ್ರೇಲ್ ದಾಳಿ–ಇರಾನ್ ಪ್ರತಿದಾಳಿ

ಜಗತ್ತಿಗೇ ಆತಂಕ ತಂದ ಪ್ರಾದೇಶಿಕ ಸಂಘರ್ಷ

ಇಸ್ರೇಲ್ ಮೇಲೆ ಇರಾನ್ ಶನಿವಾರ ಮಧ್ಯರಾತ್ರಿ ದಾಳಿ ನಡೆಸಿದಾಗ ವಿಶ್ವದಾದ್ಯಂತ ಸಾಮಾಜಿಕ ಜಾಲತಾಣಗಳಲ್ಲಿ ಮೂರನೇ ಮಹಾಯುದ್ಧ ಆರಂಭವಾಗಿಯೇ ಹೋಯಿತು ಎಂದು ಹಲವರು ಕಳವಳ ವ್ಯಕ್ತಪಡಿಸಿದ್ದರು. ಇರಾನ್‌ನ ದಾಳಿಯನ್ನು ಇಸ್ರೇಲ್ ವಿಫಲಗೊಳಿಸಿತು. ಇದು ಇರಾನ್‌ಗಾದ ಸೋಲು ಎಂದು ಒಂದೆಡೆ ಚರ್ಚೆಯಾಗುತ್ತಿದ್ದರೆ, ಯುದ್ಧ ಮುಂದುವರಿಸುವುದು ಇರಾನ್‌ಗೇ ಬೇಕಿರಲಿಲ್ಲ. ಹೀಗಾಗಿ ಇಂತಹ ದಾಳಿ ನಡೆಸಿದೆ ಎಂಬ ಚರ್ಚೆ ಇನ್ನೊಂದೆಡೆ. ಇರಾನ್ ಮತ್ತು ಇಸ್ರೇಲ್ ನಡುವಣ ಈ ಸಂಘರ್ಷ ನಿನ್ನೆ–ಮೊನ್ನೆಯದ್ದಲ್ಲ. ಅದರ ಇತಿಹಾಸ 1980ರ ದಶಕದವರೆಗೂ ಹೋಗುತ್ತದೆ. ಆದರೆ ಈ ಸಂಘರ್ಷದ ಕಾರಣ ಮಾತ್ರ 'ಪ್ಯಾಲೆಸ್ಟೀನ್'. ಆ ಕಾರಣ ಬದಲಾಗಿಲ್ಲ. ಈಗಿನ ಸಂಘರ್ಷಕ್ಕೂ ಪ್ಯಾಲೆಸ್ಟೀನೇ ನೆವ

ಆಧಾರ: ಎಎಫ್‌ಪಿ, ನ್ಯೂಯಾರ್ಕ್ ಟೈಮ್ಸ್, ವಾಷಿಂಗ್ಟನ್ ಪೋಸ್ಟ್, ಬಿಬಿಸಿ ವರದಿಗಳು, ಪಿಟಿಐ

'ಇಸ್ರೇಲ್ ಸುತ್ತ ಬಂಡುಕೋರರ ಹುತ್ತ'





ಏ.14ರಂದು ಇರಾನ್ ಇಸ್ರೇಲ್ ಮೇಲೆ ದಾಳಿ ನಡೆಸಿತು. ಈ ವೇಳೆ ಜೆರುಸಲೇಂನ ಅಲ್ ಅಕ್ಸಾ ಮಸೀದಿಯ ಮೇಲೆ ಇರಾನ್‌ನ ಕ್ಷಿಪಣಿಗಳು ಕಾಣಿಸಿದವು

–ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಐರೋಪ್ಯ ಒಕ್ಕೂಟದಿಂದ ಹೊರದೂಡಲ್ಪಟ್ಟ ಯಹೂದಿಗಳಿಗೆ ಬ್ರಿಟನ್–ಫ್ರಾನ್ಸ್ ಈಗಿನ ಇಸ್ರೇಲ್‌ನಲ್ಲಿ (ಹಿಂದಿನ ಪ್ಯಾಲೆಸ್ಟೀನ್) ನೆಲೆ ಕಲ್ಪಿಸಿಕೊಟ್ಟವು. ಕೆಲವೇ ದಶಕಗಳಲ್ಲಿ ಯಹೂದಿಗಳು ಇಸ್ರೇಲ್‌ನ ವ್ಯಾಪ್ತಿಯನ್ನು ವಿಸ್ತರಿಸುತ್ತಾ ಹೋದರು. ಅದರ ಜತೆಯಲ್ಲೇ ಶಿಯಾ ಮುಸ್ಲಿಮರ ಪ್ರಾಬಲ್ಯದ ಪ್ಯಾಲೆಸ್ಟೀನ್‌ನ ವ್ಯಾಪ್ತಿ ಕುಗ್ಗುತ್ತಾ ಹೋಯಿತು. 1970ರ ದಶಕದ ವೇಳೆಗೆ ಅದು ಜೆರುಸಲೇಂನ ವೆಸ್ಟ್‌ಬ್ಯಾಂಕ್ ಮತ್ತು ಗಾಜಾಪಟ್ಟಿಗೆ ಸೀಮಿತವಾಯಿತು. ಇಡೀ ಮಧ್ಯಪ್ರಾಚ್ಯದಲ್ಲಿ ಶಿಯಾ ಮುಸ್ಲಿಮರ ಎರಡನೇ ದೊಡ್ಡ ನಾಡಾಗಿದ್ದ ಪ್ಯಾಲೆಸ್ಟೀನ್ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹಂತಕ್ಕೆ ಹೋಗಿತ್ತು. ವಿಶ್ವದ ಬೇರಾವ ದೇಶವೂ ಆ ಬಗ್ಗೆ ಹೆಚ್ಚು ಗಮನ ಹರಿಸದಿದ್ದರೂ, ಅತೀಹೆಚ್ಚು ತಲೆಕೆಡಿಸಿಕೊಂಡದ್ದು ಇರಾನ್. ಏಕೆಂದರೆ ಪ್ಯಾಲೆಸ್ಟೀನ್‌ನೊಂದಿಗೆ ಉತ್ತಮ ಸಂಬಂಧ ಹೊಂದಿದ್ದ ಮತ್ತು ಮಧ್ಯಪ್ರಾಚ್ಯದ ಅತ್ಯಂತ ದೊಡ್ಡ ಶಿಯಾ ಮುಸ್ಲಿಮರ ದೇಶವಾಗಿತ್ತು ಇರಾನ್. ಪ್ಯಾಲೆಸ್ಟೀನ್ ಅನ್ನು ಇಸ್ರೇಲ್ ಕುಗ್ಗಿಸುತ್ತಾ ಹೋದಂತೆ, ಅದರೊಟ್ಟಿಗೆ ಇರಾನ್ ಸಂಬಂಧ ಹಳಸುತ್ತಾ ಬಂದಿತು.

1979ರವರೆಗೂ ಪ್ಯಾಲೆಸ್ಟೀನ್‌ನ ವಿಚಾರದಲ್ಲಿ ಇರಾನ್ ಸರ್ಕಾರ ಬಹಿರಂಗವಾಗಿ ತನ್ನ ನಿಲುವನ್ನು ವ್ಯಕ್ತಪಡಿಸಿರಲೇ ಇಲ್ಲ. ಏಕೆಂದರೆ ಅದಕ್ಕೂ ಮುನ್ನ ಇರಾನ್ ಮುಖ್ಯಸ್ಥರಾಗಿದ್ದ ಶಾ ಮೊಹಮ್ಮದ್ ರೆಜಾ ಪಹ್ಲಾವಿ ಇಸ್ರೇಲ್‌ನೊಟ್ಟಿಗೆ ಉತ್ತಮ ಸಂಬಂಧ ಇರಿಸಿಕೊಂಡಿದ್ದರು. ಆದರೆ 1979ರಲ್ಲಿ ಶಾ ಅವರನ್ನು ಅಧಿಕಾರದಿಂದ ಕಿತ್ತೊಗೆದ ಶಿಯಾ ಧಾರ್ಮಿಕ ನಾಯಕ ಅಯಾತ್–ಉಲ್ಲಾ–ಅಲ್ ಖಮೆನಿ, ಇಸ್ರೇಲ್ ವಿರುದ್ಧ ಬಹಿರಂಗವಾಗಿ ಕಿಡಿಕಾರಿದ್ದರು. ತನ್ನನ್ನು ತಾನು ಇರಾನ್‌ನ ಪರಮೋಚ್ಚ ನಾಯಕ ಎಂದು ಘೋಷಿಸಿಕೊಂಡಿದ್ದ ಖಮೆನಿ, 'ಪ್ಯಾಲೆಸ್ಟೀನ್ ಅನ್ನು ಬಿಡುಗಡೆಗೊಳಿಸುವುದು ನಮ್ಮ ಧ್ಯೇಯ. ಅದರಲ್ಲೇ ಇಸ್ರೇಲ್‌ನ ಸಾವು ಅಡಗಿದೆ' ಎಂದು ಆಗ ಘೋಷಿಸಿದ್ದರು.

ಅಂತಹ ಘೋಷಣೆಯ ನಂತರವೂ ಎರಡೂ ದೇಶಗಳ ಮಧ್ಯೆ ನೇರಾನೇರ ಸಂಘರ್ಷ ನಡೆದಿರಲಿಲ್ಲ. ಬದಲಿಗೆ ಇರಾನ್–ಇರಾಕ್ ಯುದ್ಧದಲ್ಲಿ, ಕುವೈತ್ ಯುದ್ಧದಲ್ಲಿ ಅಮೆರಿಕವು ಇಸ್ರೇಲ್ ಮೂಲಕ ಇರಾನ್‌ಗೆ ಯುದ್ಧೋಪಕರಣ ಮತ್ತು ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಿತ್ತು. ಇಸ್ರೇಲ್ ಸಹ ಇರಾನ್‌ನಿಂದ ಕಚ್ಚಾತೈಲವನ್ನು ದೊಡ್ಡ ಪ್ರಮಾಣದಲ್ಲೇ ಖರೀದಿಸಿತ್ತು. ಆದರೆ ಪರಸ್ಪರ ಸಂಬಂಧ ಮಾತ್ರ ಸುಧಾರಿಸಿರಲಿಲ್ಲ.ಇರಾಕ್ ವಿರುದ್ಧದ ಯುದ್ಧದ ಭಾಗವಾಗಿ ಅಮೆರಿಕವು ಇರಾನ್ ಅನ್ನು ಬಳಸಿಕೊಂಡಿತ್ತೇ ವಿನಾ, ಇರಾನ್‌ನೊಟ್ಟಿಗೆ ಅಮೆರಿಕದ ಸಂಬಂಧವೂ ಚೆನ್ನಾಗಿರಲಿಲ್ಲ. ಪ್ಯಾಲೆಸ್ಟೀನ್‌ನ ಪರವಾಗಿ ಇರಾನ್ ಪದೇ–ಪದೇ ಮಾತನಾಡುತ್ತಿದ್ದರೆ, ಅಮೆರಿಕವು ಇಸ್ರೇಲ್‌ನ ಪರವಾಗಿ ನಿಂತಿತು. ಈ ಕಾರಣದಿಂದ ಅಮೆರಿಕ–ಇರಾನ್‌ನ ಸಂಬಂಧ ಮತ್ತಷ್ಟು ಹಳಸಿತು. ಖಮೆನಿಯಂತೂ ಒಮ್ಮೆ, 'ಅಮೆರಿಕವು ದೊಡ್ಡ ಸೈತಾನ್, ಇಸ್ರೇಲ್ ಮರಿ ಸೈತಾನ್' ಎಂದು ಕರೆದಿದ್ದರು.

ಸುನ್ನಿ ಮುಸ್ಲಿಮರೇ ಬಹುಸಂಖ್ಯಾತರಾಗಿದ್ದ ಮಧ್ಯಪ್ರಾಚ್ಯದಲ್ಲಿ ಶಿಯಾಗಳ ಪ್ಯಾಲೆಸ್ಟೀನ್‌ನ ರಕ್ಷಣೆಗೆ ಬೇರೆ ದೇಶಗಳು ಬರಲಿಲ್ಲ. ಆ ಪರಿಸ್ಥಿತಿಯನ್ನು ಬೇರೆ ರೀತಿ ನಿರ್ವಹಿಸಲು ಮುಂದಾದ ಇರಾನ್, ಇಸ್ರೇಲ್ ನೆರೆಯ ದೇಶಗಳಲ್ಲಿ ಬಂಡುಕೋರರನ್ನು ಬೆಳೆಸಿತು. ಲೆಬನಾನ್‌ನಲ್ಲಿ ಹಿಜಬುಲ್ಲಾ, ಯೆಮನ್‌ನಲ್ಲಿ ಹುತಿ ಮತ್ತು ಗಾಜಾಪಟ್ಟಿಯಲ್ಲಿ ಹಮಾಸ್ ಬಂಡುಕೋರರನ್ನು ಬೆಳೆಸಿತು. ಈ ಬಂಡುಕೋರ ಗುಂಪುಗಳಿಗೆ ಹಣಕಾಸು, ಶಸ್ತ್ರಾಸ್ತ್ರ ಪೂರೈಕೆ ಮತ್ತು ತರಬೇತಿ ನೀಡಿತು. ಇಸ್ರೇಲ್ ಮೇಲೆ ಇರಾನ್ ನೇರವಾಗಿ ದಾಳಿ ನಡೆಸದೆ, ಈ ಬಂಡುಕೋರರ ಮೂಲಕ ದಾಳಿ ನಡೆಸುತ್ತಿತ್ತು. ಅದಕ್ಕೆ ಇಸ್ರೇಲ್ ಪ್ರತಿದಾಳಿ ನಡೆಸುತ್ತಿತ್ತು. ಸರಿಸುಮಾರು 40–45 ವರ್ಷದವರೆಗೆ ಇರಾನ್ ಮತ್ತು ಇಸ್ರೇಲ್ ಇದೇ ಸ್ವರೂಪದ ತೆರೆಮರೆಯ ಯುದ್ಧ ನಡೆಸುತ್ತಿದ್ದವು. 2023ರ ಅಕ್ಟೋಬರ್‌ನಲ್ಲಿ ಹಮಾಸ್ ಬಂಡುಕೋರರು ಇಸ್ರೇಲ್‌ನ ಮೇಲೆ ಅಪ್ರಚೋದಿತ ದಾಳಿ ನಡೆಸಿದ್ದರ ಹಿಂದೆಯೂ ಇರಾನ್‌ನದ್ದೇ ಕೈವಾಡವಿದೆ ಎಂದು ಅಮೆರಿಕದ ರಕ್ಷಣಾ ಸಚಿವಾಲಯ ಹೇಳಿತ್ತು. ಇಸ್ರೇಲ್ ಗಾಜಾಪಟ್ಟಿಯ ಮೇಲೆ ವಿಧ್ವಂಸಕಾರಿ ಯುದ್ಧ ಆರಂಭಿಸಿತು, ಅದಿನ್ನೂ ನಿಂತಿಲ್ಲ.

ಇಸ್ರೇಲ್‌ನ ಯುದ್ಧವನ್ನು ಬಹಿರಂಗವಾಗಿಯೇ ಖಂಡಿಸಿದ ಇರಾನ್ ಶನಿವಾರದವರೆಗೂ ತೆರೆಮರೆಯ ಯುದ್ಧಕ್ಕೇ ಕಟ್ಟುಬಿದ್ದಿತ್ತು. ಹಿಜ್ಬುಲ್ಲಾ ಬಂಡುಕೋರರು ಇಸ್ರೇಲ್‌ನ ಗಡಿಯಲ್ಲಿ ನಿಂತು ದಾಳಿ ನಡೆಸುತ್ತಿದ್ದರೆ, ಹುತಿ ಬಂಡುಕೋರರು ಇಸ್ರೇಲ್ ಮತ್ತು ಅದರ ಮಿತ್ರರಾಷ್ಟ್ರಗಳ ಸರಕು ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸಲಾರಂಭಿಸಿದ್ದರು. ಇಸ್ರೇಲ್ ಸಹ ಪ್ರತಿದಾಳಿ ನಡೆಸುತ್ತಲೇ ಇತ್ತು. ಆದರೆ ಈ ತೆರೆಮರೆಯ ಯುದ್ಧಕ್ಕೆ ತಿಲಾಂಜಲಿ ಇಟ್ಟು ನೇರ ಯುದ್ಧಕ್ಕೆ ಮುಂದಾಗಿದ್ದು ಇದೇ ಇಸ್ರೇಲ್. ಇದೇ ಏಪ್ರಿಲ್ 1ರಂದು ಇಸ್ರೇಲ್‌ನ ಪಡೆ, ಸಿರಿಯಾದ ಡಮಾಸ್ಕಸ್‌ನ ದಕ್ಷಿಣದಲ್ಲಿದ್ದ ಇರಾನ್ ರಾಯಭಾರ ಕಚೇರಿಯ ಮೇಲೆ ದಾಳಿ ನಡೆಸಿತ್ತು. ಆ ದಾಳಿಯಲ್ಲಿ ಇರಾನ್ ಸೇನಾ ಕಮಾಂಡರ್, ಪ್ರಮುಖ ಸೇನಾಧಿಕಾರಿಗಳು ಸೇರಿ ಏಳು ಜನರು ಮೃತಪಟ್ಟಿದ್ದರು. ಆ ದಾಳಿಗೆ ಪ್ರತೀಕಾರ ತೆಗೆದುಕೊಳ್ಳುವುದಾಗಿ ಖಮೆನಿ ಅಂದೇ ಘೋಷಿಸಿದ್ದರು. ಅದರ ಭಾಗವಾಗಿಯೇ ಶನಿವಾರ ಇರಾನ್ ದಾಳಿ ನಡೆಸಿದ್ದು. ಆ ದಾಳಿಯನ್ನು ಇಸ್ರೇಲ್ ವಿಫಲಗೊಳಿಸಿದೆ. ಆದರೆ ಮತ್ತೆ ದಾಳಿಯ ಬೆದರಿಕೆ ಒಡ್ಡಿದೆ. ಹೀಗಾಗಿ ಯುದ್ಧದ ಕಾರ್ಮೋಡ ಇನ್ನೂ ಚದುರಿಲ್ಲ.

ಯುದ್ಧವನ್ನು ತಡೆಯಿತೇ ಯುದ್ಧದ ಭೀತಿ...: ಇದೇ ಶನಿವಾರ ಅಥವಾ ಭಾನುವಾರ ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸುತ್ತದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಎಚ್ಚರಿಕೆ ನೀಡಿದ್ದರು. ಆ ದಾಳಿಯೊಂದಿಗೆ ಮೂರನೇ ವಿಶ್ವಯುದ್ಧ ಆರಂಭವಾಗಿಯೇ ಬಿಡುತ್ತದೆ ಎಂದು ಕಳವಳವೂ ವ್ಯಕ್ತವಾಗಿತ್ತು. ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಖಂಡಿಸಿ ಅದರ ಮಿತ್ರ ರಾಷ್ಟ್ರಗಳೇ ಹೇಳಿಕೆ ನೀಡಿದ್ದವು. ಅಮೆರಿಕ ಮತ್ತು ಬ್ರಿಟನ್‌ನ ನಾಯಕರು ಇಸ್ರೇಲ್‌ಗೆ ಶಸ್ತ್ರಾಸ್ತ್ರ ಪೂರೈಕೆಯನ್ನು ನಿಲ್ಲಿಸಬೇಕು ಎಂದು ಹೇಳಿದ್ದರು. ಅಂತಹ ಸಂದರ್ಭದಲ್ಲೇ ಇರಾನ್‌ನ ರಾಯಭಾರ ಕಚೇರಿ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು. ಆ ದಾಳಿಗೂ ನಮಗೂ ಸಂಬಂಧವಿಲ್ಲ ಎಂದು ಅಮೆರಿಕವು ಅಂತರ ಕಾಯ್ದುಕೊಂಡಿತ್ತು. ಆದರೆ ಇರಾನ್‌ನ ದಾಳಿಯ ವೇಳೆ ಇಸ್ರೇಲ್‌ನ ರಕ್ಷಣೆಗೆ ನಿಂತಿತು.

ಇಸ್ರೇಲ್‌ನ ನೆರವಿಗೆ ಅಮೆರಿಕ, ಫ್ರಾನ್ಸ್ ಮತ್ತು ಬ್ರಿಟನ್ ಧಾವಿಸಿದ ಕಾರಣಕ್ಕೇ ಯುದ್ಧ ಆರಂಭವಾಗಿಲ್ಲ ಎಂದು ಹೇಳಲಾಗುತ್ತಿದೆ. ಒಂದೊಮ್ಮೆ ಇರಾನ್ ನಡೆಸಿದ ದಾಳಿಯಿಂದ ಹೆಚ್ಚು ಹಾನಿಯಾಗಿದ್ದಿದ್ದರೆ, ಇಸ್ರೇಲ್ ತೀವ್ರ ಪ್ರತಿದಾಳಿಗೆ ಮುಂದಾಗುತ್ತಿತ್ತು. ಮತ್ತು ಅಮೆರಿಕವು ಯುದ್ಧಕ್ಕೆ ಕಾಲಿಡುತ್ತಿತ್ತು. ಅದು ವಿಶ್ವಯುದ್ಧದ ಸ್ವರೂಪ ಪಡೆಯುತ್ತಿತ್ತು ಎಂದೇ ವಿಶ್ಲೇಷಿಸಲಾಗುತ್ತಿದೆ. ಆದರೆ ಅಂತಹ ಯುದ್ಧದ ಸಾಧ್ಯತೆ ಇನ್ನೂ ಪೂರ್ಣ ಪ್ರಮಾಣದಲ್ಲಿ ನಿವಾರಣೆಯಾಗಿಲ್ಲ.

ಯುದ್ಧ ಆರಂಭವಾದರೆ ಕಚ್ಚಾತೈಲದ ಬೆಲೆ ವಿಪರೀತ ಏರಿಕೆಯಾಗುವ ಅಪಾಯವಿದೆ. ಜತೆಗೆ ಯೆಮನ್ ಕೊಲ್ಲಿಯಲ್ಲಿ ಸರಕು ಸಾಗಣೆ ಹಡಗುಗಳ ಸಂಚಾರ ವ್ಯತ್ಯಯವಾಗಿ, ಜಾಗತಿಕ ಮಟ್ಟದ ವ್ಯಾಪಾರ ವಹಿವಾಟಿನಲ್ಲಿ ವಿಪರೀತ ಮಟ್ಟದ ಏರುಪೇರಾಗುವ ಅಪಾಯವೂ ಇದೆ. ಇಸ್ರೇಲ್ ಮತ್ತು ಇರಾನ್ ಎರಡರ ಬಳಿಯೂ ಅಣ್ವಸ್ತ್ರಗಳಿವೆ. ಹೀಗಾಗಿ ಅಣ್ವಸ್ತ್ರ ಬಳಕೆಯಾಗುವ ಅಪಾಯವೂ ಹೆಚ್ಚಿದೆ. ಏಕೆಂದರೆ ಬೆಂಜಮಿನ್ ನೆತನ್ಯಾಹುವಾಗಲೀ, ಖಮೆನಿಯಾಗಲೀ ಸಂಘರ್ಷದ ಸಂದರ್ಭದಲ್ಲಿ ಇತರರ ಮಾತು ಕೇಳಿಸಿಕೊಳ್ಳುವುದೇ ಇಲ್ಲ ಎಂಬುದು ಈವರೆಗಿನ ಸಂಘರ್ಷಗಳಲ್ಲಿ ಸಾಬೀತಾಗಿದೆ. ಅವುಗಳ ಪರಿಣಾಮವನ್ನು ಯುದ್ಧದಲ್ಲಿ ತೊಡಗುವ ದೇಶಗಳೂ ಎದುರಿಸಬೇಕಾಗುತ್ತದೆ. ಈ ಕಾರಣದಿಂದಲೇ ಇಸ್ರೇಲ್–ಇರಾನ್ ಸಂಘರ್ಷವು ಇನ್ನೂ ಯುದ್ಧಕ್ಕೆ ತಿರುಗಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ.

ಇದು ಒಂದು ಮದುವೆ ಕಥೆ

ಮದುವೆ ಕುರಿತಾದ ಸಾಕಷ್ಟು ಕಥೆಗಳು ಈಗಾಗಲೇ ಸಿನಿಮಾಗಳಾಗಿವೆ. ಅದಕ್ಕೆ ಮತ್ತೊಂದು ಸೇರ್ಪಡೆ 'ಒಂದು ಮದುವೆ ಕಥೆ'. ಹಿರಿಯ ರಂಗಕರ್ಮಿ ಕನಸುರಮೇಶ್ ನಿರ್ದೇಶನದ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಸಂಪೂರ್ಣ ಹಾಸ್ಯ ಕಥೆ ಹೊಂದಿರುವ ಚಿತ್ರಕ್ಕೆ ಉದ್ಯಮಿ ವಿಜೇಯೇಂದ್ರಗೌಡ ಬಂಡವಾಳ ಹೂಡುತ್ತಿದ್ದಾರೆ.

'ಮದುವೆ ಎಂಬುದು ಗಂಡು–ಹೆಣ್ಣಿನ ಬದುಕಿನ ತಿರುವು. ಅದು ಆಗೋದಕ್ಕೆ ಏನೆಲ್ಲಾ ಪ್ರಯತ್ನಗಳು ನಡೆಯುತ್ತವೆ, ಯಾರ‍್ಯಾರು ಅಡ್ಡಿಪಡಿಸುತ್ತಾರೆ ಎಂಬುದು ಚಿತ್ರದ ಕಥೆ. ಒಂದು ಕಾಲದಲ್ಲಿನ ಹೆಣ್ಣು ಭ್ರೂಣಹತ್ಯೆಯಿಂದ ಇವತ್ತು ಹಳ್ಳಿಗಳಲ್ಲಿ ಹುಡುಗರಿಗೆ ಹುಡುಗಿ ಸಿಗದಂತಾಗಿದೆ. ಇಂತಹ ಸಂದರ್ಭದಲ್ಲಿ ವಯಸ್ಸಾದ ವ್ಯಕ್ತಿಗೆ ಮದುವೆ ನಿಶ್ಚಯವಾಗುತ್ತದೆ. ಮುಂದೇನಾಗುತ್ತದೆ ಎಂಬುದೇ ಚಿತ್ರಕಥೆ' ಎಂದರು ನಿರ್ದೇಶಕರು.

'ತಪ್ದೇ ಎಲ್ಲರೂ ಬನ್ನಿ' ಎಂಬ ಅಡಿಬರಹವಿದೆ. ರವಿಸಿರಿ, ಗಹನ, ಜಯರಾಮ್ ಪ್ರಮುಖ ಪಾತ್ರದಲ್ಲಿದ್ದಾರೆ. ಗಣೇಶ್‌ರಾವ್ ಕೇಸರ್‌ಕರ್, ಕಿಲ್ಲರ್ ವೆಂಕಟೇಶ್, ಮಿಮಿಕ್ರಿ ಗೋಪಿ ಮುಂತಾದವರು ತಾರಾಗಣದಲ್ಲಿದ್ದಾರೆ. ರವಿಕುಮಾರ್ ಕಪ್ಪುಸೋಗೆ ಮೂರು ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಮನು ರಾವ್ ಸಂಗೀತ ಸಂಯೋಜಿಸಿದ್ದಾರೆ. ದೀಪಕ್‌ಕುಮಾರ್. ಜೆ.ಕೆ ಛಾಯಾಚಿತ್ರಗ್ರಹಣ, ಜಾಬ್ಸನ್ ಸಂಕಲನವಿದೆ. ಮೈಸೂರು ಮತ್ತು ಮಂಡ್ಯಗಳಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಲು ತಂಡವು ಯೋಜನೆ ರೂಪಿಸಿಕೊಂಡಿದೆ.



ಗಹನ

ಸಿನಿಮಾವಾಗ್ತಿದೆ 'ಕರಿಮಣಿ ಮಾಲೀಕ...'



ಚಿತ್ರತಂಡ

ಟ್ರೆಂಡ್ ಆದ, ಹಿಟ್ ಆದ ಹಾಡಿನ ಸಾಲುಗಳೇ ಚಿತ್ರದ ಶೀರ್ಷಿಕೆಯಾಗುವ ಟ್ರೆಂಡ್ ಬಹಳ ಕಾಲದಿಂದ ಇದೆ. ಆ ಸಾಲಿಗೆ ಇತ್ತೀಚೆಗೆ ಬಹಳ ಟ್ರೆಂಡ್ ಆಗಿದ್ದ 'ಕರಿಮಣಿ ಮಾಲೀಕ ನೀನಲ್ಲ' ಸೇರುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಬಹಳ ಜನಪ್ರಿಯವಾಗಿದ್ದ ಈ ಸಾಲನ್ನೇ ಶೀರ್ಷಿಕೆಯಾಗಿ ಹೊಂದಿರುವ ಚಿತ್ರಕ್ಕೆ ಈ ಹಿಂದೆ 'ಯೂಟರ್ನ್ 2' ನಿರ್ದೇಶಿಸಿದ್ದ ಚಂದ್ರು ಓಬಯ್ಯ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ.

'ಯೂ ಟರ್ನ್ 2' ಆದ ನಂತರ 'ರಾಮು ಆ್ಯಂಡ್ ರಾಮು' ಚಿತ್ರ ಮಾಡಿದ್ದೆ. ಅದು ಸೆನ್ಸಾರ್ ಹಂತದಲ್ಲಿದೆ. ಮತ್ತೊಂದು ಚಿತ್ರ 'ಪ್ಯಾಟಿ ಹುಡ್ಗಿ ಹಳ್ಳಿ ಲೈಫು' ಇನ್ನೂ ಚಿತ್ರೀಕರಣ ಹಂತದಲ್ಲಿದೆ. ಎಳನೀರು ಮಾರುವ ಹುಡುಗ, ಹೂ ಮಾರುವ ಹುಡುಗಿಯ ನಡುವಿನ ವಿಭಿನ್ನ ಪ್ರೇಮಕಥೆಯೇ 'ಕರಿಮಣಿ ಮಾಲೀಕ ನೀನಲ್ಲ'. ಮೇ ತಿಂಗಳಲ್ಲಿ ಚಿತ್ರೀಕರಣ ಪ್ರಾರಂಭಿಸಿ, 40 ದಿನಗಳ ಕಾಲ ಬೆಂಗಳೂರು, ಮೈಸೂರು, ಮಡಿಕೇರಿ ಸುತ್ತಮುತ್ತ ಶೂಟಿಂಗ್ ನಡೆಸುವ ಯೋಜನೆಯಿದೆ' ಎಂದರು ಚಂದ್ರು ಓಬಯ್ಯ.

ಚಿತ್ರದಲ್ಲಿ 4 ಹಾಡುಗಳಿದ್ದು, ಮ್ಯೂಸಿಕ್ ಕೂಡ ನಿರ್ದೇಶಕರದ್ದೆ. ನಾಯಕಿಯಾಗಿ ರಮಿಕಾ ಸುತಾರ ಅಭಿನಯಿಸುತ್ತಿದ್ದು, ನಾಯಕನ ಪಾತ್ರಕ್ಕೆ ಹುಡುಕಾಟ ನಡೆದಿದೆ. ವೀನಸ್ ನಾಗರಾಜಮೂರ್ತಿ ಛಾಯಾಚಿತ್ರಗ್ರಹಣವಿದೆ. ಉಳಿದ ಮಾಹಿತಿಯನ್ನು ಶೀಘ್ರದಲ್ಲಿ ನೀಡುವುದಾಗಿ ಚಿತ್ರತಂಡ ಹೇಳಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಭಾರತಕ್ಕೂ ಹಾನಿ...

ಭಾರತಕ್ಕೆ ಇದು ಸಂಕಷ್ಟದ ಸ್ಥಿತಿ. ಭಾರತ–ಇರಾನ್‌ನದ್ದು ಬಹಳ ಹಳೆಯ ಸಂಬಂಧ. ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ಭಾರತ–ಇಸ್ರೇಲ್ ಸಂಬಂಧ ಹಲವು ರೀತಿಯಲ್ಲಿ ರೂಪುಗೊಂಡಿದೆಯಷ್ಟೆ. ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸಿದ್ದರ ಕುರಿತು ಭಾರತ ಪ್ರತಿಕ್ರಿಯಿಸಿದೆ. 'ಹಿಂಸೆಯ ಹಾದಿಯಿಂದ ತಕ್ಷಣವೇ ಹಿಂದೆ ಸರಿದು, ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದು ನಾವು ಒತ್ತಾಯಿಸುತ್ತೇವೆ' ಎಂದು ಭಾರತದ ವಿದೇಶಾಂಗ ಸಚಿವಾಲಯವು ಹೇಳಿದೆ. ಇರಾನ್ ಹಾಗೂ ಇಸ್ರೇಲ್ ನಡುವೆ ಯುದ್ಧವು ಆರಂಭವಾದಲ್ಲಿ, ಭಾರತಕ್ಕೂ ಹೆಚ್ಚಿನ ಹಾನಿಯಾಗಲಿದೆ.

ನಾಲ್ಕು ವರ್ಷಗಳ ಹಿಂದೆ ಭಾರತವು ಇರಾನ್‌ನಿಂದಲೇ ಶೇ 85ರಷ್ಟು ಕಚ್ಚಾ ತೈಲವನ್ನು ಖರೀದಿಸುತ್ತಿತ್ತು. ಅಮೆರಿಕವು ಇರಾನ್ ಮೇಲೆ ನಿರ್ಬಂಧ ಹೇರಿದ್ದರಿಂದ ಭಾರತವು ಕಚ್ಚಾ ತೈಲ ಖರೀದಿಸುವುದನ್ನು ನಿಲ್ಲಿಸಿತು. ಈಗ ಭಾರತವು ರಷ್ಯಾದಿಂದ ಮತ್ತು ಮಧ್ಯ ಪ್ರಾಚ್ಯದ ಇತರ ದೇಶಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದೆ. ಈಗಾಗಲೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಯುದ್ಧ ಹೀಗೇ ಮುಂದುವರಿದರೆ, ಬೆಲೆಯು ಇನ್ನಷ್ಟು ಹೆಚ್ಚಲಿದೆ. ಇದು ಭಾರತದ ಮೇಲೂ ಪರಿಣಮಿಸಲಿದೆ. ಭಾರತದಲ್ಲಿ ಈಗಾಗಲೇ ಪೆಟ್ರೋಲ್ ಬೆಲೆ ₹100ರ ಆಸುಪಾಸಿನಲ್ಲಿದೆ. ಇದು ಇನ್ನಷ್ಟು ಏರಿಕೆಯಾಗಿದೆ. ಪೆಟ್ರೋಲ್ ಬೆಲೆ ಏರಿಕೆಯಿಂದ ಭಾರತ ಜನರು ಈಗಾಗಲೇ ಸಂಕಷ್ಟದಲ್ಲಿದ್ದಾರೆ. ಈ ಯುದ್ಧವು ಗಾಯದ ಮೇಲೆ ಬರೆ ಎಳೆದಂತಾಗುತ್ತದೆ.

ವ್ಯಾವಹಾರಿಕವಾಗಿಯೊಂದೇ ಅಲ್ಲದೆ, ಇರಾನ್ ಹಾಗೂ ಇಸ್ರೇಲ್‌ನಲ್ಲಿರುವ ಭಾರತೀಯರ ಸುರಕ್ಷತೆಯ ವಿಚಾರವೂ ಇಲ್ಲಿ ಪ್ರಮುಖವಾಗಿದೆ. ಭಾರತದ ಕಾರ್ಮಿಕರು ಉದ್ಯೋಗ ಅರಸಿ ಇತ್ತೀಚೆಗೆ ದೊಡ್ಡ ಸಂಖ್ಯೆಯಲ್ಲಿ ಯುದ್ಧಪೀಡಿತ ಇಸ್ರೇಲ್‌ಗೆ ತೆರಳಿದ್ದಾರೆ. ಭಾರತ ಸರ್ಕಾರದ ನೆರವಿನೊಂದಿಗೆ ಕಾರ್ಮಿಕರು ಇಸ್ರೇಲ್‌ಗೆ ತೆರಳಿದ್ದಾರೆ. ಈಗ ಈ ಕಾರ್ಮಿಕರ ಜೀವ ಸಂಕಷ್ಟಕ್ಕೆ ಸಿಲುಕಿದಂತಾಗಿದೆ. ಇನ್ನು ಈಗಾಗಲೇ ಇಸ್ರೇಲ್‌ನಲ್ಲಿ ನೆಲೆಸಿರುವ ಭಾರತೀಯರ ಜೀವಗಳಿಗೆ ಕುತ್ತಾಗುವ ಸಾಧ್ಯತೆ ಇದೆ. ಇರಾನ್‌ನಲ್ಲಿಯೂ ಸುಮಾರು 4,300 ಭಾರತೀಯರು ನೆಲೆಸಿದ್ದಾರೆ. ಇವರೂ ಆತಂಕಕ್ಕೆ ಸಿಲುಕಿದ್ದಾರೆ.


ಗುಂಡಣ್ಣ



ಹಾರುವ ಸಿಖ್ ನ ಪ್ರೇರಣೆಯ ಕಥೆ

ನುಡಿ ಬೆಳಗು





ಎಚ್.ಎಸ್.ನವೀನಕುಮಾರ್, ಹೊಸದುರ್ಗ

ನಮ್ಮ ದೇಶದ ಕ್ರೀಡಾ ಲೋಕದ ದಂತಕಥೆ, ಸುಪ್ರಸಿದ್ಧ ಓಟಗಾರ ಮಿಲ್ಖಾ ಸಿಂಗ್‌ರವರ ಜೀವನದ ಕಥೆ ನಿಜಕ್ಕೂ ರೋಚಕವಾದುದು. ಈಗಿನ ಪಾಕಿಸ್ತಾನದ ಪಂಜಾಬ್‌ನಲ್ಲಿರುವ ಗೋವಿಂದಪುರ ಎಂಬಲ್ಲಿ ಹುಟ್ಟಿದ ಮಿಲ್ಖಾ ಸಿಂಗ್, ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಘನ ಘೋರ ಹತ್ಯಾಕಾಂಡಕ್ಕೆ ಸಾಕ್ಷಿಯಾಗುತ್ತಾರೆ. ಇವರ ಕಣ್ಣೆದುರಲ್ಲೇ ಇವರ ಇಡೀ ಕುಟುಂಬದ ಹತ್ಯೆಯಾಗುತ್ತದೆ. ತನ್ನ ಅಕ್ಕನ ಜೊತೆಗೆ ನಿರಾಶ್ರಿತರಾಗಿ ಭಾರತಕ್ಕೆ ಓಡಿ ಬಂದ ಮಿಲ್ಖಾ ಅತ್ಯಂತ ಕಷ್ಟಕರವಾದ ಬಾಲ್ಯವನ್ನು ಕಳೆಯುತ್ತಾರೆ. ನಂತರ ಅತ್ಯಂತ ಕಡಿಮೆ ಸಂಬಳಕ್ಕೆ ಸೇನೆಯಲ್ಲಿ ಜವಾನನಾಗಿ ಸೇರಿಕೊಳ್ಳುತ್ತಾರೆ. ಇವರಿದ್ದ ರೆಜಿಮೆಂಟಿನ ಯೋಧರಿಗಾಗಿ ಒಂದು ಗುಡ್ಡಗಾಡು ಓಟದ ಸ್ಪರ್ಧೆ ಆಯೋಜಿತವಾಗಿರುತ್ತದೆ. ಅದರಲ್ಲಿ ವಿಜೇತರಾಗುವವರಿಗೆ ಸಂಬಳದ ಜೊತೆಗೆ ಪ್ರತಿನಿತ್ಯ ಒಂದು ಲೋಟ ಹಾಲು ಹಾಗೂ ಒಂದು ಮೊಟ್ಟೆ ಉಚಿತ ಎಂಬ ಘೋಷಣೆ, ಕ್ಷೀರಪ್ರಿಯರಾದ ಮಿಲ್ಖಾರ ಮನ ಸೆಳೆಯುತ್ತದೆ.

ಈ ಬಹುಮಾನವನ್ನು ಗೆಲ್ಲಲೇಬೇಕೆಂದು ತನ್ಮಯತೆಯಿಂದ ಓಡಿದ ಮಿಲ್ಖಾರ ಅದ್ಭುತ ಪ್ರತಿಭೆಯನ್ನು ಸೇನೆಯ ಕ್ರೀಡಾ ಕೋಚ್ ಗುರುತಿಸಿ, ಇವರಿಗೆ ವಿಶೇಷ ತರಬೇತಿಗಳನ್ನು ನೀಡುತ್ತಾರೆ. ರಾಷ್ಟ್ರೀಯ ಅಥ್ಲೆಟಿಕ್ಸ್ ಟ್ರಯಲ್ಸ್ ಸಂದರ್ಭದಲ್ಲಿ ಸಂಪೂರ್ಣ ಸನ್ನದ್ಧರಾಗಿದ್ದ ಮಿಲ್ಖಾರ ಮೇಲೆ ಹೊಟ್ಟೆಕಿಚ್ಚಿನಿಂದ ಕೆಲವು ಸಹೋದ್ಯೋಗಿಗಳು, ತಮ್ಮ ಸ್ಪೈಕ್ ಶೂಗಳಿಂದ ಇವರ ಪಾದಗಳಿಗೆ ತೀವ್ರ ಸ್ವರೂಪದ ಗಾಯ ಮಾಡುತ್ತಾರೆ.

ಆದರೆ ಆಯ್ಕೆಯ ದಿನದಂದು ಕೋಚ್ ಎಷ್ಟೇ ಬೇಡವೆಂದರೂ ಕೇಳದೆ ಬ್ಯಾಂಡೇಜ್ ಹಾಕಿದ್ದ ಬರಿಗಾಲಲ್ಲಿಯೇ ಓಡಿ ಮಿಲ್ಖಾ ಅವರು ರಾಷ್ಟ್ರೀಯ ದಾಖಲೆ ನಿರ್ಮಿಸುತ್ತಾರೆ. ನಂತರ 400 ಹಾಗೂ 200 ಮೀಟರ್ ಓಟದ ಸ್ಪರ್ಧೆಗಳಲ್ಲಿ ದೇಶವನ್ನು ಒಲಿಂಪಿಕ್ಸ್, ಏಷ್ಯಾಡ್, ಕಾಮನ್ವೆಲ್ತ್ ಮುಂತಾದ ಪ್ರತಿಷ್ಠಿತ ಕ್ರೀಡಾಕೂಟಗಳಲ್ಲಿ ಪ್ರತಿನಿಧಿಸಿ, ಹಲವಾರು ಪದಕಗಳನ್ನು ದೇಶಕ್ಕೆ ತಂದುಕೊಡುತ್ತಾರೆ. ಆಗ ಪ್ರಧಾನಿಯಾಗಿದ್ದ ನೆಹರೂರವರು ನೆರೆಯ ಪಾಕಿಸ್ತಾನದ ಜೊತೆಗೆ ಕ್ರೀಡಾ ಬಾಂಧವ್ಯವನ್ನು ವೃದ್ಧಿಸುವ ಸಲುವಾಗಿ ಅಲ್ಲಿಗೆ ಒಂದು ಕ್ರೀಡಾ ನಿಯೋಗವನ್ನು ಸ್ಪರ್ಧೆಗಾಗಿ ಕಳಿಸುವ ಆಲೋಚನೆ ಮಾಡುತ್ತಾರೆ. ಆ ನಿಯೋಗದ ನೇತೃತ್ವವನ್ನು ಮಿಲ್ಖಾ ಅವರೇ ವಹಿಸಬೇಕು ಎಂದು ಆಶಿಸುತ್ತಾರೆ.

ಆದರೆ ಇದನ್ನು ಮಿಲ್ಖಾ ನಿರಾಕರಿಸುತ್ತಾರೆ. ಆಗ ನೆಹರೂ, 'ನೀನೊಬ್ಬ ಯೋಧ ನೀನು ದೇಶದ ಈ ಅವಶ್ಯಕತೆಗೆ ಇಲ್ಲ ಎನ್ನಬಾರದು' ಎಂದಾಗ ಮಿಲ್ಖಾ ಪಾಕಿಸ್ತಾನಕ್ಕೆ ಹೋದರು. ಅಲ್ಲಿ ಏಷ್ಯಾದ ತೂಫಾನ್ ಎಂದೇ ಪ್ರಖ್ಯಾತರಾಗಿದ್ದ ಪಾಕಿಸ್ತಾನದ ವೇಗದ ಓಟಗಾರ ಅಬ್ದುಲ್ ಖಾಲಿಕ್ ಅವರನ್ನು ದೊಡ್ಡ ಅಂತರದಿಂದ ಸೋಲಿಸಿ ಅಲ್ಲಿನ ಅಧ್ಯಕ್ಷರಿಂದ ಚಿನ್ನದ ಪದಕದ ಜೊತೆಗೆ 'ಹಾರುವ ಸಿಖ್' ಎಂಬ ಬಿರುದನ್ನೂ ಪಡೆದರು. ಮಿಲ್ಖಾ ತಮ್ಮ ಪುಸ್ತಕ 'ದಿ ರೇಸ್ ಆಫ್ ಮೈ ಲೈಫ್'ನಲ್ಲಿ ನಿಮ್ಮದು ಯಾವುದೇ ಕ್ಷೇತ್ರವಿರಲಿ ಅದರಲ್ಲಿ ಯಶಸ್ಸಿಗೆ ಕಠಿಣ ಪರಿಶ್ರಮ, ದೃಢ ಇಚ್ಛಾಶಕ್ತಿ ಹಾಗೂ ಸಮರ್ಪಣಾ ಮನೋಭಾವ ಅತಿ ಮುಖ್ಯ ಎನ್ನುತ್ತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಏಪ್ರಿಲ್ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಸಪ್ತಮಿ ಗಂ. 12-12 ನಕ್ಷತ್ರ: ಪುನರ್ವಸು ಗಂ. 27-06 ಯೋಗ: ಸುಕರ್ಮ ಗಂ. 23-08 ಕರಣ: ವಣಿಜ ಗಂ. 12-12, ಮೇಷ ಮಾಸದ 02 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1.

ರಾಹುಕಾಲ : ಬೆಳಿಗ್ಗೆ 07-30 - 09-00

ಸೂರ್ಯೋದಯ : 06-21 **ಸೂರ್ಯಾಸ್ತ :** 06-40

ಮುಸ್ಲಿಂ ದಿನಾಂಕ : 05 ಶವ್ವಾಲ್

ಅದೃಷ್ಟ ಸಂಖ್ಯೆ : 2, 3

ಮೇಷ: ಟೆಕ್ಸ್‌ಟೈಲ್ ಉದ್ಯಮದವರು ರಫ್ತು ವ್ಯಾಪಾರಗಳಿಂದ ಲಾಭವನ್ನು ಹೊಂದುವರು. ಗುರಿ ಸಾಧಿಸಲು ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ತಂದೆಯಾಗುವ ಸುದ್ದಿ ಕೇಳಿ ಸಂತೋಷವಾಗುವುದು.

ವೃಷಭ: ನಿರುದ್ಯೋಗಿ ಯುವಕರು ಖಾಸಗಿ ಸಂಸ್ಥೆಗಳಲ್ಲಿ ಉತ್ತಮ ಉದ್ಯೋಗಕ್ಕೆ ಪ್ರಯತ್ನ ಪಡಬಹುದು. ಧನಾಗಮನ ಹೆಚ್ಚಿದ್ದರೂ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ. ಮಕ್ಕಳ ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ.

ಮಿಥುನ: ವ್ಯವಹಾರದಲ್ಲಿ ಕೆಲವೊಂದು ಸನ್ನಿವೇಶಗಳು ಪರವಾಗಿ ಇರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರಿಯಿರಿ. ಸಂಜೆಯ ಸಮಯದಲ್ಲಿ ವಾಹನ ಚಾಲನೆಯಲ್ಲಿ ಜಾಗರೂಕತೆ ಮಾಡಿ.

ಕರ್ಕಾಟಕ: ಬೆಳವಣಿಗೆಯ ಹಾದಿಯಲ್ಲಿ ದಿಕ್ಕು ತಪ್ಪಿಸುವವರೇ ಹೆಚ್ಚಿರುವುದರಿಂದ ನಿಮ್ಮತನವನ್ನು ಪ್ರದರ್ಶಿಸುವುದು ಸ್ವಲ್ಪ ಕಷ್ಟವಾದೀತು. ದುರ್ಜನರಿಂದ ದೂರವಿದ್ದು, ಸಜ್ಜನರಲ್ಲಿ ಸ್ನೇಹ ಮತ್ತು ವ್ಯವಹಾರ ಮಾಡುವುದು ಉತ್ತಮ.

ಸಿಂಹ: ಉನ್ನತ ಅಧಿಕಾರಿಗಳ ಜತೆಗಿನ ಸಂಬಂಧವನ್ನು ಉತ್ತಮವಾಗಿ ಇಟ್ಟುಕೊಳ್ಳುವುದರಿಂದ ಲಾಭವಾಗುತ್ತದೆ. ಕರ್ತವ್ಯ ಕೊರತೆಯಿಂದಾಗಿ ಜೀವನದಲ್ಲಿ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ.

ಕನ್ಯಾ: ಬುದ್ಧಿವಂತಿಕೆಯ ತೀರ್ಮಾನಗಳು ನಿಮ್ಮವರಲ್ಲಿ ನಿಮ್ಮನ್ನು ತೂಕದ ವ್ಯಕ್ತಿಯನ್ನಾಗಿ ಮಾಡುತ್ತದೆ. ವ್ಯವಹಾರ ಕ್ಷೇತ್ರವನ್ನು ವಿಸ್ತರಿಸಲು ಈ ದಿನ ಸೂಕ್ತ. ಸಂಗಾತಿಯ ಮಾತಿಗೆ ಬೆಲೆ ಕೊಡಿ.

ತುಲಾ: ಬಹುಕಾಲಗಳಿಂದ ಸಾಲ ತೀರಿಸುವಿಕೆಯಂಥ ಯೋಜನೆ ಇದ್ದರೆ ಈಡೇರಲಿದೆ. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವವರಿಗೆ ಕನಸುಗಳು ನನಸಾಗಲಿದೆ. ಏಳಿಗೆಗೆ ನೆರವಾಗುವವರ ಸಹಾಯ ಸಿಗುವುದು.

ವೃಶ್ಚಿಕ: ವಿದ್ಯುತ್ ಸಂಬಂಧಿ ವಸ್ತುಗಳ ಬಳಕೆಯನ್ನು ಮಾಡುವಾಗ ಹೆಚ್ಚಿನ ಮುಂಜಾಗ್ರತಾ ಕ್ರಮ ವಹಿಸುವುದು ಸೂಕ್ತ. ಗೃಹಿಣಿಯರು ಉತ್ತಮವಾದ ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು.

ಧನು: ಹೆಚ್ಚಿನ ಆತ್ಮಸ್ಥೈರ್ಯದಿಂದ ಯೋಜಿಸಿದ ಎಲ್ಲಾ ಕೆಲಸದಲ್ಲಿಯೂ ಜಯ ಕಾಣುವಿರಿ. ವಾಯುಸಂಬಂಧವಾಗಿ ಆರೋಗ್ಯ ತೊಂದರೆಗಳು ಕಾಣಿಸಿಕೊಳ್ಳಬಹುದು. ಷೇರು ಮಾರಾಟಗಳಿಂದ ಲಾಭ ಹೊಂದುವಿರಿ.

ಮಕರ: ಸುತ್ತಣ ಪರಿಸರದಲ್ಲಿರುವ ಬುದ್ಧಿವಂತ ವ್ಯಕ್ತಿಗಳಿಂದ ಹೆಚ್ಚಿನ ಲಾಭ ಉಂಟಾಗುವುದು. ನಿಯಮಿತ ಆಹಾರದಿಂದ ದೇಹದಲ್ಲಿ ವಾತದ ಬಾಧೆಯು ಕಡಿಮೆಯಾಗಲಿದೆ. ಸಕ್ರಿಯವಾಗಿ ಭಾಗವಹಿಸಿ.

ಕುಂಭ: ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಕೌಶಲ ವೃದ್ಧಿಸಿಕೊಳ್ಳಲು ಹೊಸ ಅವಕಾಶಗಳು ದೊರೆಯಲಿವೆ. ವೈದ್ಯ ವೃತ್ತಿಯವರಿಗೆ ವಿಶೇಷ ಅನುಭವ ಸಿಗಲಿದೆ. ವೈದ್ಯರು ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸಬಹುದು.

ಮೀನ: ಉನ್ನತ ಅಧಿಕಾರಿಗಳ ಮೇಲೆ ಇದ್ದ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಸತತ ಪ್ರಯತ್ನದಿಂದ ಸದ್ಯದಲ್ಲೇ ಕೆಲಸ ಕಾರ್ಯವನ್ನು ಆರಂಭಿಸುವಿರಿ. ಹಣದ ಹರಿವು ಅನುಭವಕ್ಕೆ ಬರಲಿದೆ.

ಪದಬಂಧ 5651


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರಗತಿಗೆ ವಿರುದ್ಧವಾಗಿ ನಡೆಯುವವನು (4)
2.ಆವೇಶದಿಂದಲೇ ಒಳ ಸೇರುವಿಕೆ (3)
4.ಪದ ಹೇಳಿ ಪಡೆದುಕೊಂಡಿರುವ ಡಿಗ್ರಿ (3)
6.ಉಮೇದುವಾರನ ಹೊಟ್ಟೆ! (3)
7.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
10. ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಬಣ್ಣ ಹಚ್ಚಿಕೊಂಡು ಮಾಡಿದ ವರ್ಣನೆ (3)
13.ಪ್ರತ್ಯಕ್ಷ ಪದದ ವಿರುದ್ಧ ಪದ (3)
14.ನಾರು ಬಟ್ಟೆ ಇಲ್ಲಿದೆ (4)

ಮೇಲಿಂದ ಕೆಳಕ್ಕೆ

1.ತಾಪವಿದ್ದಾಗಲೇ ತೋರಿದ ಶೌರ್ಯ! (3)
2.ಅತೀ ತೀಕ್ಷ್ಣವಾದುದು (3)
3.ಈತ ಬಹಳ ದಡ್ಡ! (4)
5.ಬೆಡಗು ಅಥವಾ ಕ್ರೀಡೆ ಎಂದರೂ ಆದೀತು (3)
6.ದಾಹವಿದ್ದಾಗ ನೀಡಿದ ದೃಷ್ಟಾಂತ (5)
8.ಮುಸಲ್ಮಾನರ ದೊರೆಯಿವನು (3)
9.ಆರೋಪದಲ್ಲಿ ಕೊನೆಗೊಂಡಿರುವ ಮುಕ್ತಾಯ (4)
10.ಸಂಬಂಧಾವಲಂಬಿಯಾದುದು (3)
12.ಗಡಿ ಹತ್ತಿರ ತಲೆದೋರಿದ ಶೀತ (3)



5650ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿಜ್ಞಾನ 3.ವರಾಹ
6.ಬಾಲ 7.ವ್ಯವಹಾರ
9.ಸಹಗಮನ 12.ಸರೋವರ 15.ಕತ್ತೆ
16.ನೆನಪು 17.ಅಹವಾಲು

ಮೇಲಿಂದ ಕೆಳಕ್ಕೆ:
1.ಪತ್ತಲ 2.ಜ್ಞಾತಿಕಲಹ
4.ಹಗರಣ 5.ನವ್ಯ
8.ವದನ 9.ಸದ್ಭಾವ
10.ಮನೋನಿಗ್ರಹ
11.ಅಸಹನೆ 14.ರಕ್ತ
15.ಕನಲು

ಸುಡೊಕು 6036

	8			9		5		3
6	7	5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6035 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7



ಪ್ರಜಾ ಮತ

2024 ಜನತಂತ್ರದ ಹಬ್ಬ



ಮತ ಪತ್ರ



ಪ್ರಜಾಪ್ರಭುತ್ವದಲ್ಲಿ ಮತದಾನ ಬಹಳ ಮುಖ್ಯವಾದುದು. ಎಲ್ಲರೂ ಕರ್ತವ್ಯ ಎಂದು ಭಾವಿಸಿ ಮತದಾನ ಮಾಡಬೇಕು. ಅದನ್ನು ಹಕ್ಕು ಎಂದು ತಿಳಿಯುವುದಕ್ಕಿಂತಲೂ ಹೆಚ್ಚಾಗಿ ಕರ್ತವ್ಯ ಎಂದು ಅರಿತುಕೊಂಡರೆ ಮತದಾರರ ಜವಾಬ್ದಾರಿಯ ಅರಿವಾಗುತ್ತದೆ. ಮತದಾನದ ಜವಾಬ್ದಾರಿಯನ್ನು ಚಾಚೂತಪ್ಪದೆ ನಿರ್ವಹಿಸುವುದು ಎಲ್ಲ ಮತದಾರರ ಪ್ರಾಥಮಿಕ ಕರ್ತವ್ಯ.

ತಮ್ಮ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಯಾರೊಬ್ಬರೂ ಸೂಕ್ತ ಅಲ್ಲ ಎಂಬ ಭಾವನೆ ಇದ್ದರೂ ಮತದಾನಕ್ಕೆ ಗೈರು ಹಾಜರಾಗಬಾರದು. ಮತಗಟ್ಟೆಗೆ ಹೋಗಿ 'ನೋಟಾ' ಆಯ್ಕೆಗೆ ಮತ ಚಲಾಯಿಸಬೇಕು. ಯಾವಾಗಲೂ ನಮ್ಮ ದೇಶದಲ್ಲಿ ಚುನಾವಣೆಗಳು ನಡೆದಾಗ ಗ್ರಾಮೀಣ ಪ್ರದೇಶದ ಜನರು ಮತ ಚಲಾಯಿಸುವುದನ್ನು ಕರ್ತವ್ಯ ಎಂದು ಭಾವಿಸಿ ಸಂಭ್ರಮಿಸುತ್ತಾರೆ. ಆದರೆ, ನಗರ ಪ್ರದೇಶಗಳ ಜನರು ಮತದಾನಕ್ಕೂ ತಮಗೂ ಸಂಬಂಧ ಇಲ್ಲ ಎಂಬಂತೆ ವರ್ತಿಸಿ, ಮತಗಟ್ಟೆಯಿಂದ ದೂರ ಉಳಿಯುತ್ತಾರೆ.

ಈ ಲೋಕಸಭಾ ಚುನಾವಣೆಯಲ್ಲಿ ಮತದಾನದ ಅವಕಾಶ ಹೊಂದಿರುವ ಎಲ್ಲರೂ ಕಡ್ಡಾಯವಾಗಿ ಮತ ಚಲಾಯಿಸಲಿ. ಮತದಾನ ಮಾಡದವರು ರಾಜಕೀಯ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತು ಮಾತನಾಡುವ ಅಧಿಕಾರವನ್ನೇ ಹೊಂದಿರುವುದಿಲ್ಲ ಎಂಬುದು ನನ್ನ ಭಾವನೆ.

ಎನ್. ಸಂತೋಷ್ ಹೆಗ್ಡೆ
ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮತ್ತು ಕರ್ನಾಟಕದ ಮಾಜಿ ಲೋಕಾಯುಕ್ತರು

ಮತ ಆಮಿಷ: ಆಯೋಗದ ವಶ

₹48.66 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 79.87 ಕೋಟಿ
ಮದ್ಯ	₹ 158.94 ಕೋಟಿ (1.42 ಕೋಟಿ ಲೀ)
ಮಾದಕವಸ್ತು	₹10.22 ಕೋಟಿ (450 ಕೆ.ಜಿ.)
ಚಿನ್ನ	₹56.86 ಕೋಟಿ (107.40 ಕೆ.ಜಿ.)
ಬೆಳ್ಳಿ	₹1.13 ಕೋಟಿ (296.79 ಕೆ.ಜಿ.)

ಎಂಥಾ ಮಾತು!



ಶಿವಮೊಗ್ಗದಲ್ಲಿ ತಾಯಿ ಹೃದಯದ ಪೂಜ್ಯ ತಂದೆಯವರು ಇದ್ದಾರೆ. ತಾಯಿ ಹೃದಯದ ಪೂಜ್ಯ ತಂದೆಯವರ ಸಣ್ಣ ಮಗ ರಾಜ್ಯಾಧ್ಯಕ್ಷರು ಇದ್ದಾರೆ. ತಾಯಿ ಹೃದಯದ ಪೂಜ್ಯ ತಂದೆಯವರ ಹಿರಿಯ ಮಗ ಇದ್ದಾರೆ. ಅವರೇ ಮೂರು ಜನ ದೊಡ್ಡ ದೊಡ್ಡ ನಾಯಕರು ಇರುವಾಗ ಅಲ್ಲಿ ನನ್ನದೇನು ಕೆಲಸ?

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ
(ಬಿಜೆಪಿ ತಾರಾ ಪ್ರಚಾರಕರಾಗಿ ಶಿವಮೊಗ್ಗದಲ್ಲಿ ಪ್ರಚಾರ ಮಾಡುವಿರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದು ಹೀಗೆ)

ಮೊದಲ ಮತದ ಸಂಭ್ರಮ

ಕೆ.ಎಚ್. ಮೋಹನಕೃಷ್ಣ, ಎಂಜಿನಿಯರಿಂಗ್ ವಿದ್ಯಾರ್ಥಿ, ಕಂದಾವರ, ಹಾಸನ ಜಿಲ್ಲೆ



ನನ್ನ ಹಕ್ಕನ್ನು ತಪ್ಪದೇ ಚಲಾಯಿಸುತ್ತೇನೆ. ನಾನು ಮತದಾನ ಮಾಡಲು ಜಾತಿ, ಧರ್ಮ ಎನ್ನದೇ, ಯಾವುದೇ ಆಸೆ, ಆಕಾಂಕ್ಷೆಗಳಿಗೆ ಬಲಿಯಾಗುವುದಿಲ್ಲ. ನನ್ನಂತೆ ಯುವಜನರು ಯೋಚಿಸಿ ಮತದಾನ ಮಾಡುವುದರಿಂದ ಉತ್ತಮ ಜನಪ್ರತಿನಿಧಿ ಆಯ್ಕೆ ಮಾಡುವುದರೊಂದಿಗೆ ಸುರಕ್ಷಿತ ದೇಶವನ್ನು ನಿರ್ಮಿಸಲು ಸಾಧ್ಯವಾಗುತ್ತದೆ.

ಕಣ ಸ್ವಾರಸ್ಯ

ಹಿರಿಯರ ಪಾರಮ್ಯ

ಪ್ರತಿ ಚುನಾವಣೆಯಲ್ಲೂ ಅಭ್ಯರ್ಥಿಗಳ ವಯಸ್ಸಿನ ವಿಷಯ ದೊಡ್ಡ ಸದ್ದು ಮಾಡುತ್ತದೆ. ದಶಕಗಳ ಕಾಲದಿಂದ ರಾಜಕೀಯ ಅಧಿಕಾರಕ್ಕೆ ಅಂಟಿಕೊಂಡಿರುವವರನ್ನು ಬದಿಗೆ ಸರಿಸಿ ಯುವ ಮುಖಗಳಿಗೆ ಅವಕಾಶ ಕೊಡಬೇಕು ಎಂಬ ಚರ್ಚೆ ಕೆಲವು ವರ್ಷಗಳಿಂದ ಚಾಲ್ತಿಯಲ್ಲಿದೆ. ಹಿಂದಿನ ಹಲವು ಚುನಾವಣೆಗಳಲ್ಲಿ ಯುವ ನಾಯಕತ್ವದ ವಿಷಯವನ್ನು ಬಿಜೆಪಿ ಮುನ್ನೆಲೆಗೆ ತಂದಿತ್ತು. 70 ವರ್ಷ ವಯಸ್ಸಾದವರಿಗೆ ಟಿಕೆಟ್ ನಿರಾಕರಿಸುವ ಮತ್ತು 75 ವರ್ಷ ವಯಸ್ಸಾದ ನಾಯಕರನ್ನು ಸಕ್ರಿಯ ರಾಜಕಾರಣದಿಂದಲೇ ನಿವೃತ್ತಿಗೊಳಿಸುವ ಪ್ರಯತ್ನವನ್ನೂ ಬಿಜೆಪಿ ಮಾಡಿತ್ತು. ಈ ಬಾರಿ ರಾಜ್ಯದಲ್ಲಿ ತನ್ನದೇ ಮಾದರಿಯನ್ನು ಬಿಜೆಪಿ ಮುರಿದಿದೆ. 60 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ 11 ಮಂದಿಯನ್ನು ಲೋಕಸಭಾ ಚುನಾವಣಾ ಅಖಾಡಕ್ಕೆ ಇಳಿಸಿದೆ. ಸಾಮಾನ್ಯವಾಗಿ ಟಿಕೆಟ್ ಹಂಚಿಕೆಯಲ್ಲಿ ಹಿರಿಯರಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದ ಕಾಂಗ್ರೆಸ್ ಪಕ್ಷ ಈ ಬಾರಿ ತದ್ವಿರುದ್ಧ ನಿರ್ಧಾರ ಕೈಗೊಂಡಿದೆ. ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ ಆರು ಮಂದಿ ಮಾತ್ರ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರು. ಬಿಜೆಪಿಯ ವಿರುದ್ಧ ಬಂಡಾಯ ಸಾರಿರುವ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಈ ಚುನಾವಣೆಯ ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳಲ್ಲಿ ಅತಿ ಹಿರಿಯರು.

ಕ್ಷೇತ್ರ	ಹೆಸರು	ವಯಸ್ಸು
ಬಿಜೆಪಿ		
ಚಿತ್ರದುರ್ಗ	ಗೋವಿಂದ ಕಾರಜೋಳ	73
ಬಾಗಲಕೋಟೆ	ಪಿ.ಸಿ. ಗದ್ದಿಗೌಡರ್	72
ತುಮಕೂರು	ವಿ. ಸೋಮಣ್ಣ	72
ವಿಜಯಪುರ	ರಮೇಶ ಜಿಗಜಿಣಗಿ	71
ಬೆಳಗಾವಿ	ಜಗದೀಶ ಶೆಟ್ಟರ್	68
ಬೆಂಗಳೂರು ಗ್ರಾಮಾಂತರ	ಡಾ.ಸಿ.ಎನ್. ಮಂಜುನಾಥ್	67
ಕಲಬುರಗಿ	ಉಮೇಶ್ ಜಾಧವ	65
ಹಾವೇರಿ	ಬಸವರಾಜ ಬೊಮ್ಮಾಯಿ	64
ಉಡುಪಿ–ಚಿಕ್ಕಮಗಳೂರು	ಕೋಟ ಶ್ರೀನಿವಾಸ ಪೂಜಾರಿ	64
ಉತ್ತರ ಕನ್ನಡ	ವಿಶ್ವೇಶ್ವರ ಹೆಗಡೆ ಕಾಗೇರಿ	63
ಧಾರವಾಡ	ಪ್ರಲ್ಹಾದ ಜೋಶಿ	61
ಕಾಂಗ್ರೆಸ್		
ಉಡುಪಿ–ಚಿಕ್ಕಮಗಳೂರು	ಕೆ. ಜಯಪ್ರಕಾಶ್ ಹೆಗ್ಡೆ	71
ತುಮಕೂರು	ಎಸ್.ಪಿ. ಮುದ್ದಹನುಮೇಗೌಡ	69
ಚಿತ್ರದುರ್ಗ	ಬಿ.ಎನ್. ಚಂದ್ರಪ್ಪ	68
ಕಲಬುರಗಿ	ರಾಧಾಕೃಷ್ಣ ದೊಡ್ಡಮನಿ	63
ಶಿವಮೊಗ್ಗ	ಗೀತಾ ಶಿವರಾಜ್ ಕುಮಾರ್	62
ಬೆಂಗಳೂರು ಉತ್ತರ	ಎಂ.ವಿ. ರಾಜೀವ್ ಗೌಡ	61
ಜೆಡಿಎಸ್		
ಮಂಡ್ಯ	ಎಚ್.ಡಿ. ಕುಮಾರಸ್ವಾಮಿ	65
ಪಕ್ಷೇತರ		
ಶಿವಮೊಗ್ಗ	ಕೆ.ಎಸ್.ಈಶ್ವರಪ್ಪ	77



ಜಾತಿ ರಾಜಕಾರಣ 'ಮೀಸಲಾತಿ' ಅಸ್ತ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಜಾತಿ ವ್ಯವಸ್ಥೆ'ಯ ಕುರಿತು ಎಷ್ಟೇ ಟೀಕಿಸಿದರೂ, ಅದರ ಕ್ರೌರ್ಯಗಳ ಬಗ್ಗೆ ಕಿಡಿಕಾರಿದರೂ ಚುನಾವಣೆ ಬಂತೆಂದರೆ 'ಜಾತಿ ಸಮೀಕರಣ'ಗಳನ್ನೇ ರಾಜಕೀಯ ನಾಯಕರು ನೆಚ್ಚಿಕೊಳ್ಳುತ್ತಾರೆ. ಅಭ್ಯರ್ಥಿ ಆಯ್ಕೆ, ಮತ ಆಮಿಷ, ಚುನಾವಣೆಯ ನಾಯಕತ್ವದ ಲೆಕ್ಕಾಚಾರಗಳೂ ಜಾತಿಯನ್ನೇ ಅವಲಂಬಿಸಿವೆ. ಹೀಗಾಗಿ, ಮೀಸಲಾತಿ ಎಂಬುದು ಪ್ರತಿ ಚುನಾವಣೆಯಲ್ಲೂ ಮತ ಫಸಲಿನ ಅಸ್ತ್ರವಾಗಿ ಬಳಕೆಯಾಗುತ್ತಲೇ ಇದೆ.

ರಾಜ್ಯದಲ್ಲಿ 'ಅಹಿಂದ' (ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು) ವರ್ಗ ಬಹುಸಂಖ್ಯಾತವಾಗಿದ್ದರೂ, ಮತ ನಿರ್ಣಯದಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯ ತಮ್ಮ ಪ್ರಾಬಲ್ಯವನ್ನು ಇನ್ನೂ ಉಳಿಸಿಕೊಂಡಿವೆ. ಗ್ರಾಮೀಣ ಭಾಗದಲ್ಲಿ ಜಮೀನ್ದಾರಿ ವ್ಯವಸ್ಥೆ ಹಾಗೂ ಊಳಿಗಮಾನ್ಯ ಪದ್ಧತಿಯ ಯಜಮಾನ ಪದ್ಧತಿ ಜೀವಂತವಾಗಿರುವುದೇ ಇದಕ್ಕೆ ಕಾರಣ. 2023ರಲ್ಲಿ ನಡೆದ ವಿಧಾನಸಭೆ ಚುನಾವಣೆ ವೇಳೆ, ಭಿನ್ನಮತ ಮರೆತ ದಲಿತ ಸಂಘಟನೆಗಳು ಕಾಂಗ್ರೆಸ್ ಪರ ಒಟ್ಟಾಗಿ ನಿಂತಿದ್ದರಿಂದಾಗಿ, ಅದೊಂದು ಪ್ರಬಲಶಕ್ತಿಯಾಗಿ ಪರಿವರ್ತನೆಯಾಗಿ ಆ ಪಕ್ಷ ಹೆಚ್ಚು ಸ್ಥಾನ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿತು.

2023ರ ವಿಧಾನಸಭಾ ಚುನಾವಣೆಯಲ್ಲಿ ಜಾತಿ ಸಮೀಕರಣ ನಾಟಕೀಯವಾಗಿ ಬದಲಾಗಿರುವುದು ಸ್ಪಷ್ಟ. 'ಅಹಿಂದ' ಬಲದ ಜೊತೆಗೆ, ಡಿ.ಕೆ. ಶಿವಕುಮಾರ್ ಕಾರಣಕ್ಕೆ ಒಕ್ಕಲಿಗರು ಕೂಡ ಕಾಂಗ್ರೆಸ್ ಬೆಂಬಲಕ್ಕೆ ನಿಂತರು. ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತರು ಕಾಂಗ್ರೆಸ್‌ಗೆ ಒತ್ತಾಸೆಯಾದರು. ಪರಿಣಾಮವಾಗಿ ಒಕ್ಕಲಿಗರ ಭದ್ರಕೋಟೆಯನ್ನು ಹಿಡಿದುಕೊಂಡಿದ್ದ ಜೆಡಿಎಸ್‌ನ ನೆಲೆ ಕಳಚಿ, ಅಲ್ಲೆಲ್ಲ ಕಾಂಗ್ರೆಸ್ ವಿಜಯ ಸಾಧಿಸಿತು.

ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿಯೂ ಜಾತಿ ಪ್ರಾಬಲ್ಯದ 'ದಾಳ', ಅಭ್ಯರ್ಥಿ ಆಯ್ಕೆಯಿಂದ ಹಿಡಿದು ಪ್ರಚಾರ ತಂತ್ರಗಾರಿಕೆವರೆಗೂ ವಿಸ್ತರಿಸಿಕೊಂಡಿದೆ. ಹಲವು ಸಮುದಾಯಗಳ ಮೀಸಲಾತಿ ಬೇಡಿಕೆಯೂ ಚುನಾವಣೆಯ ಹೊತ್ತಲ್ಲಿ ಮುನ್ನೆಲೆಗೆ ಬಂದಿದೆ.

ಹಳೆ ಮೈಸೂರು ಭಾಗದಲ್ಲಿ ಪ್ರಬಲ ಶಕ್ತಿಯಾಗಿದ್ದ ಜೆಡಿಎಸ್, ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವುದು ಲೋಕಸಭೆ ಚುನಾವಣೆಯಲ್ಲಿ ಜಾತಿ ಸಮೀಕರಣಕ್ಕೆ ಬೇರೆ ಸ್ವರೂಪ ನೀಡಿದೆ. ವಿಧಾನಸಭೆ ಚುನಾವಣೆಯಲ್ಲಿ ತನ್ನ ನೆಲೆ ಅಲುಗಾಡಿದ್ದರೂ ಹಾಸನ, ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಾಂತರ, ಮೈಸೂರು ಹಾಗೂ ಬೆಂಗಳೂರು ನಗರದ ಕ್ಷೇತ್ರಗಳಲ್ಲಿ ಜೆಡಿಎಸ್ ಪಡೆದ ಮತ ಪ್ರಮಾಣವೇನೂ ಕಡಿಮೆಯಾಗಿಲ್ಲ. ತನ್ನದೇ ಮತ ಬ್ಯಾಂಕ್ ಅನ್ನು ದಳ ಹೊಂದಿದೆ. ಎಷ್ಟೇ ಬಡಿದಾಡಿದರೂ ತನ್ನ ಬೇರು ಬಿಡಲು ಸಾಧ್ಯವಾಗದ ಬಿಜೆಪಿ, ದಳದ ಆಶ್ರಯದಲ್ಲಿ ಒಕ್ಕಲಿಗರ ಮನಗೆಲ್ಲಲು ಹೊರಟಿದೆ. ಅದಕ್ಕಾಗಿ ಹಲವು ದಾಳ ಹೂಡಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆಂಬ ಅಪೇಕ್ಷೆಯಿಂದ ಒಕ್ಕಲಿಗ ಸಮುದಾಯ 'ಹಸ್ತ'ಲಾಘವ ಮಾಡಿತ್ತು. ಅದೇ ಅಸ್ತ್ರವನ್ನು ಈ ಬಾರಿಯೂ ಶಿವಕುಮಾರ್ ಬಳಸುತ್ತಿದ್ದಾರೆ.

ಇದರ ಜತೆಗೇ, ದಲಿತ ಒಳಪಂಗಡಗಳ ನಡುವಿನ ಮೀಸಲಾತಿ ವರ್ಗೀಕರಣ, ಸ್ಪೃಶ್ಯ ದಲಿತರು– ಅಸ್ಪೃಶ್ಯ ದಲಿತರ ನಡುವಿನ ಮೇಲಾಟ, ಜೆಡಿಎಸ್–ಬಿಜೆಪಿ ಮೈತ್ರಿ, ದಲಿತರಿಗೆಂದೇ ಮೀಸಲಿಟ್ಟ ಅನುದಾನ ಬಳಕೆ ಮುಂತಾದ ವಿಷಯಗಳು ಲೋಕಸಭೆ ಚುನಾವಣೆಯ ವೇಳೆ ಮುನ್ನೆಲೆಗೆ ಬಂದಿವೆ. ಪರಿಶಿಷ್ಟ ಜಾತಿಗೆ ಕಾಂಗ್ರೆಸ್ ಒಳ ಮೀಸಲಾತಿ ನೀಡಲಿಲ್ಲ ಎಂಬ ಕಾರಣಕ್ಕೆ 2018ರ ಚುನಾವಣೆಯಲ್ಲಿ ಮಾದಿಗ (ಎಡಗೈ) ಸಮುದಾಯದವರು ಬಿಜೆಪಿ ಜತೆ ಹೋಗಿದ್ದರು. ಇದರಿಂದ ಕಾಂಗ್ರೆಸ್ ಹೊಡೆತ ತಿಂದಿತ್ತು. ಅಧಿಕಾರ ಚುಕ್ಕಾಣಿ ಹಿಡಿದ ಬಿಜೆಪಿ, ಈ ವಿಷಯದಲ್ಲಿ ಗಟ್ಟಿ ನಿರ್ಧಾರವನ್ನೇನೂ ತೆಗೆದುಕೊಳ್ಳಲಿಲ್ಲ. ಹೀಗಾಗಿ, 2023ರ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಯಿತು. ಈ ಚುನಾವಣೆಯಲ್ಲಿ ಇದು ಪ್ರಮುಖ ವಿಷಯವಾಗಿದ್ದು, ಮತ ವಿಭಜನೆಯ ಲೆಕ್ಕಾಚಾರ ಎರಡೂ ಪಕ್ಷಗಳ ನಾಯಕರಲ್ಲಿದೆ.

ಮತ ಮಂಥನ

2023ರ ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 'ಮೀಸಲಾತಿ' ವಿಚಾರವನ್ನೇ ಪ್ರಬಲವಾದ ಅಸ್ತ್ರವಾಗಿ ಬಳಸಿತ್ತು. ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಶೇ 4 ಮೀಸಲಾತಿ ರದ್ದುಪಡಿಸಿ, ಒಕ್ಕಲಿಗರು ಮತ್ತು ಲಿಂಗಾಯತರಿರುವ ಪ್ರವರ್ಗಗಳಿಗೆ ತಲಾ ಶೇ 2ರಂತೆ ಮರು ಹಂಚಿಕೆ ಮಾಡುವ ಮಹತ್ವದ ನಿರ್ಧಾರ ತೆಗೆದುಕೊಂಡಿತ್ತು. ಪರಿಶಿಷ್ಟ ಜಾತಿ–ಪಂಗಡದ ಮೀಸಲಾತಿಯನ್ನು ಹೆಚ್ಚಿಸಿತ್ತು. ಒಳಮೀಸಲಾತಿ ಕುರಿತ ಸದಾಶಿವ ಆಯೋಗದ ವರದಿಯನ್ನು ಬದಿಗಿಟ್ಟು, ಪರಿಶಿಷ್ಟ ಜಾತಿಗಳನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಮೀಸಲಾತಿ ನಿಗದಿಪಡಿಸಿ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಆದರೆ, ಇದಕ್ಕೆ ಬೋವಿ ಮತ್ತು ಬಂಜಾರರು ವಿರೋಧ ವ್ಯಕ್ತಪಡಿಸಿದರು. ಹೀಗಾಗಿ, ಬಿಜೆಪಿ ಪಾಲಿಗೆ ಯಾವ ಮೀಸಲಾತಿ ಅಸ್ತ್ರವೂ ಮತ ಬೆಳೆ ತಂದುಕೊಡಲಿಲ್ಲ.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೇರುತ್ತಿದ್ದಂತೆಯೇ, ಸದಾಶಿವ ಆಯೋಗದ ವರದಿ ಮತ್ತೆ ಬೇಡಿಕೆಯ ಮುಂಚೂಣಿಗೆ ಬಂದಿತು. ಲೋಕಸಭೆ ಚುನಾವಣೆ ವೇಳೆಗೆ ಈ ವಿಷಯ ಮುನ್ನೆಲೆಗೆ ಬರಬಹುದೆಂಬ ಮುನ್ಸೂಚನೆ ಇದ್ದುದರಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಒಳಮೀಸಲಾತಿ ವಿಷಯವನ್ನು ಕೇಂದ್ರದ ಹೆಗಲಿಗೆ ದಾಟಿಸಿದ್ದಾರೆ.

2018ರಲ್ಲಿ ಸಿದ್ಧಗೊಂಡಿದ್ದ ಜಾತಿ ಗಣತಿ ವರದಿಗೆ ಲಿಂಗಾಯತ, ಒಕ್ಕಲಿಗರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಅದರ ಮಧ್ಯೆಯೂ, ಸಿದ್ದರಾಮಯ್ಯನವರು ಜಾತಿಗಣತಿ ವರದಿ ಸ್ವೀಕರಿಸಿದ್ದಾರೆ. ವರದಿಯನ್ನು ಜಾರಿ ಮಾಡುವ ವಿಷಯದಲ್ಲಿ ಯಾವುದೇ ನಿರ್ಣಯ ಕೈಗೊಂಡಿಲ್ಲ. ಕಾಂಗ್ರೆಸ್ ಬೆನ್ನಿಗೆ ನಿಂತಿರುವ ಅಹಿಂದ ಸಮುದಾಯಗಳ ಮೇಲೆ ಈ ವರದಿ ಸ್ವೀಕಾರ ಎಷ್ಟರಮಟ್ಟಿಗೆ ಪರಿಣಾಮ ಬೀರಿ, ಮತವಾಗಿ ಪರಿವರ್ತಿತವಾಗಲಿದೆ ಎಂಬುದನ್ನು ಚುನಾವಣೆ ಫಲಿತಾಂಶವೇ ಹೇಳಬೇಕಿದೆ.

ಇದರ ಜತೆಗೆ, ಪಂಚಮಸಾಲಿ ಮೀಸಲಾತಿ ಈಗಲೂ ಜೀವಂತವಾಗಿದೆ. ಬಿಜೆಪಿಯು ಸೂಕ್ತ ಪ್ರಾತಿನಿಧ್ಯ ನೀಡಿಲ್ಲ ಎಂದು ಸಮುದಾಯದ ಸ್ವಾಮೀಜಿಗಳೇ ಅಪಸ್ವರ ಎತ್ತಿದ್ದಾರೆ. ಇದನ್ನು ಬಿಜೆಪಿ ನಾಯಕರು ಹೇಗೆ ನಿವಾರಿಸಿಕೊಳ್ಳಲಿದ್ದಾರೆ ಎಂಬ ಕುತೂಹಲವೂ ಇದೆ.

ಮೀಸಲಾತಿ– ಒಳ ಮೀಸಲಾತಿ

ಬಿಜೆಪಿ ಸರ್ಕಾರದ ನಡೆ

- ಹಿಂದುಳಿದ ವರ್ಗಗಳ 'ಪ್ರವರ್ಗ 2ಬಿ'ಗೆ (ಮುಸ್ಲಿಂ ಮತ್ತು ಅದರಲ್ಲಿರುವ ಉಪ ಜಾತಿಗಳು) ನೀಡಿದ್ದ ಶೇ 4 ಮೀಸಲಾತಿ ರದ್ದು
- ಒಕ್ಕಲಿಗರಿರುವ 'ಪ್ರವರ್ಗ 3ಎ' ಮತ್ತು ಪಂಚಮಸಾಲಿ ಲಿಂಗಾಯತರಿರುವ 'ಪ್ರವರ್ಗ 3ಬಿ'ಗೆ ತಲಾ ಶೇ 2ರಂತೆ ಮೀಸಲಾತಿ ಹೆಚ್ಚಳ. 'ಪ್ರವರ್ಗ 3ಎ', '3ಬಿ' ಬದಲು 'ಪ್ರವರ್ಗ 2ಸಿ', '2ಡಿ' ಸೃಜನೆ
- 'ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಕಾಯ್ದೆ ರೂಪಿಸಿ, ಎಸ್‌ಸಿ ಮೀಸಲಾತಿ ಶೇ 15ರಿಂದ ಶೇ 17ಕ್ಕೆ, ಎಸ್‌ಟಿ ಮೀಸಲಾತಿ ಶೇ 3ರಿಂದ ಶೇ 7ಕ್ಕೆ ಹೆಚ್ಚಳ
- ಸದಾಶಿವ ಆಯೋಗದ ವರದಿ 'ಅಪ್ರಸ್ತುತ' ಎಂದು ಷರಾ ಬರೆದ ಸಂಪುಟ ಉಪ ಸಮಿತಿ, ಪರಿಶಿಷ್ಟ ಜಾತಿಗಳ ಜಾತಿವಾರಿ ಜನಸಂಖ್ಯೆ ಪರಿಗಣಿಸಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಶೇಕಡವಾರು ಮೀಸಲಾತಿ ನಿಗದಿಪಡಿಸಿ ಕೇಂದ್ರಕ್ಕೆ ಶಿಫಾರಸು

ಕಾಂಗ್ರೆಸ್ ಸರ್ಕಾರದ ನಡೆ

- ಕೇಂದ್ರ ಸರ್ಕಾರವು ಸಂವಿಧಾನದ 341ನೇ ವಿಧಿಗೆ ಹೊಸತಾಗಿ ಖಂಡ (3) ಅನ್ನು ಸೇರಿಸಿದರೆ ಮಾತ್ರ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ಅವಕಾಶ ಆಗಲಿದೆಯೆಂದು ಸಂವಿಧಾನ ತಿದ್ದುಪಡಿಗೆ ಕೇಂದ್ರಕ್ಕೆ ಶಿಫಾರಸು
- ಲಿಂಗಾಯತ, ಒಕ್ಕಲಿಗ, ಎಸ್‌ಸಿ, ಎಸ್‌ಟಿ ಮೀಸಲಾತಿ ಪ್ರಮಾಣ ಹೆಚ್ಚಿಸಿರುವ ಬೊಮ್ಮಾಯಿ ಸರ್ಕಾರದ ಕ್ರಮದ ಬಗ್ಗೆ ಎಚ್ಚರಿಕೆಯ ಹೆಜ್ಜೆ
- ಬಿಜೆಪಿ ಸರ್ಕಾರ ರದ್ದುಪಡಿಸಿದ್ದ ಮುಸ್ಲಿಮರ ಶೇ 4 ಮೀಸಲಾತಿ ಮರು ಜಾರಿ ಭರವಸೆ. ಆದರೆ, ಸದ್ಯ, ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿರುವುದರಿಂದ ಮೌನ
- 2015ರಲ್ಲಿ ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಒಕ್ಕಲಿಗ, ಲಿಂಗಾಯತ ಸಮುದಾಯದ ತೀವ್ರ ವಿರೋಧದ ನಡುವೆಯೂ ಸ್ವೀಕಾರ

'ಶೇ 50 ಮಿತಿ ತೆರವಿಗೆ ಸಂವಿಧಾನ ತಿದ್ದುಪಡಿ'

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದಾದ್ಯಂತ ಸಾಮಾಜಿಕ– ಆರ್ಥಿಕ ಜಾತಿಗಣತಿ ನಡೆಸುವುದು, ಈಗ ಇರುವ ಮೀಸಲಾತಿಯ ಶೇ 50ರ ಮಿತಿ ತೆಗೆದು ಹಾಕಿ ಎಸ್‌ಸಿ, ಎಸ್‌ಟಿ, ಒಬಿಸಿಗಳ ಮೀಸಲಾತಿ ಹೆಚ್ಚಿಸುವುದು, ಎಲ್ಲ ಜಾತಿಗಳು ಮತ್ತು ಸಮುದಾಯಗಳಿಗೆ ಇಡಬ್ಲ್ಯುಎಸ್ ಮೀಸಲಾತಿ ವಿಸ್ತರಿಸುವುದು ಮುಂತಾದ ಭರವಸೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಿದೆ. 'ಮೀಸಲಾತಿ ಮಿತಿಯನ್ನು ಈಗಿರುವ ಶೇ 50ರಿಂದ ಶೇ 75ಕ್ಕೆ ಏರಿಸಲಾಗುವುದು. ಜನಸಂಖ್ಯೆಯ ಆಧಾರದಲ್ಲಿ ಎಲ್ಲಾ ಜಾತಿಗಳಿಗೆ ಮೀಸಲಾತಿ ನೀಡಲಾಗುವುದು' ಎಂದು ಸಿದ್ದರಾಮಯ್ಯ ಈ ಹಿಂದೆಯೇ ಭರವಸೆ ನೀಡಿದ್ದರು. ರಾಜ್ಯದಲ್ಲಿ ಎಚ್. ಕಾಂತರಾಜ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿಗಣತಿ) ವರದಿ ಆಧಾರದಲ್ಲಿ ಮೀಸಲಾತಿ ಹೆಚ್ಚಿಸಿದರೆ ನ್ಯಾಯಾಲಯವೂ ಮಾನ್ಯತೆ ನೀಡಲಿದೆ ಎನ್ನುವುದು ಅವರ ಪ್ರತಿಪಾದನೆ.

ಕಾವೇರಿ ಉಳಿವಿಗಾಗಿ 10 ಕ್ಷೇತ್ರದಲ್ಲಿ ಎನ್‌ಡಿಎ ಗೆಲ್ಲಲಿ: ದೇವೇಗೌಡ

ಪ್ರಜಾವಾಣಿ ವಾರ್ತೆ



ಪಾಂಡವಪುರ (ಮಂಡ್ಯ ಜಿಲ್ಲೆ): 'ಕಾವೇರಿ ನೀರಿನ ಉಳಿವಿಗಾಗಿ ದೆಹಲಿ ಮಟ್ಟದಲ್ಲಿ ದಿಟ್ಟ ಹೋರಾಟ ನೀಡಬೇಕಾದರೆ ಹಳೆ ಮೈಸೂರು ಭಾಗದಲ್ಲಿ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ 10 ಎನ್‌ಡಿಎ ಅಭ್ಯರ್ಥಿಗಳು ಗೆಲ್ಲಬೇಕು. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್‌ನ ಶಕ್ತಿ–ದರ್ಪ ಕುಗ್ಗಿಸಲು ನಾವು ನರೇಂದ್ರ ಮೋದಿ ಅವರ ಬೆಂಬಲಕ್ಕೆ ನಿಲ್ಲಬೇಕು' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಇಲ್ಲಿ ಭಾನುವಾರ ಕುಮಾರಸ್ವಾಮಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಕುಮಾರಸ್ವಾಮಿ ಅವರನ್ನು ಗೆಲ್ಲಿಸಿದರೆ ಕಾವೇರಿ ಸಮಸ್ಯೆ ನಿವಾರಣೆ ಜೊತೆಗೆ ಮೇಕೆದಾಟು ಯೋಜನೆಗೆ ಅನುಮತಿ ಪಡೆಯಲು ಅನುಕೂಲವಾಗುತ್ತದೆ' ಎಂದರು.

ಡಿಕೆಶಿ ವಿರುದ್ಧ ಆರೋಪ: 'ಕರ್ನಾಟಕದಲ್ಲಿ ನೀರಾವರಿ ಸಚಿವರೊಬ್ಬರಿದ್ದಾರೆ, ಅವರೊಬ್ಬ ಜಲಸಂಪನ್ಮೂಲ ಸಚಿವರಷ್ಟೇ ಅಲ್ಲ. ಬಿಡಿಎ, ವಾಟರ್ ಬೋರ್ಡ್, ಕಾರ್ಪೊರೇಷನ್ ಸೇರಿದಂತೆ ಎಲ್ಲ ಕಡೆಯೂ ದರ್ಬಾರು ಮಾಡಿ ದೋಚುತ್ತಿದ್ದಾರೆ. ಬಾಚಿ ಬಾಚಿ ರಾಜಸ್ಥಾನ, ಛತ್ತೀಸಗಢಕ್ಕೆ ಕಳುಹಿಸುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಬಿಎಸ್‌ವೈ ಆಹ್ವಾನ ತಿರಸ್ಕರಿಸಿದ ಪ್ರಸಾದ್

ಪ್ರಜಾವಾಣಿ ವಾರ್ತೆ

ಮೈಸೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಚಾಮರಾಜನಗರದ ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಇಲ್ಲಿನ ಜಯಲಕ್ಷ್ಮಿಪುರಂನ ನಿವಾಸದಲ್ಲಿ ಭಾನುವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಲೋಕಸಭೆ ಚುನಾವಣಾ ಪ್ರಚಾರಕ್ಕಾಗಿ ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ ಪ್ರಧಾನಿ ನರೇಂದ್ರ ಮೋದಿ ಸಮಾವೇಶಕ್ಕೆ ಬರುವಂತೆ ನೀಡಿದ ಆಹ್ವಾನವನ್ನು ಪ್ರಸಾದ್ ತಿರಸ್ಕರಿಸಿದರು. 'ಆಗುವುದಿಲ್ಲ, ಆರೋಗ್ಯ ಸ್ಪಂದಿಸುವುದಿಲ್ಲ' ಎಂದು ಕೈಮುಗಿದು ಹೇಳಿಕೊಂಡರು.



ಬಿ.ಎಸ್. ಯಡಿಯೂರಪ್ಪ ಅವರು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಮೈಸೂರಿನ ನಿವಾಸದಲ್ಲಿ ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದರು. ಪ್ರೀತಂ ಗೌಡ ಜತೆಗಿದ್ದರು/ ಪ್ರಜಾವಾಣಿ ಚಿತ್ರ

'ನಾನು ಬಿಜೆಪಿಯಿಂದಲೇ ನಿವೃತ್ತಿ ಆಗಿದ್ದೇನೆ. ಹೋದ ತಿಂಗಳು ರಾಜಕೀಯದಿಂದ ನಿವೃತ್ತಿ ಘೋಷಿಸಿದ್ದೇನೆ. ಯಾವುದೇ ರಾಜಕೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿಲ್ಲ. ಬಹಳಷ್ಟು ಚುನಾವಣೆ ಎದುರಿಸಿದ್ದೇನೆ. ಸಾಕಾಗಿದೆ. ಜರ್ಜರಿತನಾಗಿದ್ದೇನೆ. ಆರೋಗ್ಯವೂ ಸರಿ ಇಲ್ಲ. ಸ್ವಲ್ಪ ದೂರವೂ ನಡೆಯಲಾಗುವುದಿಲ್ಲ. ನಿಮ್ಮ ಮೇಲೆ ಗೌರವವಿದೆ. ನೀವು ಬಂದಿದ್ದು ಬಹಳ ಸಂತೋಷವಾಯಿತು' ಎಂದರು.

'ಪ್ರಧಾನಿ ಬರುತ್ತಿದ್ದಾರೆ, ಕಾರ್ಯಕ್ರಮಕ್ಕೆ ಬನ್ನಿ' ಎಂಬ ಬಿಎಸ್‌ವೈ ಮನವಿಗೆ, 'ಅವರು ಜಾಗತಿಕ ನಾಯಕ. ಅವರ ಬಗ್ಗೆ ಬಹಳ ಗೌರವವಿದೆ. ಯುವಕನಾಗಿದ್ದಾಗ 15 ವರ್ಷ ಆರ್‌ಎಸ್‌ಎಸ್‌ನಲ್ಲಿದ್ದೆ. ಜನಸಂಘದೊಂದಿಗೆ ಸಕ್ರಿಯವಾಗಿದ್ದೆ. ರಾಜಕೀಯಕ್ಕೆ ವಿದಾಯ ಹೇಳಿದ ಮೇಲೆ ಮುಖ್ಯಮಂತ್ರಿ ಆದಿಯಾಗಿ ಎಲ್ಲರೂ ಆರೋಗ್ಯ ವಿಚಾರಿಸಲು ಬರುತ್ತಿದ್ದಾರಷ್ಟೆ' ಎಂದರು.

ಹರ್ಷವರ್ಧನ್ ಬರುತ್ತಿದ್ದಂತೆಯೇ, 'ಈತನನ್ನು ನೋಡಿಕೊಳ್ರಪ್ಪಾ' ಎಂದು ಪಕ್ಕದಲ್ಲಿ ಕುಳಿತಿದ್ದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಅವರ ಕೈ ಹಿಡಿದು ಕೇಳಿಕೊಂಡರು. 'ನಾವಿದ್ದೇವೆ. ನಾವು ಯಾರನ್ನೂ ಕೈ ಬಿಡುವುದಿಲ್ಲ' ಎಂದು ಪ್ರೀತಂ ಭರವಸೆ ನೀಡಿದರು. ಅವರ ಮಾತಿನಿಂದ ಭಾವುಕರಾದ ಪ್ರಸಾದ್, 'ಪ್ರೀತಂ ನೇರವಾಗಿ ಮಾತನಾಡುತ್ತಾರೆ. ಇಂಥವರು ರಾಜಕಾರಣದಲ್ಲಿ ಇರಬೇಕು' ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪ್ರಕಾಶ್ ರಾಜ್ ವಾಗ್ದಾಳಿ

'ಮಹಾಪ್ರಭುವಿನ ಮೊಗದಲ್ಲಿ ಆತಂಕ'

ಪ್ರಜಾವಾಣಿ ವಾರ್ತೆ

ಮೈಸೂರು: 'ತಾನು ಬಲಶಾಲಿ ಅಲ್ಲ, ತುಂಬಾ ಬಲಹೀನ ಆಗುತ್ತಿದ್ದೇನೆ ಎನ್ನುವುದು ಗೊತ್ತಾಗಿರುವುದರಿಂದಲೇ ಮಹಾಪ್ರಭುವಿನ ಮುಖದಲ್ಲಿ ಆತಂಕ ಗೋಚರಿಸುತ್ತಿದೆ' ಎಂದು ಚಿತ್ರ ನಟ ಪ್ರಕಾಶ್ ರಾಜ್ ಟೀಕಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಅಂಗವಾಗಿ ದಲಿತ ಸಂಘರ್ಷ ಸಮಿತಿಯು ಇಲ್ಲಿನ ಎಂ.ಜಿ. ರಸ್ತೆಯ ತರಕಾರಿ ಮಾರುಕಟ್ಟೆಯಲ್ಲಿ ಭಾನುವಾರ ಆಯೋಜಿಸಿದ್ದ 'ಭಾರತ- ಸಂವಿಧಾನ- ಪ್ರಜಾಪ್ರಭುತ್ವದ ಉಳಿವಿಗಾಗಿ' ಜನಜಾಗೃತಿ ಸಮಾವೇಶದಲ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

'400 ಸ್ಥಾನ ಗಳಿಸುತ್ತೇವೆ ಎನ್ನುತ್ತಾರೆ. ಅದು ಅವರ ನಂಬಿಕೆ ಅಲ್ಲ, ಭಯ. ತುಂಬಾ ವಿಶ್ವಾಸದಿಂದ ಮಾತನಾಡಿದಾಗ, ಪ್ರಶ್ನಿಸುವವರನ್ನು ಜೈಲಿಗೆ ಕಳುಹಿಸಿದಾಗ, ಇ.ಡಿಯಿಂದ ದಾಳಿ ಮಾಡಿಸಿದಾಗ ಅವರು ಹೆದರಿದ್ದಾರೆ ಎನ್ನುವುದು ಗೊತ್ತಾಗುತ್ತದೆ' ಎಂದರು.



ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಅಂಗವಾಗಿ 'ಭಾರತ ಸಂವಿಧಾನ ಪ್ರಜಾಪ್ರಭುತ್ವದ ಉಳಿವಿಗಾಗಿ' ದಲಿತ ಸಂಘರ್ಷ ಸಮಿತಿಯಿಂದ ಮೈಸೂರಿನ ಎಂ.ಜಿ. ರಸ್ತೆಯ ತರಕಾರಿ ಮಾರುಕಟ್ಟೆಯಲ್ಲಿ ಭಾನುವಾರ ಆಯೋಜಿಸಿದ್ದ ಜನಜಾಗೃತಿ ಸಮಾವೇಶದಲ್ಲಿ ಚಿತ್ರ ನಟ ಪ್ರಕಾಶ್ ರಾಜ್ ಮಾತನಾಡಿದರು. ಆಲಗೂಡು ಶಿವಕುಮಾರ್, ಬಸವರಾಜ್ ದೇವನೂರು, ಗುರುಪ್ರಸಾದ್ ಕೆರಗೋಡು, ಬೆಟ್ಟಯ್ಯ ಕೋಟೆ, ಶಿವಸುಂದರ್, ಎಚ್.ಜನಾರ್ಧನ್ ಹಾಗೂ ಮುಖಂಡರು ಪಾಲ್ಗೊಂಡಿದ್ದರು/ ಪ್ರಜಾವಾಣಿ ಚಿತ್ರ

'ಸಂವಿಧಾನದ ಪ್ರಕಾರ, ಮಹಾಪ್ರಭು ಎನ್ನುವವರು ಇರಬಾರದು. ಆದರೆ, ಇವರು ಮಹಾಪ್ರಭು ರೀತಿ ಓಡಾಡುತ್ತಿದ್ದಾರೆ. ಮೈಸೂರಿನ ಮಹಾರಾಜರನ್ನು ನೋಡಲು ದಿಲ್ಲಿಯ ಮಹಾಪ್ರಭು ಬರುತ್ತಾರೆ. ಈ ಪ್ರಸಂಗ–ವಿನೋದ ನೋಡಲು ಜನರನ್ನು ಕರೆತರಲು ಸಾಕಷ್ಟು ಬಸ್‌ಗಳು ಓಡಾಡಿದವು. ಆದರೆ, ಕೋವಿಡ್ ಸಂಕಷ್ಟ ಕಾಲದಲ್ಲಿ ನಡೆದುಕೊಂಡು ಹೋಗುತ್ತಿದ್ದ ಜನರಿಗೇಕೆ ಒಂದು ಬಸ್ ಕೂಡ ಓಡಿಸಲಿಲ್ಲ ಎಂದು ನಾವು ಕೇಳಬೇಕು' ಎಂದರು.

'ಮಹಾಪ್ರಭುವಿನ ದಿಲ್ಲಿಯ ಆಸ್ಥಾನಕ್ಕೆ ಬೇಕಿರುವುದು ವಿದೂಷಕರೇ. ಹೋದ ಚುನಾವಣೆಯಲ್ಲಿ ರಾಜ್ಯದಿಂದ ಆಯ್ಕೆಯಾದ 27 ಮಂದಿ ಕೂಡ ವಿದೂಷಕರು. ಅವರು ಬರ ಪರಿಹಾರ ಮೊದಲಾದವುಗಳ ಬಗ್ಗೆ ಮಾತನಾಡುವುದಿಲ್ಲ. ಈಗ ಮಹಾಪ್ರಭು ಮೈಸೂರಿನ ಮಹಾರಾಜರನ್ನೂ ವಿದೂಷಕರನ್ನಾಗಿಸಲು ಹೊರಟಿದ್ದಾರೆ. ಅವರೇಕೆ ಒಪ್ಪಿಕೊಂಡರೋ ನಮಗೆ ಗೊತ್ತಿಲ್ಲ. ಆದರೆ, ಅವರನ್ನು ತಡೆಯುವ ಜವಾಬ್ದಾರಿ ನಮ್ಮ ಮೇಲಿದೆ' ಎಂದರು.

'ನೆನ್ನೆ ಮೊನ್ನೆವರೆಗೂ ಬಾಯಿಗೆ ಬಂದಂತೆ ಉಗಿದಿರಲ್ಲವೇ? ಅಪ್ಪ–ಮಗ, ಕುಟುಂಬ, ಪರಿಹಾರ ಎಂದೆಲ್ಲಾ ಮಾತನಾಡಿದರಲ್ಲವೇ? ಚುನಾವಣೆ ಸಂದರ್ಭದಲ್ಲಿ ಅವರನ್ನೇ ತಬ್ಬಿಕೊಂಡು, ನೆಕ್ಕಿಕೊಂಡು ಕುಳಿತಿದ್ದೀರಲ್ಲಾ ನಾಚಿಕೆ ಆಗುವುದಿಲ್ಲವೇ?' ಎಂದು ಕೇಳಿದರು. 'ಉಗಿದವನಿಗೂ ನಾಚಿಕೆ ಇಲ್ಲ, ಉಗಿಸಿಕೊಂಡವನಿಗೂ ಇಲ್ಲ. ನಮಗೆ ನೋಡಲಾಗುತ್ತಿಲ್ಲ' ಎಂದರು.

'ಮಹಾಪ್ರಭುವಿನ ಆಳ್ವಿಕೆ ಪ್ರಾಕೃತಿಕ ನ್ಯಾಯವಲ್ಲ. ಇದು ಅಮಾನವೀಯವಾದುದು. ನಾವು ಮೋಸ ಹೋಗಬಾರದು. ದೇಶದಲ್ಲಿ ಬದಲಾವಣೆ ವಿರೋಧ ಪಕ್ಷದಿಂದ ಸಾಧ್ಯವಿಲ್ಲ. ಆಳುವ ಪಕ್ಷದಿಂದಲೂ ಆಗುತ್ತಿಲ್ಲ. ನಮ್ಮಿಂದ ಮಾತ್ರವೇ ಬದಲಾವಣೆ ಸಾಧ್ಯ. ಲೋಕಸಭೆ ಚುನಾವಣೆಯಲ್ಲಿ ಬದಲಾವಣೆಯನ್ನು ತಂದುಕೊಳ್ಳಬೇಕು. ಮೊದಲು, ಈ ಕೊರೊನಾ ಸೋಂಕನ್ನು ಕೆಳಗಿಳಿಸೋಣ' ಎಂದು ಕರೆ ನೀಡಿದರು.

'ಮಹಾಪ್ರಭು ಸ್ಥಾವರ; ನಾವೆಲ್ಲರೂ ಜಂಗಮರಾಗಬೇಕು. ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ. ಆದ್ದರಿಂದ ಅಂಬೇಡ್ಕರ್ ಉಳಿಸಿಕೊಂಡರೆ ಮಾತ್ರ ನಾವು ಉಸಿರಾಡಲು ಸಾಧ್ಯ' ಎಂದರು.

ನಮ್ಮ ಅಂಬೇಡ್ಕರ್, ಮಾನವೀಯ ಮೌಲ್ಯ ಮತ್ತು ಸಂವಿಧಾನವನ್ನು ಉಳಿಸಿಕೊಳ್ಳಬೇಕು. ಯಾವಾಗಲೂ ವಿರೋಧ ಪಕ್ಷವಾಗಿ ರೋಣ. ಯಾರೇ ಬಂದರೂ ಪ್ರಶ್ನಿಸೋಣ

ಪ್ರಕಾಶ್ ರಾಜ್, ಚಿತ್ರ ನಟ

ಮನವೊಲಿಕೆ ಯತ್ನ ವಿಫಲ

ಪ್ರಜಾವಾಣಿ ವಾರ್ತೆ


ದಾವಣಗೆರೆ: ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಜಿ.ಬಿ. ವಿನಯ್‌ಕುಮಾರ್ ಮನವೊಲಿಸಲು ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಮಾಜಿ ಸಚಿವ ಎಚ್.ಎಂ.ರೇವಣ್ಣ ನೇತೃತ್ವದಲ್ಲಿ ಹಲವು ಮುಖಂಡರು ಭಾನುವಾರ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ.

'ನಾಮಪತ್ರ ವಾಪಸ್ ಪಡೆಯುವುದಿಲ್ಲ' ಎಂದು ವಿನಯ್‌ಕುಮಾರ್ ಹೇಳಿದ್ದರಿಂದ ಸಂಧಾನ ವಿಫಲವಾಗಿದೆ.

ಎಚ್.ಎಂ.ರೇವಣ್ಣ ಅವರ ಜೊತೆಗೆ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಕಾಂಗ್ರೆಸ್ ಮುಖಂಡರಾದ ಮಾಯಕೊಂಡ ವೆಂಕಟೇಶ್, ಸುಭಾಷಚಂದ್ರ, ಹೊನ್ನಾಳಿ ಸಿದ್ದಪ್ಪ, ಶಿವಯೋಗಿ ಮೊದಲಾದವರು ಭಾನುವಾರ ಬೆಳಿಗ್ಗೆ ಜಿ.ಬಿ. ವಿನಯ್‌ಕುಮಾರ್ ಅವರನ್ನು ಭೇಟಿ ಮಾಡಿ , ಕಣದಿಂದ ಹಿಂದೆ ಸರಿಯುವಂತೆ ಮನವಿ ಮಾಡಿದರು. ಆದರೆ ಅವರು ಇದನ್ನು ತಿರಸ್ಕರಿಸಿದ್ದಾರೆ.

'ನನ್ನ ಸ್ಪರ್ಧೆಯಿಂದ ಮತದಾರರಲ್ಲಿ ಭರವಸೆ ಮೂಡಿದೆ. ಹೊಸ ಮುಖಗಳು ರಾಜಕಾರಣಕ್ಕೆ ಬರಬೇಕು ಎನ್ನುವ ಭರವಸೆ ಮೂಡಿಸುತ್ತೇನೆ. ಆ ಭರವಸೆ ಕಳೆದುಕೊಳ್ಳಲು ನಾನು ತಯಾರಿಲ್ಲ' ಎಂದು ಹೇಳಿದರು.

ಕಾಗಿನೆಲೆ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿಯವರ ಸಮ್ಮುಖದಲ್ಲಿ ಕಳೆದವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿನಯ್‌ಕುಮಾರ್ ಜೊತೆ ಚರ್ಚಿಸಿ, ಕಣದಿಂದ ಹಿಂದೆ ಸರಿಯುವಂತೆ ಸೂಚಿಸಿದ್ದರು. ಜನರ ಅಭಿಪ್ರಾಯ ಪಡೆದು ಎರಡು ದಿನಗಳ ಬಳಿಕ ನಿರ್ಧಾರ ಪ್ರಕಟಿಸುವುದಾಗಿ ತಿಳಿಸಿ ವಾಪಸ್ ಬಂದಿದ್ದ ವಿನಯ್‌ಕುಮಾರ್ ಏ.12ರಂದು ನಾಮಪತ್ರ ಸಲ್ಲಿಸಿದ್ದಾರೆ.



ಕಣದಿಂದ ಹಿಂದೆ ಸರಿಯುವ ಮಾತೇ ಇಲ್ಲ. ಏ.18ರಂದು ಕಾರ್ಯಕರ್ತರೊಂದಿಗೆ ಮೆರವಣಿಗೆಯ ಮೂಲಕ ತೆರಳಿ ಮತ್ತೊಮ್ಮೆ ನಾಮಪತ್ರ ಸಲ್ಲಿಸುತ್ತೇನೆ

ಜಿ.ಬಿ. ವಿನಯ್‌ಕುಮಾರ್, ಕಾಂಗ್ರೆಸ್ ಬಂಡಾಯ ಅಭ್ಯರ್ಥಿ

‘ಬಿಜೆಪಿಯವರೆಲ್ಲ ಸಸ್ಯಾಹಾರಿಗಳೇ?’

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು ‘ಪ್ರಜಾವಾಣಿ’ ಗೆ ನೀಡಿರುವ ಸಂದರ್ಶನದ ಆಯ್ದ ಭಾಗ ಇಲ್ಲಿದೆ. ಕಾಂಗ್ರೆಸ್‌ನ ಚುನಾವಣಾ ಸಿದ್ಧತೆ, ಮೋದಿ ವರ್ಚಸ್ಸು ಮತ್ತು ಧ್ರುವೀಕರಣ ರಾಜಕಾರಣ, ಪಕ್ಷ ಘೋಷಿಸಿರುವ ‘ಗ್ಯಾರಂಟಿ’ಗಳ ಬಗ್ಗೆ ಮಾತನಾಡಿದ್ದಾರೆ. ಬಿಜೆಪಿ ಈ ಸಲ ಅಧಿಕಾರ ಕಳೆದುಕೊಳ್ಳುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ಸಂದರ್ಶನ



ಕೆ.ಸಿ. ವೇಣುಗೋಪಾಲ್

• **ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಯಾವ ರೀತಿ ಸಾಧನೆ ಮಾಡಲಿದೆ ಎಂದು ನೀವು ನಿರೀಕ್ಷಿಸುತ್ತಿದ್ದೀರಿ? ಪಕ್ಷದ ಚುನಾವಣಾ ಸಿದ್ಧತೆ ಹೇಗಿದೆ?**

ಪಕ್ಷವು ಈ ಸಲ ಉತ್ತಮ ಸಾಧನೆ ಮಾಡಲಿದೆ. ಇತ್ತೀಚಿನ ಬೆಳವಣಿಗೆಗಳಿಂದಾಗಿ ನಮ್ಮ ಆತ್ಮವಿಶ್ವಾಸ ಹೆಚ್ಚಾಗಿದೆ. ನಾವು ಚುನಾವಣಾ ಪ್ರಚಾರವನ್ನು ಬಹಳ ಮುಂಚಿತವಾಗಿಯೇ ಪ್ರಾರಂಭ ಮಾಡಿದ್ದೆವು. ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯು ನಾವು ಬಯಸದೇ ಇದ್ದರೂ ಅದು ಚುನಾವಣಾ ಪ್ರಚಾರವಾಯಿತು. ಇದು ನಮ್ಮ ಚುನಾವಣಾ ಪ್ರಚಾರಕ್ಕೆ ಭದ್ರ ಬುನಾದಿಯನ್ನು ಒದಗಿಸಿತು. ನಮ್ಮ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಎಲ್ಲ ರಾಜ್ಯಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ನಾವು ಈಗಾಗಲೇ ಐದು ‘ನ್ಯಾಯ’ಗಳ ಭರವಸೆ ನೀಡಿದ್ದೇವೆ. ಕರ್ನಾಟಕ ವಿಧಾನಸಭಾ ಚುನಾವಣೆಯ ಮಾದರಿಯಲ್ಲೇ ದೇಶದಾದ್ಯಂತ ‘ಗ್ಯಾರಂಟಿ’ ಕಾರ್ಡ್‌ಗಳನ್ನು ವಿತರಿಸುತ್ತಿದ್ದೇವೆ.

• **ಶ್ರಾವಣ ಮಾಸದಲ್ಲಿ ಮಾಂಸ ತಿಂದು ಅದರ ವಿಡಿಯೊ ಹರಿಯಬಿಡುವ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳದ್ದು ಮೊಘಲರ ಮನಃಸ್ಥಿತಿ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ. ನಿಮ್ಮ ಪಕ್ಷದ ಪ್ರಣಾಳಿಕೆಯು ಮುಸ್ಲಿಂ ಲೀಗ್‌ನ ಚಿಂತನೆಯನ್ನು ಹೊಂದಿದೆ ಎಂದು ಲೇವಡಿ ಮಾಡಿದ್ದಾರೆ. ಇದರ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು?**

ಬಿಜೆಪಿಯು ಉತ್ತರ ಭಾರತ ಸೇರಿದಂತೆ ಎಲ್ಲ ಕಡೆಗಳಲ್ಲಿ ನೆಲೆ ಕಳೆದುಕೊಳ್ಳುತ್ತಿರುವುದನ್ನು ಪ್ರಧಾನಿ ಅರಿತುಕೊಂಡಿದ್ದಾರೆ. ಅಧಿಕಾರ ಕಳೆದುಕೊಳ್ಳುತ್ತೇನೆ ಎಂದು ಆತಂಕಿತರಾಗಿದ್ದಾರೆ. ಹಾಗಾಗಿ, ವಿರೋಧ ಪಕ್ಷದ ನಾಯಕರ ಮೇಲೆ ಕೀಳು ಮಟ್ಟದ ದಾಳಿ ನಡೆಸುತ್ತಿದ್ದಾರೆ. ಇಲ್ಲದಿದ್ದರೆ ಅವರು ಈಗ ಕುರಿ ಮಾಂಸದ ಬಗ್ಗೆ ಏಕೆ ಮಾತನಾಡುತ್ತಿದ್ದರು? ಬಿಜೆಪಿಯಲ್ಲಿ ಇರುವವರೆಲ್ಲ ಸಸ್ಯಾಹಾರಿಗಳು ಹಾಗೂ ಕಾಂಗ್ರೆಸ್‌ನ ಎಲ್ಲರೂ ಮಾಂಸಾಹಾರಿಗಳು ಎಂದು ಹೇಳುತ್ತಿದ್ದಾರೆಯೇ? ಆಹಾರ ಹಕ್ಕು ವೈಯಕ್ತಿಕ ಆಯ್ಕೆಯಾಗಿದೆ. ಅದನ್ನು ಯಾರೂ ಹೇರಲು ಸಾಧ್ಯವಿಲ್ಲ.

• **ರಾಮಮಂದಿರದ ಬಗ್ಗೆ ಕಾಂಗ್ರೆಸ್ ನಿಲುವೇನು?**

ಪ್ರಧಾನಿ ಹಾಗೂ ಬಿಜೆಪಿಯವರು ರಾಮಮಂದಿರವನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಜನರಿಗೆ ಅದು ಅರಿವಾಗುತ್ತಿದೆ. ಪ್ರಧಾನಿ ಆದಿಯಾಗಿ ಬಿಜೆಪಿ ನಾಯಕರು ದೇಶ ಎದುರಿಸುತ್ತಿರುವ ನಿರುದ್ಯೋಗ, ರೈತರ ಸಂಕಷ್ಟ ಹಾಗೂ ಬೆಲೆ ಏರಿಕೆಯಂತಹ ವಿಷಯಗಳ ಬಗ್ಗೆ ಚರ್ಚಿಸುವುದಿಲ್ಲ. ಅವರು ಎಲ್ಲರ ಗಮನವನ್ನು ಬೇರೆಡೆಗೆ ಸೆಳೆಯಲು ಯತ್ನಿಸುತ್ತಿದ್ದಾರೆ. ಅವರು ಧ್ರುವೀಕರಣವನ್ನು ಬಯಸುತ್ತಿದ್ದಾರೆ.

• **ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ದಕ್ಷಿಣ ಭಾರತದ ಕಡೆಗೆ ಹೆಚ್ಚು ಗಮನ ಹರಿಸಿದೆ ಎಂಬ ಭಾವನೆ ನಿಮ್ಮ ನಾಯಕರಲ್ಲೇ ಗಾಢವಾಗಿದೆಯಲ್ಲ?**

ಉತ್ತರದಲ್ಲಿ ಕಾಂಗ್ರೆಸ್ ಹಾಗೂ ‘ಇಂಡಿಯಾ’ ಮೈತ್ರಿಕೂಟ ಪ್ರಬಲವಾಗಿದೆ. ರಾಜಸ್ಥಾನ, ಹರಿಯಾಣ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಬಿಹಾರ ಹಾಗೂ ಉತ್ತರ ಪ್ರದೇಶದಲ್ಲಿ ಪರಿಸ್ಥಿತಿ ಬದಲಾಗುತ್ತಿದೆ. ಉತ್ತರದಲ್ಲಿ ನಾವು ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದೇವೆ. ಹಾಗಿದ್ದ ಮೇಲೆ, ಉತ್ತರ ಮತ್ತು ದಕ್ಷಿಣದ ವಿಭಜನೆ ಎಲ್ಲಿದೆ? ಸೋಲಿನ ಭೀತಿಯಿಂದ ಬಿಜೆಪಿಯವರು ಇವನ್ನೆಲ್ಲ ಸೃಷ್ಟಿಸುತ್ತಿದ್ದಾರೆ.

• **ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಕಾಂಗ್ರೆಸ್‌ನ ತಾರಾ ಪ್ರಚಾರಕರು. ಆದರೆ, ಅವರು ಅಮೇಠಿ ಹಾಗೂ ರಾಯ್‌ಬರೇಲಿಯಲ್ಲಿ ಸ್ಪರ್ಧಿಸಲು ಹಿಂದೇಟು ಹಾಕುತ್ತಿದ್ದಾರೆ ಎಂಬ ಸುದ್ದಿಗಳಿವೆಯಲ್ಲ?**

ಅಮೇಠಿ ಹಾಗೂ ರಾಯ್‌ಬರೇಲಿ ಮಾತ್ರವಲ್ಲ, ಇನ್ನೂ ಅನೇಕ ಕ್ಷೇತ್ರಗಳಿಗೆ ಪಕ್ಷವು ಅಭ್ಯರ್ಥಿಗಳ ಹೆಸರನ್ನು ಘೋಷಿಸಿಲ್ಲ. ಈ ಸಲ ಚುನಾವಣಾ ಪ್ರಕ್ರಿಯೆ ಸುದೀರ್ಘವಾಗಿದೆ. ಚುನಾವಣೆಯಲ್ಲಿ ಅಭ್ಯರ್ಥಿಗಳು ಸೀಮಿತ ಪ್ರಮಾಣದ ಹಣ ಖರ್ಚು ಮಾಡಬಹುದು. ರಾಜಕೀಯ ದುರುದ್ದೇಶದಿಂದ ಖಾತೆಗಳನ್ನು ಜಪ್ತಿ ಮಾಡಿದ್ದರಿಂದ ನಮ್ಮ ಬಳಿ ಹಣ ಬಹಳ ಕಡಿಮೆ ಇದೆ. ಈ ಸ್ಥಾನಗಳಿಗೆ ನಾಮಪತ್ರ ಸಲ್ಲಿಸಲು ಇನ್ನೂ ಸಮಯವಿದೆ.

• **ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಕುರಿತು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಪ್ರಸ್ತಾಪವೇ ಇಲ್ಲವಲ್ಲ?**

ಸಿಎಎ ಕುರಿತು ಕಾಂಗ್ರೆಸ್ ನಿಲುವು ಸ್ಪಷ್ಟವಾಗಿದೆ. ಈ ಬಗ್ಗೆ ನಾವು ಸಂಸತ್‌ನಲ್ಲಿ ಧ್ವನಿ ಎತ್ತಿದ್ದೇವೆ. ಬಿಜೆಪಿಯು ಧ್ರುವೀಕರಣದ ಸಲುವಾಗಿ ಆ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದಿದೆ. ಅಲ್ಪಸಂಖ್ಯಾತರು ಹಾಗೂ ಇತರ ಸಮುದಾಯಗಳ ಹಿತ ರಕ್ಷಣೆಗಾಗಿ ಕಾಂಗ್ರೆಸ್ ಬದ್ಧವಾಗಿದೆ. ದೇಶದ ಪ್ರತಿ ಪ್ರಜೆಗೂ ಸಾಂವಿಧಾನಿಕ ಹಕ್ಕುಗಳನ್ನು ಒದಗಿಸುವುದು ನಮ್ಮ ಉದ್ದೇಶ.

• **ಚುನಾವಣಾ ಬಾಂಡ್ ಬಗ್ಗೆಯೂ ಕಾಂಗ್ರೆಸ್ ನಾಯಕರು ಹೆಚ್ಚು ಮಾತನಾಡುತ್ತಿಲ್ಲವಲ್ಲ?**

ನಾವು ಚುನಾವಣಾ ಬಾಂಡ್‌ಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೇವೆ. ಇದು ದೇಶದ ಅತೀ ದೊಡ್ಡ ಹಗರಣ. ಒಂದೆಡೆ ಅವರು ನಮ್ಮ ಖಾತೆಗಳನ್ನು ಜಪ್ತಿ ಮಾಡುತ್ತಿದ್ದಾರೆ. ಆದರೆ, ಚುನಾವಣಾ ಬಾಂಡ್‌ಗಳ ಭ್ರಷ್ಟಾಚಾರದ ಕುರಿತು ತನಿಖೆಯನ್ನೂ ಮಾಡುತ್ತಿಲ್ಲ.

• **ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಒಂದು ಸ್ಥಾನವಷ್ಟೇ ಗೆದ್ದಿತ್ತು. ಈ ಸಲ ಜನರ ಸ್ಪಂದನೆ ಹೇಗಿದೆ?**

ರಾಜ್ಯದಲ್ಲಿ ಈ ಸಲ ಪಕ್ಷ ಗರಿಷ್ಠ ಸ್ಥಾನಗಳನ್ನು ಗೆಲ್ಲಲಿದೆ. 15ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಖಚಿತ.

‘ಬಿಜೆಪಿಯವರು ನಕಲಿ ದೈವ ಭಕ್ತರು’

• **ಈ ಸಲದ ಚುನಾವಣೆಯಲ್ಲಿ ಧ್ರುವೀಕರಣ ಕೆಲಸ ಮಾಡುತ್ತದೆ ಎಂದು ನೀವು ಭಾವಿಸುತ್ತೀರಾ?**

ಖಂಡಿತ ಇಲ್ಲ. ಜನರು ಮೋದಿ ಅವರ ರಾಜಕೀಯ ತಂತ್ರಗಾರಿಕೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ಬಿಜೆಪಿ ಜನರ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಇದರಲ್ಲಿ ಒಂದು ಬಾರಿಯಷ್ಟೇ ಯಶಸ್ಸು ಸಾಧಿಸಬಹುದು. ಬಿಜೆಪಿ ಪ್ರತಿಯೊಂದನ್ನೂ ಚುನಾವಣೆಯ ಗೆಲುವಿಗಾಗಿ ಮಾಡುತ್ತಿದೆ ಎಂಬುದು ಜನರಿಗೆ ಅರಿವಾಗಿದೆ. ಮೋದಿ ಅವರು ದೇವರಿಗೆ ಹೆದರುವ ವ್ಯಕ್ತಿಯಾಗಿದ್ದರೆ ಮಣಿಪುರ ಗಲಭೆಯ ಸಂದರ್ಭದಲ್ಲಿ ಮೌನವಾಗಿರುತ್ತಿರಲಿಲ್ಲ. ಪ್ರಧಾನಿಯಾದವರು ಜನಾಂಗೀಯ ಹಿಂಸಾಚಾರದ ಹೊತ್ತಿನಲ್ಲಿ ರಾಜ್ಯಕ್ಕೆ ಭೇಟಿ ನೀಡಿ ಶಾಂತಿ ಕಾಪಾಡುವ ಕೆಲಸ ಮಾಡಬೇಕಿತ್ತು. ಅಲ್ಲಿನ ಹಿಂಸಾಚಾರದ ಬಗ್ಗೆ ಪ್ರಧಾನಿಯವರು ಮಾತನಾಡಿದ್ದು 10 ತಿಂಗಳ ಬಳಿಕ. ಹೀಗಾಗಿ, ಬಿಜೆಪಿಯವರನ್ನು ನಕಲಿ ದೈವಭಕ್ತರೆಂದು ನಾನು ಕರೆಯುತ್ತೇನೆ. ಜನರನ್ನು ಧ್ರುವೀಕರಣ ಮಾಡಲು ಮತ್ತು ಅವರನ್ನು ಶತ್ರುಗಳನ್ನಾಗಿ ಮಾಡಲು ಧರ್ಮವನ್ನು ಬಳಸಿಕೊಳ್ಳುತ್ತಿದ್ದಾರೆ. ಇದು ಅವರ ಏಕೈಕ ಅಜೆಂಡಾ.

‘ದೇಶದಲ್ಲಿ ಪ್ರಜಾಪ್ರಭುತ್ವ ಎಲ್ಲಿದೆ?’

• **ಕಾಂಗ್ರೆಸ್ ಈ ಸಲ ಸುಮಾರು 300 ಕ್ಷೇತ್ರಗಳಲ್ಲಷ್ಟೇ ಸ್ಪರ್ಧೆ ಮಾಡುತ್ತಿದೆ. ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧೆ ವ್ಯರ್ಥವೆಂದು ಈ ನಿಲುವಿಗೆ ಪಕ್ಷ ಬಂದಿದೆಯಾ?**

ಇದು ದೇಶಕ್ಕಾಗಿ ಕಾಂಗ್ರೆಸ್ ಮಾಡಿರುವ ಅತಿ ದೊಡ್ಡ ತ್ಯಾಗ. ಈ ಚುನಾವಣೆ ದೇಶಕ್ಕೆ ನಿರ್ಣಾಯಕ. ಬಿಜೆಪಿ ಸರ್ಕಾರವು ದೇಶವನ್ನು ಆಳುತ್ತಿರುವ ರೀತಿ ಆತಂಕಕಾರಿಯಾಗಿದೆ. ಮುಖ್ಯಮಂತ್ರಿಗಳಾದ ಅರವಿಂದ ಕೇಜ್ರಿವಾಲ್, ಹೇಮಂತ್ ಸೊರೇನ್ ಅವರನ್ನು ಬಂಧಿಸಿದ ರೀತಿ, ನಮ್ಮ ಪಕ್ಷದ ಖಾತೆಗಳನ್ನು ಜಪ್ತಿ ಮಾಡಿದ ರೀತಿ ಅವರು ಯಾವ ಮಟ್ಟಕ್ಕೆ ಇಳಿದಿದ್ದಾರೆ ಎಂಬುದನ್ನು ತೋರಿಸುತ್ತದೆ. ಇ.ಡಿ, ಸಿಬಿಐ ಹಾಗೂ ಆದಾಯ ತೆರಿಗೆ ಇಲಾಖೆ ರಾಜಕೀಯ ಸಾಧನಗಳಾಗಿವೆ. ಚುನಾವಣಾ ಆಯೋಗ ಏಕಪಕ್ಷೀಯವಾಗಿದೆ. ನಮ್ಮದು ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಆದರೆ, ಈಗ ದೇಶದಲ್ಲಿ ಪ್ರಜಾಪ್ರಭುತ್ವ ಎಲ್ಲಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲ ಪಕ್ಷಗಳಿಗೂ ಸಮಾನ ಅವಕಾಶ ಇರಬೇಕು. ಆದರೆ, ವಾಸ್ತವ ಸ್ಥಿತಿ ಹಾಗಿಲ್ಲ. ಅವರು ಸಂವಿಧಾನವನ್ನೇ ಬದಲಿಸುವ ಕುರಿತು ಮಾತನಾಡುತ್ತಿದ್ದಾರೆ. ದೇಶವನ್ನು ರಕ್ಷಿಸಲು ಈ ಚುನಾವಣೆಯಲ್ಲಿ ಮೋದಿ ಮತ್ತು ಬಿಜೆಪಿಯನ್ನು ಸೋಲಿಸಲೇಬೇಕಿದೆ. ಪ್ರಮುಖ ವಿಪಕ್ಷವಾಗಿ ಕಾಂಗ್ರೆಸ್ ಮೇಲೆ ದೇಶದ ಹಿತಾಸಕ್ತಿ ಕಾಪಾಡುವ ಹೊಣೆ ಇದೆ. ನಾವು ಗರಿಷ್ಠ ಸ್ಥಾನಗಳನ್ನು ಮಿತ್ರ ಪಕ್ಷಗಳಿಗೆ ಬಿಟ್ಟುಕೊಟ್ಟಿದ್ದೇವೆ. ಇದರಿಂದ, ಕೆಲವು ಪ್ರದೇಶಗಳಲ್ಲಿ ನಮ್ಮ ಟಿಕೆಟ್ ಆಕಾಂಕ್ಷಿಗಳು ಬೇಸರಗೊಂಡಿದ್ದಾರೆ. ಆದರೆ, ನಮ್ಮ ಉದ್ದೇಶ ಬಿಜೆಪಿಯ ಸೀಟುಗಳ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೆ ಇಳಿಸುವುದಾಗಿದೆ.

ಕನ್ಹಯ್ಯ, ಚನ್ನಿಗೆ ಕಾಂಗ್ರೆಸ್ ಟಿಕೆಟ್

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಭಾನುವಾರ ದೆಹಲಿ, ಪಂಜಾಬ್‌ನ ಲೋಕಸಭಾ ಕ್ಷೇತ್ರಗಳಿಗಾಗಿ 10 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಜಲಂಧರ್ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಪಕ್ಷದ ಹಿರಿಯ ಮುಖಂಡ ಜೆ.ಪಿ.ಅಗರ್‌ವಾಲ್ ಅವರನ್ನು ಚಾಂದಿನಿ ಚೌಕ್ ಕ್ಷೇತ್ರದಿಂದ ಹಾಗೂ ಯುವ ನಾಯಕ ಕನ್ಹಯ್ಯ ಕುಮಾರ್ ಅವರನ್ನು ಈಶಾನ್ಯ ದೆಹಲಿಯಿಂದ ಕಣಕ್ಕಿಳಿಸಲಾಗಿದೆ. ಅವರು ಬಿಜೆಪಿಯ ಮನೋಜ್ ತಿವಾರಿ ವಿರುದ್ಧ ಪೈಪೋಟಿ ನಡೆಸುವರು.

ಇತ್ತೀಚೆಗೆ ಎಎಪಿ ತೊರೆದು ಕಾಂಗ್ರೆಸ್ ಸೇರಿದ್ದ ಮಾಜಿ ಸಂಸದ ಧರ್ಮವೀರ್ ಗಾಂಧಿ ಅವರನ್ನು ಫತೇಗಢ ಸಾಹಿಬ್ (ಎಸ್‌ಸಿ ಮೀಸಲು) ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.



ಬಿಜೆಪಿ ರೋಡ್ ಶೋ

ಉತ್ತರಾಖಂಡದ ಖತಿಮಾದಲ್ಲಿ ನೈನಿತಾಲ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಅವರ ರೋಡ್ ಶೋ ವೇಳೆ ಪಕ್ಷದ ಬೆಂಬಲಿಗರು ಅರ್ಥ್ ಮೂವರ್‌ನಲ್ಲಿ ಸಂಚರಿಸಿದರು –ಪಿಟಿಐ ಚಿತ್ರ

‘ಸಂಕಲ್ಪ ಪತ್ರ’ ಅಲ್ಲ, ಮಾಫಿನಾಮಾ: ಪವನ್ ಖೇರಾ

ಸುಳ್ಳಿನ ಪತ್ರ; ವಿಪಕ್ಷಗಳ ಟೀಕೆ

ನವದೆಹಲಿ/ಲಖನೌ (ಪಿಟಿಐ): ಬಿಜೆಪಿಯ ಪ್ರಣಾಳಿಕೆಯನ್ನು ವಾಕ್ಚಾತುರ್ಯದಿಂದ ಕೂಡಿದ ‘ಜುಮ್ಲಾ (ಸುಳ್ಳಿನ) ಪತ್ರ’ ಎಂದು ಕಾಂಗ್ರೆಸ್ ಟೀಕಿಸಿದೆ.

ಈ ಬಗ್ಗೆ ‘ಎಕ್ಸ್’ ವೇದಿಕೆಯಲ್ಲಿ ಪ್ರತಿಕ್ರಿಯಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಪ್ರಧಾನಿ ಮೋದಿಯವರು ಈ ಹಿಂದೆ ಭರವಸೆ ನೀಡಿದಂತೆ ಉದ್ಯೋಗ ಸೃಷ್ಟಿ, ಕೃಷಿಕರ ಆದಾಯ ದ್ವಿಗುಣಗೊಳಿಸುವುದು, ಬೆಲೆ ಏರಿಕೆ, ಹಣದುಬ್ಬರ ನಿರ್ವಹಿಸುವುದರಲ್ಲಿ ವಿಫಲರಾಗಿದ್ದು, ಈಗ 2047ರ ಬಗ್ಗೆ ಮಾತನಾಡುವ ಮೂಲಕ ತಮ್ಮ ಗುರಿಗಳನ್ನು ಬದಲಾಯಿಸಿಕೊಂಡಿದ್ದಾರೆ’ ಎಂದು ಟೀಕಿಸಿದ್ದಾರೆ.

ಇಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್ ವಕ್ತಾರ ಪವನ್ ಖೇರಾ, ‘2014ರ ಪ್ರಣಾಳಿಕೆಯಲ್ಲಿ ವಿಶೇಷ ಕಾರ್ಯಪಡೆ ರಚಿಸಿ ಕಪ್ಪು ಹಣ ವಾಪಸ್ ತರುವುದಾಗಿ ಮೋದಿ ಭರವಸೆ ನೀಡಿದ್ದರು. ಅದರ ಬದಲು ಚುನಾವಣಾ ಬಾಂಡ್‌ಗಳು ಬಂದವು. ಈಶಾನ್ಯ ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಬಲಪಡಿಸುವುದಾಗಿ ಅವರು ಭರವಸೆ ನೀಡಿದ್ದರು. ಆದರೆ, ಈಗ ಮಣಿಪುರದಲ್ಲಿ ಹಿಂಸಾಚಾರ ಮುಂದುವರಿಯುತ್ತಿದ್ದು, ಅದರ ಬಗ್ಗೆ ಪ್ರಧಾನಿ ಮೋದಿ ಮೌನ ವಹಿಸಿದ್ದಾರೆ’ ಎಂದು ಟೀಕಿಸಿದ್ದಾರೆ.

ಬಿಜೆಪಿಯ ‘ಸಂಕಲ್ಪ ಪತ್ರ’ ಹೆಸರಿಗೆ ನಮ್ಮ ಬಲವಾದ ಆಕ್ಷೇಪಣೆ ಇದ್ದು, ಅದನ್ನು ‘ಮಾಫಿನಾಮಾ’ (ಕ್ಷಮಾಪಣಾ ಪತ್ರ) ಎಂದು ಕರೆಯಬೇಕು. ಮೋದಿ ಅವರು ದೇಶದ ದಲಿತರ, ರೈತರ, ಯುವಜನರ ಮತ್ತು ಆದಿವಾಸಿಗಳ ಕ್ಷಮೆ ಕೇಳಬೇಕು’ ಎಂದು ಪವನ್ ಖೇರಾ ಹೇಳಿದ್ದಾರೆ.

ಬಿಜೆಪಿಯ ಪ್ರಣಾಳಿಕೆಯನ್ನು ಟೀಕಿಸಿರುವ ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನೇತ್, ‘ಹತ್ತು ವರ್ಷದ ಆಡಳಿತದ ನಂತರ ಮೋದಿ ಜನರನ್ನು ಮೋಸಗೊಳಿಸಲು ಆರಂಭಿಸಿದ್ದಾರೆ. 25 ಕೋಟಿ ಜನರನ್ನು ಬಡತನದಿಂದ ಹೊರತಂದಿದ್ದೇವೆ ಎನ್ನುವ ಅವರ ಹೇಳಿಕೆ ಪೊಳ್ಳಾಗಿದ್ದು, ಅದನ್ನು ಯಾವುದೇ ಮೂರನೇ ವ್ಯಕ್ತಿ ಖಚಿತಪಡಿಸಿಲ್ಲ. ಸತ್ಯ ಏನು ಅಂದರೆ, ದೇಶದಲ್ಲಿ ಪ್ರತಿ ಗಂಟೆಗೆ ಇಬ್ಬರು ರೈತರು ಮತ್ತು ಇಬ್ಬರು ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ’ ಎಂದಿದ್ದಾರೆ.

‘ಅತಿ ಹೆಚ್ಚು ನಿರುದ್ಯೋಗ ಇರುವ ದೇಶದಲ್ಲಿ ಬಿಜೆಪಿ ಪ್ರಣಾಳಿಕೆಯಲ್ಲಿ ಕೇವಲ ಎರಡು ಬಾರಿ ಮಾತ್ರ ಉದ್ಯೋಗದ ಪ್ರಸ್ತಾಪ ಬರುತ್ತದೆ. ಅದರಲ್ಲಿ ಎಂಎಸ್‌ಪಿಗೆ ಕಾನೂನಿನ ಖಾತರಿಯ ಬಗ್ಗೆ ಪ್ರಸ್ತಾಪ ಇಲ್ಲ. ಮಣಿಪುರ, ಚೀನಾದ ಪ್ರಸ್ತಾಪವೂ ಇಲ್ಲ’ ಎಂದು ಅವರು ಆರೋಪಿಸಿದ್ದಾರೆ.

‘ವಿಶ್ವಗುರು ಆಗಲು ಸಾಧ್ಯವೇ?’

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಬಿಜೆಪಿ ಪ್ರಣಾಳಿಕೆಯು ‘ಸುಳ್ಳುಗಳ ವಿಶ್ವ ದಾಖಲೆಯನ್ನು ಮುರಿಯುತ್ತದೆ’ ಎಂದು ಲೇವಡಿ ಮಾಡಿದ್ದಾರೆ.

‘ದೇಶದ 80 ಕೋಟಿ ಜನರಿಗೆ ಉಚಿತ ಪಡಿತರ ಮುಂದುವರಿಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ. 80 ಕೋಟಿ ಮಂದಿ ಉಚಿತ ಪಡಿತರದಲ್ಲಿ ಜೀವನ ಸಾಗಿಸುವ ದೇಶವು ವಿಶ್ವಗುರು ಆಗಲು ಸಾಧ್ಯವೇ’ ಎಂದು ಪ್ರಶ್ನಿಸಿದ್ದಾರೆ. ಬಿಜೆಪಿಗೆ ಧೈರ್ಯವಿದ್ದರೆ, 2014 ಮತ್ತು 2019ರ ಪ್ರಣಾಳಿಕೆಗಳಲ್ಲಿ ಯಾವ ಭರವಸೆಗಳನ್ನು ಈಡೇರಿಸಿದ್ದೇವೆ ಎನ್ನುವುದನ್ನು ಹೇಳಲಿ ಎಂದು ಸವಾಲು ಹಾಕಿದರು.

ಚುನಾವಣಾ ಕಣದಲ್ಲಿ...

‘ಜೂನ್ 5ರಿಂದ ಉಪವಾಸ ಸತ್ಯಾಗ್ರಹ’

ಮುಂಬೈ (ಪಿಟಿಐ): ಮಹಾರಾಷ್ಟ್ರ ಸರ್ಕಾರವು ತನ್ನ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ನೀಡಲು ವಿಫಲವಾದರೆ, ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಮರುದಿನದಿಂದ (ಜೂನ್ 5) ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ಮರಾಠಾ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಭಾನುವಾರ ತಿಳಿಸಿದ್ದಾರೆ.

ಬಿ.ಆರ್.ಅಂಬೇಡ್ಕರ್ 133ನೇ ಜಯಂತಿ ಪ್ರಯುಕ್ತ ಅವರಿಗೆ ನಮನ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವ ದೇವೇಂದ್ರ ಫಡಣವೀಸ್ ವಿರುದ್ಧ ವಾಗ್ದಾಳಿ ನಡೆಸಿದರು.

‘ನಾಲ್ಕು ತಿಂಗಳ ಹಿಂದೆ ನಡೆದ ಘಟನೆಗಳಿಗೆ ಸಂಬಂಧಿಸಿದಂತೆ ಪೊಲೀಸರು ಮರಾಠಾ ಮೀಸಲಾತಿ ಹೋರಾಟಗಾರರ ವಿರುದ್ಧ ಪ್ರಕರಣಗಳನ್ನು ದಾಖಲಿಸುತ್ತಲೇ ಇದ್ದಾರೆ’ ಎಂದು ಆರೋಪಿಸಿದರು.

ಎಸ್‌ಪಿ: ಏಳು ಅಭ್ಯರ್ಥಿಗಳ ಘೋಷಣೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷವು (ಎಸ್‌ಪಿ) ಉತ್ತರ ಪ್ರದೇಶದ ಏಳು ಲೋಕಸಭಾ ಕ್ಷೇತ್ರಗಳಿಗೆ ಭಾನುವಾರ ಅಭ್ಯರ್ಥಿಗಳನ್ನು ಪ್ರಕಟಿಸಿತು. ಇದರೊಂದಿಗೆ ಪಕ್ಷವು ರಾಜ್ಯದಲ್ಲಿ ಒಟ್ಟು 57 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದಂತಾಗಿದೆ.

ಮಾಜಿ ಸಂಸದ ಭೀಷ್ಮ ಶಂಕರ್ ತಿವಾರಿ ಅವರನ್ನು ಡುಮರಿಯಾಗಂಜ್ ಕ್ಷೇತ್ರದಿಂದ ಕಣಕ್ಕಿಳಿಸಿದ್ದು, ಶ್ರಾವಸ್ತಿ ಕ್ಷೇತ್ರದ ಟಿಕೆಟ್‌ಅನ್ನು ಹಾಲಿ ಸಂಸದ ರಾಮ್ ಶಿರೋಮಣಿ ವರ್ಮಾ ಅವರಿಗೆ ನೀಡಿದೆ.

‘ವಿಪಕ್ಷಗಳ ಬಲ ಕುಗ್ಗಿಸಿರುವ ವೈಮನಸ್ಸು’

ಕೋಲ್ಕತ್ತ (ಪಿಟಿಐ): ತಮ್ಮ ನಡುವಣ ಭಿನ್ನಾಭಿಪ್ರಾಯಗಳಿಂದಾಗಿ ಭಾರತದಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವು ಬಲ ಕಳೆದುಕೊಂಡಿದೆ ಎಂದು ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅಭಿಪ್ರಾಯಪಟ್ಟಿದ್ದಾರೆ. ಕಾಂಗ್ರೆಸ್ ಪಕ್ಷವು ಸಾಂಸ್ಥಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ ಎಂದಿದ್ದಾರೆ.

‘ಜಾತಿಗಣತಿ ನಡೆಸುವಂತೆ ಕೇಳಿಬರುತ್ತಿರುವ ಕೂಗನ್ನು ಪರಿಗಣಿಸಬಹುದಾದರೂ ಉತ್ತಮ ಶಿಕ್ಷಣ, ಆರೋಗ್ಯ ಸೌಲಭ್ಯ ಮತ್ತು ಲಿಂಗ ಸಮಾನತೆಯ ಮೂಲಕ ಹಿಂದುಳಿದವರ ಸಬಲೀಕರಣವು ಭಾರತಕ್ಕೆ ಅತಿ ಅಗತ್ಯವಾಗಿದೆ’ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಬಿಜೆಪಿಯನ್ನು ಎದುರಿಸುವಲ್ಲಿ ವಿರೋಧ ಪಕ್ಷಗಳ ದೌರ್ಬಲ್ಯ ಏನು ಎಂಬ ಪ್ರಶ್ನೆಗೆ, ‘ಭಾರತದಲ್ಲಿ ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಇಲ್ಲದಿರುವುದರಿಂದ ಅವುಗಳು ಶಕ್ತಿ ಕಳೆದುಕೊಂಡಿವೆ.

ಭಾರತದಂತಹ ಪ್ರಜಾಸತ್ತಾತ್ಮಕ ದೇಶದ ಪ್ರಜೆಯಾಗಿರುವುದಕ್ಕೆ ಅತೀವ ಹೆಮ್ಮೆಯಿದೆ. ಆದರೆ, ರಾಷ್ಟ್ರದ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬಲಪಡಿಸಲು ಹೆಚ್ಚು ಶ್ರಮವಹಿಸುವ ಅಗತ್ಯವಿದೆ ಎಂದು ಅಮರ್ತ್ಯ ಸೇನ್ ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ



ಒಗ್ಗಟ್ಟು ಇದ್ದಿದ್ದರೆ ಹೆಚ್ಚಿನ ಬಲದೊಂದಿಗೆ ಬಿಜೆಪಿಯನ್ನು ಎದುರಿಸಬಹುದಿತ್ತು. ಜೆಡಿಯು ಮತ್ತು ಆರ್‌ಎಲ್‌ಡಿ ಹೊರನಡೆದಿರುವ ಕಾರಣ, ವಿರೋಧ ಪಕ್ಷಗಳ ಮೈತ್ರಿಕೂಟದ ಬಲ ಕುಗ್ಗಿದೆ’ ಎಂದು ಉತ್ತರಿಸಿದರು.

‘ಕಾಂಗ್ರೆಸ್ ಪಕ್ಷವು ಸಂಘಟನೆಗೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಹಲವು ವರ್ಷಗಳ ಭವ್ಯ ಇತಿಹಾಸವು ಆ ಪಕ್ಷಕ್ಕೆ ಸ್ಫೂರ್ತಿಯಾಗಬೇಕು’ ಎಂದು 90 ವರ್ಷದ ಅವರು ತಿಳಿಸಿದರು.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಬದಲಾಯಿಸಲಿದೆ ಎಂಬ ವಿರೋಧ ಪಕ್ಷಗಳ ಆರೋಪಗಳ ಕುರಿತು ಪ್ರತಿಕ್ರಿಯಿಸಿ, ‘ಸಂವಿಧಾನ ಬದಲಾಯಿಸುವುದನ್ನು ಸರ್ಕಾರದ ‘ಏಕ-ಧರ್ಮ’ ಕೇಂದ್ರಿತ ನೀತಿಯ ಒಂದು ಭಾಗವಾಗಿ ಭಾವಿಸಬೇಕೇ ಹೊರತು, ಅದರಿಂದ ದೇಶದ ಸಾಮಾನ್ಯ ಜನರಿಗೆ ಯಾವುದೇ ಲಾಭ ಉಂಟಾಗದು’ ಎಂದರು.

ರಾಮಮಂದಿರ ನಿರ್ಮಾಣ ಮತ್ತು ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿ ಮೂಲಕ ಹಿಂದೂಗಳನ್ನು ಒಗ್ಗೂಡಿಸಲು ಬಿಜೆಪಿಗೆ ಸಾಧ್ಯವಾಗಲಿದೆಯೇ ಎಂಬ ಪ್ರಶ್ನೆಗೆ, ‘ಭಾರತವು ಜಾತ್ಯತೀತ ಸಂವಿಧಾನವನ್ನು ಹೊಂದಿರುವ ಜಾತ್ಯತೀತ ರಾಷ್ಟ್ರವಾಗಿದೆ. ಹಿಂದೂ ಅಸ್ಮಿತೆಯನ್ನು ಎತ್ತಿಹಿಡಿಯುವುದರಿಂದ ಬಹುಸಂಖ್ಯಾತ ಹಿಂದೂಗಳಿಗೆ ಅನುಕೂಲಕರ ಎನಿಸಬಹುದು. ಆದರೆ ಇದರಿಂದ ಭಾರತದ ಜಾತ್ಯತೀತ ಬೇರುಗಳು ಮತ್ತು ಬಹುಸಂಸ್ಕೃತಿ ಸ್ವರೂಪಕ್ಕೆ ಧಕ್ಕೆ ಉಂಟಾಗಲಿದೆ’ ಎಂದು ಎಚ್ಚರಿಸಿದರು.

ಆರ್ಥಿಕ ನೀತಿ ಬಗ್ಗೆ ಟೀಕೆ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಆರ್ಥಿಕ ನೀತಿಗಳನ್ನು ಅಮರ್ತ್ಯ ಸೇನ್ ಟೀಕಿಸಿದರು. ‘ಭಾರತದಲ್ಲಿ ಆಡಳಿತ ನಡೆಸುತ್ತಿರುವವರು ಶ್ರೀಮಂತರ ಹಿತಾಸಕ್ತಿಗಳನ್ನು ಕಾಪಾಡಲು ಒಲವು ತೋರುವರು. ಅನಕ್ಷರತೆ ಮತ್ತು ಲಿಂಗ ಅಸಮಾನತೆಯಿಂದಾಗಿ ಭಾರತದಲ್ಲಿ ಬಡವರಿಗೆ ಪ್ರಗತಿಯತ್ತ ಮುನ್ನಡೆಯಲು ಸಾಧ್ಯವಾಗುತ್ತಿಲ್ಲ’ ಎಂದು ಹೇಳಿದರು.

‘ಮೋದಿ ಮತ್ತೆ ಪ್ರಧಾನಿಯಾಗುವ ನಂಬಿಕೆ ಜಗತ್ತಿಗಿದೆ’

ಜಮುಯಿ/ಬಂಕಾ (ಬಿಹಾರ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರೇ ಮೂರನೇ ಬಾರಿಯೂ ಪ್ರಧಾನಿಯಾಗುತ್ತಾರೆ ಎಂಬ ನಂಬಿಕೆ ಜಗತ್ತಿಗಿದೆ. ಈ ವರ್ಷದ ಅಕ್ಟೋಬರ್‌ನಲ್ಲಿ ಮತ್ತು ಮುಂದಿನ ವರ್ಷ ವಿದೇಶಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಅವರನ್ನು ಈಗಾಗಲೇ ಆಹ್ವಾನಿಸಲಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದರು.

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ಅವರ ಆಡಳಿತದಲ್ಲಿ, ನಿರ್ದಿಷ್ಟ ದಾಳಿಯ ಮೂಲಕ ಗಡಿಯಾಚೆಗಿನ ಭಯೋತ್ಪಾದನೆಯನ್ನು ಸಮರ್ಥವಾಗಿ ಎದುರಿಸುವ ಶಕ್ತಿಯಾಗಿ ಭಾರತವು ರೂಪುಗೊಂಡಿದೆ ಎಂದರು.

ಚುಟುಕು

ರಾಜೀವ್ ಚಂದ್ರಶೇಖರ್‌ಗೆ ಬೆಂಬಲ

ತಿರುವನಂತಪುರ (ಪಿಟಿಐ): ರಾಷ್ಟ್ರಪ್ರಶಸ್ತಿ ವಿಜೇತೆ ಚಿತ್ರನಟಿ ಹಾಗೂ ಭರತನಾಟ್ಯ ಕಲಾವಿದೆ ಶೋಭನಾ ಅವರು, ತಿರುವನಂತಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಅವರಿಗೆ ಬೆಂಬಲ ಸೂಚಿಸಿದರು.



ಜಂಟಿ ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಶೋಭನಾ, ‘ಚಂದ್ರಶೇಖರ್ ಅವರಿಗೆ ಬೆಂಬಲ ನೀಡುವ ಮೂಲಕ ಈ ಬಾರಿಯ ವಿಷು ಹಬ್ಬ ನನಗೆ ವಿಶೇಷವಾಗಿದೆ. ಅವರಿಗೆ ಶುಭ ಕೋರುತ್ತೇನೆ’ ಎಂದು ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ನಡೆಸಲಿರುವ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದ್ದಾರೆ’ ಎಂದೂ ತಿಳಿಸಿದರು.

‘ನಟಿ ಶೋಭನಾ ಅವರು ಬೆಂಬಲ ನೀಡಿರುವುದು ಖುಷಿ ತಂದಿದೆ. ಪ್ರಗತಿ ಮತ್ತು ಅಭಿವೃದ್ಧಿಯ ಪರ ಇರುವವರು ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ’ ಎಂದು ರಾಜೀವ್ ಚಂದ್ರಶೇಖರ್ ಹೇಳಿದರು.

ಜಿಗಿ–ನೆಗೆದಾಟ

ಎಸ್‌ಎಡಿ ಮಾಜಿ ಶಾಸಕ ಎಎಪಿಗೆ

ಚಂಡೀಗಢ (ಪಿಟಿಐ): ಲೋಕಸಭೆ ಚುನಾವಣೆಗೆ ಮುನ್ನ, ಶಿರೋಮಣಿ ಅಕಾಲಿ ದಳಕ್ಕೆ (ಎಸ್‌ಎಡಿ) ಹಿನ್ನಡೆ ಉಂಟಾಗಿದ್ದು, ಪಕ್ಷದ ಮಾಜಿ ಶಾಸಕ ಪವನ್ ಕುಮಾರ್ ಟೀನು ಅವರು ಎಎಪಿಗೆ ಭಾನುವಾರ ಸೇರ್ಪಡೆಗೊಂಡರು.

ಟೀನು ಅವರು ಜಲಂಧರ್ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯುವ ಸಾಧ್ಯತೆಯಿದೆ ಎಂದು ಎಎಪಿ ಮೂಲಗಳು ತಿಳಿಸಿವೆ. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಟೀನು ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.ದಲಿತ ನಾಯಕರೂ ಆಗಿರುವ ಟೀನು, 2012–2017ರ ಅವಧಿಯಲ್ಲಿ ಜಲಂಧರ್ ಜಿಲ್ಲೆಯ ಆದಂಪುರ ಕ್ಷೇತ್ರದ ಶಾಸಕರಾಗಿದ್ದರು. 2022ರ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿ ಎದುರು ಸೋತಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ಅವರು ಪರಾಭವಗೊಂಡಿದ್ದರು.

ಎಎಪಿಯು ಜಲಂಧರ್ ಕ್ಷೇತ್ರಕ್ಕೆ ರಿಂಕು ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಆದರೆ ಅವರು ಪಕ್ಷ ತೊರೆದು ಬಿಜೆಪಿ ಸೇರಿದ್ದರು.

ಎಂಥಾ ಮಾತು!



ನರೇಂದ್ರ ಮೋದಿ ಅವರನ್ನು ಮೂರನೇ ಬಾರಿ ಪ್ರಧಾನಿಯಾಗಿ ಆಯ್ಕೆ ಮಾಡಿದರೆ, ಮುಂದಿನ ಮೂರು ವರ್ಷಗಳಲ್ಲಿ ಛತ್ತೀಸಗಢದಲ್ಲಿ ನಕ್ಸಲರ ಅಟ್ಟಹಾಸವನ್ನು ಸಂಪೂರ್ಣವಾಗಿ ಮಟ್ಟಹಾಕಲಾಗುವುದು. 10 ವರ್ಷಗಳ ಬಿಜೆಪಿ ಆಡಳಿತದಲ್ಲಿ ಮಾವೋವಾದಿಗಳ ಹಿಂಸಾಚಾರವನ್ನು ಕೊನೆಗಾಣಿಸಲಾಗಿದೆ. ಛತ್ತೀಸಗಢದಲ್ಲಿ ಇನ್ನೂ ನಕ್ಸಲರ ಚಟುವಟಿಕೆ ನಡೆಯುತ್ತಿದ್ದು, ಅದಕ್ಕೆ ಅಂತ್ಯಹಾಡಬೇಕಿದೆ.

ಅಮಿತ್ ಶಾ, ಕೇಂದ್ರ ಗೃಹಸಚಿವ



ದೇಶದಲ್ಲಿ ಪ್ರಜಾಪ್ರಭುತ್ವವನ್ನು ನಾಶಮಾಡಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವೆ ಯಾವುದೇ ವ್ಯತ್ಯಾಸವಿಲ್ಲ. ವಿರೋಧ ಪಕ್ಷದ ಯಾರೂ ಗೆಲ್ಲಬಾರದು ಎಂದು ಮೋದಿ ಅವರು ಬಯಸುತ್ತಿದ್ದಾರೆ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೇ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿರುವುದು ಮೋದಿ ಅವರು ಸಂಸದೀಯ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತಿರುವುದಕ್ಕೆ ಸಾಕ್ಷಿ. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷಕ್ಕೂ, ವಿರೋಧ ಪಕ್ಷಕ್ಕೂ ಸಮಾನ ಪ್ರಾಮುಖ್ಯ ಇರುತ್ತದೆ

ಶರದ್ ಪವಾರ್, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ

ಕ್ಷೇತ್ರ ಮಹಾತ್ಮೆ



ಚಹಾತೋಟಗಳು ಹಾಗೂ ಸಮೃದ್ಧ ಹಸಿರು ಪ್ರಕೃತಿಯ ಮಡಿಲಿನಲ್ಲಿರುವ ಅಸ್ಸಾಂನ ದಿಬ್ರುಗಢ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ಏರುತ್ತಿದ್ದು, ಈ ಬಾರಿ ಇಲ್ಲಿ ತ್ರಿಕೋನ ಸ್ಪರ್ಧೆಗೆ ವೇದಿಕೆ ಸಿದ್ಧವಾಗಿದೆ. ಬಿಜೆಪಿಯು ಕೇಂದ್ರ ಸಚಿವ ಸರ್ಬಾನಂದ ಸೋನೊವಾಲ್ ಅವರನ್ನು ಕಣಕ್ಕಿಳಿಸಿದರೆ, ಅಸ್ಸಾಂ ಜಾತೀಯ ಪರಿಷದ್ (ಎಜೆಪಿ) ಲುರಿಂಜ್ಯೋತಿ ಗೊಗೋಯಿ ಅವರನ್ನು ಅಖಾಡಕ್ಕಿಳಿಸಿದೆ. ಇವರಿಬ್ಬರ ಜೊತೆ ಸೆಣಸಲು ಎಎಪಿಯು ಮನೋಜ್ ಧನೋವರ್ ಅವರನ್ನು ಸ್ಪರ್ಧಿಯನ್ನಾಗಿಸಿದೆ. ಮನೋಜ್ ಅವರು ಕಾಂಗ್ರೆಸ್‌ನಿಂದ ಏಳು ಬಾರಿ ಶಾಸಕರಾಗಿದ್ದ ಮಾಜಿ ಸಚಿವ ರಾಮೇಶ್ವರ್ ಧನೋವರ್ ಅವರ ಪುತ್ರ. ಸ್ವಾತಂತ್ರ್ಯಾನಂತರದಿಂದ 2014ರ ವರೆಗೆ ಈ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. 2019ರಲ್ಲಿ ಬಿಜೆಪಿಯ ರಾಮೇಶ್ವರ ತೆಲಿ ಅವರು 3,64,566 ಮತಗಳ ಅಂತರದಿಂದ ಕಾಂಗ್ರೆಸ್‌ನ ಪಬನ್ ಸಿಂಗ್ ಘಾಟೋವರ್ ಅವರನ್ನು ಸೋಲಿಸಿದ್ದರು. ಸರ್ಬಾನಂದ ಅವರು ಈ ಹಿಂದೆ ಬಿಜೆಪಿಯ ಅಸ್ಸಾಂ ರಾಜ್ಯ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಕಳೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಭರ್ಜರಿ ಜಯ ಗಳಿಸಿರುವುದು ಸರ್ಬಾನಂದ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಲುರಿಂಜ್ಯೋತಿ ಅವರಿಗೆ ಅಸ್ಸಾಂನ ವಿರೋಧ ಪಕ್ಷವು ಬೆಂಬಲ ಸೂಚಿಸಿರುವುದರಿಂದ ಅವರು ಕೂಡ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಮೂರು ಪಕ್ಷಗಳೂ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವುದರಿಂದ ತುರುಸಿನ ಸ್ಪರ್ಧೆ ನಡೆಯಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಚಹಾ ತೋಟ ನೌಕರರು ಬಹುಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಮತದಾರರು ಯಾರ ಕೈ ಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಮಂಡಿ (ಹಿಮಾಚಲ ಪ್ರದೇಶ)



ಕಂಗನಾ ರನೌತ್ (ಬಿಜೆಪಿ)



ವಿಕ್ರಮಾದಿತ್ಯ ಸಿಂಗ್ (ಕಾಂಗ್ರೆಸ್)

V/S

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲೊಂದಾದ ಮಂಡಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಸಿನಿಮಾ ನಟಿ ಕಂಗನಾ ರನೌತ್ ಅವರನ್ನು ಕಣಕ್ಕಿಳಿಸಿದೆ. ವಿವಾದಕ್ಕೆ ಕಾರಣವಾಗುವ ಹೇಳಿಕೆಗಳ ಮೂಲಕವೇ ಹೆಚ್ಚು ಸುದ್ದಿಯಲ್ಲಿದ್ದ ಕಂಗನಾ ಅವರು ಹಲವು ವರ್ಷಗಳಿಂದಲೂ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಪರವಾಗಿ ಧ್ವನಿ ಎತ್ತುತ್ತಿದ್ದವರು. ಬಲಪಂಥೀಯ ಸಿದ್ಧಾಂತದ ಕಂಗನಾ ಅವರನ್ನು ಈ ಬಾರಿ ಚುನಾವಣಾ ರಾಜಕೀಯಕ್ಕಿಳಿಸುವ ಮೂಲಕ ಬಿಜೆಪಿಯು ಇಲ್ಲಿ ಅದೃಷ್ಟ ಪರೀಕ್ಷೆ ನಡೆಸಲು ಮುಂದಾಗಿದೆ. ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ವಿಚಾರವಾಗಿ ಕಂಗನಾ ಅವರು ಆಗ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಉದ್ಧವ್ ಠಾಕ್ರೆ ಅವರನ್ನು ಕಟುವಾಗಿ ಟೀಕಿಸಿದ್ದರು. ಇದು ಮಹಾರಾಷ್ಟ್ರ ಸರ್ಕಾರ ಮತ್ತು ಕಂಗನಾ ನಡುವಿನ ಜಿದ್ದಾಜಿದ್ದಿಗೂ ಕಾರಣವಾಗಿತ್ತು. ಬಳಿಕ ಕೇಂದ್ರ ಸರ್ಕಾರವು ಕಂಗನಾ ಅವರಿಗೆ ಸಿಆರ್‌ಪಿಎಫ್ ಭದ್ರತೆ ಒದಗಿಸಿತ್ತು.

ಕಂಗನಾ ಅವರನ್ನು ಮಣಿಸಲು ಹಿಮಾಚಲ ಪ್ರದೇಶದ ಸಚಿವ ವಿಕ್ರಮಾದಿತ್ಯ ಸಿಂಗ್ ಅವರನ್ನು ಕಾಂಗ್ರೆಸ್ ಪಕ್ಷವು ಅಖಾಡಕ್ಕಿಳಿಸಿದೆ. ಶಿಮ್ಲಾ ಗ್ರಾಮೀಣ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ವಿಕ್ರಮಾದಿತ್ಯ ಅವರು, ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಹಾಗೂ ಕಾಂಗ್ರೆಸ್ ಹಿಮಾಚಲ ಪ್ರದೇಶ ರಾಜ್ಯ ಘಟಕದ ಅಧ್ಯಕ್ಷೆ ಪ್ರತಿಭಾ ಸಿಂಗ್ ಅವರ ಪುತ್ರರಾಗಿದ್ದಾರೆ. 2021ರಲ್ಲಿ ಈ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಪ್ರತಿಭಾ ಸಿಂಗ್ ಅವರು 8,766 ಮತಗಳ ಅಂತರದಿಂದ ಬಿಜೆಪಿಯ ಬ್ರಿಗೇಡಿಯರ್ ಕುಶಾಲ್ ಠಾಕೂರ್ ಅವರನ್ನು ಪರಾಭವಗೊಳಿಸಿದ್ದರು. ವೀರಭದ್ರ ಸಿಂಗ್ ಕೂಡ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ತಂದೆ ಹಾಗೂ ತಾಯಿಯನ್ನು ಗೆಲ್ಲಿಸಿದ್ದ ಈ ಕ್ಷೇತ್ರದ ಮತದಾರರು ಮಗನ ಕೈ ಬಿಡಲಾರರು ಎಂಬುದು ಕಾಂಗ್ರೆಸ್ ನಾಯಕರ ವಿಶ್ವಾಸವಾಗಿದೆ.

ವಾಹನ ರಫ್ತು ಶೇ 5.5ರಷ್ಟು ಇಳಿಕೆ



ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿನ ಆರ್ಥಿಕ ಬಿಕ್ಕಟ್ಟಿನಿಂದಾಗಿ ದೇಶದ ಆಟೊಮೊಬೈಲ್ ರಫ್ತು ಪ್ರಮಾಣವು 2023–24ನೇ ಆರ್ಥಿಕ ವರ್ಷದಲ್ಲಿ ಶೇ5.5ರಷ್ಟು ಇಳಿಕೆಯಾಗಿದೆ.

2022–23ರಲ್ಲಿ ಒಟ್ಟು 47.61 ಲಕ್ಷ ವಾಹನಗಳು ರಫ್ತಾಗಿದ್ದರೆ, 2023–24ರಲ್ಲಿ 45 ಲಕ್ಷ ರಫ್ತಾಗಿವೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್ಐಎಎಂ) ತಿಳಿಸಿದೆ.

ಕೆಲವು ವಿದೇಶಿ ಮಾರುಕಟ್ಟೆಗಳು ಅಸ್ಥಿರತೆಯಿಂದ ಕೂಡಿವೆ. ವಾಣಿಜ್ಯ ವಾಹನ ಮತ್ತು ದ್ವಿಚಕ್ರ ವಾಹನ ರಫ್ತಿನಲ್ಲಿ ದೃಢವಾಗಿರುವ ದೇಶಗಳು ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿವೆ. ಹಾಗಾಗಿ, ರಫ್ತು ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಎಸ್ಐಎಎಂನ ಅಧ್ಯಕ್ಷ ವಿನೋದ್ ಅಗರ್ವಾಲ್ ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ವಾಣಿಜ್ಯ ವಾಹನ, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ರಫ್ತಿನಲ್ಲಿ ಇಳಿಕೆಯಾಗಿದೆ. ಆದರೆ, ಪ್ರಯಾಣಿಕ ವಾಹನಗಳ ರಫ್ತಿನಲ್ಲಿ ಸ್ವಲ್ಪ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.


ಆದರೆ, ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಪ್ರಮುಖವಾಗಿ ದ್ವಿಚಕ್ರ ವಾಹನ ವಿಭಾಗದಲ್ಲಿ ಉತ್ತಮ ಚೇತರಿಕೆ ಕಂಡಿದೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಪ್ರಯಾಣಿಕ ವಾಹನ ರಫ್ತು ಶೇ1.4ರಷ್ಟು ಹೆಚ್ಚಳವಾಗಿದೆ. ಒಟ್ಟು ವಾಹನಗಳ ರಫ್ತು 6.62 ಲಕ್ಷದಿಂದ 6.72 ಲಕ್ಷಕ್ಕೆ ಏರಿಕೆಯಾಗಿದೆ. ಮಾರುತಿ ಸುಜುಕಿ ಕಾರುಗಳ ರಫ್ತು 2.55 ಲಕ್ಷದಿಂದ 2.80 ಲಕ್ಷಕ್ಕೆ ಹೆಚ್ಚಳವಾಗಿದೆ. ಹುಂಡೈ ಮೋಟರ್ ಇಂಡಿಯಾ ಕಾರುಗಳ ರಫ್ತು 1.53 ಲಕ್ಷದಿಂದ 1.63 ಲಕ್ಷಕ್ಕೆ ಏರಿಕೆಯಾಗಿದೆ.

ಕಿಯಾ ಮೋಟರ್ಸ್ 52,105, ಫೋಕ್ಸ್‌ವ್ಯಾಗನ್ 44,180, ನಿಸಾನ್ ಮೋಟರ್ ಇಂಡಿಯಾ 42,989 ಮತ್ತು ಹೋಂಡಾದ 37,589 ಕಾರುಗಳು ರಫ್ತಾಗಿವೆ.

ದ್ವಿಚಕ್ರ ವಾಹನಗಳ ರಫ್ತು ಪ್ರಮಾಣ ಇಳಿಕೆಯಾಗಿದೆ. 2022–23ರಲ್ಲಿ 36.52 ಲಕ್ಷ ವಾಹನಗಳು ರಫ್ತಾಗಿದ್ದರೆ 2023–24ರಲ್ಲಿ 34.58 ಲಕ್ಷ ದ್ವಿಚಕ್ರ ವಾಹನಗಳು ರಫ್ತು ಆಗಿವೆ. ವಾಣಿಜ್ಯ ವಾಹನಗಳ ರಫ್ತು ಶೇ 16ರಷ್ಟು ಇಳಿಕೆಯಾಗಿದೆ. ಒಟ್ಟು 65,816 ವಾಹನಗಳು ರಫ್ತಾಗಿವೆ. ತ್ರಿಚಕ್ರ ವಾಹನಗಳ ರಫ್ತು ಶೇ 18ರಷ್ಟು ಕುಸಿತವಾಗಿದ್ದು, 2.99 ಲಕ್ಷ ವಾಹನಗಳು ರಫ್ತಾಗಿವೆ.





ಷೇರು ಹೂಡಿಕೆಗೆ ಸರಳ ಸೂತ್ರಗಳು



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬೇಕು ಎಂದು ಅನೇಕರು ಬಯಸುತ್ತಾರೆ. ಆದರೆ, ಸರಿಯಾದ ಕಲಿಕೆಯಿಲ್ಲದೆ ಷೇರು ಹೂಡಿಕೆಯಲ್ಲಿ ತೊಡಗುವುದರಿಂದ ಮೊದಲ ಪ್ರಯತ್ನದಲ್ಲೇ ಬಹುಪಾಲು ಮಂದಿ ಕೈ ಸುಟ್ಟುಕೊಳ್ಳುತ್ತಾರೆ. ಷೇರು ಮಾರುಕಟ್ಟೆ ಪ್ರವೇಶ ಮಾಡುವವರು ಯಾವೆಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು? ಷೇರುಪೇಟೆಯಲ್ಲಿ ಗೆಲ್ಲಬೇಕಾದರೆ ಅರಿತಿರಬೇಕಾದ ಸೂತ್ರಗಳೇನು? ಸುಲಭವಾಗಿ ಷೇರುಗಳನ್ನು ಆಯ್ಕೆ ಮಾಡುವುದು ಹೇಗೆ? ಬನ್ನಿ ಈ ಎಲ್ಲಾ ವಿಷಯಗಳ ಬಗ್ಗೆ ವಿವರವಾಗಿ ತಿಳಿಯೋಣ.

ಸಂಪತ್ತಿನೆಡೆಗೆ ನಿಧಾನಗತಿಯ ನಡಿಗೆ ನಿಮ್ಮ ಆದ್ಯತೆಯಾಗಲಿ: ಕೆಲವು ವರ್ಷಗಳಿಂದ ಷೇರು ಮಾರುಕಟ್ಟೆಯು ನಿರೀಕ್ಷೆಗೂ ಮೀರಿ ಜಿಗಿತ ಕಂಡಿದೆ. 2020ರ ಏಪ್ರಿಲ್‌ನಿಂದ 2024ರ ಏಪ್ರಿಲ್‌ವರೆಗೆ ಸೆನ್ಸೆಕ್ಸ್ ವಾರ್ಷಿಕ ಸರಾಸರಿ (ಸಿಎಜಿಆರ್) ಶೇ27ರಷ್ಟು ಲಾಭಾಂಶ ಕೊಟ್ಟಿದ್ದರೆ, ನಿಫ್ಟಿ ವಾರ್ಷಿಕ ಸರಾಸರಿ ಶೇ 29ರಷ್ಟು ಗಳಿಕೆ ತಂದುಕೊಟ್ಟಿದೆ.

ಆದರೆ, ಇದೇ ರೀತಿ ಹೆಚ್ಚು ಲಾಭಾಂಶ ಸಿಕ್ಕಿಬಿಡುತ್ತದೆ ಎಂಬ ಆಸೆಬುರುಕತನದಿಂದ ಷೇರುಪೇಟೆಯಲ್ಲಿ ಹೂಡಿಕೆಗೆ ಪ್ರವೇಶ ಮಾಡಬೇಡಿ. ಏಕೆಂದರೆ, ಷೇರು ಮಾರುಕಟ್ಟೆಯಲ್ಲಿ ಹೇಗೆ ಗಳಿಕೆಯ ಸಂದರ್ಭವಿರುತ್ತದೋ ಹಾಗೆಯೇ ಕುಸಿತದ ಕಾಲವೂ ಇರುತ್ತದೆ. ಷೇರುಗಳ ಮೇಲೆ ತೊಡಗಿಸಿ ರಾತ್ರೋರಾತ್ರಿ ಶ್ರೀಮಂತರಾಗಿಬಿಡುವ ಲೆಕ್ಕಾಚಾರದೊಂದಿಗೆ ಹೂಡಿಕೆ ಮಾಡಿದರೆ ನಿಮ್ಮ ಪರಿಶ್ರಮದ ದುಡ್ಡು ಕರಗಿ ಹೋಗುತ್ತದೆ. 'ಸಂಪತ್ತಿನೆಡೆಗೆ ನಿಧಾನಗತಿಯ ನಡಿಗೆ' ಎನ್ನುವುದನ್ನು ಷೇರುಪೇಟೆಗೆ ಹೊಸದಾಗಿ ಪ್ರವೇಶ ಮಾಡುವವರು ಅರ್ಥ ಮಾಡಿಕೊಳ್ಳಬೇಕು. ಆಗ ಮಾತ್ರ ಷೇರು ಮಾರುಕಟ್ಟೆ ಹೂಡಿಕೆಯಲ್ಲಿ ಯಶಸ್ಸು ಗಳಿಸಲು ಸಾಧ್ಯ.

ಷೇರು ಅಂದರೆ?: 'ಷೇರು' ನಿರ್ದಿಷ್ಟ ಕಂಪನಿಯೊಂದರಲ್ಲಿ ಮಾಲೀಕತ್ವದ ಪಾಲುದಾರಿಕೆಯನ್ನು ಪ್ರತಿನಿಧಿಸುತ್ತದೆ. ಕಂಪನಿಯೊಂದು 200 ಷೇರುಗಳನ್ನು ಹೊಂದಿದ್ದು, ಅದರಲ್ಲಿ 100 ಷೇರುಗಳು ನಿಮ್ಮ ಬಳಿ ಇವೆ ಎಂದರೆ ಕಂಪನಿಯ ಶೇ50ರಷ್ಟು ಪಾಲುದಾರಿಕೆ ನಿಮ್ಮ ಬಳಿ ಇದೆ ಎಂದರ್ಥ.

ಉದಾಹರಣೆಗೆ ರಿಲಯನ್ಸ್ ಇಂಡಸ್ಟ್ರೀಸ್ ಬಳಿ ಸುಮಾರು 676 ಕೋಟಿ ಷೇರುಗಳಿವೆ. ಅದರಲ್ಲಿ 323 ಕೋಟಿ ಷೇರುಗಳನ್ನು ಸಾರ್ವಜನಿಕರು, ಅಂದರೆ ನಾವು–ನೀವು ಹೊಂದಿದ್ದೇವೆ. ಅಂದರೆ ಕಂಪನಿಯ ಒಟ್ಟು ಷೇರುಗಳಲ್ಲಿ ಶೇ 49ರಷ್ಟು ಪಾಲುದಾರಿಕೆ ಸಾಮಾನ್ಯ ಹೂಡಿಕೆದಾರರದ್ದಾಗಿದೆ.

ಒಂದೊಮ್ಮೆ ರಿಲಯನ್ಸ್‌ನ 50 ಷೇರುಗಳು ನಿಮ್ಮ ಬಳಿ ಇವೆ ಎಂದರೆ ಆ ಕಂಪನಿಯ ಅತಿಸಣ್ಣ ಪ್ರಮಾಣದ ಪಾಲುದಾರಿಕೆ ನಿಮ್ಮದಾಗುತ್ತದೆ.

ಕಂಪನಿಯ ಹಣಕಾಸಿನ ಸ್ಥಿತಿಗತಿ ಉತ್ತಮ ಇದ್ದಾಗ ಮತ್ತು ಭವಿಷ್ಯದ ಬೆಳವಣಿಗೆಯ ಮುನ್ನೋಟವಿದ್ದಾಗ ಯಾವುದೇ ಷೇರಿನ ಬೆಲೆ ಏರಿಕೆಯಾಗುತ್ತದೆ. ಕಂಪನಿಯ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಭವಿಷ್ಯದ ಪ್ರಗತಿಯ ಸಾಧ್ಯತೆಯೂ ಮಂಕಾಗಿದೆ ಎಂದಾಗ ಷೇರಿನ ಬೆಲೆ ಕುಸಿತ ಕಾಣುತ್ತದೆ. ಹೀಗೆ ಷೇರಿನ ಬೆಲೆಯಲ್ಲಾಗುವ ಬದಲಾವಣೆಯಿಂದಾಗಿ ಹೂಡಿಕೆದಾರರು (ಇನ್ವೆಸ್ಟರ್ಸ್) ಮತ್ತು ಟ್ರೇಡರ್‌ಗಳು ಅನುಕೂಲ ಪಡೆದುಕೊಳ್ಳುತ್ತಾರೆ.

ಹೂಡಿಕೆ ಆರಂಭಿಸಿ, ಮೊದಲು ಟ್ರೇಡಿಂಗ್ ಮೊರೆ ಹೋಗಬೇಡಿ: ಷೇರುಗಳನ್ನು ಖರೀದಿಸಿ ದೀರ್ಘಾವಧಿಗೆ ಇಟ್ಟುಕೊಳ್ಳುವುದನ್ನು ಹೂಡಿಕೆ ಅಥವಾ ಇನ್ವೆಸ್ಟಿಂಗ್ ಎಂದು ಕರೆಯಲಾಗುತ್ತದೆ. ಉದಾಹರಣೆಗೆ 1 ವರ್ಷ, 2 ವರ್ಷ, 3 ವರ್ಷ, 5 ವರ್ಷ, 10 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಷೇರುಗಳನ್ನು ಇಟ್ಟುಕೊಳ್ಳುವ ಪ್ರಕ್ರಿಯೆಗೆ ಇನ್ವೆಸ್ಟಿಂಗ್ ಎನ್ನಲಾಗುತ್ತದೆ. ಷೇರು ಮಾರುಕಟ್ಟೆಯಲ್ಲಿ ಅಲ್ಪಾವಧಿಗೆ ಹೂಡಿಕೆ ಮಾಡಿ ಧುತ್ತೆಂದು ಲಾಭ ಗಳಿಸಲು ಮುಂದಾಗುವುದನ್ನು ಟ್ರೇಡಿಂಗ್ ಎನ್ನಲಾಗುತ್ತದೆ. ಇಂದು ಹೂಡಿಕೆ ಮಾಡಿ ಇಂದೇ ಲಾಭ ಗಳಿಸುವ ಉದ್ದೇಶ ಇಲ್ಲಿರುತ್ತದೆ.

ಕಂಪನಿಯ ಗಟ್ಟಿತನ, ಭವಿಷ್ಯದ ಮುನ್ನೋಟ, ಹಣಕಾಸಿನ ಸ್ಥಿತಿಗತಿ ಇದ್ಯಾವುದನ್ನೂ ಟ್ರೇಡಿಂಗ್ ಮಾಡುವಾಗ ಪರಿಗಣಿಸುವುದಿಲ್ಲ. ಕೆಲ ತಾಂತ್ರಿಕ ಅಂಶಗಳ ಆಧಾರದಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಲು ಪ್ರಯತ್ನಿಸಲಾಗುತ್ತದೆ. ಟ್ರೇಡಿಂಗ್ ಎನ್ನುವುದು ಪರಿಣತರ ಆಟ, ಇದು ಬಲ್ಲವರಿಗಷ್ಟೇ. ಅದೂ ಅಲ್ಲದೆ ಟ್ರೇಡಿಂಗ್‌ನಲ್ಲಿ ಹಣ ಕಳೆದುಕೊಳ್ಳುವ ರಿಸ್ಕ್ ಜಾಸ್ತಿ ಇರುತ್ತದೆ.

ಇನ್ನು ಹೊಸದಾಗಿ ಷೇರು ಮಾರುಕಟ್ಟೆ ಪ್ರವೇಶಿಸುವವರು ನೇರವಾಗಿ ಟ್ರೇಡಿಂಗ್‌ಗೆ ಹೋದರೆ ಜೇಬು ಬರಿದು ಮಾಡಿಕೊಳ್ಳುವುದು ನಿಶ್ಚಿತ. ಹಾಗಾಗಿ, ಹೊಸಬರು ಹೂಡಿಕೆ ಆಯ್ಕೆಯನ್ನು ಪರಿಗಣಿಸುವುದು ಸೂಕ್ತ.

ಹೂಡಿಕೆಗೆ ಮೊದಲ ಷೇರು ಹುಡುಕುವುದು ಹೇಗೆ?: ಷೇರು ಮಾರುಕಟ್ಟೆಯಲ್ಲಿ 5,300ಕ್ಕೂ ಹೆಚ್ಚು ಕಂಪನಿಗಳಿವೆ. ಅಲ್ಲಿರುವ ಅಷ್ಟೂ ಕಂಪನಿಗಳು ಉತ್ತಮವಾಗಿ ಬೆಳವಣಿಗೆ ಸಾಧಿಸುತ್ತವೆ ಎಂದಲ್ಲ. ಕೆಲ ಕಂಪನಿಗಳು ಉತ್ತಮ ಪ್ರಗತಿ ಸಾಧಿಸಿದರೆ, ಕೆಲ ಕಂಪನಿಗಳು ಸಾಧಾರಣ ಮತ್ತು ಕೆಲ ಕಂಪನಿಗಳು ಕಳಪೆ ಸಾಧನೆ ತೋರಿರುತ್ತವೆ. ಯಾವ ಕಂಪನಿ ಉತ್ತಮ, ಯಾವ ಕಂಪನಿ ಕಳಪೆ ಎಂದು ಕಂಡುಕೊಳ್ಳಬೇಕಾದರೆ ಕಂಪನಿಯ ಮೂಲಭೂತ ಸ್ಥಿತಿ ಹಾಗೂ ತಾಂತ್ರಿಕ ವಿಶ್ಲೇಷಣೆಯ ಬಗ್ಗೆ ಗೊತ್ತಿರಬೇಕಾಗುತ್ತದೆ.

ಷೇರು ಹೂಡಿಕೆಗೆ ಹೊಸದಾಗಿ ಪ್ರವೇಶಿಸುವವರಿಗೆ ಇವೆಲ್ಲಾ ಗೊತ್ತಿರುವುದಿಲ್ಲ. ಹಾಗಾದರೆ ಏನು ಮಾಡಬೇಕು ಎನ್ನುವ ಪ್ರಶ್ನೆ ನಿಮ್ಮಲ್ಲಿರಬಹುದು. ನಿಮಗೆ ಗೊತ್ತಿರುವ, ತುಂಬಾ ಪರಿಚಯವಿರುವ ಕಂಪನಿಗಳನ್ನ ಪರಿಗಣಿಸಿ ಹೂಡಿಕೆ ಮಾಡುವುದು ಒಂದು ಒಳ್ಳೆಯ ಲೆಕ್ಕಾಚಾರವಾಗುತ್ತದೆ.

ಉದಾಹರಣೆಗೆ ಬ್ಯಾಂಕಿಂಗ್, ದಿನಬಳಕೆ ವಸ್ತುಗಳು, ವಾಹನ ಉತ್ಪಾದನಾ ಕಂಪನಿಗಳು, ಅನಿಲ ಪೂರೈಕೆ ಕಂಪನಿಗಳು ಹೀಗೆ ನಿಮಗೆ ಯಾವ ಬ್ಯುಸಿನೆಸ್‌ನ ಪರಿಚಯವಿದೆಯೋ, ಅದರಲ್ಲಿ ಯಾವುದು ಉತ್ತಮ ಕಂಪನಿ ಅಂತ ನಿಮಗೆ ಅನಿಸುತ್ತದೆಯೋ ಅದನ್ನು ಗಣನೆಗೆ ತೆಗೆದುಕೊಳ್ಳಬಹುದು.

ಮೊದಲ ಬಾರಿ ಷೇರು ಖರೀದಿ ಮಾಡುವಾಗ ಬಹುತೇಕ ಮಂದಿ ಯಾರೋ ಭರ್ಜರಿ ಲಾಭ ಕೊಡುತ್ತದೆ ಎಂದು ಹೇಳಿದರು ಎನ್ನುವ ಕಾರಣಕ್ಕೆ ಪೂರ್ವಾಪರ ಗೊತ್ತಿಲ್ಲದ ಷೇರು ಖರೀದಿಸುತ್ತಾರೆ. ಈ ತಪ್ಪನ್ನು ನೀವೂ ಮಾಡಿದರೆ ನಷ್ಟ ನಿಶ್ಚಿತ. ಹೂಡಿಕೆಯ ಹಾದಿಯಲ್ಲಿ ನಿಧಾನವೇ ಪ್ರಧಾನ ಎನ್ನುವುದನ್ನು ಮರೆಯಬೇಡಿ.

ಷೇರು ಹೂಡಿಕೆಗೆ ಡಿ-ಮ್ಯಾಟ್ ಮತ್ತು ಟ್ರೇಡಿಂಗ್ ಅಕೌಂಟ್ ಬೇಕು: ಷೇರು ಹೂಡಿಕೆ ಮಾಡಲು ಡಿ-ಮ್ಯಾಟ್ ಮತ್ತು ಟ್ರೇಡಿಂಗ್ ಅಕೌಂಟ್ ಬೇಕಾಗುತ್ತದೆ. ಬ್ಯಾಂಕ್‌ಗಳ ಮೂಲಕ, ಸ್ಟಾಕ್ ಬ್ರೋಕರ್‌ಗಳ ನೆರವಿನಿಂದ ಅಥವಾ ನೇರವಾಗಿ ಸೆಬಿ ನೋಂದಾಯಿತ ಆನ್‌ಲೈನ್ ಹೂಡಿಕೆ ಆ್ಯಪ್‌ಗಳ ಮೂಲಕ ಡಿ-ಮ್ಯಾಟ್ ಮತ್ತು ಟ್ರೇಡಿಂಗ್ ಖಾತೆ ತೆರೆಯಬಹುದು. ಟ್ರೇಡಿಂಗ್ ಖಾತೆ ಷೇರುಗಳ ಖರೀದಿ ಮತ್ತು ಮಾರಾಟಕ್ಕೆ ಅನುಕೂಲ ಮಾಡಿಕೊಡುತ್ತದೆ. ಡಿ-ಮ್ಯಾಟ್ ಖಾತೆ ಖರೀದಿಸಿದ ಷೇರುಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸುರಕ್ಷಿತವಾಗಿಡಲು ನೆರವಾಗುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಮೂರು ವಾರದ ಓಟಕ್ಕೆ ತಡೆ



ಮೂರು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಏಪ್ರಿಲ್ 12ಕ್ಕೆ ಕೊನೆಗೊಂಡ ವಾರದಲ್ಲಿ ಮತ್ತೆ ಕುಸಿತ ಕಂಡಿವೆ.

22,519 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ವಾರದ ಅವಧಿಯಲ್ಲಿ ಶೇ 0.03ರಷ್ಟು ಇಳಿಕೆಯಾಗಿದೆ. ಸೆನ್ಸೆಕ್ಸ್ 74,244 ಅಂಶಗಳಲ್ಲಿ ವಹಿವಾಟು ಮುಗಿಸಿದೆ. ಅಮೆರಿಕ ಡಾಲರ್ ಮೌಲ್ಯ ಹೆಚ್ಚಳ, ತೈಲ ಬೆಲೆ ಏರಿಕೆ, ಅಮೆರಿಕದಲ್ಲಿ ಹಣದುಬ್ಬರ ಹೆಚ್ಚಳ, ಅಮೆರಿಕ ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಇಳಿಕೆ ನಿರ್ಣಯ ಮತ್ತಷ್ಟು ಮುಂದಕ್ಕೆ ಹೋಗುವ ಸಾಧ್ಯತೆ ಸೇರಿದಂತೆ ಹಲವು ಅಂಶಗಳು ಸೂಚ್ಯಂಕಗಳ ಮಂದಗತಿಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಫಾರ್ಮಾ ಶೇ 2, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಮತ್ತು ಮಾಧ್ಯಮ ಸೂಚ್ಯಂಕ ತಲಾ ಶೇ 1.5ರಷ್ಟು ಇಳಿಕೆ ಕಂಡಿವೆ. ಆದರೆ, ನಿಫ್ಟಿ ಲೋಹ ಸೂಚ್ಯಂಕ ಶೇ 3, ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1.5 ಮತ್ತು ನಿಫ್ಟಿ ವಾಹನ ಸೂಚ್ಯಂಕ ಶೇ 1ರಷ್ಟು ಜಿಗಿದಿವೆ. ಬಿಎಸ್ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಹಿಂದೂಸ್ಥಾನ್ ಜಿಂಕ್, ವೇದಾಂತ, ಐಷರ್ ಮೋಟರ್ಸ್, ನೈಕಾ, ಗೇಲ್ ಇಂಡಿಯಾ, ಟಾಟಾ ಪವರ್ ಕಂಪನಿ, ಇಂಟರ್ ಗ್ಲೋಬ್ ಏವಿಯೇಷನ್, ಇನ್ಫೋ ಎಡ್ಜ್ ಶೇ 5ರಿಂದ ಶೇ 27ರಷ್ಟು ಹೆಚ್ಚಳ ದಾಖಲಿಸಿವೆ. ಬಂಧನ್ ಬ್ಯಾಂಕ್, ವರುಣ್ ಬೆವರೇಜಸ್, ಪೇಟಿಎಂ, ಅದಾನಿ ಪವರ್, ಜೈಡಸ್ ಲೈಫ್ ಸೈನ್ಸಸ್ ಮತ್ತು ಸನ್‌ಫಾರ್ಮಾ ಕುಸಿದಿವೆ.

ಇನ್ನು ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,526 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹12,232 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮುನ್ನೋಟ: ಈ ವಾರ ಕ್ರಿಸೆಲ್, ಡೆನ್ ನೆಟ್‌ವರ್ಕ್ಸ್, ಏಂಜಲ್ ಒನ್, ಟಾಟಾ ಕಮ್ಯೂನಿಕೇಷನ್ಸ್, ಐಸಿಐಸಿಐ ಲೊಂಬಾರ್ಡ್ ಜನರಲ್ ಇನ್ಶುರೆನ್ಸ್ ಕಂಪನಿ, ಇನ್ಫೊಸಿಸ್, ಬಜಾಜ್ ಆಟೊ, ಐಸಿಐಸಿಐ ಸೆಕ್ಯೂರಿಟೀಸ್, ವಿಪ್ರೊ, ಜಿಯೊ ಫೈನಾನ್ಶಿಯಲ್ ಸರ್ವಿಸಸ್, ಎಚ್‌ಡಿಎಫ್‌ಸಿ ಎಎಂಸಿ, ಎಚ್‌ಡಿಎಫ್‌ಸಿ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ.

ಅದಾನಿ ಸಮೂಹದ ಏಳು ಕಂಪನಿಗಳಲ್ಲಿ ಹೂಡಿಕೆ

ಎಲ್‌ಐಸಿ ಹೂಡಿಕೆ ಮೌಲ್ಯ ವೃದ್ಧಿ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಅದಾನಿ ಸಮೂಹದ ಏಳು ಕಂಪನಿಗಳಲ್ಲಿ ಮಾಡಿರುವ ಹೂಡಿಕೆಯ ಮೌಲ್ಯವು, 2023–24ನೇ ಆರ್ಥಿಕ ವರ್ಷದಲ್ಲಿ ಶೇ 59ರಷ್ಟು ಏರಿಕೆಯಾಗಿದೆ.

2023ರ ಮಾರ್ಚ್ 31ಕ್ಕೆ ₹38,471 ಕೋಟಿ ಇದ್ದ ಹೂಡಿಕೆ ಮೊತ್ತವು ಪ್ರಸಕ್ತ ವರ್ಷದ ಮಾರ್ಚ್ 31ಕ್ಕೆ ₹61,210 ಕೋಟಿಗೆ ಮುಟ್ಟಿದೆ. ಒಟ್ಟಾರೆ ₹22,378 ಕೋಟಿಯಷ್ಟು ಏರಿಕೆಯಾಗಿದೆ ಎಂದು ಷೇರು ವಿನಿಮಯ ಕೇಂದ್ರದ ಅಂಕಿ–ಅಂಶಗಳು ತಿಳಿಸಿವೆ.

ಅಮೆರಿಕ ಮೂಲದ ಶಾರ್ಟ್ ಸೆಲ್ಲರ್ ಕಂಪನಿ 'ಹಿಂಡನ್‌ಬರ್ಗ್ ರಿಸರ್ಚ್' ಬಿಡುಗಡೆಗೊಳಿಸಿದ ವರದಿಯಿಂದಾಗಿ ಅದಾನಿ ಸಮೂಹದ ಕಂಪನಿಗಳ ಷೇರಿನ ಮೌಲ್ಯ ತೀವ್ರವಾಗಿ ಕುಸಿದಿತ್ತು. ಮಾರುಕಟ್ಟೆ ಮೌಲ್ಯವು ₹12.54 ಲಕ್ಷ ಕೋಟಿಗೆ ಇಳಿಕೆಯಾಗಿತ್ತು. ಇದರಿಂದ ಎಲ್‌ಐಸಿ ಕೂಡ ನಷ್ಟ ಅನುಭವಿಸಿತ್ತು.

ಹಿಂಡನ್‌ಬರ್ಗ್ ವರದಿಯನ್ನು ಅದಾನಿ ಸಮೂಹವು ಅಲ್ಲಗಳೆದಿತ್ತು. ಈ ಆರೋಪ ಕುರಿತ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದರಿಂದ, ಅದಾನಿ ಸಮೂಹದ ಷೇರುಗಳು ಚೇತರಿಸಿಕೊಂಡಿವೆ. ಇದರಿಂದ ಎಲ್‌ಐಸಿ ಹೂಡಿಕೆ ಮೌಲ್ಯವೂ ವೃದ್ಧಿಯಾಗಿದೆ.

ಅದಾನಿ ಪೋರ್ಟ್ ಆ್ಯಂಡ್ ಎಸ್‌ಇಝಡ್ ಹಾಗೂ ಅದಾನಿ ಎಂಟರ್‌ಪ್ರೈಸಸ್‌ನಲ್ಲಿ ಹೂಡಿಕೆ ವೇಳೆ ಎಲ್‌ಐಸಿಯು ರಾಜಕೀಯ ಒತ್ತಡ ಎದುರಿಸಿತ್ತು. ಸದ್ಯ ಈ ಎರಡು ಕಂಪನಿಯ ಷೇರಿನ ಮೌಲ್ಯವು ಕ್ರಮವಾಗಿ ಶೇ 83ರಷ್ಟು ಹಾಗೂ ಶೇ 68.4ರಷ್ಟು ಏರಿಕೆ ಕಂಡಿದೆ.

ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನಲ್ಲಿ ಎಲ್‌ಐಸಿ ಮೊತ್ತವು ₹8,495 ಕೋಟಿಯಿಂದ ₹14,305 ಕೋಟಿಗೆ ಏರಿಕೆಯಾಗಿದೆ. ಅದಾನಿ ಪೋರ್ಟ್ ಆ್ಯಂಡ್ ಎಸ್‌ಇಝಡ್‌ನಲ್ಲಿ ₹12,450 ಕೋಟಿಯಿಂದ ₹22,776 ಕೋಟಿಗೆ ತಲುಪಿದೆ.

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್‌ನಲ್ಲಿನ ಹೂಡಿಕೆಯು ದುಪ್ಪಟ್ಟಾಗಿದೆ. ಒಟ್ಟಾರೆ ₹3,937 ಕೋಟಿಗೆ ಮುಟ್ಟಿದೆ. ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್, ಅಂಬುಜಾ ಮತ್ತು ಎಸಿಸಿಯಲ್ಲೂ ಮೌಲ್ಯವು ಏರಿಕೆಯಾಗಿದೆ.

ವಿದೇಶಿ ಹೂಡಿಕೆದಾರರ ಒಲವು: ಹಿಂಡನ್‌ಬರ್ಗ್ ವರದಿಯಿಂದಾಗಿ ದೇಶೀಯ ಹೂಡಿಕೆದಾರರು ಅದಾನಿ ಸಮೂಹದಲ್ಲಿ ಹೂಡಿಕೆಗೆ ಹಿಂಜರಿದಿದ್ದು ಉಂಟು. ಆದರೆ, ವಿದೇಶಿ ಹೂಡಿಕೆದಾರರು ಹೆಚ್ಚಿನ ಹೂಡಿಕೆ ಮಾಡಿದ್ದರು. ಕತಾರ್ ಇನ್‌ವೆಸ್ಟ್‌ಮೆಂಟ್ ಅಥಾರಿಟಿ, ಅಬುಧಾಬಿಯ ಐಎಚ್‌ಸಿ ಕಂಪನಿ, ಫ್ರೆಂಚ್‌ನ ಟೋಟಲ್ ಎನರ್ಜಿಸ್, ಅಮೆರಿಕದ ಜಿಕ್ಯೂಜಿ ಕಂಪನಿಯು ಅದಾನಿ ಕಂಪನಿಗಳ ಷೇರಿನಲ್ಲಿ ₹45 ಸಾವಿರ ಕೋಟಿ ಹೂಡಿಕೆ ಮಾಡಿವೆ.

ಅಂಕಿ ಅಂಶಗಳು

₹38,471 ಕೋಟಿ
2023ರ ಮಾರ್ಚ್ 31ಕ್ಕೆ ಒಟ್ಟು ಹೂಡಿಕೆ ಮೌಲ್ಯ

₹61,210 ಕೋಟಿ
ಪ್ರಸಕ್ತ ವರ್ಷದ ಮಾರ್ಚ್ 31ಕ್ಕೆ ಒಟ್ಟು ಮೌಲ್ಯ

₹22,378 ಕೋಟಿ
2023–24ನೇ ಆರ್ಥಿಕ ವರ್ಷದಲ್ಲಿ ಒಟ್ಟು ಏರಿಕೆ

ಎಂ–ಕ್ಯಾಪ್ ₹13,440 ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶೇ 3.32ರಷ್ಟು ಕುಸಿತ ಕಂಡಿದೆ. ವಹಿವಾಟಿನಲ್ಲಿ ಪ್ರಮುಖ ಏಳು ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ಏರಿಕೆಯಾಗಿದ್ದರೆ, ಎಲ್‌ಐಸಿ ಸೇರಿ ಇತರೆ ಕಂಪನಿಗಳ ಮಾರುಕಟ್ಟೆ ಮೌಲ್ಯ ಇಳಿಕೆಯಾಗಿದೆ.

ಎಲ್‌ಐಸಿ ಎಂ–ಕ್ಯಾಪ್ ₹13,440 ಕೋಟಿ ಕರಗಿದೆ. ಒಟ್ಟು ಮಾರುಕಟ್ಟೆ ಮೌಲ್ಯ ₹6.14 ಲಕ್ಷ ಕೋಟಿ ಆಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ₹23,170 ಕೋಟಿ ಮತ್ತು ಹಿಂದುಸ್ತಾನ್ ಯೂನಿಲಿವರ್ ಕಂಪನಿಯ ಎಂ–ಕ್ಯಾಪ್, ₹8,153 ಕೋಟಿ ಇಳಿಕೆಯಾಗಿದೆ.

₹59,404 ಕೋಟಿ ಹೆಚ್ಚಳ: ಭಾರ್ತಿ ಏರ್‌ಟೆಲ್ ₹19,029 ಕೋಟಿ, ಐಸಿಐಸಿಐ ₹15,363 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹10,250 ಕೋಟಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ₹7,507 ಕೋಟಿ, ಐಟಿಸಿ ₹2,809 ಕೋಟಿ, ಇನ್ಫೊಸಿಸ್ ₹2,303 ಕೋಟಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮಾರುಕಟ್ಟೆ ಮೌಲ್ಯಕ್ಕೆ ₹2,141 ಕೋಟಿ ಸೇರ್ಪಡೆ ಆಗಿದೆ.


ನವೀಕರಿಸಬಹುದಾದ ಇಂಧನ ಉತ್ಪಾದನೆ ಶೇ 21ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಈ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ 2023–24ನೇ ಆರ್ಥಿಕ ವರ್ಷದಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನೆಯು ಶೇ21ರಷ್ಟು ಹೆಚ್ಚಳವಾಗಿದೆ. ಒಟ್ಟು 18.48 ಗಿಗಾವಾಟ್ ಉತ್ಪಾದನೆಯಾಗಿದೆ.

2022–23ರಲ್ಲಿ 15.27 ಗಿಗಾವಾಟ್‌ನಷ್ಟು ಉತ್ಪಾದನೆ ಆಗಿತ್ತು ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವಾಲಯವು ತಿಳಿಸಿದೆ.

ದೇಶದಲ್ಲಿ 2030ರ ವೇಳೆಗೆ 500 ಗಿಗಾವಾಟ್‌ನಷ್ಟು ನವೀಕರಿಸಬಹುದಾದ ಇಂಧನ ಉತ್ಪಾದನೆಯ ಗುರಿ ಹೊಂದಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹203-435
ದ್ವಿತಳಿ (ಬಿ.ವಿ)	₹222-542

ಇಸ್ರೇಲ್–ಇರಾನ್ ನಡುವೆ ಸಂಘರ್ಷ ಉಲ್ಬಣ

ಕಚ್ಚಾ ತೈಲ ಬೆಲೆ ಏರಿಕೆ?

ಲಂಡನ್ (ರಾಯಿಟರ್ಸ್): ಇಸ್ರೇಲ್ ಮೇಲೆ ಇರಾನ್ ಆರಂಭಿಸಿರುವ ದಾಳಿಯಿಂದಾಗಿ ಸೋಮವಾರದಿಂದ ಕಚ್ಚಾ ತೈಲದ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.


ಆದರೆ ಇಸ್ರೇಲ್, ಅಮೆರಿಕ ಸೇರಿ ಇತರೆ ರಾಷ್ಟ್ರಗಳು ಈ ದಾಳಿ ವಿರುದ್ಧ ಹೇಗೆ ಪ್ರತೀಕಾರಕ್ಕೆ ಇಳಿಯುತ್ತವೆ ಎನ್ನುವುದರ ಆಧಾರದ ಮೇಲೆ ಬೆಲೆ ಏರಿಕೆಯು ನಿರ್ಧಾರವಾಗಲಿದೆ ಎಂದು ಹೇಳಿದ್ದಾರೆ.

ಸಿರಿಯಾದ ರಾಜಧಾನಿ ಡಮಾಸ್ಕಸ್‌ನಲ್ಲಿ ಇರುವ ತನ್ನ ರಾಯಭಾರ ಕಚೇರಿ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಇರಾನ್ ಪ್ರತಿ ದಾಳಿ ಆರಂಭಿಸಿದೆ. ಇದರಿಂದ ಕಳೆದ ವಾರ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 92.18 ಡಾಲರ್‌ಗೆ ತಲುಪಿತ್ತು. ಇದು ಕಳೆದ ಅಕ್ಟೋಬರ್‌ನಿಂದ ಗರಿಷ್ಠ ಮಟ್ಟದ ಏರಿಕೆಯಾಗಿದೆ. ಭಾನುವಾರ ಪ್ರತಿ ಬ್ಯಾರೆಲ್‌ಗೆ 90.45 ಡಾಲರ್ ಆಗಿದೆ. ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾ ತೈಲವು ಪ್ರತಿ ಬ್ಯಾರೆಲ್‌ಗೆ 85.66 ಡಾಲರ್ ಆಗಿದೆ.

'ತೈಲ ವ್ಯಾಪಾರ ಪುನರಾರಂಭದ ವೇಳೆ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ. ಆದರೆ, ಇಲ್ಲಿಯವರೆಗೂ ಕಚ್ಚಾ ತೈಲದ ಉತ್ಪಾದನೆ ಮೇಲೆ ಯಾವುದೇ ಪರಿಣಾಮ ಬೀರಿಲ್ಲ' ಎಂದು ಕಚ್ಚಾ ತೈಲದ ಬ್ರೋಕರೇಜ್ ಕಂಪನಿಯಾದ ಪಿವಿಎಂನ ವಿಶ್ಲೇಷಕ ಥಾಮಸ್ ವಾರ್ಗ ಹೇಳಿದ್ದಾರೆ.

'ಇಸ್ರೇಲ್ ಮೇಲೆ ಮೊದಲ ಬಾರಿಗೆ ಇರಾನ್ ದಾಳಿ ಆರಂಭಿಸಿರುವುದರಿಂದ ತೈಲ ಬೆಲೆಯಲ್ಲಿ ಏರಿಕೆಯಾಗುವ ಸಾಧ್ಯತೆಯಿದೆ' ಎಂದು ಜಾಗತಿಕ ಬ್ರೋಕರೇಜ್ ಸಂಸ್ಥೆಯಾದ ಯುಬಿಎಸ್‌ನ ವಿಶ್ಲೇಷಕ ಜಿಯೋವಾನಿ ಸ್ಟೌನೊವೊ ಹೇಳಿದ್ದಾರೆ.

ಟೆಲ್ ಅವಿವ್‌ಗೆ ವಿಮಾನ ಸೇವೆ ತಾತ್ಕಾಲಿಕ ಸ್ಥಗಿತ



ನವದೆಹಲಿ (ಪಿಟಿಐ): ಇಸ್ರೇಲ್ ಮತ್ತು ಇರಾನ್ ನಡುವೆ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿರುವ ಬೆನ್ನಲ್ಲೇ ಏರ್ ಇಂಡಿಯಾ ವಿಮಾನಯಾನ ಕಂಪನಿಯು, ಟೆಲ್ ಅವಿವ್ ನಗರಕ್ಕೆ ತಾತ್ಕಾಲಿಕವಾಗಿ ವಿಮಾನ ಸೇವೆಯನ್ನು ರದ್ದುಪಡಿಸಿದೆ.

ವಾರದಲ್ಲಿ ನಾಲ್ಕು ಬಾರಿ ನವದೆಹಲಿಯಿಂದ ಇಸ್ರೇಲ್‌ನ ಟೆಲ್ ಅವಿವ್‌ಗೆ ಏರ್ ಇಂಡಿಯಾದ ವಿಮಾನಗಳು ಕಾರ್ಯಾಚರಣೆ ನಡೆಸುತ್ತಿದ್ದವು. ಸದ್ಯ ಸ್ಥಗಿತಗೊಳಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಇಸ್ರೇಲ್ ಮೇಲೆ ಕಳೆದ ವರ್ಷದ ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ದಾಳಿ ನಡೆಸಿದ್ದರು. ಇದರಿಂದ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವೆ ಬಿಕ್ಕಟ್ಟು ತಲೆದೋರಿದ್ದರಿಂದ ಆ ವೇಳೆ ಟೆಲ್ ಅವಿವ್‌ಗೆ ವಿಮಾನ ಸೇವೆಯನ್ನು ಸ್ಥಗಿತಗೊಳಿಸಿತ್ತು. ನಂತರ ಮಾರ್ಚ್ 3ರಿಂದ ಮತ್ತೆ ಸೇವೆಯನ್ನು ಪುನರಾರಂಭಿಸಿತ್ತು.

ಚುನಾವಣೆ: ವಿಮಾನ, ಹೆಲಿಕಾಪ್ಟರ್ ಬಾಡಿಗೆ ದುಬಾರಿ

ನವದೆಹಲಿ (ಪಿಟಿಐ): ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಖಾಸಗಿ ವಿಮಾನ ಮತ್ತು ಹೆಲಿಕಾಪ್ಟರ್‌ಗಳಿಗೆ ಶೇ 40ರಷ್ಟು ಬೇಡಿಕೆ ಹೆಚ್ಚಳವಾಗಿದೆ ಎಂದು ವಿಮಾನಯಾನ ಕ್ಷೇತ್ರದ ಪರಿಣತರು ತಿಳಿಸಿದ್ದಾರೆ.

ಸದ್ಯ ಚಾರ್ಟರ್ಡ್ ವಿಮಾನಗಳಿಗೆ ಪ್ರತಿ ಗಂಟೆಗೆ ಬಾಡಿಗೆ ದರವು ₹4.5 ಲಕ್ಷದಿಂದ ₹5.25 ಲಕ್ಷ ಇದ್ದರೆ, ಹೆಲಿಕಾಪ್ಟರ್‌ಗಳಿಗೆ ₹1.5 ಲಕ್ಷದಿಂದ ₹1.7 ಲಕ್ಷ ಇದೆ. ಈ ಬಾರಿ ವಿಮಾನಯಾನ ಕಂಪನಿಗಳು ಶೇ 15ರಿಂದ 20ರಷ್ಟು ಆದಾಯಗಳಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಸಾಮಾನ್ಯ ದಿನಗಳು ಹಾಗೂ ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಬೇಡಿಕೆ ಹೆಚ್ಚಾಗಿದೆ. ಆದರೆ, ಬೇಡಿಕೆಗೆ ತಕ್ಕಂತೆ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಲಭ್ಯತೆ ಕಡಿಮೆಯಿದೆ. ಹಾಗಾಗಿ, ಕೆಲವು ಕಂಪನಿಗಳು ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಒಪ್ಪಂದದ ಮೇರೆಗೆ ಗುತ್ತಿಗೆ ಪಡೆಯಲು ಮುಂದಾಗಿವೆ ಎಂದು ತಿಳಿಸಿದ್ದಾರೆ.

'ಹೆಲಿಕಾಪ್ಟರ್‌ಗಳಿಗೆ ಶೇ 25ರಷ್ಟು ಬೇಡಿಕೆ ಹೆಚ್ಚಳವಾಗಿದೆ. ಆದರೆ, ಇದಕ್ಕೆ ಅನುಗುಣವಾಗಿ ಹೆಲಿಕಾಪ್ಟರ್‌ಗಳ ಲಭ್ಯತೆ ಕಡಿಮೆಯಿದೆ' ಎಂದು ರೋಟರಿ ವಿಂಗ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ (ಪಶ್ಚಿಮ ವಿಭಾಗ) ಕ್ಯಾಪ್ಟನ್ ಉದಯ್ ಗೆಲ್ಲಿ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಕೆಲವು ದಿನಗಳವರೆಗೆ ಹೆಲಿಕಾಪ್ಟರ್‌ಗಳನ್ನು ಬಾಡಿಗೆ ಪಡೆಯುವ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು, ಅವುಗಳ ಬಳಕೆಯ ಆಧಾರದ ಮೇಲೆ ಗಂಟೆ ಲೆಕ್ಕದಲ್ಲಿ ಹಣ ಪಾವತಿಸುತ್ತಾರೆ' ಎಂದು ವಿವರಿಸಿದ್ದಾರೆ.

ಎಷ್ಟು ಮಂದಿ ಪ್ರಯಾಣ?: 'ಸಿಂಗಲ್ ಎಂಜಿನ್ ಹೆಲಿಕಾಪ್ಟರ್‌ಗೆ ಪ್ರತಿ ಗಂಟೆಗೆ ₹80 ಸಾವಿರದಿಂದ ₹90 ಸಾವಿರ ಬಾಡಿಗೆ ಇದೆ. ಇದರಲ್ಲಿ ಏಳು ಮಂದಿ ಪ್ರಯಾಣಿಸಬಹುದಾಗಿದೆ. ಡಬಲ್ ಎಂಜಿನ್ ಹೊಂದಿರುವ ಹೆಲಿಕಾಪ್ಟರ್‌ಗೆ ₹1.5 ಲಕ್ಷದಿಂದ ₹1.7 ಲಕ್ಷ ಬಾಡಿಗೆ ದರ ಇದೆ. ಇದರಲ್ಲಿ 12 ಜನರು ಪ್ರಯಾಣಿಸಬಹುದಾಗಿದೆ' ಎಂದು ಉದಯ್ ಗೆಲ್ಲಿ ತಿಳಿಸಿದ್ದಾರೆ.

'ಸದ್ಯ ಸಿಂಗಲ್ ಎಂಜಿನ್ ಹೆಲಿಕಾಪ್ಟರ್‌ನ ಬಾಡಿಗೆ ದರ ₹1.5 ಲಕ್ಷಕ್ಕೆ ಮುಟ್ಟಿದ್ದರೆ, ಡಬಲ್ ಎಂಜಿನ್ ಹೆಲಿಕಾಪ್ಟರ್‌ನ ಬಾಡಿಗೆಯು ₹3.5 ಲಕ್ಷಕ್ಕೆ ತಲುಪಿದೆ' ಎಂದು ಹೇಳಿದ್ದಾರೆ.

'ಕಳೆದ ಚುನಾವಣೆಗೆ ಹೋಲಿಸಿದರೆ ಈ ಬಾರಿ ಚಾರ್ಟರ್ಡ್ ವಿಮಾನಗಳಿಗೆ ಶೇ 30ರಿಂದ 40ರಷ್ಟು ಬೇಡಿಕೆ ಹೆಚ್ಚಳವಾಗಿದೆ' ಎಂದು ವಾಣಿಜ್ಯ ವಿಮಾನಗಳ ನಿರ್ವಾಹಕರ ಸಂಘದ ವ್ಯವಸ್ಥಾಪಕ ನಿರ್ದೇಶಕ ಕ್ಯಾಪ್ಟನ್ ಆರ್.ಕೆ. ಬಾಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜೂ.29ರಿಂದ ಅಮರನಾಥ ಯಾತ್ರೆ

ಜಮ್ಮು (ಪಿಟಿಐ): ಕಾಶ್ಮೀರದಲ್ಲಿರುವ ಅಮರನಾಥ ದೇಗುಲದ ವಾರ್ಷಿಕ ಯಾತ್ರೆಯು ಜೂನ್ 29ರಂದು ಪ್ರಾರಂಭವಾಗಲಿದೆ ಎಂದು ಶ್ರೀ ಅಮರನಾಥ ದೇಗುಲ ಮಂಡಳಿ (ಎಸ್‌ಎಎಸ್‌ಬಿ) ಭಾನುವಾರ ಪ್ರಕಟಿಸಿದೆ. ಆಗಸ್ಟ್ 19ರಂದು ಯಾತ್ರೆಯು ಮುಕ್ತಾಯಗೊಳ್ಳಲಿದೆ. ಒಟ್ಟು 52 ದಿನಗಳ ಕಾಲ ನಡೆಯಲಿರುವ ಯಾತ್ರೆಗೆ ಮುಂಗಡ ಬುಕಿಂಗ್ ಅನ್ನು ಏ.15ರಂದು ಪ್ರಾರಂಭಿಸಲಾಗುವುದು ಎಂದು ತಿಳಿಸಿದೆ. ಹಿಮಾಲಯದಲ್ಲಿ 3,880 ಮೀಟರ್ ಎತ್ತರದಲ್ಲಿರುವ ದೇವಸ್ಥಾನಕ್ಕೆ ತೆರಳಲು ಭಕ್ತರು ಯಾತ್ರೆ ಕೈಗೊಳ್ಳುತ್ತಾರೆ. ಅನಂತ್‌ನಾಗ್ ಜಿಲ್ಲೆಯ 48 ಕಿ.ಮೀ ನುನ್ವಾನ್–ಪಹಲ್‌ಗಾಮ್ ಮತ್ತು ಗಾಂದರ್‌ಬಲ್ ಜಿಲ್ಲೆಯ ಬಾಲ್‌ಟಾಲ್ ಮಾರ್ಗವಾಗಿ ಯಾತ್ರೆ ಸಾಗುತ್ತದೆ.

ಸಲ್ಮಾನ್ ಖಾನ್ ನಿವಾಸದ ಎದುರು ಗುಂಡಿನ ದಾಳಿ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ಇಲ್ಲಿನ ನಿವಾಸದ ಎದುರು ಆಗಂತುಕರಿಬ್ಬರು ಗುಂಡು ಹಾರಿಸಿದ ಘಟನೆ ಭಾನುವಾರ ನಡೆದಿದೆ.

ಎರಡು ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು ಮುಂಜಾನೆ 5 ಗಂಟೆ ವೇಳೆಗೆ ಮುಂಬೈನ ಬಾಂದ್ರಾ ಪ್ರದೇಶದಲ್ಲಿರುವ ಗ್ಯಾಲಕ್ಸಿ ಅಪಾರ್ಟ್‌ಮೆಂಟ್ ಎದುರು ನಾಲ್ಕು ಸುತ್ತು ಗುಂಡು ಹಾರಿಸಿ, ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಈ ಬೆನ್ನಲ್ಲೇ, ಖಾನ್ ನಿವಾಸದ ಭದ್ರತೆಯನ್ನು ಬಿಗಿಗೊಳಿಸಲಾಗಿದೆ, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಲಾಗಿದೆ. ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸ್ಥಳೀಯ ಪೊಲೀಸರು ಮತ್ತು ಅಪರಾಧ ವಿಭಾಗದ ಸಿಬ್ಬಂದಿ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಸಾಕ್ಷ್ಯಗಳನ್ನು ಸಂಗ್ರಹಿಸಿ, ತನಿಖೆ ಆರಂಭಿಸಿದ್ದಾರೆ ಎಂದೂ ಹೇಳಿದರು.

ಘಟನೆ ವೇಳೆ ಸಲ್ಮಾನ್ ಖಾನ್ ನಿವಾಸದಲ್ಲಿ ಇದ್ದರೇ ಎಂಬ ಬಗ್ಗೆ ಪೊಲೀಸರಾಗಲೀ, ಖಾನ್ ಕುಟುಂಬ ಸ್ಥರಾಗಲೀ ಮಾಹಿತಿ ನೀಡಿಲ್ಲ.

ರಾಮ ಮಂದಿರಕ್ಕೆ 1,11,111 ಕೆ.ಜಿ ಲಡ್ಡು

ಮಿರ್ಜಾಪುರ (ಉತ್ತರ ಪ್ರದೇಶ) (ಪಿಟಿಐ): ರಾಮನವಮಿ ಅಂಗವಾಗಿ ಅಯೋಧ್ಯೆಯ ರಾಮ ಮಂದಿರಕ್ಕೆ 1,11,111 ಕೆ.ಜಿ ಲಡ್ಡುಗಳನ್ನು ಕಳುಹಿಸಲಾಗುತ್ತದೆ ಎಂದು ದೇವರಾಹ ಹಂಸ ಬಾಬಾ ಟ್ರಸ್ಟ್ ತಿಳಿಸಿದೆ.

ಲಡ್ಡುಗಳ ಪ್ರಸಾದವನ್ನು ಪ್ರತಿ ವಾರ ಕಾಶಿ ವಿಶ್ವನಾಥ ದೇಗುಲ ಅಥವಾ ತಿರುಪತಿ ಬಾಲಾಜಿ ದೇಗುಲ ಸೇರಿದಂತೆ ಹಲವು ದೇಗುಲಗಳಿಗೆ ಕಳುಹಿಸಿಕೊಡಲಾಗುತ್ತದೆ ಎಂದು ಟ್ರಸ್ಟಿ ಅತುಲ್ ಕುಮಾರ್ ಸಕ್ಸೇನಾ ತಿಳಿಸಿದರು.

ಅಯೋಧ್ಯೆಯ ರಾಮ ಮಂದಿರ ಉದ್ಘಾಟನೆ ದಿನ ಟ್ರಸ್ಟ್ 40,000 ಕೆ.ಜಿ ಲಡ್ಡು ಕಳುಹಿಸಿತ್ತು.

ರಾಮ ಮಂದಿರ: ಸಲಹೆ ನೀಡಿದ ಟಿಟಿಡಿ

ತಿರುಪತಿ (ಪಿಟಿಐ): ರಾಮ ಮಂದಿರ ಟ್ರಸ್ಟ್‌ನ ಆಹ್ವಾನದ ಮೇರೆಗೆ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಎಂಜಿನಿಯರ್‌ಗಳ ತಂಡವು ಅಯೋಧ್ಯೆಗೆ ಭೇಟಿ ನೀಡಿ, ದೇವಸ್ಥಾನದಲ್ಲಿ ಜನಸಂದಣಿಯ ನಿರ್ವಹಣೆ ಕುರಿತು ತಾಂತ್ರಿಕ ಸಲಹೆಗಳನ್ನು ನೀಡಿತು.

ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ ಧರ್ಮಾ ರೆಡ್ಡಿ ಹಾಗೂ ರಾಮ ಮಂದಿರ ಟ್ರಸ್ಟ್‌ನ ಸಂಘಟಕರ ನಡುವೆ ಸಭೆ ನಡೆಯಿತು ಎಂದು ಟಿಟಿಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಜನಸಂದಣಿ ನಿರ್ವಹಣೆ, ಸರತಿ ಸಾಲುಗಳು, ನೀರಿನ ಸೌಲಭ್ಯ, ಪ್ರವೇಶ ಮತ್ತು ನಿರ್ಗಮನ ಮಾರ್ಗಗಳ ಕುರಿತು ತಾಂತ್ರಿಕ ಸಲಹೆಗಳನ್ನು ಒಳಗೊಂಡ ಸಮಗ್ರ ವರದಿಯನ್ನು ಟ್ರಸ್ಟ್‌ಗೆ ಸಲ್ಲಿಸಲಾಯಿತು ಎಂದು ತಿಳಿಸಲಾಗಿದೆ.

ಏ.13ರಂದು ನಡೆದ ಸಭೆಯಲ್ಲಿ ಟಿಟಿಡಿಯ ತಾಂತ್ರಿಕ ಸಲಹೆಗಾರರಾದ ರಾಮಚಂದ್ರ ರೆಡ್ಡಿ ಮತ್ತು ಇತರ ಅಧಿಕಾರಿಗಳು, ರಾಮ ಮಂದಿರ ಟ್ರಸ್ಟ್ ಪರವಾಗಿ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಸೇರಿದಂತೆ ಇತರ ಅಧಿಕಾರಿಗಳು ಭಾಗಿಯಾಗಿದ್ದರು. ಟ್ರಸ್ಟ್ ಕೋರಿಕೆಯ ಮೇರೆಗೆ ಟಿಟಿಡಿಯ ಅಧಿಕಾರಿಗಳ ತಂಡವು ಕಳೆದ ಫೆ.16 ಮತ್ತು 17ರಂದು ಅಯೋಧ್ಯೆಗೆ ಭೇಟಿ ನೀಡಿ ದಟ್ಟಣೆ ಉಂಟಾಗದಂತೆ ದೇವರ ದರ್ಶನಕ್ಕೆ ಟಿಟಿಡಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿತ್ತು.

ನೇಪಾಳಕ್ಕೆ 101 ವಾಹನ ನೀಡಿದ ಭಾರತ

ಕಠ್ಮಂಡು (ಪಿಟಿಐ): ಭಾರತವು 35 ಆಂಬುಲೆನ್ಸ್ ಮತ್ತು 66 ಶಾಲಾ ಬಸ್‌ಗಳನ್ನು ನೇಪಾಳದ ಹಲವು ಸಂಸ್ಥೆಗಳಿಗೆ ಭಾನುವಾರ ನೀಡಿತು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಸೌಕರ್ಯಗಳನ್ನು ಹೆಚ್ಚಿಸಲು ಈ ಉಡುಗೊರೆ ನೀಡಿದೆ.

ಕೋಚಿಮುಲ್‌ನಲ್ಲಿ ಹಗರಣ: ರಾಜ್ಯಪಾಲ, ಲೋಕಾಯುಕ್ತಕ್ಕೆ ಇ.ಡಿ ಪತ್ರ

‘ತನಿಖೆ ನಡೆಸುವ ಅಗತ್ಯವಿದೆ’

ನವದೆಹಲಿ / ಬೆಂಗಳೂರು (ಪಿಟಿಐ): ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟದಲ್ಲಿ (ಕೋಚಿಮುಲ್) ನಡೆದಿದೆ ಎನ್ನಲಾದ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವುದು ಹಾಗೂ ಸ್ವತಂತ್ರ ತನಿಖೆ ನಡೆಸುವ ಕುರಿತು ಕರ್ನಾಟಕ ರಾಜ್ಯಪಾಲರು ಹಾಗೂ ಲೋಕಾಯುಕ್ತಕ್ಕೆ ಜಾರಿ ನಿರ್ದೇಶನಾಲಯ (ಇ.ಡಿ) ಪತ್ರ ಬರೆದಿದೆ.

ನೇಮಕಾತಿ ಹಗರಣಕ್ಕೆ ಸಂಬಂಧಿಸಿ, ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕರೂ ಆದ ಕೋಚಿಮುಲ್ ಅಧ್ಯಕ್ಷ ಕೆ.ವೈ.ನಂಜೇಗೌಡ ವಿರುದ್ಧ ಹಣ ಅಕ್ರಮ ವರ್ಗಾವಣೆ ಆರೋಪ ಕುರಿತು ತನಿಖೆ ನಡೆಸುವ ಸಂಬಂಧ ಇ.ಡಿ ಈ ಪತ್ರ ಬರೆದಿದೆ ಎಂದು ಮೂಲಗಳು ಹೇಳುತ್ತವೆ.

‘ಮಾಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಸುಮಾರು ₹150 ಕೋಟಿ ಮೌಲ್ಯದ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ಭಾಗವಾಗಿ ನಂಜೇಗೌಡ ಹಾಗೂ ಅವರ ಆಪ್ತರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ ಜನವರಿಯಲ್ಲಿ ಶೋಧ ನಡೆಸಿತ್ತು. ಈ ಶೋಧದ ವೇಳೆ, ‘ನೌಕರಿಗಾಗಿ ಹಣ’ ಜಾಲವನ್ನು ಇ.ಡಿ ಪತ್ತೆ ಹಚ್ಚಿತ್ತು ಎಂದು ಇವೇ ಮೂಲಗಳು ಹೇಳಿವೆ.



ಕೋಚಿಮುಲ್ ಆಡಳಿತ ಮಂಡಳಿ ಕಚೇರಿ ಕಟ್ಟಡ

ಮುಖ್ಯಾಂಶಗಳು

- ಕೋಚಿಮುಲ್ ಅಧ್ಯಕ್ಷ ಕೆ.ವೈ.ನಂಜೇಗೌಡ ವಿರುದ್ಧ ಆರೋಪ
- ಇ.ಡಿ ತನಿಖೆ ವೇಳೆ ನೌಕರಿಗಾಗಿ ಹಣ’ ಜಾಲ ಪತ್ತೆ

ಮಂಗಳೂರು ವಿಶ್ವವಿದ್ಯಾಲಯದ ಮೂಲಕ ಲಿಖಿತ ಪರೀಕ್ಷೆ ನಡೆಸಿ, ಒಕ್ಕೂಟದಲ್ಲಿ ಖಾಲಿ ಇರುವ 81 ಹುದ್ದೆಗಳಿಗೆ ನೇಮಕಾತಿ ಮಾಡುವುದಾಗಿ ಕೋಚಿಮುಲ್ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಘೋಷಿಸಿತ್ತು.

ಲಿಖಿತ ಪರೀಕ್ಷೆ ನಂತರ, ಸಂದರ್ಶನ ನಡೆಸುವುದಕ್ಕಾಗಿ ಕೋಚಿಮುಲ್ ಅಧ್ಯಕ್ಷರೂ ಆದ ಶಾಸಕ ನಂಜೇಗೌಡ ನೇತೃತ್ವದಲ್ಲಿ ನೇಮಕಾತಿ ಸಮಿತಿ ರಚಿಸಲಾಗಿತ್ತು. ಕೋಚಿಮುಲ್ ನಿರ್ದೇಶಕ ಕೆ.ಎನ್.ನಾಗರಾಜ, ಸಹಕಾರ ಇಲಾಖೆಯ ಹೆಚ್ಚುವರಿ ರಿಜಿಸ್ಟ್ರಾರ್ ಲಿಂಗರಾಜು, ಕೆಎಂಎಫ್ ಪ್ರತಿನಿಧಿ ಬಿ.ಪಿ.ರಾಜು ಹಾಗೂ ಕೋಚಿಮುಲ್ ವ್ಯವಸ್ಥಾಪಕ ನಿರ್ದೇಶಕ ಗೋಪಾಲ ಮೂರ್ತಿ ಈ ಸಮಿತಿಯಲ್ಲಿದ್ದರು.

‘ಕಳೆದ ವರ್ಷ ಡಿಸೆಂಬರ್‌ನಲ್ಲಿ ನಡೆದ ಸಂದರ್ಶನಕ್ಕೆ 320 ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಈ ಪೈಕಿ, 75 ಅಭ್ಯರ್ಥಿಗಳಿದ್ದ ಅಂತಿಮ ಪಟ್ಟಿಗೆ ಕೋಚಿಮುಲ್ ಆಡಳಿತ ಮಂಡಳಿ ಅನುಮೋದನೆ ನೀಡಿತ್ತು. ಆದರೆ, ಫಲಿತಾಂಶ ಪ್ರಕಟಿಸದೇ, ಈ ಅಭ್ಯರ್ಥಿಗಳನ್ನು ತರಬೇತಿಗೆ ಕಳುಹಿಸಲಾಗಿತ್ತು’ ಎಂದು ಇ.ಡಿ ಹೇಳಿದೆ.

ಇ.ಡಿ ಮಾಡಿರುವ ಆರೋಪಗಳ ಕುರಿತು ತನಿಖೆ ನಡೆಸುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ ಎಂದು ತಿಳಿದುಬಂದಿದೆ.

ಟ್ಯಾಂಕ್ ಪ್ರತಿಬಂಧಕ ಕ್ಷಿಪಣಿ ವ್ಯವಸ್ಥೆಯ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ‘ಗುರಿ ನಿರ್ದೇಶಿತ ಟ್ಯಾಂಕ್ ಪ್ರತಿಬಂಧಕ ಕ್ಷಿಪಣಿ ವ್ಯವಸ್ಥೆ’ಯ (ಎಂಪಿಎಟಿಜಿಎಂ) ಪರೀಕ್ಷಾರ್ಥ ಪ್ರಯೋಗವನ್ನು ಭಾರತೀಯ ಸೇನೆ ಯಶಸ್ವಿಯಾಗಿ ನಡೆಸಿದೆ.

‘ಸಿಡಿತಲೆಗಳನ್ನು ಹೊತ್ತ ಕ್ಷಿಪಣಿ ವ್ಯವಸ್ಥೆಯ ಪ್ರಯೋಗವನ್ನು ಪೋಖರನ್‌ನಲ್ಲಿರುವ ಪರೀಕ್ಷಾ ವಲಯದಲ್ಲಿ ಏಪ್ರಿಲ್ 13ರಂದು ಯಶಸ್ವಿಯಾಗಿ ನೆರವೇರಿಸಲಾಗಿದೆ. ಕ್ಷಿಪಣಿ ಹಾಗೂ ಸಿಡಿತಲೆಗಳ ಕಾರ್ಯ ನಿರ್ವಹಣೆ ಗಮನಾರ್ಹವಾಗಿತ್ತು’ ಎಂದು ರಕ್ಷಣಾ ಸಚಿವಾಲಯ ಭಾನುವಾರ ತಿಳಿಸಿದೆ.

‘ಈ ಕ್ಷಿಪಣಿ ವ್ಯವಸ್ಥೆಯು ಹಗಲು ಮತ್ತು ರಾತ್ರಿ ವೇಳೆ ನಡೆಸುವ ಕಾರ್ಯಾಚರಣೆ ಯಲ್ಲಿ ಬಳಸಬಹುದಾಗಿದೆ’ ಎಂದೂ ತಿಳಿಸಿದೆ.


ಈ ಕ್ಷಿಪಣಿ ವ್ಯವಸ್ಥೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿದೆ. ಇದು ಎಂಪಿಎಟಿಜಿಎಂ, ಉಡ್ಡಯನ ಉಪಕರಣಗಳು, ನಾಶ ಮಾಡಲಾಗಿರುವ ಟ್ಯಾಂಕ್ ಅನ್ನು ಪತ್ತೆ ಮಾಡುವ ಸಾಧನ ಹಾಗೂ ಬೆಂಕಿಯನ್ನು ನಿಯಂತ್ರಿಸುವ ಘಟಕವನ್ನು ಒಳಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪರೀಕ್ಷಾರ್ಥ ಪ್ರಯೋಗವು ಯಶಸ್ವಿಯಾಗಿರುವುದರಿಂದ, ದೇಶೀಯವಾಗಿ ಸಿದ್ಧಪಡಿಸಲಾಗಿರುವ ಈ ಟ್ಯಾಂಕ್ ಪ್ರತಿಬಂಧಕ ರಕ್ಷಣಾ ವ್ಯವಸ್ಥೆಯನ್ನು ಸೇನೆಗೆ ಸೇರ್ಪಡೆ ಮಾಡುವ ಹಾದಿ ಸುಗಮವಾದಂತಾಗಿದೆ.

ಕ್ಷಿಪಣಿ ವ್ಯವಸ್ಥೆಯ ಪರೀಕ್ಷೆಯನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಡಿಆರ್‌ಡಿಒ ಹಾಗೂ ಸೇನೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿನಂದಿಸಿದ್ದಾರೆ.

‘ಅತ್ಯಾಧುನಿಕ ತಂತ್ರಜ್ಞಾನ ಆಧರಿತ ರಕ್ಷಣಾ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಈ ಪರೀಕ್ಷೆ ಮಹತ್ವದ ಹೆಜ್ಜೆಯಾಗಿದೆ’ ಎಂದು ಅವರು ಬಣ್ಣಿಸಿದ್ದಾರೆ.

ಡಿಆರ್‌ಡಿಒ ಮುಖ್ಯಸ್ಥ ಸಮೀರ್ ವಿ.ಕಾಮತ್ ಅವರು ಕೂಡ, ಪರೀಕ್ಷೆ ನೆರವೇರಿಸಿದ ತಂಡವನ್ನು ಅಭಿನಂದಿಸಿದ್ದಾರೆ.



ಹಬ್ಬದ ಸಂಭ್ರಮ ಪಟ್ನಾದ ಗಂಗಾ ನದಿ ತಟದಲ್ಲಿ ಭಕ್ತರು ಛತ್ ಹಬ್ಬದ ಅಂಗವಾಗಿ ಭಾನುವಾರ ವಿಶೇಷ ಪೂಜೆ ಸಲ್ಲಿಸಿದರು – ಪಿಟಿಐ ಚಿತ್ರ

ಇಸ್ರೇಲ್ ಮೇಲೆ ಇರಾನ್ ದಾಳಿ

ಒಂದನೇ ಪುಟದಿಂದ...

ಇರಾನ್ ನಡೆಸಿರುವ ದಾಳಿಯು ವಿಸ್ತೃತ ಸೇನಾ ಸಂಘರ್ಷಕ್ಕೆ ನಾಂದಿಯಾಗುವುದು ತಮಗೆ ಇಷ್ಟವಿಲ್ಲ ಎಂಬ ಇಂಗಿತವು ಅವರ ಮಾತಿನಲ್ಲಿದೆ.

ಸಂಯಮ ಪ್ರದರ್ಶಿಸಬೇಕು ಎಂದು ರಷ್ಯಾ, ಫ್ರಾನ್ಸ್, ಚೀನಾ, ಈಜಿಪ್ಟ್, ಕತಾರ್ ಮತ್ತು ಯುಎಇ ಕಿವಿಮಾತು ಹೇಳಿವೆ.

ಭಾನುವಾರ ಬೆಳಿಗ್ಗೆ ಹೊತ್ತಿಗೆ (ಭಾರತೀಯ ಕಾಲಮಾನ) ದಾಳಿ ಪೂರ್ಣಗೊಂಡಿರುವುದಾಗಿ ಇರಾನ್ ಹೇಳಿದೆ. ಇಸ್ರೇಲ್ ತನ್ನ ವಾಯುಪ್ರದೇಶವನ್ನು ವಿಮಾನ ಸಂಚಾರಕ್ಕೆ ಮುಕ್ತವಾಗಿಸಿದೆ.

ಇರಾನ್ ಮತ್ತು ಇಸ್ರೇಲ್ ಹಲವು ವರ್ಷಗಳಿಂದ ಛಾಯಾ ಸಮರದಲ್ಲಿ ತೊಡಗಿವೆ. 1979ರ ‘ಇಸ್ಲಾಮಿಕ್ ಕ್ರಾಂತಿ’ಯ ಕಾಲದಿಂದಲೂ ಎರಡೂ ದೇಶಗಳ ನಡುವೆ ಶತ್ರುತ್ವ ಇದೆ. ಆದರೆ ಇರಾನ್ ಕಡೆಯಿಂದ ನೇರ ದಾಳಿ ಆಗಿರುವುದು ಇದೇ ಮೊದಲು.

ಇಸ್ರೇಲ್ ದೇಶವು ಅಮೆರಿಕದ ನೆರವು ಪಡೆದು ಬಹು ಹಂತಗಳ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ರೂಪಿಸಿದೆ. ಈ ವ್ಯವಸ್ಥೆಯು ದೂರ ವ್ಯಾಪ್ತಿಯ ಕ್ಷಿಪಣಿಗಳು, ಡ್ರೋನ್‌ಗಳು ಮತ್ತು ಕಿರು ವ್ಯಾಪ್ತಿಯ ರಾಕೆಟ್‌ಗಳನ್ನು ಆಗಸದಲ್ಲಿಯೇ ಹೊಡೆದುಹಾಕಬಲ್ಲದು. ಇಸ್ರೇಲ್ ರೂಪಿಸಿರುವ ಈ ವ್ಯವಸ್ಥೆಯು ಅಮೆರಿಕ ಮತ್ತು ಬ್ರಿಟನ್‌ನ ನೆರವಿನಿಂದ ಇರಾನ್‌ನ ದಾಳಿಯನ್ನು ವಿಫಲಗೊಳಿಸುವಲ್ಲಿ ಯಶಸ್ಸು ಕಂಡಿದೆ.

ಭಾರತೀಯರಿಗೆ ಎಚ್ಚರದಿಂದ ಇರಲು ಸೂಚನೆ

ಟೆಲ್ ಅವಿವ್ (ಪಿಟಿಐ): ಇಸ್ರೇಲ್‌ನಲ್ಲಿ ಇರುವ ಭಾರತೀಯ ಪ್ರಜೆಗಳು ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು ಎಂದು ಇಲ್ಲಿನ ಭಾರತೀಯ ದೂತಾವಾಸ ಕಚೇರಿಯು ಸೂಚನೆ ನೀಡಿದೆ. ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸಿದ ನಂತರ ಸಲಹಾ ಸ್ವರೂಪದ ಈ ಸೂಚನೆ ರವಾನಿಸಲಾಗಿದೆ.

ದೂತಾವಾಸ ಕಚೇರಿಯು ಈ ಸಲಹೆಯನ್ನು ತನ್ನ ಸಾಮಾಜಿಕ ಜಾಲತಾಣ ಖಾತೆಗಳ ಮೂಲಕ ರವಾನಿಸಿದೆ. ‘ಪರಿಸ್ಥಿತಿಯನ್ನು ದೂತಾವಾಸ ಕಚೇರಿಯು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ. ಭಾರತೀಯ ಪ್ರಜೆಗಳ ಸುರಕ್ಷತೆಯನ್ನು ಖಾತರಿಪಡಿಸಲು ಇಸ್ರೇಲ್‌ನ ಅಧಿಕಾರಿಗಳು ಹಾಗೂ ಭಾರತೀಯ ಸಮುದಾಯದ ಜೊತೆ ಕಚೇರಿಯು ಸಂಪರ್ಕದಲ್ಲಿದೆ’ ಎಂದು ಕೂಡ ಹೇಳಲಾಗಿದೆ.

ಅನಗತ್ಯ ಪ್ರಯಾಣ ಬೇಡ, ಸ್ಥಳೀಯ ಅಧಿಕಾರಿಗಳು ಹೇಳುವ ಸುರಕ್ಷತಾ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ದೂತಾವಾಸ ಕಚೇರಿಯು ಶುಕ್ರವಾರ ನೀಡಿದ್ದ ಸಲಹೆಯಲ್ಲಿ ಹೇಳಲಾಗಿತ್ತು.

ಇಸ್ರೇಲ್‌ಗೆ ಅಮೆರಿಕ ಪಡೆಗಳ ನೆರವು

ಇರಾನ್ ಕಡೆಯಿಂದ ಇಸ್ರೇಲ್‌ನತ್ತ ನುಗ್ಗಿಬಂದ ಬಹುತೇಕ ಎಲ್ಲ ಡ್ರೋನ್ ಹಾಗೂ ಕ್ಷಿಪಣಿಗಳನ್ನು ಹೊಡೆದುರುಳಿಸಲು ಇಸ್ರೇಲ್‌ಗೆ ಅಮೆರಿಕದ ಪಡೆಗಳು ನೆರವಾಗಿವೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ವಾಷಿಂಗ್ಟನ್‌ನಲ್ಲಿ ಹೇಳಿದ್ದಾರೆ.

ಬೈಡನ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಜೊತೆಗೂ ಮಾತುಕತೆ ನಡೆಸಿದ್ದಾರೆ. ‘ಹಿಂದೆಂದೂ ಕಾಣದಂತಹ ದಾಳಿಗಳಿಂದ ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಇಸ್ರೇಲ್ ತೋರಿಸಿದೆ ಎಂಬುದನ್ನು ನಾನು ನೆತನ್ಯಾಹು ಅವರಿಗೆ ಹೇಳಿದ್ದೇನೆ’ ಎಂದು ಬೈಡನ್ ಹೇಳಿದ್ದಾರೆ.

ಸಂಘರ್ಷವು ತೀವ್ರಗೊಳ್ಳುವುದನ್ನು ಅಮೆರಿಕ ಬಯಸುವುದಿಲ್ಲ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದಾರೆ.

ಇರಾನ್ ದಾಳಿಗೆ ಇಸ್ರೇಲ್ ಪ್ರತಿದಾಳಿ ನಡೆಸಲಿದೆಯೇ ಎಂಬ ಪ್ರಶ್ನೆಗೆ ಇಸ್ರೇಲ್ ಸೇನೆಯ ವಕ್ತಾರ ಡೇನಿಯಲ್ ಹಗರಿ ಅವರು ‘ನಮ್ಮ ಪ್ರಜೆಗಳನ್ನು ರಕ್ಷಿಸಲು ಏನು ಅಗತ್ಯವೋ ಅದನ್ನು ಮಾಡುತ್ತೇವೆ’ ಎಂದು ಹೇಳಿದ್ದಾರೆ.

ಇಸ್ರೇಲ್‌ನ ವಾಯುನೆಲೆಯೊಂದಕ್ಕೆ ಸಣ್ಣಪುಟ್ಟ ಹಾನಿ ಆಗಿದೆ. ಆದರೆ, ವಾಯುನೆಲೆಯು ಕಾರ್ಯಾಚರಿಸುತ್ತಿದೆ ಎಂದು ಹಗರಿ ಹೇಳಿದ್ದಾರೆ. ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ಏಳು ವರ್ಷ ವಯಸ್ಸಿನ ಬಾಲಕಿಯೊಬ್ಬಳಿಗೆ ಗಾಯಗಳಾಗಿವೆ. ಆದರೆ, ಗಾಯಗಳಾಗಿದ್ದು ಕ್ಷಿಪಣಿ ದಾಳಿಯಿಂದಲೇ ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಇಸ್ರೇಲ್‌ನಲ್ಲಿ ಶಾಲೆಗಳು ಮುಚ್ಚಿವೆ.

ಕಾರ್ಯಾಚರಣೆ ಮುಕ್ತಾಯಗೊಂಡಿದೆ ಎಂದು ಇರಾನ್ ಸಶಸ್ತ್ರ ಪಡೆಗಳ ಮುಖ್ಯಸ್ಥ ಜನರಲ್ ಮೊಹಮ್ಮದ್ ಹುಸೇನ್ ಬಘೇರಿ ಅವರು ಹೇಳಿರುವುದಾಗಿ ಅಲ್ಲಿನ ಸರ್ಕಾರಿ ಸ್ವಾಮ್ಯದ ಸುದ್ದಿಸಂಸ್ಥೆ ವರದಿ ಮಾಡಿದೆ.

ಅಮೆರಿಕಕ್ಕೆ ಇರಾನ್ ಎಚ್ಚರಿಕೆ: ಅಮೆರಿಕಕ್ಕೆ ಎಚ್ಚರಿಕೆ ನೀಡಿರುವ ಇರಾನ್‌ನ ರೆವಲ್ಯೂಷನರಿ ಗಾರ್ಡ್, ‘ಇರಾನ್‌ನ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಕೆಲಸದಲ್ಲಿ ಭಾಗಿಯಾದರೆ, ಅಂತಹ ಕೆಲಸಕ್ಕೆ ಬೆಂಬಲ ನೀಡಿದರೆ ಇರಾನ್‌ನ ಸಶಸ್ತ್ರ ಪಡೆಗಳಿಂದ ನಿರ್ಣಾಯಕ ಪ್ರತಿಕ್ರಿಯೆ ಇರುತ್ತದೆ ಎಂದು ಭಯೋತ್ಪಾದಕ ಅಮೆರಿಕದ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುತ್ತಿದೆ. ಅಮೆರಿಕವು ತನ್ನ ನಡೆಗೆ ವಿಷಾದಪಡಬೇಕಾಗುತ್ತದೆ’ ಎಂದು ಹೇಳಿದೆ.

ಡ್ರೋನ್ ಹಾಗೂ ಕ್ಷಿಪಣಿ ದಾಳಿಗೆ ಪ್ರತಿದಾಳಿ ನಡೆಸಿದರೆ ‘ಇನ್ನೂ ದೊಡ್ಡ ಮಟ್ಟದ ಪ್ರತಿಕ್ರಿಯೆ ಇರುತ್ತದೆ’ ಎಂದು ಇರಾನ್, ಅಮೆರಿಕ ಮತ್ತು ಇಸ್ರೇಲ್‌ಗೆ ಎಚ್ಚರಿಕೆ ನೀಡಿದೆ.

ದಾಳಿ ಮೆಟ್ಟಿನಿಂತ ಇಸ್ರೇಲ್ ರಕ್ಷಣಾ ವ್ಯವಸ್ಥೆ

ಜೆರುಸಲೇಂ (ಎಪಿ): ಹಮಾಸ್ ಬಂಡುಕೋರರ ವಿರುದ್ಧ ಆರು ತಿಂಗಳಿನಿಂದ ನಡೆಯುತ್ತಿರುವ ಸಮರದಲ್ಲಿ ಅವಿಶ್ರಾಂತವಾಗಿ ಕೆಲಸ ಮಾಡುತ್ತಿರುವ ಇಸ್ರೇಲ್‌ನ ಕ್ಷಿಪಣಿ ರಕ್ಷಣಾ ವ್ಯವಸ್ಥೆಗೆ ಭಾನುವಾರ ಹೊಸದೊಂದು ಸವಾಲು ಎದುರಾಗಿತ್ತು.

ಇರಾನ್ ಕಡೆಯಿಂದ ನುಗ್ಗಿಬಂದ 300ಕ್ಕೂ ಹೆಚ್ಚಿನ ಡ್ರೋನ್‌ಗಳು ಮತ್ತು ಗುರಿನಿರ್ದೇಶಿತ ಕ್ಷಿಪಣಿಗಳನ್ನು ಇಸ್ರೇಲ್‌ನ ಈ ರಕ್ಷಣಾ ವ್ಯವಸ್ಥೆಯು ಆಗಸದಲ್ಲೇ ಹೊಡೆದುರುಳಿಸಬೇಕಿತ್ತು.

ಅಮೆರಿಕ ಮತ್ತು ಬ್ರಿಟನ್ನಿನ ನೆರವು ಪಡೆದು ಕಾರ್ಯಾಚರಣೆ ನಡೆಸಿದ ಇಸ್ರೇಲ್‌ನ ರಕ್ಷಣಾ ವ್ಯವಸ್ಥೆಯು, ದೇಶದಲ್ಲಿ ಗಂಭೀರ ಪ್ರಮಾಣದ ಆಸ್ತಿ ಅಥವಾ ಜೀವಹಾನಿ ಆಗುವುದನ್ನು ತಡೆಯಿತು. ಇಸ್ರೇಲ್ ಕಟ್ಟಿರುವ ಕ್ಷಿಪಣಿ ರಕ್ಷಣಾ ವ್ಯವಸ್ಥೆಯ ಮೇಲೆ ಒಂದು ನೋಟ ಇಲ್ಲಿದೆ.

ದಿ ಆ್ಯರೊ: ಅಮೆರಿಕದ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಈ ವ್ಯವಸ್ಥೆಯು ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಹೊಡೆದುರುಳಿಸುತ್ತದೆ. ಗುರಿನಿರ್ದೇಶಿತ ಕ್ಷಿಪಣಿಗಳನ್ನೂ ಇದು ಗುರುತಿಸಿ ಆಗಸದಲ್ಲೇ ಧ್ವಂಸಗೊಳಿಸುತ್ತದೆ. ವಾಯುಮಂಡಲದ ಆಚೆಗೆ ಕೆಲಸ ಮಾಡುವ ಈ ವ್ಯವಸ್ಥೆಯನ್ನು ಯೆಮನ್‌ನ ಹೌತಿ ಬಂಡುಕೋರರು ಉಡಾಯಿಸುತ್ತಿರುವ ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಹೊಡೆದುರುಳಿಸಲು ಕೂಡ ಬಳಸಲಾಗುತ್ತಿದೆ.

ಡೇವಿಡ್ಸ್ ಸ್ಲಿಂಗ್: ಈ ವ್ಯವಸ್ಥೆಯನ್ನು ಕೂಡ ಅಮೆರಿಕದ ಸಹಯೋಗದಲ್ಲಿ ರೂಪಿಸಲಾಗಿದೆ. ಇದನ್ನು ಹಿಜ್ಬುಲ್ಲಾ ಬಂಡುಕೋರರು ಬಳಸುವ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ಧ್ವಂಸಗೊಳಿಸಲು ಬಳಸಲಾಗುತ್ತದೆ.

ಪೇಟ್ರಿಯಟ್: ಅಮೆರಿಕ ನಿರ್ಮಿತ ‘ಪೇಟ್ರಿಯಟ್’, ಇಸ್ರೇಲ್‌ನ ಬತ್ತಳಿಕೆಯಲ್ಲಿ ಇರುವ ಅತ್ಯಂತ ಹಳೆಯ ಕ್ಷಿಪಣಿ ನಿರೋಧಕ ವ್ಯವಸ್ಥೆ. ಇದನ್ನು 1991ರ ಮೊದಲ ಕೊಲ್ಲಿ ಯುದ್ಧದ ಸಮಯದಲ್ಲಿ ಇರಾಕ್ ಕಡೆಯಿಂದ ನುಗ್ಗಿ ಬರುತ್ತಿದ್ದ ಸ್ಕಡ್ ಕ್ಷಿಪಣಿಗಳನ್ನು ಹೊಡೆದುರುಳಿಸಲು ಬಳಸಲಾಗಿತ್ತು. ಈಗ ಇದನ್ನು ಡ್ರೋನ್ ಹೊಡೆದುರುಳಿಸಲು ಬಳಸಲಾಗುತ್ತಿದೆ.

ಐರನ್ ಡೋಮ್: ಇದು ಅಮೆರಿಕದ ಸಹಾಯದೊಂದಿಗೆ ಇಸ್ರೇಲ್ ಅಭಿವೃದ್ಧಿಪಡಿಸಿರುವ ವ್ಯವಸ್ಥೆ. ಇದು ಕಿರು ವ್ಯಾಪ್ತಿಯ ರಾಕೆಟ್‌ಗಳನ್ನು ಹೊಡೆದುರುಳಿಸುವ ಕೆಲಸವನ್ನು ಬಹಳ ಕ್ಷಮತೆಯಿಂದ ಮಾಡುತ್ತದೆ. ಕಳೆದ ದಶಕದ ಆರಂಭದಲ್ಲಿ ಇದನ್ನು ಕಾರ್ಯಾಚರಣೆಗೆ ಅಳವಡಿಸಲಾಯಿತು. ಅಲ್ಲಿಂದ ಇಲ್ಲಿಯವರೆಗೆ ಇದು ಸಹಸ್ರಾರು ರಾಕೆಟ್‌ಗಳನ್ನು ಧ್ವಂಸಗೊಳಿಸಿದೆ. ಈ ವ್ಯವಸ್ಥೆಯು ಶೇಕಡ 90ರಷ್ಟು ನಿಖರ.

ಐರನ್ ಬೀಮ್: ಲೇಸರ್ ತಂತ್ರಜ್ಞಾನವನ್ನು ಬಳಸುವ ಈ ವ್ಯವಸ್ಥೆಯ್ನು ಇಸ್ರೇಲ್ ರೂಪಿಸುತ್ತಿದೆ. ಇದನ್ನು ಕಾರ್ಯಾಚರಣೆಗಳಲ್ಲಿ ಬಳಕೆ ಮಾಡುತ್ತಿಲ್ಲ. ಆದರೆ, ಇದು ಈಗಿರುವ ವ್ಯವಸ್ಥೆಗಳಿಗಿಂತ ಕಡಿಮೆ ವೆಚ್ಚದ್ದು.

ಬಿಜೆಪಿಯ ‘ಸಂಕಲ್ಪ ಪತ್ರ’ ಪ್ರಕಟ

ಒಂದನೇ ಪುಟದಿಂದ...

‘ದೇಶದ ಜನರ ಆಶೀರ್ವಾದಕ್ಕಾಗಿ ಬಿಜೆಪಿಯ ‘ಸಂಕಲ್ಪ ಪತ್ರ’ವನ್ನು ‘ಮೋದಿ ಗ್ಯಾರಂಟಿ’ಯ ದಾಖಲೆಯಾಗಿ ನಾನು ಪ್ರಸ್ತುತಪಡಿಸುತ್ತಿದ್ದೇನೆ. ಜೂನ್ 4ರಂದು ಚುನಾವಣೆಯ ಫಲಿತಾಂಶ ಘೋಷಣೆ ಆದ ತಕ್ಷಣದಿಂದಲೇ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳ ಅನುಷ್ಠಾನದ ಮೇಲೆ ಪಕ್ಷವು ಕೆಲಸ ಮಾಡಲಿದೆ’ ಎಂದು ಪ್ರಧಾನಿ ತಿಳಿಸಿದರು.

‘ನಮ್ಮ ಸಂಕಲ್ಪ ಪತ್ರವು ‘ವಿಕಸಿತ ಭಾರತ’ದ ನಾಲ್ಕು ಬಲಿಷ್ಠ ಸ್ತಂಭಗಳಾದ ಯುವಶಕ್ತಿ, ಮಹಿಳಾ ಶಕ್ತಿ, ಬಡವರು ಮತ್ತು ರೈತರನ್ನು ಸಬಲೀಕರಣಗೊಳಿಸುತ್ತದೆ. ಘನತೆಯ ಬದುಕು, ಗುಣಮಟ್ಟದ ಬದುಕು, ಹೂಡಿಕೆ ಮೂಲಕ ಉದ್ಯೋಗ–ಇವುಗಳ ಮೇಲೆ ನಮ್ಮ ಗಮನ ಇದೆ’ ಎಂದು ಹೇಳಿದರು.

ಸರ್ಕಾರದ ಪ್ರಸ್ತುತ ಚಾಲ್ತಿಯಲ್ಲಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನೇ ಆಧರಿಸಿ ಪ್ರಣಾಳಿಕೆ ರೂಪಿಸಲಾಗಿದ್ದು, 2019ರ ಪ್ರಣಾಳಿಕೆಯಲ್ಲಿ ಪ್ರಸ್ತಾಪವಾಗಿದ್ದ ‘ಒಂದು ದೇಶ, ಒಂದು ಚುನಾವಣೆ’ ಹಾಗೂ ಏಕರೂಪ ನಾಗರಿಕ ಸಂಹಿತೆಯ ಜಾರಿಯನ್ನು ಪುನರುಚ್ಚರಿಸಲಾಗಿದೆ.

ಭಾರತದ ಉತ್ತರ, ದಕ್ಷಿಣ ಹಾಗೂ ಪೂರ್ವ ಭಾಗಗಳಿಗೆ ಬುಲೆಟ್ ರೈಲು, ವಂದೇ ಭಾರತ್, ಅಮೃತ ಭಾರತ್ ಮತ್ತು ನಮೋ ಭಾರತ್ ರೈಲುಗಳ ವಿಸ್ತರಣೆ ಮಾಡುವ ಭರವಸೆ ನೀಡಲಾಗಿದೆ.

ಕಾಶಿ ವಿಶ್ವನಾಥ ಕಾರಿಡಾರ್ ಮಾದರಿಯಲ್ಲಿ ದೇಶದಾದ್ಯಂತ ಧಾರ್ಮಿಕ ಮತ್ತು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಗಮನಾರ್ಹ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಭರವಸೆಯೂ ಪ್ರಣಾಳಿಕೆಯಲ್ಲಿ ಸ್ಥಾನ ಪಡೆದಿದೆ.

ಅಯೋಧ್ಯೆಯ ಚಾರಿತ್ರಿಕ ಅಭಿವೃದ್ಧಿಯ ಜತೆಗೆ ಪ್ರಾಚೀನ ನಾಗರಿಕತೆಯ ಸಂಪ್ರದಾಯಗಳು ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಲು ‘ಭಾರತೀಯ ಸಂಸ್ಕೃತಿ ಕೋಶ’ ಸ್ಥಾಪನೆಯ ಭರವಸೆ ನೀಡಲಾಗಿದೆ.



ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ನಿರ್ಮಲಾ ಸೀತಾರಾಮನ್ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ನವದೆಹಲಿಯ ಪಕ್ಷದ ಕೇಂದ್ರ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ತಿರುವಳ್ಳುವರ್ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ

ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನ ಮೇಲೆ ವಿಶೇಷ ಗಮನ ನೆಟ್ಟಿರುವ ಬಿಜೆಪಿ, ತಮಿಳರನ್ನು ಸೆಳೆಯಲು ಜಗತ್ತಿನಾದ್ಯಂತ ತಿರುವಳ್ಳುವರ್ ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಭರವಸೆ ನೀಡಿದೆ.

‘ಜಗತ್ತಿನ ಅತ್ಯಂತ ಪ್ರಾಚೀನ ಭಾಷೆಯಾದ ತಮಿಳು ನಮ್ಮ ಹೆಮ್ಮೆ. ತಮಿಳು ಭಾಷೆಯ ಜಾಗತಿಕ ಖ್ಯಾತಿಯನ್ನು ಹೆಚ್ಚಿಸಲು ಬಿಜೆಪಿಯು ಎಲ್ಲ ಪ್ರಯತ್ನಗಳನ್ನೂ ಮಾಡಲಿದೆ’ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ತಿರುವಳ್ಳುವರ್ ತಮಿಳಿನ ಪ್ರಸಿದ್ಧ ಕವಿ ಮತ್ತು ತತ್ವಶಾಸ್ತ್ರಜ್ಞ. ಅವರ ‘ಕುರಲ್’ ಕೃತಿಯನ್ನು ವ್ಯಾಪಕವಾಗಿ ಓದುವಂತೆ ಮೋದಿ ಈ ಹಿಂದೆ ಕರೆ ನೀಡಿದ್ದರು.

ಪ್ರಣಾಳಿಕೆಯಲ್ಲಿ ಭರವಸೆಗಳನ್ನು ಬಡವರು, ಮಧ್ಯಮ ವರ್ಗ, ಮಹಿಳೆಯರು, ಮೀನುಗಾರರು, ಕಾರ್ಮಿಕರು, ಹಿರಿಯ ನಾಗರಿಕರು ಹಾಗೂ ಎಸ್‌ಸಿ, ಎಸ್‌ಟಿ ಸೇರಿದಂತೆ 10 ಸಾಮಾಜಿಕ ಗುಂಪುಗಳು ಮತ್ತು ಸುಭದ್ರ ಭಾರತ, ಸಮೃದ್ಧ ಭಾರತ ಹಾಗೂ ನಗರಗಳಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ 14 ವಿಚಾರಗಳ ಅಡಿ ವರ್ಗೀಕರಿಸಲಾಗಿದೆ.

ದೇಶದ 80 ಕೋಟಿ ಜನರಿಗೆ ಉಚಿತ ಪಡಿತರ ಮುಂದುವರಿಸುವುದಾಗಿ ಭರವಸೆ ನೀಡಿರುವ ಪ್ರಣಾಳಿಕೆಯು, ಅವರಿಗೆ ವಸತಿ ಯೋಜನೆ ವಿಸ್ತರಿಸುವುದಾಗಿ ತಿಳಿಸಿದೆ. ಸೌರಶಕ್ತಿ ಯೋಜನೆ ಮೂಲಕ ಉಚಿತ ವಿದ್ಯುತ್‌ನ ಭರವಸೆ ನೀಡಿದೆ. ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕರಾದ ಅಮಿತ್ ಶಾ, ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭಾಗವಹಿಸಿದ್ದರು.

‘ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಅವಮಾನಿಸಿದೆ’

ಹೋಶಂಗಾಬಾದ್ (ಪಿಟಿಐ): ಡಾ.ಬಿ. ಆರ್ ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಸದಾ ಕಾಲ ಅವಮಾನಿಸಿದೆ. ಆದರೆ, ನಮ್ಮ ಸರ್ಕಾರ ಅವರನ್ನು ಗೌರವಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಜಯಂತಿ ದಿನ ಮಧ್ಯಪ್ರದೇಶದ ಹೋಶಂಗಾಬಾದ್‌ನಲ್ಲಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಆದಿವಾಸಿಗಳ ಕೊಡುಗೆಯನ್ನು ಕಾಂಗ್ರೆಸ್ ಗುರುತಿಸಲೇ ಇಲ್ಲ, ಆದರೆ ಬಿಜೆಪಿ ಸರ್ಕಾರ ಅವರನ್ನು ಗೌರವಿಸಿದೆ. ಅಂಬೇಡ್ಕರ್ ನೀಡಿದ ಸಂವಿಧಾನದಿಂದಾಗಿಯೇ ಮಹಿಳೆ ಈ ದೇಶದ ರಾಷ್ಟ್ರಪತಿಯಾಗಿದ್ದಾರೆ ಎಂದು ಹೇಳಿದರು.

‘ನಾನು ಮೂರನೇ ಬಾರಿಗೆ ಪ್ರಧಾನಿಯಾದರೆ ದೇಶದಲ್ಲಿ ಹಣದುಬ್ಬರ ಮಿತಿ ಮೀರಲಿದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಆದರೆ ದೇಶ ಯಾವ ದಿಕ್ಕಿನಲ್ಲಿ ಸಾಗಬೇಕು ಎಂದು ನಿರ್ಧರಿಸುವಲ್ಲಿ ವಿರೋಧ ಪಕ್ಷಗಳ ಒಕ್ಕೂಟ ‘ಇಂಡಿಯಾ’ ಅಸಮರ್ಥವಾಗಿದೆ. ಮೋದಿಗೆ ಸ್ವಂತ ಕನಸುಗಳಿಲ್ಲ; ನಿಮ್ಮ ಕನಸುಗಳೇ ನನ್ನ ಗುರಿ’ ಎಂದು ಹೇಳಿದರು.

ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜನ್ಮಶತಮಾನೋತ್ಸವ ಅಂಗವಾಗಿ 2025ನೇ ಇಸವಿಯನ್ನು ‘ಜನಜಾತೀಯ ಗೌರವ ದಿನ’ವಾಗಿ ಆಚರಿಸಲಾಗುವುದು ಎಂದು ತಿಳಿಸಿದರು.

ಮಹಿಳೆಯ ಅರೆಬೆತ್ತಲೆ ಮೆರವಣಿಗೆ: ಬಂಧನ

ಜೈಪುರ (ಪಿಟಿಐ): ವಿವಾಹಿತ ವ್ಯಕ್ತಿ ಜತೆ ಸಂಬಂಧ ಹೊಂದಿದ್ದಕ್ಕಾಗಿ ಮಹಿಳೆಯೊಬ್ಬರನ್ನು ಅರೆಬೆತ್ತಲೆಯಾಗಿ ಮೆರವಣಿಗೆ ನಡೆಸಿದ ಘಟನೆ ರಾಜಸ್ಥಾನದ ಬಾರ್ಮರ್ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಸರ್ವಾಡಿ ಗ್ರಾಮದಲ್ಲಿ ಈ ಪ್ರಕರಣ ನಡೆದಿದ್ದು, ಅದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಸಂತ್ರಸ್ತೆಯ ಕೂದಲಿಡಿದು ಮಹಿಳೆಯೊಬ್ಬರು ಎಳೆದುಕೊಂಡು ಹೋಗಿತ್ತಿರುವ ದೃಶ್ಯ ವಿಡಿಯೊದಲ್ಲಿದೆ.

ಈ ಕುರಿತು ಸಂದಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣದ ದಾಖಲಾಗಿದ್ದು, ಇಬ್ಬರು ಮಹಿಳೆಯರನ್ನು ಬಂಧಿಸಲಾಗಿದೆ ಎಂದು ಬಾರ್ಮರ್‌ನ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಕೊಳವೆಬಾವಿಗೆ ಬಿದ್ದ ಬಾಲಕ ಸಾವು

ರೇವಾ (ಮಧ್ಯಪ್ರದೇಶ) (ಪಿಟಿಐ): ಜಿಲ್ಲೆಯ ಮಣಿಕಾ ಗ್ರಾಮದಲ್ಲಿ ಎರಡು ದಿನಗಳ ಹಿಂದೆ ತೆರೆದ ಕೊಳವೆ ಬಾವಿಯಲ್ಲಿ ಬಿದ್ದಿದ್ದ 6 ವರ್ಷದ ಬಾಲಕ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮೇ 10ರೊಳಗೆ ಪೂರ್ಣ ಪ್ರಮಾಣದಲ್ಲಿ ವಾಪಸ್: ಮೊಹಮ್ಮದ್ ಮುಯಿಜು ಮಾಹಿತಿ

ಮಾಲ್ದೀವ್ಸ್ ತೊರೆದ ಭಾರತ ಸೇನೆಯ 2ನೇ ತಂಡ



ಮೊಹಮ್ಮದ್ ಮುಯಿಜು

ಮಾಲೆ (ಪಿಟಿಐ): ಮಾಲ್ದೀವ್ಸ್‌ನಲ್ಲಿ ನೆಲೆಗೊಂಡಿರುವ ಭಾರತೀಯ ಸೇನೆಯ ಎರಡನೇ ತಂಡ ತನ್ನ ಬೇಡಿಕೆಯಂತೆ ದ್ವೀಪ ರಾಷ್ಟ್ರವನ್ನು ತೊರೆದಿದೆ ಎಂದು ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಜು ಹೇಳಿದ್ದಾರೆ.

ಭಾರತದ ಮೊದಲ ಸೇನಾ ತಂಡ ಈಗಾಗಲೇ ಹೋಗಿದೆ. ಏಪ್ರಿಲ್ 9ರಂದು ಎರಡನೇ ತಂಡ ಸಹ ತೆರಳಿದೆ. ಮೇ 10ರ ಗಡುವಿನೊಳಗೆ ಕೊನೆಯ ತಂಡವೂ ಹೋಗಲಿದೆ ಎಂದು ಅವರು ತಿಳಿಸಿದ್ದಾರೆ.

ಎರಡನೇ ತಂಡದಲ್ಲಿ ಎಷ್ಟು ಸೇನಾ ಸಿಬ್ಬಂದಿ ಮಾಲ್ದೀವ್ಸ್ ತೊರೆದಿದ್ದಾರೆ ಎಂಬ ಮಾಹಿತಿಯನ್ನು ಅಧ್ಯಕ್ಷರು ನೀಡಲಿಲ್ಲ. ಈ ಸಂಬಂಧ ಮಾಲ್ದೀವ್ಸ್ ರಕ್ಷಣಾ ಸಚಿವಾಲಯ ಅಥವಾ ಭಾರತ ಸಹ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮುಯಿಜು ಅವರು ತನ್ನ ದೇಶದಿಂದ ಭಾರತೀಯ ಸೇನಾ ಸಿಬ್ಬಂದಿಯ ಮೊದಲ ತಂಡ ಮಾರ್ಚ್ 10ರೊಳಗೆ ಹಿಂತೆಗೆದುಕೊಳ್ಳಬೇಕು ಎಂದು ಗಡುವು ನಿಗದಿಪಡಿಸಿದ್ದರು.

ಚೀನಾ ಪರ ನಿಲುವು ಹೊಂದಿರುವ ಮುಯಿಜು, ಮಾಲೆಯಲ್ಲಿರುವ ವಿದೇಶಿ ರಾಯಭಾರಿಗಳು ತನ್ನ ಮೇಲೆ ಅಧಿಕಾರಿ ಚಲಾಯಿಸಲು ಬಿಡುವುದಿಲ್ಲ ಎಂದು ಪುನರುಚ್ಚರಿಸಿದರು.

ಮಾಜಿ ಅಧ್ಯಕ್ಷ ಇಬ್ರಾಹಿಂ ಮೊಹಮ್ಮದ್ ಸೋಲಿಹ್ ಅವರು, ಯಾವುದೇ ದೇಶದ ಹೆಸರನ್ನು ಉಲ್ಲೇಖಿಸಿದೇ, ವಿದೇಶಿ ರಾಯಭಾರಿ ಆದೇಶದ ಮೇರೆಗೆ ದೇಶದಲ್ಲಿ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಕಳೆದ ತಿಂಗಳು ಆರೋಪಿಸಿದ್ದರು.

ಹರಿಯಾಣದ ವಿದ್ಯಾರ್ಥಿ ಕೆನಡಾದಲ್ಲಿ ಗುಂಡೇಟಿಗೆ ಬಲಿ

ಒಟ್ಟಾವಾ (ಪಿಟಿಐ): ಭಾರತೀಯ ಮೂಲದ ವಿದ್ಯಾರ್ಥಿಯೊಬ್ಬ ಕೆನಡಾದ ವಾನ್ಕೋವರ್ ನಗರದಲ್ಲಿ ಗುಂಡೇಟಿಗೆ ಬಲಿಯಾಗಿದ್ದಾನೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

‘ಮೃತ ವಿದ್ಯಾರ್ಥಿ ಚಿರಾಗ್ ಅಂತಿಲ್(24) ಏಪ್ರಿಲ್ 12ರಂದು ತನ್ನ ಕಾರಿನಲ್ಲಿ ಶವವಾಗಿ ಪತ್ತೆಯಾಗಿದ್ದ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಗುಂಡಿನ ಶಬ್ದ ಕೇಳಿದ ಬಗ್ಗೆ ಸ್ಥಳೀಯ ನಿವಾಸಿಗಳು ಮಾಹಿತಿ ನೀಡಿದ್ದರು. ಪ್ರಕರಣದ ತನಿಖೆ ನಡೆಯುತ್ತಿದ್ದು, ಆರೋಪಿಗಳ ಪತ್ತೆಯಾಗಿಲ್ಲ’ ಎಂದು ತಿಳಿಸಿದ್ದಾರೆ.ಹರಿಯಾಣದ ಚಿರಾಗ್ 2022ರಿಂದ ಕೆನಡಾದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದ. ಮೃತದೇಹವನ್ನು ಭಾರತಕ್ಕೆ ತರುವ ಸಲುವಾಗಿ ಚಿರಾಗ್ ಕುಟುಂಬಸ್ಥರು ಹಣ ಸಂಗ್ರಹಿಸುತ್ತಿದ್ದಾರೆ.

ಇಂಡೊನೇಷ್ಯಾ: ಭೂಕುಸಿತ, 14 ಸಾವು

ತಾನಾ ತೊರಾಜ (ಇಂಡೊನೇಷ್ಯಾ) (ಎಪಿ): ಇಲ್ಲಿನ ಸುಲವೆಸಿ ದ್ವೀಪದಲ್ಲಿ ಭಾರಿ ಮಳೆಯಿಂದಾಗಿ ಉಂಟಾದ ಭೂಕುಸಿತದಲ್ಲಿ 3 ವರ್ಷದ ಬಾಲಕಿ ಸೇರಿಂತೆ 14 ಜನರು ಮೃತಪಟ್ಟಿದ್ದು, ಮೂವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಧಾರಾಕಾರ ಮಳೆಯ ಕಾರಣ ಬೆಟ್ಟ, ಗುಡ್ಡಗಳಿಂದ ಮಣ್ಣು ಕುಸಿದು ನಾಲ್ಕು ಮನೆಗಳು ಹಾನಿಯಾಗಿವೆ. ಸೈನಿಕರು, ಪೊಲೀಸರು ಮತ್ತು ಸ್ವಯಂ ಸೇವಕರು ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, 8 ವರ್ಷದ ಬಾಲಕಿ ಸೇರಿದಂತೆ ಇಬ್ಬರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಾಪತ್ತೆಯಾಗಿರುವವರಿಗಾಗಿ ಶೋಧ ಕಾರ್ಯಾಚರಣೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



ಇಂದು ಸನ್‌ರೈಸರ್ಸ್ ವಿರುದ್ಧ ಪಂದ್ಯ • ಸಾಂಘಿಕ ಪ್ರದರ್ಶನದ ನಿರೀಕ್ಷೆಯಲ್ಲಿ ಬೆಂಗಳೂರು ತಂಡ

ಆರ್‌ಸಿಬಿ ಮುಂದೆ ದೊಡ್ಡ ಸವಾಲು

• ನಾಗೇಶ ಶೆಣೈ

ಬೆಂಗಳೂರು: ಸತತ ಸೋಲುಗಳಿಂದ ಕಂಗೆಟ್ಟಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಸ್ಫೂರ್ತಿಯುತ ಗೆಲುವೊಂದರ ಹುಡುಕಾಟದಲ್ಲಿದೆ. ಪರಿವರ್ತನೆಗೆ ನೆರವಾಗುವ ಇಂಥ ಗೆಲುವಿನ ನಿರೀಕ್ಷೆಯಲ್ಲಿ ಸೋಮವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಫಫ್ ಡುಪ್ಲೆಸಿ ಬಳಗ, ಹಿಂದಿಗಿಂತ ಪ್ರಬಲವಾಗಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಮುಂಬೈ ಇಂಡಿಯನ್ಸ್ ವಿರುದ್ಧ ಕಳೆದ ಪಂದ್ಯದಲ್ಲಿ ಅನುಭವಿಸಿದ ಮುಖಭಂಗ ತಂಡವನ್ನು ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕಿಳಿಸಿದೆ. ಆಡಿದ ಆರರಲ್ಲಿ ಐದು ಸೋಲು ಕಂಡಿರುವ ಆರ್‌ಸಿಬಿಗೆ ಈ ಹಂತದಲ್ಲಿ ಇನ್ನೊಂದು ಹಿನ್ನಡೆ ಪ್ಲೇ ಆಫ್ ಹಾದಿಯನ್ನು ಕಠಿಣಗೊಳಿಸಲಿದೆ.

ವಿರಾಟ್ ಕೊಹ್ಲಿ (6 ಪಂದ್ಯಗಳಿಂದ 319) ಒಬ್ಬರನ್ನು ಉಳಿದು ಉಳಿದ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡಿಲ್ಲ. ಕೆಳಕ್ರಮಾಂಕದಲ್ಲಿ ದಿನೇಶ್ ಕಾರ್ತಿಕ್ ಒಂದೆರಡು ಉತ್ತಮ ಇನಿಂಗ್ಸ್ ಆಡಿದ್ದಾರೆ. ಉಳಿದವರಿಂದ ಹೇಳಿಕೊಳ್ಳುವ ಆಟ ಬಂದಿಲ್ಲ.

ಬೌಲಿಂಗ್ ವಿಭಾಗ ಆರಂಭದಿಂದಲೇ ಸತ್ವಹೀನವಾಗಿದೆ. ಪಂದ್ಯದಿಂದ ಪಂದ್ಯಕ್ಕೆ ಬದಲಾವಣೆಗಳನ್ನು ಮಾಡಿದರೂ ಫಲಿತಾಂಶ ಬದಲಾಗಿಲ್ಲ. ಮೊಹಮ್ಮದ್ ಸಿರಾಜ್ ಹಿಂದಿನಂತೆ ಒಳ್ಳೆಯ ಲಯದಲ್ಲಿಲ್ಲ. ಯಶ್ ದಯಾಳ್, ಅಲ್ಝಾರಿ ಜೋಸೆಫ್, ರೀಸ್ ಟೋಪ್ಲಿ, ವೈಶಾಖ ವಿಜಯಕುಮಾರ್, ವಿಲ್ ಜಾಕ್ಸ್, ಸೌರವ್ ಚೌಹಾನ್ ಹೀಗೆ ಅನೇಕರು ಅವಕಾಶ ಪಡೆದಿದ್ದಾರೆ. ಸ್ಪಿನ್ ಬೌಲಿಂಗ್ ದುರ್ಬಲವಾಗಿದೆ. ಮ್ಯಾಕ್ಸ್‌ವೆಲ್ ಬೌಲಿಂಗ್‌ನಲ್ಲೂ ಹೆಚ್ಚೇನೂ ಕೊಡುಗೆ ನೀಡಿಲ್ಲ. ಬ್ಯಾಟಿಂಗ್‌ನಲ್ಲಂತೂ ತೀವ್ರ ನಿರಾಸೆ ಕಂಡಿದ್ದು, ಆರು ಪಂದ್ಯಗಳಲ್ಲಿ ಗಳಿಸಿದ್ದು 32 ರನ್‌ಗಳಷ್ಟೇ (34 ಎಸೆತ).

ಇದರ ಹೊರತಾಗಿಯೂ ಮುಂಬೈ ವಿರುದ್ಧ ಪಂದ್ಯದಲ್ಲಿ ಸಕಾರಾತ್ಮಕ ಅಂಶವೊಂದಿತ್ತು. ವಿರಾಟ್ ಕೊಹ್ಲಿ ಬೇಗ ನಿರ್ಗಮಿಸಿದರೂ, ಡುಪ್ಲೆಸಿ, ರಜತ್ ಪಾಟೀದಾರ್ ಮತ್ತು ದಿನೇಶ್ ಕಾರ್ತಿಕ್ ಅರ್ಧ ಶತಕಗಳನ್ನು ಹೊಡೆದು ತಂಡದ ಮೊತ್ತ 196ಕ್ಕೆ ತಲುಪಿಸಿದ್ದರು. ಆದರೆ ಬೌಲರ್‌ಗಳು ಎಂದಿನಂತೆ ನಿರಾಸೆ ಮೂಡಿಸಿದರು. ಮುಂಬೈ ಆಟಗಾರರು, ವಿಶೇಷವಾಗಿ ಇಶಾನ್ ಕಿಶನ್ ಮತ್ತು ಸೂರ್ಯಕುಮಾರ್ ಯಾದವ್ ಅವರ ಮೇಲೆ ದಂಡೆತ್ತಿಹೋಗಿ 27 ಎಸೆತಗಳಿರುವಂತೆ ತಂಡವನ್ನು ಗುರಿಮುಟ್ಟಿಸಲು ನೆರವಾದರು.

ಮುಂಬೈಯಲ್ಲಿ ಪಂದ್ಯದ ನಂತರ ಪ್ರಶಸ್ತಿ ಪ್ರದಾನದ ವೇಳೆ ಡುಪ್ಲಸಿ ಅವರು 'ಬೌಲಿಂಗ್ ನಮ್ಮ ದುರ್ಬಲ ವಿಭಾಗ' ಎಂದು ಮೊದಲ ಬಾರಿ ಬಹಿರಂಗವಾಗಿ ಒಪ್ಪಿಕೊಂಡರು.

ಆರ್‌ಸಿಬಿಯ ಈ ದೌರ್ಬಲ್ಯ, ಸನ್‌ರೈಸರ್ಸ್‌ಗೆ ವರದಾನವಾಗುವ ಸಾಧ್ಯತೆಯಿದೆ. ಪ್ಯಾಟ್ ಕಮಿನ್ಸ್ ಬಳಗದ ಬ್ಯಾಟಿಂಗ್ ವಿಭಾಗ ಪ್ರಬಲವಾಗಿದೆ. ಹೆನ್ರಿಚ್ ಕ್ಲಾಸೆನ್ (186) ಮತ್ತು ಅಭಿಷೇಕ್ ಶರ್ಮಾ (208) ಒಳ್ಳೆಯ ಲಯದಲ್ಲಿದ್ದಾರೆ. ಟ್ರಾವಿಸ್ ಹೆಡ್, ಏಡನ್ ಮರ್ಕರಂ ಕೂಡ ಬಿರುಸಿನ ಆಟವಾಡಬಲ್ಲವರು. ಪವರ್‌ಪ್ಲೇ ಅವಧಿಯಲ್ಲಿ ಸ್ಫೋಟಕ ಆರಂಭ ನೀಡಬಲ್ಲ ಆಟಗಾರರು ಇವರು.

ಪ್ರಸ್ತುತ ಅಂಕ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿರುವ ಹೈದರಾಬಾದ್ ಮೂರು ಗೆದ್ದು, ಎರಡು ಸೋತಿದೆ. ಆದರೆ ಆರ್‌ಸಿಬಿಯಂತೆ ಈ ತಂಡದ ದೌರ್ಬಲ್ಯ ಬೌಲಿಂಗ್ ವಿಭಾಗ. ಅದರ ಪ್ರಮುಖ ಸ್ಪಿನ್ನರ್‌ಗಳಾದ ಶಾಬಾಜ್ ಅಹ್ಮದ್, ಮಯಂಕ್ ಮಾರ್ಕಂಡೆ ಓವರ್‌ಗೆ 11ಕ್ಕೂ ಅಧಿಕ ರನ್‌ಗಳನ್ನು ನೀಡುತ್ತಿದ್ದಾರೆ.

ತಂಡದ ಪರ ಪ್ಯಾಟ್ ಕಮಿನ್ಸ್ ಅತ್ಯಧಿಕ– ಆರು ವಿಕೆಟ್‌ಗಳನ್ನು ಪಡೆದಿದ್ದಾರೆ. ದುಬಾರಿಯೂ ಆಗಿಲ್ಲ. ಎಡಗೈ ವೇಗಿ ಟಿ.ನಟರಾಜನ್ (5 ವಿಕೆಟ್, ಇಕಾನಮಿ 8.6) ಕೂಡ ಸ್ವಲ್ಪ ಬಲ ನೀಡಿದ್ದಾರೆ. ಆರ್‌ಸಿಬಿ, ಎದುರಾಳಿಗಳ ಸೀಮಿತ ಬೌಲಿಂಗ್ ದಾಳಿಯ ಮುಂದೆ ಎಷ್ಟು ರನ್ ಗಳಿಸಲಿದೆ ಎಂಬುದೂ ಮುಖ್ಯವಾಗಲಿದೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್



ಉಕ್ಕಿದ ನಗು... ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಐಪಿಎಲ್ ಪಂದ್ಯಕ್ಕೆ ಪೂರ್ವಭಾವಿಯಾಗಿ ನೆಟ್ ಅಭ್ಯಾಸದ ವೇಳೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ಆಟಗಾರ ಉಮ್ರಾನ್ ಮಲಿಕ್ ಭೇಟಿಯಾದ ಸಂದರ್ಭ –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

227	231	68	125
ಆರ್‌ಸಿಬಿ ಅತ್ಯಧಿಕ ಮೊತ್ತ (ಎಸ್‌ಆರ್‌ಎಚ್ ವಿರುದ್ಧ)	ಎಸ್‌ಆರ್‌ಎಚ್ ಅತ್ಯಧಿಕ ಮೊತ್ತ (ಆರ್‌ಸಿಬಿ ವಿರುದ್ಧ)	ಆರ್‌ಸಿಬಿ ಕನಿಷ್ಠ ಮೊತ್ತ	ಎಸ್‌ಆರ್‌ಎಚ್ ಕನಿಷ್ಠ ಮೊತ್ತ

ಮುಖಾಮುಖಿ

23	ಆಡಿದ ಪಂದ್ಯಗಳು
12	ಎಸ್‌ಆರ್‌ಎಚ್‌ಗೆ ಗೆಲುವು
10	ಆರ್‌ಸಿಬಿಗೆ ಗೆಲುವು
1	ಫಲಿತಾಂಶ ಇಲ್ಲ

'ಮ್ಯಾಕ್ಸ್‌ವೆಲ್ ಗಾಯ: ಗಂಭೀರವೇನಿಲ್ಲ'

ಬೆಂಗಳೂರು: 'ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯದ ಫೀಲ್ಡಿಂಗ್ ವೇಳೆ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಹೆಬ್ಬೆರಳಿಗೆ ಆದ ಗಾಯ ಗಂಭೀರ ಸ್ವರೂಪದ್ದಲ್ಲ. ಈ ಬಗ್ಗೆ ಕಳವಳಪಡುವಂಥದ್ದೇನೂ ಇಲ್ಲ' ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಹೇಳಿದರು.

ಸನ್‌ರೈಸರ್ಸ್ ವಿರುದ್ಧ ಪಂದ್ಯಕ್ಕೆ ಪೂರ್ವಭಾವಿಯಾಗಿ ಅವರು ಮಾತನಾಡಿದರು. 'ಮ್ಯಾಕ್ಸಿ ಅವರಿಗೆ ಕೆಲವು ಸ್ಕ್ಯಾನ್ ನಡೆಸಲಾಗಿದೆ. ಈಗ ಸಮಸ್ಯೆ ಕಾಣುತ್ತಿಲ್ಲ. ಅವರು ನೆಟ್ ಪ್ರ್ಯಾಕ್ಟೀಸ್‌ನಲ್ಲೂ ತೊಡಗಲಿದ್ದಾರೆ' ಎಂದರು. ಬೊಬಾಟ್ ಹೇಳಿದಂತೆ ಮ್ಯಾಕ್ಸ್‌ವೆಲ್ ಚಿನ್ನಸ್ವಾಮಿ ಕ್ರೀಡಾಂಗಣದ ನೆಟ್ ಪ್ರ್ಯಾಕ್ಟೀಸ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಈ ಬಾರಿಯ ಲೀಗ್‌ನಲ್ಲಿ ಮ್ಯಾಕ್ಸ್‌ವೆಲ್ ನಿರಾಸೆ ಮೂಡಿಸಿದ್ದಾರೆ. ಹೀಗಾಗಿ ಇನ್ನೂ ಒಂದೆರಡು ಪ್ರಶ್ನೆಗಳು ಆಸ್ಟ್ರೇಲಿಯಾದ ಆಟಗಾರನಿಗೆ ಸಂಬಂಧಿಸಿದ್ದವು. 6 ಪಂದ್ಯಗಳಿಂದ 32 ರನ್ ಗಳಿಸಿರುವ 'ಮ್ಯಾಕ್ಸಿ' ಅವರು ಬೇಗ ಲಯ ಕಂಡುಕೊಳ್ಳುವ ವಿಶ್ವಾಸವನ್ನು ಬೊಬಾಟ್ ವ್ಯಕ್ತಪಡಿಸಿದರು.

'ಸಹಜವಾಗಿ ಅವರಿಗೂ (ಮ್ಯಾಕ್ಸ್‌ವೆಲ್) ನಿರಾಸೆಯಾಗಿದೆ. ಒಂದೆರಡು ವರ್ಷಗಳಿಂದ ಅವರು ಅಮೋಘ ಲಯದಲ್ಲಿದ್ದರು. ನಮ್ಮ ಕಾರ್ಯತಂತ್ರದಲ್ಲಿದ್ದ ಅವರು, ತಂಡದ ಬ್ಯಾಟಿಂಗ್ ಸರದಿಯ ಮುಖ್ಯ ಭಾಗವಾಗಿದ್ದರು. ನಾವು ಸಾಧ್ಯವಾದಷ್ಟು ಅವರ ಬೆನ್ನಿಗೆ ನಿಂತಿದ್ದು, ಲಯ ಕಂಡುಕೊಳ್ಳಲು ನಮ್ಮಿಂದಾದಷ್ಟು ನೆರವು ನೀಡುತ್ತಿದ್ದೇವೆ. ಸ್ಪಿನ್ನರ್‌ಗಳೆದುರು ಉತ್ತಮ ದಾಖಲೆಯಿರುವ ಅವರ ಫಾರ್ಮ್, ಮಧ್ಯಮ ಹಂತದ ಓವರುಗಳಲ್ಲಿ ನಮಗೆ ಮಹತ್ವದ್ದಾಗುತ್ತದೆ' ಎಂದರು.

ಮಥೀಷ ಮೋಡಿ: ಚೆನ್ನೈಗೆ ಜಯ

ರೋಹಿತ್ ಶರ್ಮಾ ಅಜೇಯ ಶತಕಕ್ಕೆ ಒಲಿಯದ ಗೆಲುವು

ಮುಂಬೈ (ಪಿಟಿಐ): ಮಥೀಷ ಪಥಿರಾಣ (4–0–28–4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಮುಂದೆ ರೋಹಿತ್ ಶರ್ಮಾ (ಔಟಾಗದೆ 105; 63ಎ, 4x11, 6x5) ಅವರ ಶತಕದ ಆಟ ಮಸುಕಾಯಿತು. ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡವು ಋತುರಾಜ್ ಗಾಯಕವಾಡ ಮತ್ತು ಶಿವಂ ದುಬೆ ಅವರ ಅರ್ಧಶತಕಗಳ ನೆರವಿನಿಂದ 4 ವಿಕೆಟ್‌ಗೆ 206 ರನ್ ಕಲೆ ಹಾಕಿತು. ಈ ಗುರಿಯನ್ನು ಬೆನ್ನತ್ತಿದ ಮುಂಬೈ ತಂಡಕ್ಕೆ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಉತ್ತಮ ಆರಂಭ ಒದಗಿಸಿದರು. ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 7 ಓವರ್‌ಗಳಲ್ಲಿ 70 ರನ್ ಸೇರಿಸಿದ್ದರು. ಈ ಹಂತದಲ್ಲಿ ಪಥಿರಾಣ ಆತಿಥೇಯ ತಂಡಕ್ಕೆ ಮೊದಲ ಆಘಾತ ನೀಡಿದರು. ಹಿಂದಿನ ಪಂದ್ಯದಲ್ಲಿ ಅರ್ಧಶತಕಗಳ ಮೂಲಕ ಮಿಂಚಿದ್ದ ಇಶಾನ್ (23) ಮತ್ತು ಸೂರ್ಯಕುಮಾರ್ ಯಾದವ್ (0) ಅವರ ವಿಕೆಟ್ ಪಡೆದರು.

ಮೂರನೇ ವಿಕೆಟ್ ಜೊತೆಯಾಟದಲ್ಲಿ ರೋಹಿತ್ ಅವರು ತಿಲಕ್ ವರ್ಮಾ (31) ಅವರೊಂದಿಗೆ 60 ರನ್ ಸೇರಿಸಿ ತಂಡದ ಮೊತ್ತವನ್ನು ಹಿಗ್ಗಿಸಿ ಗೆಲುವಿನ ಆಸೆಯನ್ನು ಚಿಗುರಿಸಿದರು. ಆದರೆ, ಮತ್ತೆ ಪಥಿರಾಣ ದಾಳಿಗಿಳಿದು ತಿಲಕ್ ವರ್ಮಾ ಅವರನ್ನು ಔಟ್ ಮಾಡಿದರು. ನಂತರ ಬಂದ ನಾಯಕ ಹಾರ್ದಿಕ್ ಪಾಂಡ್ಯ (2), ಟಿಮ್ ಡೇವಿಡ್ (13), ರೊಮಾರಿಯೋ ಶೆಫರ್ಡ್ (1) ವೈಫಲ್ಯ ಅನುಭವಿಸಿದರು.

ಒಂದೆಡೆ ರೋಹಿತ್ ಏಕಾಂಗಿಯಾಗಿ ಹೋರಾಟ ನಡೆಸಿದ ಅವರಿಗೆ ಉಳಿದ ಆಟಗಾರರಿಂದ ನಿರೀಕ್ಷಿತ ಬೆಂಬಲ ದೊರೆಯಲಿಲ್ಲ. ಅವರು ಕೊನೆಯ ಓವರ್‌ನಲ್ಲಿ ಬೌಂಡರಿ ಮೂಲಕ ಶತಕವನ್ನು ಪೂರೈಸಿದರು. ಐಪಿಎಲ್‌ನಲ್ಲಿ ಇದು ರೋಹಿತ್ ಅವರಿಗೆ ಎರಡನೇ ಶತಕವಾಗಿದೆ. ಮೊದಲ ಶತಕವನ್ನು 2012ರಲ್ಲಿ (ಕೆಕೆಆರ್ ವಿರುದ್ಧ ಅಜೇಯ 109) ದಾಖಲಿಸಿದ್ದರು. ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 186 ರನ್ ಗಳಿಸಲಷ್ಟೇ ಶಕ್ತವಾಯಿತು. ತುಷಾರ್ ದೇಶಪಾಂಡೆ ಮತ್ತು ಮುಸ್ತಫಿಜುರ್ ರೆಹಮಾನ್ ತಲಾ ಒಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಚೆನ್ನೈ ತಂಡದ ನಾಯಕ ಋತುರಾಜ್ (69; 40ಎ) ಮತ್ತು ಶಿವಂ (ಅಜೇಯ 66; 38ಎ) ಅವರು ಕಟ್ಟಿದ ರನ್‌ಸೌಧದ ಮೇಲೆ ಮಹೇಂದ್ರಸಿಂಗ್ ಧೋನಿ ಕಳಸವಿಟ್ಟರು. ಇನಿಂಗ್ಸ್‌ನಲ್ಲಿ ಕೊನೆಯ ನಾಲ್ಕು ಎಸೆತಗಳು ಬಾಕಿಯಿದ್ದಾಗ ಅವರು ಕ್ರೀಸ್‌ಗೆ ಬಂದರು. ಹಾರ್ದಿಕ್ ಪಾಂಡ್ಯ ಹಾಕಿದ ಓವರ್‌ನಲ್ಲಿ ಮೊದಲ ಮೂರು ಎಸೆತಗಳನ್ನೂ ಸಿಕ್ಸರ್‌ಗೆತ್ತಿದರು. ಕೊನೆಯ ಎಸೆತದಲ್ಲಿ ಎರಡು ರನ್ ಓಡಿ, 500ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಸೂರೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 206 (ರಚಿನ್ ರವೀಂದ್ರ 21, ಋತುರಾಜ್ ಗಾಯಕವಾಡ 69, ಶಿವಂ ದುಬೆ ಔಟಾಗದೆ 66, ಮಹೇಂದ್ರಸಿಂಗ್ ಧೋನಿ ಔಟಾಗದೆ 20, ಹಾರ್ದಿಕ್ ಪಾಂಡ್ಯ 43ಕ್ಕೆ2, ಶ್ರೇಯಸ್ ಗೋಪಾಲ್ 9ಕ್ಕೆ1) **ಮುಂಬೈ ಇಂಡಿಯನ್ಸ್:** 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 186: ರೋಹಿತ್ ಶರ್ಮಾ ಔಟಾಗದೆ 105, ಇಶಾನ್ ಕಿಶನ್ 23, ತಿಲಕ್ ವರ್ಮಾ 31; ಮಥೀಷ ಪಥಿರಾಣ 28ಕ್ಕೆ 4. **ಪಂದ್ಯದ ಆಟಗಾರ:** ಮಥೀಷ **ಫಲಿತಾಂಶ:** ಚೆನ್ನೈ ಸೂಪರ್ ಕಿಂಗ್ಸ್‌ಗೆ 20 ರನ್ ಜಯ



ವಿಕೆಟ್ ಪಡೆದ ಸಂಭ್ರಮದಲ್ಲಿ ಮಥೀಷ ಪಥಿರಾಣ. ರೋಹಿತ್ ಶರ್ಮಾ ಚಿತ್ರದಲ್ಲಿದ್ದಾರೆ –ಪಿಟಿಐ ಚಿತ್ರ

ಕುಸ್ತಿ: ಅಂಜು, ಹರ್ಷಿತಾ ಫೈನಲ್‌ಗೆ

ಬಿಷ್ಕೆಕ್, ಕಿರ್ಗಿಸ್ತಾನ (ಪಿಟಿಐ): ಭಾರತದ ಕುಸ್ತಿಪಟುಗಳಾದ ಅಂಜು ಮತ್ತು ಹರ್ಷಿತಾ ಇಲ್ಲಿ ನಡೆಯುತ್ತಿರುವ ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿದರು. ಆದರೆ, ಸರಿತಾ ಮೋರ್ ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿದರು.

ರೈಲ್ವೇಸ್‌ನ ಕುಸ್ತಿಪಟು ಅಂಜು ಈಚೆಗೆ ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ ವಿನೇಶಾ ಫೋಗಾಟ್ ಅವರಿಗೆ ಆಘಾತ ನೀಡಿದ್ದರು. ಭಾನುವಾರ ನಡೆದ 53 ಕೆ.ಜಿ ವಿಭಾಗದ ಸೆಮಿಫೈನಲ್‌ನಲ್ಲಿ 9-6 ರಿಂದ ಚೀನಾದ ಜುನ್ ಲೀ ಅವರನ್ನು ಹಿಮ್ಮೆಟ್ಟಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು. ಫೈನಲ್‌ನಲ್ಲಿ ಅವರು ಕೊರಿಯಾದ ಜಿ ಹಯಾಂಗ್ ಕಿಮ್ ಅವರನ್ನು ಎದುರಿಸಲಿದ್ದಾರೆ.

72 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಹರ್ಷಿತಾ ಉಜ್ಬೇಕಿಸ್ತಾನದ ಓಜೋಡಾ ಜರಿಪ್‌ಬೋವಾ ಅವರನ್ನು ತಾಂತ್ರಿಕ ಕೌಶಲದ ಆಧಾರದಲ್ಲಿ (13–3) ಮಣಿಸಿದರು. ಫೈನಲ್‌ನಲ್ಲಿ ಅವರು ಚೀನಾದ ಕಿಯಾನ್ ಜಿಯಾಂಗ್ ವಿರುದ್ಧ ಸೆಣಸಲಿದ್ದಾರೆ.

2021ರ ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತೆ ಸರಿತಾ ಅವರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 4-8 ರಿಂದ ಮಂಗೋಲಿಯಾದ ಗಂಟುಯಾ ಎಂಖ್‌ಬಾತ್ ವಿರುದ್ಧ ಪರಾಭವಗೊಂಡರು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	6	5	1	10	0.767
ಕೋಲ್ಕತ್ತ ನೈಟ್ ರೈಡರ್ಸ್	5	4	1	8	1.688
ಚೆನ್ನೈ ಸೂಪರ್ ಕಿಂಗ್ಸ್	6	4	2	8	0.726
ಸನ್‌ರೈಸರ್ಸ್ ಹೈದರಾಬಾದ್	5	3	2	6	0.344
ಲಖನೌ ಸೂಪರ್ ಜೈಂಟ್ಸ್	6	3	3	6	0.038
ಗುಜರಾತ್ ಟೈಟನ್ಸ್	6	3	3	6	-0.637
ಪಂಜಾಬ್ ಕಿಂಗ್ಸ್	6	2	4	4	-0.218
ಮುಂಬೈ ಇಂಡಿಯನ್ಸ್	6	2	4	4	-0.234
ಡೆಲ್ಲಿ ಕ್ಯಾಪಿಟಲ್ಸ್	6	2	4	4	-0.975
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	1	5	2	-1.124

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (319 ರನ್)
ಪರ್ಪಲ್ ಕ್ಯಾಪ್: ಯುಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (11 ವಿಕೆಟ್)

ಕೋಲ್ಕತ್ತ ತಂಡಕ್ಕೆ ಭರ್ಜರಿ ಜಯ • ಸ್ಟಾರ್ಕ್‌ಗೆ ಮೂರು ವಿಕೆಟ್ • ರಾಹುಲ್ ಬಳಗಕ್ಕೆ ಸೋಲು

ಲಖನೌ ಗಾಯಕ್ಕೆ 'ಉಪ್ಪು' ಸವರಿದ ಸಾಲ್ಟ್

ಕೋಲ್ಕತ್ತ (ಪಿಟಿಐ): ವೇಗಿ ಮಿಚೆಲ್ ಸ್ಟಾರ್ಕ್ ಅವರು ಲಖನೌ ಸೂಪರ್‌ಜೈಂಟ್ಸ್ ತಂಡಕ್ಕೆ ಮಾಡಿದ್ದ 'ಗಾಯ'ಕ್ಕೆ ಸ್ಫೋಟಕ ಶೈಲಿಯ ಬ್ಯಾಟರ್ ಫಿಲ್ ಸಾಲ್ಟ್ 'ಉಪ್ಪು' ಸವರಿದರು.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಐಪಿಎಲ್ ಪಂದ್ಯದಲ್ಲಿ ಆತಿಥೇಯ ಕೋಲ್ಕತ್ತ ತಂಡವು ಎಲ್ಲ ವಿಭಾಗಗಳಲ್ಲಿಯೂ ಪಾರಮ್ಯ ಮೆರೆಯಿತು. ಅದರಿಂದಾಗಿ 8 ವಿಕೆಟ್‌ಗಳ ಜಯಸಾಧಿಸಿತು. ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವು ಸತತ ಎರಡನೇ ಸೋಲು ಅನುಭವಿಸಿತು.

ಟಾಸ್ ಗೆದ್ದ ಕೋಲ್ಕತ್ತ ತಂಡದ ನಾಯಕ ಶ್ರೇಯಸ್ ಅಯ್ಯರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಈ ಬಾರಿಯ ಹರಾಜು ಪ್ರಕ್ರಿಯೆಯಲ್ಲಿ ಸಾರ್ವಕಾಲಿಕ ದುಬಾರಿ ಮೊತ್ತಕ್ಕೆ ಬಿಕರಿಯಾದ ಸ್ಟಾರ್ಕ್ (28ಕ್ಕೆ3) ಅವರ ದಾಳಿಯ ಮುಂದೆ ಲಖನೌ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 161 ರನ್ ಗಳಿಸಿತು. ಅದಕ್ಕುತ್ತರವಾಗಿ ಕೋಲ್ಕತ್ತ ತಂಡವು 15.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 162 ರನ್ ಗಳಿಸಿ ಗೆದ್ದಿತು.

ನಾಯಕ ರಾಹುಲ್ (39; 27ಎ, 4X3, 6X2) ಮತ್ತು ನಿಕೊಲಸ್ ಪೂರನ್ (45; 32ಎ, 4X2, 6X4) ಅವರಿಬ್ಬರು ಮಾತ್ರ ಲಖನೌ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು. ಆದರೆ ಉಳಿದ ಬ್ಯಾಟರ್‌ಗಳನ್ನು ನಿಯಂತ್ರಿಸುವಲ್ಲಿ ಬೌಲರ್‌ಗಳು ಯಶಸ್ವಿಯಾದರು. ಅದರಲ್ಲೂ ಸ್ಪಿನ್ನರ್ ಸುನಿಲ್ ನಾರಾಯಣ (17ಕ್ಕೆ1) ರನ್ ಗಳಿಕೆಗೂ ಕಡಿವಾಣ ಹಾಕಿದರು. ಸ್ಟಾರ್ಕ್ ಅವರು ತಮ್ಮ ಮೊದಲ ಸ್ಪೆಲ್‌ನಲ್ಲಿ ದೀಪಕ್ ಹೂಡಾ ಅವರ ವಿಕೆಟ್ ಕಬಳಿಸಿದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಪೂರನ್ ಮತ್ತು ಅರ್ಷದ್ ಖಾನ್ ಅವರ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡ ಅವರು ರನ್ ಗಳಿಕೆಗೆ ತಡೆಯೊಡ್ಡಿದರು.

ಸಾಲ್ಟ್ ಪ್ರಹಾರ: ಕೋಲ್ಕತ್ತ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಶಾಮರ್ ಜೋಸೆಫ್ 22 ರನ್ ನೀಡಿದರು. ಅದರಲ್ಲಿ ಸಾಲ್ಟ್ ಒಂದು ಸಿಕ್ಸರ್ ಹೊಡೆದರು. ಸುನಿಲ್ ನಾರಾಯಣ್ ಒಂದು ಬೌಂಡರಿ ಸೇರಿ ಆರು ರನ್ ಗಳಿಸಿದರು. ಉಳಿದೆಲ್ಲವೂ ವೈಡ್, ನೋಬಾಲ್ ಮತ್ತು ಬೈ ನಿಂದ ಬಂದ ರನ್‌ಗಳು.

ಆದರೆ ಎರಡನೇ ಓವರ್‌ನಲ್ಲಿ ಮೊಹಸಿನ್ ಖಾನ್ ಅವರ ಎಸೆತದಲ್ಲಿ ಸುನಿಲ್ ನಾರಾಯಣ್ ಔಟಾದರು. ನಾಲ್ಕನೇ ಓವರ್‌ನಲ್ಲಿಯೂ ಖಾನ್ ಅವರು ಅಂಗಕ್ರಿಷ್ ರಘುವಂಶಿ ವಿಕೆಟ್ ಕಬಳಿಸಿದರು. ಇದರಿಂದಾಗಿ ಲಖನೌ ಬಳಗದಲ್ಲಿ ಉತ್ಸಾಹ ಪುಟಿಯಿತು. ಆದರೆ ಅದಕ್ಕೆ ಸಾಲ್ಟ್ ಅಡ್ಡಿಯಾದರು.

ಪುಲ್, ಡ್ರೈವ್‌ಗಳ ಮೂಲಕ ಬೌಲರ್‌ಗಳ ನೀರಿಳಿಸಿದರು. ಶಾಟ್ ಪಿಚ್ ಎಸೆತಗಳನ್ನು ಪ್ರೇಕ್ಷಕರ ಗ್ಯಾಲರಿಗೆ ಕಳಿಸಿದರು. ಮುರಿಯದ ಮೂರನೇ ವಿಕೆಟ್‌ಗೆ ಜೊತೆಯಾಟದಲ್ಲಿ ಸಾಲ್ಟ್ ಮತ್ತು ಶ್ರೇಯಸ್ ಅಯ್ಯರ್ ಜೊತೆಗೂಡಿ 120 ರನ್ ಸೇರಿಸಿದರು. ಐಪಿಎಲ್‌ನಲ್ಲಿ ಇದು ಎರಡನೇ ಅತಿ ದೊಡ್ಡ ಜೊತೆಯಾಟ (ಯಾವುದೇ ವಿಕೆಟ್‌ಗೂ)ವಾಗಿ ದಾಖಲಾಯಿತು. ಹೋದ ವರ್ಷ ಶುಭಮನ್ ಗಿಲ್ ಮತ್ತು ವೃದ್ಧಿಮಾನ್ ಸಹಾ ಅವರು ಗಳಿಸಿದ್ದ 142 ರನ್‌ಗಳ ಜೊತೆಯಾಟವು ಮೊದಲ ಸ್ಥಾನದಲ್ಲಿದೆ.

ಇಂಗ್ಲೆಂಡ್‌ನ ಸಾಲ್ಟ್ ಕೇವಲ 26 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದರು. ಟೂರ್ನಿಯಲ್ಲಿ ಅವರು ಎರಡನೇ ಬಾರಿ 50ರ ಗಡಿ ದಾಟಿದರು.



ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಭಾನುವಾರ ನಡೆದ ಪಂದ್ಯದ ನಂತರ ಕೋಲ್ಕತ್ತ ನೈಟ್ ರೈಡರ್ಸ್ ಬ್ಯಾಟರ್ ಫಿಲ್ ಸಾಲ್ಟ್ ಅವರನ್ನು ಅಭಿನಂದಿಸಿದ ಕೋಚ್ ಚಂದ್ರಕಾಂತ್ ಪಂಡಿತ್. ನಾಯಕ ಶ್ರೇಯಸ್ ಅಯ್ಯರ್ ಇದ್ದಾರೆ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್
7ಕ್ಕೆ 161 (20 ಓವರ್‌ಗಳಲ್ಲಿ)
ಕ್ವಿಂಟನ್ ಸಿ ಸುನಿಲ್ ಬಿ ಅರೋರಾ 10 (8ಎ, 4x2)
ರಾಹುಲ್ ಸಿ ರಮಣದೀಪ್ ಬಿ ರಸೆಲ್ 39 (27ಎ, 4x3, 6x2)
ದೀಪಕ್ ಸಿ ರಮಣದೀಪ್ ಬಿ ಸ್ಟಾರ್ಕ್ 8 (10ಎ, 4x1)
ಆಯುಷ್ ಸಿ ರಘುವಂಶಿ ಬಿ ಸುನಿಲ್ 29 (27ಎ, 4x2, 6x1)
ಮಾರ್ಕಸ್ ಸಿ ಸಾಲ್ಟ್ ಬಿ ವರುಣ್ 10 (5ಎ 4x2)
ನಿಕೋಲಸ್ ಸಿ ಸಾಲ್ಟ್ ಬಿ ಸ್ಟಾರ್ಕ್ 45 (32ಎ, 4x2, 6x4)
ಕೃಣಾಲ್ ಪಾಂಡ್ಯ ಔಟಾಗದೆ 7 (8ಎ)
ಅರ್ಷದ್ ಬಿ ಸ್ಟಾರ್ಕ್ 5 (4ಎ, 4x1)
ಇತರೆ: 8 (ಲೆಗ್ ಬೈ 1, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-19 (ಕ್ವಿಂಟನ್ ಡಿ ಕಾಕ್; 1.5), 2-39 (ದೀಪಕ್ ಹೂಡಾ; 4.4), 3-78 (ಕೆ. ಎಲ್. ರಾಹುಲ್; 10.2), 4-95 (ಮಾರ್ಕಸ್ ಸ್ಟೊಯಿನಿಸ್; 11.4), 5-111 (ಆಯುಷ್ ಬಡೋನಿ; 14.4), 6-155 (ನಿಕೋಲಸ್ ಪೂರನ್; 19.1), 7-161 (ಅರ್ಷದ್ ಖಾನ್; 19.6)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–28–3, ವೈಭವ್ ಅರೋರಾ 3–0–34–1, ಹರ್ಷಿತ್ ರಾಣಾ 4–0–35–0, ಸುನಿಲ್ ನಾರಾಯಣ್ 4–0–17–1, ವರುಣ್ ಚಕ್ರವರ್ತಿ 4–0–30–1, ಆ್ಯಂಡ್ರೆ ರಸೆಲ್ 1–0–16–1

ಕೋಲ್ಕತ್ತ ನೈಟ್ ರೈಡರ್ಸ್
2ಕ್ಕೆ 162 (15.4 ಓವರ್‌ಗಳಲ್ಲಿ)
ಫಿಲ್ ಸಾಲ್ಟ್ ಔಟಾಗದೆ 89 (47ಎ, 4x14, 6x3)
ಸುನಿಲ್ ಸಿ ಮಾರ್ಕಸ್ ಬಿ ಮೊಹಸಿನ್ 6 (6ಎ, 4x1)
ರಘುವಂಶಿ ರಘುವಂಶಿ ಸಿ ರಾಹುಲ್ ಬಿ ಮೊಹಸಿನ್ 7 (6ಎ, 6x1)
ಶ್ರೇಯಸ್ ಅಯ್ಯರ್ ಔಟಾಗದೆ 38 (38ಎ, 4x6)
ಇತರೆ: 22 (ಬೈ 1, ಲೆಗ್‌ಬೈ 5, ನೋಬಾಲ್ 3, ವೈಡ್ 13)
ವಿಕೆಟ್ ಪತನ: 1-22 (ಸುನಿಲ್ ನಾರಾಯಣ್; 1.3), 2-42 (ಅಂಗ್‌ಕ್ರಿಷ್ ರಘುವಂಶಿ; 3.1)
ಬೌಲಿಂಗ್: ಶಮರ್ ಜೋಸೆಫ್ 4–0–47–0, ಮೊಹಸಿನ್ ಖಾನ್ 4–0–29–2, ಕೃಣಾಲ್ ಪಾಂಡ್ಯ 1–0–14–0, ಯಶ್ ಠಾಕೂರ್ 2–0–25–0, ಅರ್ಷದ್ ಖಾನ್ 2–0–24–0, ರವಿ ಬಿಷ್ಣೋಯಿ 2.4–0–17–0
ಪಂದ್ಯದ ಆಟಗಾರ: ಫಿಲ್ ಸಾಲ್ಟ್

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 8 ವಿಕೆಟ್ ಜಯ

ಶೂಟಿಂಗ್: ಪಲಕ್‌ಗೆ ಪ್ಯಾರಿಸ್ ಟಿಕೆಟ್

ನವದೆಹಲಿ (ಪಿಟಿಐ): ಭಾರತದ ಪಲಕ್ ಗುಲಿಯಾ ಅವರು ಇದೇ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟದ ಶೂಟಿಂಗ್‌ನಲ್ಲಿ ಸ್ಪರ್ಧಿಸಲು ರಹದಾರಿ ಗಳಿಸಿದರು.

ರಿಯೊ ಡಿ ಜನ್ಯೆರೊದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಫೈನಲ್ ಒಲಿಂಪಿಕ್ ಕ್ವಾಲಿಫಿಕೇಷನ್ ಚಾಂಪಿಯನ್‌ಷಿಪ್ (ರೈಫಲ್–ಪಿಸ್ತೂಲ್) ನಲ್ಲಿ 10 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದರು. ಇದರೊಂದಿಗೆ ಅವರು ಒಲಿಂಪಿಕ್ಸ್ ಪ್ರವೇಶ ಪಡೆದರು. ಭಾರತದಿಂದ ಈ ಅರ್ಹತೆ ಗಿಟ್ಟಿಸಿದ 20ನೇ ಶೂಟರ್ ಅವರಾದರು.

ಫೈನಲ್‌ನಲ್ಲಿ ಅವರ ಆರಂಭ ನಿಧಾನವಾಗಿತ್ತು. 217.6 ಪಾಯಿಂಟ್ಸ್ ಗಳಿಸಿದರು. 22ನೇ ಶಾಟ್‌ನಲ್ಲಿ ಅವರು ಸ್ಪರ್ಧೆಯಿಂದ ಹಿಂದೆ ಸರಿದು ಮೂರನೇ ಸ್ಥಾನ ಪಡೆದರು. ಅರ್ಮೇನಿಯಾದ ಎಲ್ಮಿರಾ ಕರಾಪೆಟಿಯಾನ್ ಚಿನ್ನ ಗೆದ್ದರು. ಥಾಯ್ಲೆಂಡಿನ ಕೆಮೊನ್‌ಲ್ಯಾಕ್ ಸೇಂಚಾ ಬೆಳ್ಳಿ ಗಳಿಸಿದರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಆಗಿರುವ ಪಲಕ್ ಹರಿಯಾಣದ ಝಜ್ಜರ್‌ನವರು. ಹ್ಯಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ 18 ವರ್ಷದ ಪಲಕ್ ಅವರು ವೈಯಕ್ತಿಕ ಚಿನ್ನ ಮತ್ತು ತಂಡ ವಿಭಾಗದಲ್ಲಿ ಬೆಳ್ಳಿ ಜಯಿಸಿದ್ದರು.

ಭಾರತದ ಶೂಟರ್‌ಗಳು ಒಟ್ಟು 16 ಒಲಿಂಪಿಕ್ ಬರ್ತ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ದೇಶದ ಶಾಟ್‌ಗನ್ ಶೂಟರ್‌ಗಳಿಗೆ ಇನ್ನೂ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಇನ್ನೂ ನಾಲ್ಕು ಸ್ಥಾನಗಳನ್ನು ಪಡೆಯುವ ಅವಕಾಶಗಳಿವೆ. ದೋಹಾದಲ್ಲಿ ಇದೇ 19ರಿಂದ ಐಎಸ್‌ಎಸ್‌ಎಫ್ ಫೈನಲ್ ಒಲಿಂಪಿಕ್ ಕ್ವಾಲಿಫಿಕೇಷನ್ ಚಾಂಪಿಯನ್‌ಷಿಪ್ (ಶಾಟ್‌ಗನ್) ನಡೆಯಲಿದೆ.



ಪಲಕ್ ಗುಲಿಯಾ –ಸಂಗ್ರಹ ಚಿತ್ರ

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ: ಹಂಪಿಗೆ ಮಣಿದ ವೈಶಾಲಿ

ವಿದಿತ್ ವಿರುದ್ಧ ಗೆದ್ದ ಗುಕೇಶ್‌ಗೆ ಜಂಟಿ ಅಗ್ರಸ್ಥಾನ

ಟೊರಾಂಟೊ (ಪಿಟಿಐ): ಕುಶಲ ನಡೆಗಳನ್ನಿರಿಸಿದ ಡಿ.ಗುಕೇಶ್, ಸ್ವದೇಶದ ವಿದಿತ್ ಗುಜರಾತಿ ಅವರನ್ನು ಭಾನುವಾರ 38 ನಡೆಗಳಲ್ಲಿ ಸೋಲಿಸಿ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಎಂಟನೇ ಸುತ್ತಿನ ನಂತರ ರಷ್ಯಾದ ಇಯಾನ್ ನೆಪೊಮ್‌ನಿಯಾಚಿ ಜೊತೆ ಮತ್ತೆ ಅಗ್ರಸ್ಥಾನ ಹಂಚಿಕೊಂಡರು.

ಆರ್.ಪ್ರಜ್ಞಾನಂದ ಅವರು ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಜೊತೆ 40 ನಡೆಗಳ ನಂತರ ಡ್ರಾ ಮಾಡಿಕೊಂಡರೆ, ಹಿಕಾರು ನಕಾಮುರಾ ಅವರು ಅಮೆರಿಕದ ಗ್ರ್ಯಾಂಡ್‌ಮಾಸ್ಟರ್‌ಗಳ ವ್ಯವಹಾರವಾಗಿದ್ದ ಇನ್ನೊಂದು ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ ಅವರಿಗೆ ಟೂರ್ನಿಯ ಮೊದಲ ಸೋಲು ಉಣಿಸಿದರು.

ಎಂಟು ಆಟಗಾರರ ಟೂರ್ನಿಯಲ್ಲಿ ಏಳನೇ ಸುತ್ತಿನ ನಂತರ ಒಂಟಿಯಾಗಿ ಅಗ್ರಸ್ಥಾನದಲ್ಲಿದ್ದ ನೆಪೊಮ್‌ನಿಯಾಚಿ, ಆರಂಭದಲ್ಲೇ ತಪ್ಪು ಮಾಡಿದ ಕಾರಣ ಕೊನೆಯ ಸ್ಥಾನದಲ್ಲಿರುವ ನಿಜತ್ ಅಬಸೋವ್ ಜೊತೆ 'ಡ್ರಾ'ಕ್ಕೆ ಒಪ್ಪಿಕೊಳ್ಳಬೇಕಾಯಿತು.

ಇನ್ನೂ ಆರು ಸುತ್ತುಗಳು ಬಾಕಿವುಳಿದಿರುವಂತೆ ಗುಕೇಶ್ ಮತ್ತು ನೆಪೊಮ್‌ನಿಯಾಚಿ ತಲಾ 5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ನಕಾಮುರಾ ಮತ್ತು ಪ್ರಜ್ಞಾನಂದ ಅವರ ಸನಿಹದಲ್ಲಿದ್ದು ತಲಾ 4.5 ಪಾಯಿಂಟ್ಸ್ ಗಳಿಸಿದ್ದಾರೆ. ಕರುವಾನಾ (3.5) ಐದನೇ ಸ್ಥಾನದಲ್ಲಿದ್ದಾರೆ. ಗುಜರಾತಿ (3.5) ಆರನೇ, ಅಲಿರೇಝಾ (3) ಏಳನೇ ಮತ್ತು ಅಬಸೋವ್ (2.5) ಕೊನೆಯ ಸ್ಥಾನದಲ್ಲಿದ್ದಾರೆ.

ಒಂಬತ್ತನೇ ಸುತ್ತಿನಲ್ಲಿ ಗುಕೇಶ್ ಮತ್ತು ಪ್ರಜ್ಞಾನಂದ ಎದುರಾಳಿಗಳಾಗಿದ್ದಾರೆ. ಗುಜರಾತಿ ಅವರಿಗೆ ನಕಾಮುರಾ ಸವಾಲು ಎದುರಿಸಲು ಇದೆ.



ಗುಕೇಶ್

ಕಪ್ಪುಕಾಯಿಗಳಲ್ಲಿ ಆಡಿದರೂ ಹೆಚ್ಚಿನ ಪ್ರತ್ಯಾಕ್ರಮಣ ಎದುರಿಸದೇ ಗೆದ್ದ ಬಗ್ಗೆ ಕೇಳಿದಾಗ ಗುಕೇಶ್ ಹೇಳಿದ್ದಿಷ್ಟು: 'ಈ ಹಂತದಲ್ಲಿ ಇಂಥ ರೀತಿಯ ಪಂದ್ಯಗಳು ವಿರಳ. ಓಪನಿಂಗ್‌ನಲ್ಲೇ ಅವರು ಕೆಲವು ತಪ್ಪುನಡೆಗಳನ್ನಿರಿಸಿದರು. ಅವರ ಸ್ಥಿತಿ ಹಿತಕರವಾಗಿರಲಿಲ್ಲ. ನನಗೆ ಹಿಡಿತ ದೊರೆಯಿತು.'

ಹಂಪಿಗೆ ಮಣಿದ ವೈಶಾಲಿ: ಮಹಿಳಾ ವಿಭಾಗದಲ್ಲಿ ಕೋನೇರು ಹಂಪಿ (3.5) ಎಂಟನೇ ಸುತ್ತಿನಲ್ಲಿ ಸ್ವದೇಶದ ಆರ್.ವೈಶಾಲಿ ಅವರನ್ನು ಸೋಲಿಸಿದರು. ಆದರೆ ಮಹತ್ವದ ಫಲಿತಾಂಶದಲ್ಲಿ, ಚೀನಾದ ಟಿಂಗ್ಜಿ ಲೀ ಅವರು ಇದುವರೆಗೆ ಅಗ್ರಸ್ಥಾನದಲ್ಲಿದ್ದ ತಮ್ಮದೇ ದೇಶದ ಆಟಗಾರ್ತಿ ಝೊಂಗ್ಯಿ ತಾನ್ ಅವರನ್ನು ಮಣಿಸಿದರು. ಇದರಿಂದ ಟೂರ್ನಿಯ ಉಳಿದ ಆಟಗಾರ್ತಿಯರಿಗೂ ಮುನ್ನಡೆಯುವ ಅವಕಾಶ ಸಿಗಲಿದೆ.

ಝೊಂಗ್ಯಿ, ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಮತ್ತು ಟಿಂಗ್ಜಿ ತಲಾ ಐದು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ರಷ್ಯಾದ ಕ್ಯಾಥರಿನಾ ಲಾಗ್ನೊ (4.5) ಅವರು ಮೇಲಿನ ಮೂವರ ಬೆನ್ನತ್ತಿದ್ದಾರೆ. ಹಂಪಿ, ಬಲ್ಗೇರಿಯಾದ ನುರ್ಗ್ಯುಲ್ ಸಲಿಮೊವಾ ಅವರು ತಲಾ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಅನ್ನಾ ಮುಝಿಚುಕ್ (3) ಏಳನೇ ಹಾಗೂ ವೈಶಾಲಿ (2.5) ಕೊನೆಯ ಸ್ಥಾನದಲ್ಲಿದ್ದಾರೆ.